ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





ವಿಶ್ವಕಪ್ ಕ್ರಿಕೆಟ್

ಪಾಕ್ ಎದುರು ಭಾರತದ ಅಜೇಯ ಓಟ



ರೋಹಿತ್ ಶರ್ಮಾ

ಅಹಮದಾಬಾದ್: ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರು ಅಜೇಯ ಓಟವನ್ನು ಮುಂದುವರಿಸಿತು.

ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯವನ್ನು ಭಾರತವು ಏಳು ವಿಕೆಟ್‌ಗಳಿಂದ ಗೆದ್ದಿತು. 1992ರಿಂದೀಚೆಗೆ ಒಟ್ಟು ಎಂಟು ಬಾರಿ ಉಭಯ ತಂಡಗಳು ಮುಖಾಮುಖಿಯಾಗಿವೆ. ಪಾಕ್ ತಂಡವು ಒಮ್ಮೆಯೂ ಗೆದ್ದಿಲ್ಲ.

ಈ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ಬಳಗದ ಐವರು ಬೌಲರ್‌ಗಳು ತಲಾ ಎರಡು ವಿಕೆಟ್ ಗಳಿಸಿದರು. ಪಾಕ್ ತಂಡವನ್ನು 42.5 ಓವರ್‌ಗಳಲ್ಲಿ 191 ರನ್‌ಗಳಿಗೆ ನಿಯಂತ್ರಿಸಿದರು. ಗುರಿ ಬೆನ್ನಟ್ಟಿದ ಭಾರತ 30.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 192 ರನ್ ಪೇರಿಸಿತು. ನಾಯಕ ರೋಹಿತ್ 63 ಎಸೆತಗಳಲ್ಲಿ 86 ರನ್ ಗಳಿಸಿದರು.

10





ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಗುತ್ತಿಗೆದಾರರ ಸಂಘದ ದೂರು

ಬಿಲ್ ಪಾವತಿಗೆ ‘ಕಮಿಷನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ಹಲವು ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಬಿಲ್ ಪಾವತಿಗೆ ಬಿಬಿಎಂಪಿ ಅಧಿಕಾರಿಗಳು ಭಾರಿ ಮೊತ್ತದ ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರಿತ್ತಿದೆ.

ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ನೇತೃತ್ವದ ನಿಯೋಗವು ಮುಖ್ಯಮಂತ್ರಿಯವರನ್ನು ಶನಿವಾರ ಭೇಟಿ ಮಾಡಿ ಗುತ್ತಿಗೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಅಹವಾಲು ಸಲ್ಲಿಸಿತು. ಈ ಸಂದರ್ಭದಲ್ಲಿ ಭ್ರಷ್ಟಾಚಾರದ ವಿಷಯ ಪ್ರಸ್ತಾಪಿಸಿದ್ದು, ಕೆಲವು ಇಲಾಖೆಗಳಲ್ಲಿ ಬಾಕಿ ಬಿಲ್ ಪಾವತಿಗೆ ಭಾರಿ ಮೊತ್ತದ ಕಮಿಷನ್‌ಗೆ ಬೇಡಿಕೆ ಇಡಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘದ ಪ್ರತಿನಿಧಿಗಳು ದೂರಿದ್ದಾರೆ.

ಮುಖ್ಯಮಂತ್ರಿಯವರ ಭೇಟಿ ಬಳಿಕ ‘ಪ್ರಜಾವಾಣಿ’ ಜತೆ ಮಾತನಾಡಿದ ಡಿ. ಕೆಂಪಣ್ಣ, ‘ಬಿಬಿಎಂಪಿಯಲ್ಲಿ ಬಾಕಿ ಬಿಲ್ ಪಾವತಿಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ. ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ಪ್ರಧಾನ ಎಂಜಿನಿಯರ್ ಇಬ್ಬರೂ ಇದಕ್ಕೆ ಕಾರಣ. ಮೂರು ವರ್ಷಗಳ ಹಳೆಯ ಬಿಲ್‌ಗಳ ಪಾವತಿಗೆ ಭಾರಿ ಮೊತ್ತದ ಕಮಿಷನ್ ಕೇಳಲಾಗುತ್ತಿದೆ. ಅಧಿಕಾರಿಗಳ ಹೆಸರು ಸಮೇತ ಮುಖ್ಯಮಂತ್ರಿಯವರಿಗೆ ದೂರು ಹೇಳಿದ್ದೇವೆ’ ಎಂದರು.

‘ಲೋಕೋಪಯೋಗಿ ಇಲಾಖೆಯಲ್ಲಿ ಭ್ರಷ್ಟಾಚಾರ ತುಸು ನಿಯಂತ್ರಣದಲ್ಲಿದೆ. ಉಳಿದ ಇಲಾಖೆಗಳಲ್ಲಿ ಬಿಲ್ ಪಾವತಿಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹೆಚ್ಚಾಗಿದೆ. ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳದಿದ್ದರೆ ಗುತ್ತಿಗೆದಾರರ ಸಂಘವು ಹೋರಾಟ ಆರಂಭಿಸಲಿದೆ ಎಂಬುದನ್ನೂ ಮುಖ್ಯಮಂತ್ರಿಯವರಿಗೆ ತಿಳಿಸಿದ್ದೇವೆ’ ಎಂದು ಹೇಳಿದರು.

ಗುತ್ತಿಗೆದಾರರ ಸಂಘದ ನಿಯೋಗದ ಜತೆಗಿನ ಸಭೆಯಲ್ಲಿ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಇದ್ದರು.

ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಆರ್. ಮಂಜುನಾಥ್, ಉಪಾಧ್ಯಕ್ಷ ಬಿ.ಸಿ. ದಿನೇಶ್, ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ, ಖಜಾಂಚಿ ಡಿ.ಎಂ. ನಾಗರಾಜ್, ಜಂಟಿ ಕಾರ್ಯದರ್ಶಿ ಎಂ. ರಮೇಶ್ ನಿಯೋಗದಲ್ಲಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ನೇತೃತ್ವದ ನಿಯೋಗದೊಂದಿಗೆ ಶನಿವಾರ ಸಭೆ ನಡೆಸಿದರು

‘₹20 ಸಾವಿರ ಕೋಟಿ ಬಾಕಿ’

ವಿವಿಧ ಇಲಾಖೆಗಳಿಂದ ₹20,000 ಕೋಟಿಯಷ್ಟು ಬಿಲ್ ಪಾವತಿ ಬಾಕಿ ಇದೆ. ಐದೂವರೆ ತಿಂಗಳಿನಿಂದ ಬಿಲ್ ಪಾವತಿ ಆಗಿಲ್ಲ. ಆದಷ್ಟು ಬೇಗ ಬಿಲ್ ಪಾವತಿಗೆ ವ್ಯವಸ್ಥೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಕೆಂಪಣ್ಣ ಹೇಳಿದ್ದಾರೆ. ಬಿಬಿಎಂಪಿಯಲ್ಲಿನ ಭ್ರಷ್ಟಾಚಾರದ ಕುರಿತು ಬೆಂಗಳೂರು ಅಭಿವೃದ್ಧಿ ಸಚಿವರಾದ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಹದಿನೈದು ದಿನಗಳೊಳಗೆ ಈ ಸಮಸ್ಯೆಗೆ ಪರಿಹಾರ ದೊರಕದಿದ್ದರೆ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಕೆಂಪಣ್ಣ ತಿಳಿಸಿದರು.

ಐ.ಟಿ ಶೋಧ: ಮತ್ತೆ ₹8 ಕೋಟಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಕಾರ್ಯಾಚರಣೆಯ ಮೂರನೇ ದಿನವಾದ ಶನಿವಾರ, ವಾಸ್ತುಶಿಲ್ಪಿ, ಜಿಮ್ ಮಾಲೀಕರ ಮನೆಗಳಲ್ಲಿ ₹8 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ. ಇದರೊಂದಿಗೆ ವಶಕ್ಕೆ ಪಡೆದ ಒಟ್ಟು ನಗದು ಮೊತ್ತ ₹50 ಕೋಟಿ ದಾಟಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ, ಅವರ ಮಗ ಪ್ರದೀಪ್ ಸೇರಿದಂತೆ ಹಲವರ ಮನೆಗಳಲ್ಲಿ ಗುರುವಾರ ಬೆಳಿಗ್ಗೆ ಶೋಧ ನಡೆಸಲಾಗಿತ್ತು. ಶುಕ್ರವಾರದವರೆಗೆ ಒಟ್ಟು 45 ಸ್ಥಳಗಳಲ್ಲಿ ಶೋಧ ನಡೆದಿದೆ. ಶನಿವಾರ ಇನ್ನೂ ಹತ್ತು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುತ್ತಿಗೆದಾರರು, ಉದ್ಯಮಿಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಹಲವು ವ್ಯಕ್ತಿಗಳು ಭಾರಿ ಪ್ರಮಾಣದ ನಗದನ್ನು ಸಂಗ್ರಹಿಸಿಟ್ಟುಕೊಂಡಿರುವ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಯ ಗುಪ್ತಚರ ವಿಭಾಗ ಕಲೆಹಾಕಿದೆ. ಅದರ ಆಧಾರದಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ. ದೇಶದ ವಿವಿಧೆಡೆಯಿಂದ ಐ.ಟಿ ಅಧಿಕಾರಿಗಳು ನಗರಕ್ಕೆ ಬಂದಿದ್ದು, ಇನ್ನೂ ಕೆಲವು ದಿನ ಕಾರ್ಯಾಚರಣೆ ಮುಂದುವರಿಯುವ ಸಾಧ್ಯತೆ ಇದೆ.

ಲಾಕರ್ ತೆರೆದು ಪರಿಶೀಲನೆ: ಅಂಬಿಕಾಪತಿ ಮತ್ತು ಪ್ರದೀಪ್ ಅವರ ಮನೆಗಳಲ್ಲಿದ್ದ ಕಪಾಟುಗಳ ಲಾಕರ್‌ಗಳ ಕೀಲಿಗಳನ್ನು ಶುಕ್ರವಾರ ತಡರಾತ್ರಿ ತೆರೆಯಲಾಗಿತ್ತು. ಕೀಲಿಗಳನ್ನು ಕುಟುಂಬದವರು ತನಿಖಾ ತಂಡಕ್ಕೆ ಒಪ್ಪಿಸಿರಲಿಲ್ಲ. ಬಳಿಕ ಕೀಲಿ ಸಿದ್ಧಪಡಿಸುವವರನ್ನು ಕರೆತಂದು ತೆರೆಯಲಾಗಿತ್ತು.

ಕಪಾಟುಗಳ ಒಳಗೆ ಎರಡು ಬ್ರೀಫ್‌ಕೇಸ್‌ಗಳು ಪತ್ತೆಯಾಗಿದ್ದವು. ಅವುಗಳನ್ನೂ ಶನಿವಾರ ತೆರೆದು ಪರಿಶೀಲನೆ ನಡೆಸಲಾಗಿದೆ. ಬ್ರೀಫ್‌ಕೇಸ್‌ಗಳಲ್ಲಿ ನಗದು ಹಾಗೂ ಕೆಲವು ದಾಖಲೆಗಳು ಪತ್ತೆಯಾಗಿವೆ. ಅವುಗಳನ್ನೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಅಪ್ಪ, ಮಗನ ಮನೆಯಲ್ಲಿ ಗುರುವಾರ ಬೆಳಿಗ್ಗೆ ಆರಂಭವಾಗಿದ್ದ ಶೋಧ, ಎರಡೂವರೆ ದಿನಗಳ ಬಳಿಕ ಮುಕ್ತಾಯವಾಗಿದೆ. ಶನಿವಾರ ಪಿತೃಪಕ್ಷದ ಆಚರಣೆ ಇತ್ತು. ಅದರ ಮಧ್ಯದಲ್ಲೇ ಶೋಧ ಕಾರ್ಯಾಚರಣೆ ನಡೆಸಿದ ಐ.ಟಿ ಅಧಿಕಾರಿಗಳು, ಮಹಜರು ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು.

ಇ.ಡಿ ತನಿಖೆಗೂ ಸಿದ್ಧತೆ: ಅಪಾರ ಪ್ರಮಾಣದ ನಗದು ಪತ್ತೆಯಾಗಿರುವ ಕುರಿತು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ವರದಿ ಸಲ್ಲಿಸಲು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಈವರೆಗಿನ ಕಾರ್ಯಾಚರಣೆಯ ವರದಿ ಸೋಮವಾರ ರವಾನೆಯಾಗುವ ಸಾಧ್ಯತೆ ಇದೆ. ಆ ಬಳಿಕ ಇ.ಡಿ ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿ, ವಿಚಾರಣೆ ಆರಂಭಿಸುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ.

ಪ್ರದೀಪ್‌ಗೆ ನೋಟಿಸ್

ಮನೆಯಲ್ಲಿ ಪತ್ತೆಯಾಗಿರುವ ₹20 ಕೋಟಿಗೂ ಹೆಚ್ಚು ಮೊತ್ತದ ನಗದಿನ ಮೂಲದ ಕುರಿತು ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಅಂಬಿಕಾಪತಿ ಅವರ ಮಗ ಪ್ರದೀಪ್‌ಗೆ ಶನಿವಾರ ನೋಟಿಸ್ ಜಾರಿ ಮಾಡಿದ್ದಾರೆ.

ಪ್ರದೀಪ್ ಮನೆಯ ಮಂಚದ ಅಡಿಯಲ್ಲಿ ರಟ್ಟಿನ ಪೆಟ್ಟಿಗೆಗಳಲ್ಲಿ ತುಂಬಿಸಿ ಇಟ್ಟಿದ್ದ ₹20 ಕೋಟಿ ಪತ್ತೆಯಾಗಿತ್ತು. ಶುಕ್ರವಾರ ಸಂಜೆಯೇ ಅವರನ್ನು ಆದಾಯ ತೆರಿಗೆ ಇಲಾಖೆ ಕಚೇರಿಗೆ ಕರೆತಂದಿದ್ದ ಅಧಿಕಾರಿಗಳು, ಕೆಲಕಾಲ ವಿಚಾರಣೆ ನಡೆಸಿದ್ದರು. ಶನಿವಾರ ಕಾರ್ಯಾಚರಣೆ ಅಂತ್ಯಗೊಳ್ಳುವ ಮುನ್ನ ನೋಟಿಸ್ ಜಾರಿ ಮಾಡಿದ್ದು, ಹಣದ ಮೂಲದ ಕುರಿತು ಸೂಕ್ತ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

ನಗದು ಪತ್ತೆ ಪ್ರಕರಣದ ತನಿಖೆಗಾಗಿ ಐ.ಟಿ ಅಧಿಕಾರಿಗಳ ವಿಶೇಷ ತಂಡವೊಂದನ್ನು ರಚಿಸಲಾಗಿದೆ. ಶನಿವಾರದಿಂದಲೇ ಈ ತಂಡ ತನಿಖೆ ಆರಂಭಿಸಿದೆ.

‘ದಾಖಲೆ ಒದಗಿಸುವೆ’: ನಗದು ವಶಪಡಿಸಿಕೊಂಡಿರುವ ಕುರಿತು ಪತ್ರಕರ್ತರಿಗೆ ಶನಿವಾರ ಪ್ರತಿಕ್ರಿಯಿಸಿದ ಪ್ರದೀಪ್, ‘15 ವರ್ಷಗಳಿಂದ ರಿಯಲ್ ಎಸ್ಟೇಟ್ ಉದ್ಯಮದಲ್ಲಿದ್ದೇನೆ. ಬೇರೆ ವ್ಯವಹಾರಗಳೂ ಇವೆ. ಐ.ಟಿ ಅಧಿಕಾರಿಗಳು ವಶಪಡಿಸಿಕೊಂಡ ಹಣಕ್ಕೆ ಲೆಕ್ಕಪತ್ರ ಇದೆ. ಎಲ್ಲವನ್ನೂ ವಿಚಾರಣೆ ವೇಳೆ ಒದಗಿಸುವೆ’ ಎಂದರು.

‘ನಗದಿಗೂ ಅಪ್ಪನಿಗೂ ಸಂಬಂಧವಿಲ್ಲ. ಈ ಹಣ ರಾಜಕೀಯ ಪಕ್ಷವೊಂದಕ್ಕೆ ಸೇರಿದ್ದು ಎಂಬ ಆರೋಪದಲ್ಲೂ ಸತ್ಯವಿಲ್ಲ. ಸೂಕ್ತ ದಾಖಲೆ ಸಲ್ಲಿಸಿ ಹಣವನ್ನು ವಾಪಸ್ ಪಡೆಯುತ್ತೇನೆ’ ಎಂದು ಹೇಳಿದರು.

ಇನ್ನಷ್ಟು ಸುದ್ದಿಗಳು 4A



ಶೋಭಾಯಾತ್ರೆ ದಾವಣಗೆರೆಯಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್‌ನಿಂದ ಶನಿವಾರ ನಡೆದ ಶೋಭಾಯಾತ್ರೆಯಲ್ಲಿ ಗಣೇಶ ಮೂರ್ತಿಗೆ ಕ್ರೇನ್ ಮೂಲಕ ಹೂಮಳೆ ಸುರಿಸಲಾಯಿತು. ಶೋಭಾಯಾತ್ರೆ ಮಾರ್ಗದುದ್ದಕ್ಕೂ ಅಪಾರ ಜನರು ಸೇರಿದ್ದರು. ಪ್ರಜಾವಾಣಿ ಚಿತ್ರ / ಸತೀಶ್ ಬಡಿಗೇರ್

150ಕ್ಕೂ ಹೆಚ್ಚು ಚೆಕ್ ವಶ

ಬೆಂಗಳೂರು: ಮೂರು ದಿನಗಳ ಕಾರ್ಯಾಚರಣೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು 150ಕ್ಕೂ ಹೆಚ್ಚು ಚೆಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಒಬ್ಬ ವ್ಯಕ್ತಿಯ ಮನೆಯಲ್ಲೇ 100ಕ್ಕೂ ಹೆಚ್ಚು ಚೆಕ್‌ಗಳು ಪತ್ತೆಯಾಗಿವೆ.

ನಿರ್ದಿಷ್ಟ ಮೊತ್ತವನ್ನು ಬರೆದಿದ್ದು, ಹಣ ಪಡೆಯುವವರ ಹೆಸರುಗಳನ್ನು ಬರೆಯದ ಚೆಕ್‌ಗಳೂ ಇವೆ. ಚೆಕ್ ನೀಡಿದವರ ವಿವರಗಳನ್ನು ತನಿಖಾ ತಂಡ ಸಂಗ್ರಹಿಸುತ್ತಿದೆ. ಕೆಲವರ ಮನೆಗಳಲ್ಲಿ ಬೃಹತ್ ಪ್ರಮಾಣದ ಚಿನ್ನಾಭರಣವೂ ಪತ್ತೆಯಾಗಿದೆ. ಅವುಗಳ ಮೂಲದ ಕುರಿತೂ ತನಿಖೆ ಮುಂದುವರಿದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ದಸರಾ ಕಾರ್ಯಕ್ರಮಕ್ಕೆ ಕಮಿಷನ್ ಆರೋಪ

ಕಠಿಣ ಕ್ರಮಕ್ಕೆ ಸಚಿವ ಸೂಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಬಳಿ ನಾಡಹಬ್ಬ ಮೈಸೂರು ದಸರಾದಲ್ಲಿ ಕಾರ್ಯಕ್ರಮ ನೀಡಲು ಅವಕಾಶ ಒದಗಿಸಿ, ಹಣ ಬಿಡುಗಡೆ ಮಾಡಿಸಲು ಕಮಿಷನ್‌ಗೆ ಕೆಲವರು ಬೇಡಿಕೆ ಇಟ್ಟಿದ್ದರೆನ್ನಲಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

‘ಹಣಕ್ಕಾಗಿ ಬೇಡಿಕೆ ಇಟ್ಟಿರುವ ವಿಷಯದ ಕುರಿತು ಈಗಾಗಲೇ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿದ್ದೇನೆ. ಸಾಂಸ್ಕೃತಿಕ ನಗರಿಯ ಹೆಸರಿಗೆ ಕಳಂಕ ತರುವ ಕೆಲಸವನ್ನು ಮಾಡಿರುವ ಯಾರೇ ಆಗಿದ್ದರೂ ಸೂಕ್ತ ತನಿಖೆ ನಡೆಸಿ ಅವರ ಮೇಲೆ ಕಠಿಣ ಕ್ರಮ ಜರುಗಿಸಲು ಸೂಚಿಸಿದ್ದೇನೆ’ ಎಂದು ಹೇಳಿದ್ದಾರೆ.

‘ಸಾಂಸ್ಕೃತಿಕ ಮಹತ್ವವನ್ನು ಹಾಳು ಮಾಡುವ ಇಂತಹ ಸಂಗತಿಗಳನ್ನು ಸಹಿಸುವ ಪ್ರಶ್ನೆಯೇ ಇಲ್ಲ’ ಎಂದೂ ತಿಳಿಸಿದ್ದಾರೆ.

ನಡೆದಿದ್ದು ಏನು?: ‘ನಾವು ಸಾಂಸ್ಕೃತಿಕ ಉಪ ಸಮಿತಿಯವರು ಎಂದು ತಾರಾನಾಥರನ್ನು ಸಂಪರ್ಕಿಸಿದ್ದ ಇಬ್ಬರು, ಕಾರ್ಯಕ್ರಮಕ್ಕೆ ₹8 ಲಕ್ಷ ಕೇಳಿ ಸಾರ್, ₹5 ಲಕ್ಷ ನೀವು ಇಟ್ಟುಕೊಳ್ಳಿ, ₹3 ಲಕ್ಷ ನಮಗೆ ಕೊಡಿ ಎಂದು ಹೇಳಿದ್ದರು. ಇದಕ್ಕೆ ಒಪ್ಪದ ತಾರಾನಾಥರು ತಮ್ಮನ್ನು ಸಂಪರ್ಕಿಸಿದ್ದವರನ್ನು ಬೈದು ಕಳುಹಿಸಿದ್ದರು. ಈ ಘಟನೆ ಕುರಿತು ನಗರದ ಸಂಗೀತ ವಲಯದಲ್ಲಿ ಕೆಲವು ದಿನಗಳಿಂದ ಚರ್ಚೆ ನಡೆದಿತ್ತು’ ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ತಾರಾನಾಥ್ ಅವರಿಂದ ಮಾಹಿತಿ ಪಡೆಯಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಶನಿವಾರ ಬೆಳಿಗ್ಗೆ ಅವರನ್ನು ಅವರ ಮನೆಯಲ್ಲಿ ಭೇಟಿ ಮಾಡಿದ್ದರು. ಆ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ತಾರಾನಾಥರು, ‘ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಆದರೆ ಅನಾಮಧೇಯ ಆಫರ್ ಬಂದಿತ್ತು’ ಎಂದು ತಿಳಿಸಿದ್ದರು.

‘ನನ್ನ ಬಳಿ ಯಾವ ಅಧಿಕಾರಿಯೂ ಬಂದಿಲ್ಲ, ಯಾರು ಕೂಡ ಪರ್ಸಂಟೇಜ್ ಕೇಳಿಲ್ಲ’ ಎಂದು ತಾರಾನಾಥರು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಆರೋಪ ಸುಳ್ಳು’ ಎಂದು ಸರ್ಕಾರವು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ವಿಡಿಯೊ ಮಾಹಿತಿ ಪ್ರಕಟಿಸಿತ್ತು. ಆದರೆ, ‘ಅನಾಮಧೇಯ ಆಫರ್ ಬಗ್ಗೆ ತನಿಖೆ ನಡೆಸಲಾಗುತ್ತದೆಯೇ’ ಎಂಬ ಬಗ್ಗೆ ಸರ್ಕಾರ ತನ್ನ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿಲ್ಲ.

ಘಟನೆ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆ ನಡೆದಿದ್ದು, ದಸರಾ ಉತ್ಸವದಲ್ಲೂ ಕಮಿಷನ್ ಕಾಟ ವ್ಯಾಪಕವಾಗುತ್ತಿದೆಯೇ ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ.

> ಕಮಿಷನ್ ಆರೋಪದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತನಿಖೆಗೆ ಆದೇಶಿಸಬೇಕು. ಸಂಗೀತ ಪ್ರೇಮಿಯಾಗಿ, ಕಾಂಗ್ರೆಸ್ ಕಾರ್ಯಕರ್ತನಾಗಿ ಆಗ್ರಹಿಸುತ್ತಿದ್ದೇನೆ
>
> **ಸಿ.ಆರ್.ಹಿಮಾಂಶು,** ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ

> ಕಮಿಷನ್‌ಗೆ ಬೇಡಿಕೆ ಆರೋಪಕ್ಕೆ ಸಂಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ಪೊಲೀಸ್ ಇಲಾಖೆಗೆ ದೂರು ಸಲ್ಲಿಸಲು ಕ್ರಮ ವಹಿಸಲಾಗಿದೆ
>
> **ಕೆ.ಎಂ.ಗಾಯತ್ರಿ,** ಜಿಲ್ಲಾ ಪಂಚಾಯಿತಿ ಸಿಇಒ

‘ತನಿಖೆಯಿಂದ ಸತ್ಯ ಹೊರಬರಲಿ’

ಕಮಿಷನ್ ಆರೋಪಕ್ಕೆ ಸಂಬಂಧಿಸಿ, ಅಧಿಕಾರಿಗಳು ತಾರಾನಾಥ್ ಅವರಿಂದ ಹೇಳಿಕೆ ಪಡೆದು ಅಂತಿಮ ತೀರ್ಮಾನಕ್ಕೆ ಬಂದಿರುವ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ಷೇಪ ವ್ಯಕ್ತವಾಗಿದೆ.

‘ಸರ್ಕಾರಕ್ಕೆ ಸದ್ಯ ಮುಜುಗರದಿಂದ ಪಾರಾಗಲು ಒಂದು ಹೇಳಿಕೆ ಸಿಕ್ಕಿರಬಹುದು. ಈ ಬಗ್ಗೆ ವಿವರವಾದ ತನಿಖೆ ನಡೆಯಲೇಬೇಕು. ತಾರಾನಾಥ್ ಅವರ ಮನೆಗೆ ಹೋಗಿ ಸಂಪರ್ಕಿಸಿದವರು ಯಾರು, ಅನಾಮಧೇಯ ಆಫರ್ ನೀಡಿದವರು ಯಾರೆಂದು ತಿಳಿಯುವುದು ಕಷ್ಟದ ಕೆಲಸವಲ್ಲ’ ಎಂಬ ಪ್ರತಿಪಾದನೆಯೂ ಕೇಳಿಬಂದಿದೆ.

21ರಂದು ಸರೋದ್ ವಾದನ

ಪಂಡಿತ್ ರಾಜೀವ್ ತಾರಾನಾಥರ ಸರೋದ್ ವಾದನ ಕಾರ್ಯಕ್ರಮವು ಮೈಸೂರಿನ ಅರಮನೆಯ ವೇದಿಕೆಯಲ್ಲಿ ಅಕ್ಟೋಬರ್ 21ರಂದು ನಿಗದಿಯಾಗಿದೆ. ಕಮಿಷನ್ ಆರೋಪದ ನಂತರ ಅವರಿಗೆ ಕಾರ್ಯಕ್ರಮ ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ.

‘ಈ ಹಿಂದೆ ಕಾರ್ಯಕ್ರಮ ನೀಡುವಂತೆ ಅವರನ್ನು ಅಧಿಕಾರಿಗಳು ಸಂಪರ್ಕಿಸಿದ್ದರು. ಕಲಾವಿದರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅವರ ಹೆಸರಿತ್ತು. ಆದರೆ ಅನಾರೋಗ್ಯದ ಕಾರಣದಿಂದ ಆಯ್ಕೆ ಮಾಡಿರಲಿಲ್ಲ’ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ.ಗಾಯಿತ್ರಿ ತಿಳಿಸಿದ್ದಾರೆ.

ಭಾನುವಾರ, ಅಕ್ಟೋಬರ್ 15, 2023 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗಿನ ನಡಿಗೆ
ನವದೆಹಲಿಯಲ್ಲಿ ಶನಿವಾರ ನಡೆದ ಲ್ಯಾಕ್ಮೆ ಫ್ಯಾಷನ್ ವೀಕ್‌ನಲ್ಲಿ ನಟ ಸಂಜನಾ ಸಂಘಿ ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿದರು




ವಂಡರ್‌ಲಾ
WONDERLA
PARKS AND RESORTS
DASARA
HABBA
14TH - 24TH OCT
ಮಂಗಳೂರು ಗೊಂಬೆ ನೃತ್ಯ | ವಾದ್ಯಮೇಳದೊಂದಿಗೆ ಭವ್ಯ ಮೆರವಣಿಗೆ
ಚಿಂಗಾರಿಮೇಳ | ಆಹಾರ ಹಬ್ಬ | ವೇದಿಕೆ ಕಾರ್ಯಕ್ರಮಗಳು
ವಂಡರ್ಲಾ ಬೆಂಗಳೂರಿನ
18 ನೇ ವಾರ್ಷಿಕೋತ್ಸವವನ್ನು
ನಮ್ಮೊಂದಿಗೆ ಆಚರಿಸಿ
ATHER
Win 1 Ather 450 daily over 11 days*
T&C Apply.
ವಾರ್ಷಿಕೋತ್ಸವ ಆಫರ್
1+1*
ವಂಡರ್ಲಾದಲ್ಲಿ ನಿಮ್ಮ ಜನ್ಮದಿನವನ್ನು ಆಚರಿಸಿ ಮತ್ತು ನಿಮ್ಮ ಜನ್ಮದಿನದಂದು FREE ಟಿಕೆಟ್ ಪಡೆಯಿರಿ
ಕಾಲೇಜು ಐಡಿ ಆಫರ್
20%* OFF
ನಿಮ್ಮ ಅಸಲಿ ಕಾಲೇಜು ಐಡಿ ತೋರಿಸಿ 20% ವರೆಗೂ ರಿಯಾಯಿತಿ ಪಡೆಯಿರಿ
ಆನ್‌ಲೈನ್ ಬುಕಿಂಗ್ ಕೊಡುಗೆ
10%* OFF
ಆನ್‌ಲೈನ್‌ನಲ್ಲಿ 3 ದಿನಗಳ ಮೊದಲು ಬುಕ್ ಮಾಡಿ, 10% ರಿಯಾಯಿತಿ ಪಡೆಯಿರಿ
FOR DETAILS, SCAN THE QR CODE
080 37230333 / 99455 57777 www.wonderla.com
For group bookings & offers, call: • Bengaluru: 91487 04747 | 97401 85334 | 90356 71855 98800 60224 | 88613 33959 | 70220 41127 | 95911 24268 • Hassan: 96060 36823 • Kolar & Tumkur: 88613 33959 • Hosur & Krishnagiri: 94884 39624

ಭಾನುವಾರ, ಅಕ್ಟೋಬರ್ 15, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 286 | ಪುಟ 26
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮೈಸೂರಿನ ಅರ್ಥ ವ್ಯವಸ್ಥೆ ದಸರಾ ಉತ್ಸವವನ್ನು ಬಹುವಾಗಿ ನೆಚ್ಚಿಕೊಂಡಿದೆ. ಹೀಗಾಗಿ ಸರಳ ಆಚರಣೆ ಈಗ ಮಾಯವಾಗಿದೆ.



ಹೊತ್ತಿ ಉರಿದ ಕಾರು, ಎಸ್ಪಿ ಕಾರು ಜಖಂ 4A
3.47 ಲಕ್ಷ ಫಲಾನುಭವಿಗಳ ನಿರಾಸಕ್ತಿ
ಭಾರತ–ಶ್ರೀಲಂಕಾ ನಡುವೆ ದೋಣಿ ಸೇವೆ ಶುರು 8
ಪಡಿತರ ಪಡೆಯದ ಕಾರ್ಡ್‌ದಾರರು 7

ನಿಯಮ ಮೀರಿ ದಾಸ್ತಾನು • ಎನ್‌ಒಸಿ ಅಧಿಕಾರವುಳ್ಳವರಿಗೂ ‘ಲಂಚ’ದ ಪಾಲು

ಪಟಾಕಿ: ಅಕ್ರಮದ್ದೇ ಕಾರುಬಾರು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿದ್ಯಾಭ್ಯಾಸದಲ್ಲಿ ಮುಂದಿದ್ದ ಅವರೆಲ್ಲರೂ ಜೀವನದಲ್ಲಿ ಸಾಧನೆಯ ಕನಸು ಕಂಡಿದ್ದವರು. ಮನೆಯಲ್ಲಿದ್ದ ಬಡತನಕ್ಕೆ ಮರುಗಿ ತಂದೆ–ತಾಯಿಗೆ ಆಸರೆಯಾಗಲು ಕೂಲಿ ಕೆಲಸಕ್ಕೆ ಬಂದಿದ್ದವರು. ನಿಯಮಗಳನ್ನು ಗಾಳಿಗೆ ತೂರಿ ‘ಅಕ್ರಮ’ದಿಂದ ನಿರ್ಮಿಸಿದ್ದ ಪಟಾಕಿ ಗೋದಾಮಿನ ದುರಂತದಲ್ಲಿ ಅವರೆಲ್ಲರೂ ಜೀವ ಕಳೆದುಕೊಂಡಿದ್ದಾರೆ.

ಇದು, ಬೆಂಗಳೂರು ಹೊರವಲಯದ ಅತ್ತಿಬೆಲೆಯಲ್ಲಿ ಇತ್ತೀಚೆಗೆ ಸಂಭವಿಸಿದ್ದ ಪಟಾಕಿ ದುರಂತದಲ್ಲಿ ಮೃತಪಟ್ಟವರ ದಾರುಣ ಕಥೆ. ದುರಂತದಲ್ಲಿ 16 ಮಂದಿ ಸಾವಿಗೀಡಾಗಿದ್ದು, ಪಟಾಕಿ ಅಕ್ರಮ ದಾಸ್ತಾನು– ವಹಿವಾಟಿಗೆ ಈ ಸಾವುಗಳೇ ನಿದರ್ಶನವಾಗಿವೆ.

ತಮಿಳುನಾಡು ಗಡಿಗೆ ಹೊಂದಿಕೊಂಡಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅತ್ತಿಬೆಲೆಯಿಂದ ಶುರುವಾಗುವ ಪಟಾಕಿ ‘ಅಕ್ರಮ’ ವಹಿವಾಟು, ಇಡೀ ರಾಜ್ಯ ಹಾಗೂ ಹೊರ ರಾಜ್ಯದವರೆಗೆ ವ್ಯಾಪಿಸಿದೆ. ಬೇಡಿಕೆ ಇಲ್ಲದ ದಿನಗಳಂದು

ಒಳನೋಟ

ಹೆಚ್ಚು ಪಟಾಕಿ ಖರೀದಿಸಿ ದಾಸ್ತಾನು ಮಾಡುತ್ತಿರುವ ವ್ಯಾಪಾರಿಗಳು, ಬೇಡಿಕೆ ದಿನಗಳಂದು (ದೀಪಾವಳಿ ಹಾಗೂ ಇತರೆ ಸಂದರ್ಭ) ಮಾರಾಟ ಮಾಡಿ ಲಾಭ ಗಳಿಸುತ್ತಿದ್ದಾರೆ. ಇಂಥವರ ಲಾಭದ ಲೆಕ್ಕಾಚಾರದಲ್ಲಿ ಅಮಾಯಕರ ಕುಟುಂಬಗಳು, ‘ದುಡಿಯುವ ಮನೆಮಕ್ಕಳ’ನ್ನು ಕಳೆದು ಕೊಂಡು ಬೀದಿ ಪಾಲಾಗುತ್ತಿವೆ.

ಬಡತನ, ನಿರುದ್ಯೋಗ, ಸಾಲ ಹಾಗೂ ಇತರೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಹಲವು ಪುರುಷ–ಮಹಿಳೆಯರು, ಪಟಾಕಿ ಮಳಿಗೆ– ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಪಟಾಕಿ ಬಾಕ್ಸ್‌ಗಳ ಸಾಗಣೆ, ಪಟಾಕಿಗಳ ಮರು ಪ್ಯಾಕಿಂಗ್ ಹಾಗೂ ಮಾರಾಟ ಪ್ರಕ್ರಿಯೆಯಲ್ಲಿ ದುಡಿಯುತ್ತಿದ್ದಾರೆ. ಆದರೆ, ನಿಯಮ ಮೀರಿ ನಿರ್ಮಿಸುತ್ತಿರುವ ಪಟಾಕಿ ಮಳಿಗೆ ಹಾಗೂ ಗೋದಾಮುಗಳಲ್ಲಿ ಅಗ್ನಿ ಅವಘಡ ಸಂಭವಿಸಿದಾಗ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ.

ಸ್ಫೋಟಕಗಳ ಸಾಲಿಗೆ ಸೇರುವ ಪಟಾಕಿಯ ಉತ್ಪಾದನೆ, ದಾಸ್ತಾನು, ಸಾಗಣೆ ಹಾಗೂ ಮಾರಾಟ ರೂಪುರೇಷೆ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ನಿಯಮಗಳನ್ನು ರೂಪಿಸಿವೆ.

6ನೇ ಪುಟ ನೋಡಿ



ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಪಟಾಕಿ ಅಗ್ನಿ ಅವಘಡದಲ್ಲಿ ಗೋದಾಮು, ಲಾರಿ ಸುಟ್ಟು ಕರಕಲಾಗಿದ್ದ ದೃಶ್ಯ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್


1,32,234
ದೇಶದಲ್ಲಿ ಪಟಾಕಿ ತಯಾರಿಕೆ, ಸಂಗ್ರಹ, ಮಾರಾಟಕ್ಕೆ ಇದುವರೆಗೂ ನೀಡಿರುವ ಪರವಾನಗಿಗಳ ಸಂಖ್ಯೆ

13,928
2022–23ರಲ್ಲಿ ನವೀಕರಿಸಲಾದ ಪರವಾನಗಿಗಳ ಸಂಖ್ಯೆ

‘ನಕಲಿ ಪರವಾನಗಿ ಹಾವಳಿ’

‘ರಾಜ್ಯದ ಹಲವೆಡೆ ಮಳಿಗೆ ಹಾಗೂ ಗೋದಾಮು ಹೊಂದಿರುವ ವ್ಯಾಪಾರಿಗಳ ಬಳಿ ನಕಲಿ ಪರವಾನಗಿ ಪತ್ರಗಳಿವೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ, ನಕಲಿ ಪತ್ರವನ್ನೇ ತೋರಿಸುತ್ತಾರೆ. ಪತ್ರ ಅಸಲಿಯೋ ಅಥವಾ ನಕಲಿಯೋ ಎಂಬುದನ್ನು ತಿಳಿಯಲು ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಖಾತ್ರಿ-ಪಡಿಸಿಕೊಳ್ಳಬೇಕು. ಆದರೆ, ಸಮಯದ ಅಭಾವದಿಂದ ಅಧಿಕಾರಿಗಳು ಈ ಕೆಲಸ ಮಾಡುವುದಿಲ್ಲ’ ಎಂದು ಅಗ್ನಿಶಾಮಕ ದಳದ ಅಧಿಕಾರಿ ಹೇಳಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಹಮಾಸ್‌ನ ಕಮಾಂಡರ್‌ಗಳ ಹತ್ಯೆ

ಟೆಲ್ ಅವೀವ್: ಗಾಜಾ ಮೇಲೆ ನಡೆಸಿದ ದಾಳಿಯಲ್ಲಿ ಹಮಾಸ್‌ನ ಇಬ್ಬರು ಕಮಾಂಡರ್‌ಗಳನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಶನಿವಾರ ತಿಳಿಸಿದೆ.

ಈ ಇಬ್ಬರೂ ಇಸ್ರೇಲ್ ಮೇಲೆ ಈಚೆಗೆ ನಡೆದಿದ್ದ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ‘ದ ಟೈಮ್ಸ್ ಆಫ್ ಇಸ್ರೇಲ್’ ವರದಿ ಮಾಡಿದೆ.

ಡ್ರೋನ್ ದಾಳಿಯಲ್ಲಿ ನುಖ್ಬಾ ಕಮಾಂಡೊ ಘಟಕದ ಕಂಪನಿ ಕಮಾಂಡರ್ ಅಲಿ ಕ್ವಾದಿ ಮೃತಪಟ್ಟಿದ್ದಾರೆ. ವ್ಯಾಪಾರಿಯ ಅಪಹರಣ ಮತ್ತು ಕೊಲೆ ಆರೋಪದ ಮೇಲೆ 2005ರಲ್ಲಿ ಇಸ್ರೇಲ್ ಇವರನ್ನು ಬಂಧಿಸಿತ್ತು. ಕೈದಿಗಳ ವಿನಿಮಯ ಅನ್ವಯ 2011ರಲ್ಲಿ ಬಿಡುಗಡೆ ಮಾಡಿ ಗಾಜಾ ಪಟ್ಟಿಗೆ ಕಳುಹಿಸಿತ್ತು. ಶುಕ್ರವಾರ ರಾತ್ರಿ ವೈಮಾನಿಕ ದಾಳಿಯಲ್ಲಿ ಹಮಾಸ್‌ನ ವೈಮಾನಿಕ ಕಾರ್ಯಾಚರಣೆಯ ಮುಖ್ಯಸ್ಥ ಮುರಾದ್ ಅಲ್ ಮುರಾದ್ ಮೃತಪಟ್ಟಿದ್ದಾರೆ.

ಇಸ್ರೇಲ್ ವಾಯುಪಡೆಯ (ಐಎಎಫ್) ಯುದ್ಧ ವಿಮಾನಗಳು ಗಾಜಾ ಪಟ್ಟಿಯಾದ್ಯಂತ ವ್ಯಾಪಕ ದಾಳಿ ನಡೆಸಿದವು. ಈ ಪೈಕಿ ಬಂಡುಕೋರರ ಅಡಗುತಾಣಗಳು ಅಲ್ಲದೆ ಹಮಾಸ್‌ನ ನುಖ್ಬಾ ಕಾರ್ಯಾಚರಣೆ ಕೇಂದ್ರ ಸೇರಿದಂತೆ ಸೇನಾ ಶಿಬಿರದ ಮೇಲೂ ದಾಳಿ ನಡೆಯಿತು ಎಂದು ಐಎಎಫ್ ‘ಎಕ್ಸ್’ನಲ್ಲಿ ತಿಳಿಸಿದೆ.

ಕ್ಷಿಪಣಿ ದಾಳಿ: ಪತ್ರಕರ್ತ ಸಾವು



ಬೈರೂತ್ ವರದಿ: ‘ಇಸ್ರೇಲ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ರಾಯಿಟರ್ಸ್ ಪತ್ರಕರ್ತ ಇಸ್ಸಾಂ ಅಬ್ದುಲ್ಲಾ ಅವರು ಮೃತಪಟ್ಟರು’ ಎಂದು ಲೆಬನಾನ್ ಸೇನೆಯು ತನ್ನ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಿದೆ.

ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಇನ್ನಷ್ಟು ಸುದ್ದಿಗಳು 4B

ಬರದ ನಡುವೆ ದಸರೆಗೆ ಚಾಲನೆ ಇಂದು

ಮೈಸೂರು: ಬರ ಹಾಗೂ ಕಾವೇರಿ ನದಿ ನೀರು ಹಂಚಿಕೆಯ ವಿಷಯದಲ್ಲಿ ಎದುರಾಗಿರುವ ಸಮಸ್ಯೆಯ ನಡುವೆಯೇ, ಸಂಭ್ರಮದ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದೆ. ಅ.15ರಂದು ಬೆಳಿಗ್ಗೆ 10.15 ರಿಂದ 10.36ರೊಳಗೆ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಯ ಅಗ್ರ ಪೂಜೆಯೊಂದಿಗೆ ಹತ್ತು ದಿನಗಳ ಉತ್ಸವಕ್ಕೆ ಚಾಲನೆ ದೊರೆಯಲಿದೆ.

4A

ಯಶವಂತಪುರದಿಂದ ಕುಣಿಗಲ್ ಬೈಪಾಸ್‌ವರೆಗೆ ಪ್ರಯಾಣಿಸಲು ಹರಸಾಹಸ • 24 ಗಂಟೆಯೂ ವಾಹನಗಳ ದಟ್ಟಣೆ

ಅಡ್ಡಾದಿಡ್ಡಿ ಸಂಚಾರ: ಜೀವಕ್ಕೆ ಸಂಚಕಾರ


• ಆದಿತ್ಯ ಕೆ.ಎ.

ಬೆಂಗಳೂರು: ಜಂಕ್ಷನ್‌ಗಳಲ್ಲಿ ಕರಗದ ವಾಹನಗಳ ಸಾಲು, ಗುಂಡಿ ಬಿದ್ದಿರುವ ರಸ್ತೆಗಳಲ್ಲೇ ವಾಹನ ಸಂಚಾರ, ಅತಿವೇಗದಿಂದ ಅಪಘಾತ, ಮಿತಿಮೀರಿದ ಶಬ್ದ, ಹೊಗೆಯನ್ನೇ ಸೇವಿಸಬೇಕಾದ ಅನಿವಾರ್ಯತೆ, ಆಂಬುಲೆನ್ಸ್‌ಗಳು ಮುಂದಕ್ಕೆ ಸಾಗಲು ಸಾಧ್ಯವಿಲ್ಲದಷ್ಟು ದಟ್ಟಣೆ... ಇದು ತುಮಕೂರು ರಸ್ತೆಯ ಶೋಚನೀಯ ಸ್ಥಿತಿ.

ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಡ್ಡಾದಿಡ್ಡಿ ವಾಹನ ಸಂಚಾರ ಜನರ ಜೀವಕ್ಕೂ ಸಂಚಕಾರ ತರುತ್ತಿದೆ. ಯಶವಂತಪುರದಿಂದ ಕುಣಿಗಲ್ ಬೈಪಾಸ್‌ವರೆಗೂ ಸಮಸ್ಯೆ ಮಿತಿಮೀರಿದೆ.

ರಾಜ್ಯದ 20 ಜಿಲ್ಲೆ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯ ರಾಜಧಾನಿ ಒಳಗಿನ ಪಯಣ ನರಕವಾಗಿದೆ. ಗೊರಗುಂಟೆಪಾಳ್ಯದಿಂದ ಪಾರ್ಲೆ ಫ್ಯಾಕ್ಟರಿವರೆಗಿನ 8 ಕಿ.ಮೀ ಪಯಣವು ನಾಗರಿಕರನ್ನು ಹೈರಾಣಾಗಿಸುತ್ತಿದೆ. ಎರಡು ವರ್ಷಗಳ ಹಿಂದೆ ಪೀಣ್ಯ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಿದ್ದ ಮೇಲೆ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ.

ಕೇಬಲ್ ಅಳವಡಿಕೆ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದ್ದು, ಸಮಸ್ಯೆ ತೀವ್ರವಾಗಿದೆ. 120 ಪಿಲ್ಲರ್‌ಗಳಿಗೆ 240 ಕೇಬಲ್ ಅಳವಡಿಸಬೇಕಿದೆ. 60 ಕೇಬಲ್ ಅಳವಡಿಕೆ ಮಾತ್ರ ಪೂರ್ಣಗೊಂಡಿದ್ದು, ಇನ್ನೂ 180 ಕೇಬಲ್ ಅಳವಡಿಸುವುದು ಬಾಕಿಯಿದೆ. ಪ್ರಸ್ತುತ ಜಾಲಹಳ್ಳಿ ಜಂಕ್ಷನ್‌ನಲ್ಲಿ ಕಾಮಗಾರಿ ನಡೆಯುತ್ತಿದ್ದು ಕೆಲಸ ಮುಕ್ತಾಯಗೊಳ್ಳಲು ಮೂರರಿಂದ ನಾಲ್ಕು ತಿಂಗಳುಬೇಕಿದೆ ಎಂದು ಕಾರ್ಮಿಕರು ಹೇಳಿದರು. ಅದುವರೆಗೂ ಇದೇ ಪಡಿಪಾಟಲು ಇರಲಿದೆ.



ಸಂಚಾರ ತ್ರಾಸ ಜನರ ಪ್ರಯಾಸ

ಏಷ್ಯಾದ ಅತಿದೊಡ್ಡ ಕೈಗಾರಿಕಾ ಪ್ರದೇಶ ಇದೇ ಹೆದ್ದಾರಿ ಬದಿಯಲ್ಲಿ ಚಾಚಿಕೊಂಡಿದ್ದು, ಸರಕು ಸಾಗಣೆ ವಾಹನಗಳು ನಿತ್ಯ ಬಂದುಹೋಗುತ್ತವೆ. ಜತೆಗೆ, ಯಶವಂತಪುರ ಎಪಿಎಂಸಿಗೂ ರಾಜ್ಯ– ಹೊರರಾಜ್ಯದಿಂದ ಸಾವಿರಾರು ಲಾರಿಗಳು ಬರುತ್ತವೆ. ಇದರಿಂದ ಪೀಣ್ಯ ಜಂಕ್ಷನ್‌ನಲ್ಲಿ ಮುಂದಕ್ಕೆ ಸಾಗುವುದೇ ತ್ರಾಸವಾಗಿದೆ. ದಿನದ 24 ಗಂಟೆಯೂ ಇದೇ ಸ್ಥಿತಿ ಇರುತ್ತದೆ.

ಎಂ.ಎ.ಸಲೀಂ ಅವರು ಸಂಚಾರ ವಿಭಾಗದ ವಿಶೇಷ ಕಮಿಷನರ್ ಆಗಿದ್ದ ವೇಳೆ ತುಮಕೂರು ರಸ್ತೆಯಲ್ಲಿ ದಟ್ಟಣೆ ನಿವಾರಣೆಗೆ ಹಲವು ಸುಧಾರಣೆ ಕ್ರಮ ಕೈಗೊಂಡಿದ್ದರು. ಆ ನಿಯಮಗಳು ಈಗ ಪಾಲನೆಯಾಗುತ್ತಿಲ್ಲ. ಬೆಳಿಗ್ಗೆ 8ರಿಂದ 11ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 8 ಗಂಟೆಯವರೆಗೆ ಈ ಮಾರ್ಗದಲ್ಲಿ ಭಾರಿ ವಾಹನ ಸಂಚಾರ ನಿರ್ಬಂಧಿಸಿದ್ದರು. ಈ ದಟ್ಟಣೆ ಅವಧಿಯಲ್ಲೂ ವಾಹನಗಳು ನಗರದ ಒಳಕ್ಕೆ ಪ್ರವೇಶಿಸುತ್ತಿವೆ. ಇನ್ನು ಪಾರ್ಲೆಜಿ ಫ್ಯಾಕ್ಟರಿ ಬಳಿಯ ಹೆದ್ದಾರಿ ಬಳಿಯೇ ಕಂಟೈನರ್‌ಗಳು ಎಲ್ಲೆಂದರಲ್ಲಿ ನಿಂತು ಸಮಸ್ಯೆ ಸೃಷ್ಟಿಸುತ್ತಿವೆ. ಸೇವಾ ರಸ್ತೆಯಲ್ಲಿ ಅಕ್ಕಪಕ್ಕದ ಬಡಾವಣೆ ವಾಹನಗಳು ಸಾಗಬೇಕು. ಆದರೆ, ಹೆದ್ದಾರಿಯಲ್ಲಿ ಬರುವ ವಾಹನಗಳೇ ಬೇಕಾಬಿಟ್ಟಿಯಾಗಿ ನುಗ್ಗುತ್ತಿವೆ. ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ವಾಹನಗಳು ಬರುತ್ತವೆ.

ಎಂಟನೇ ಮೈಲಿನಲ್ಲಿ ಸಂಕಷ್ಟ ತಪ್ಪುತ್ತಿಲ್ಲ. ಬಾಗಲಗುಂಟೆ, ಚಿಕ್ಕಬಾಣಾವರದಿಂದ ಕೆಲಸ ಮುಗಿಸಿಕೊಂಡು ಮನೆಗೆ ತೆರಳುವ ಉದ್ಯೋಗಸ್ಥರು ನಿತ್ಯ ಪ್ರಯಾಸಪಡುತ್ತಾರೆ. ಚಿಕ್ಕಬಿದರಕಲ್ಲು, ನಾಗಸಂದ್ರ, ನಂದಿನಿಲೇಔಟ್, ಎಚ್‌ಎಂಟಿ ಲೇಔಟ್‌ಗೆ ತೆರಳುವ ಜನರದ್ದು ಅದೇ ಗೋಳಾಟ.




ರಾಷ್ಟ್ರೀಯ ಹೆದ್ದಾರಿಯ ಜಾಲಹಳ್ಳಿ ಜಂಕ್ಷನ್‌ನಲ್ಲಿ ಶನಿವಾರ ಉಂಟಾಗಿದ್ದ ದಟ್ಟಣೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು. ಇದರ ಮಧ್ಯೆ ಬಸ್ ಹತ್ತಲು ಪ್ರಯಾಣಿಕರು ಹರಸಾಹಸಪಟ್ಟರು –ಪ್ರಜಾವಾಣಿ ಚಿತ್ರ: ರಂಜು ಪಿ.

ಅವೈಜ್ಞಾನಿಕ ನಿರ್ವಹಣೆ

ಈ ಮಾರ್ಗದಲ್ಲಿ ಪ್ರಮುಖವಾಗಿ ಎಂಟು ಜಂಕ್ಷನ್‌ಗಳಿದ್ದು ದಟ್ಟಣೆ ಕಾರಣವಾಗುತ್ತಿರುವ ಅಂಶಗಳ ಕುರಿತು ಸ್ಟ್ರಕ್ಚರ್ಡ್ ಇನ್ಫ್ರಾ ಟೀಂ ಅಧ್ಯಯನ ನಡೆಸಿದೆ. ಸಂಚಾರ ಪೊಲೀಸರಿಗೂ ವರದಿ ಸಲ್ಲಿಸಲು ಸಿದ್ಧತೆ ನಡೆಸಿದೆ.

8ನೇ ಮೈಲಿನಲ್ಲಿ 11,500, ದಾಸರಹಳ್ಳಿಯಲ್ಲಿ 12 ಸಾವಿರ, ಜಾಲಹಳ್ಳಿಯಲ್ಲಿ 9,800, ಪೀಣ್ಯ 12,672, ಎಸ್‌ಆರ್‌ಎಸ್ ಸಿಗ್ನಲ್‌ನಲ್ಲಿ 12 ಸಾವಿರ, ಸಿಎಂಟಿಐ ಫ್ಯಾಕ್ಟರಿ ಜಂಕ್ಷನ್‌ನಲ್ಲಿ 17,600, ಗೊರಗುಂಟೆಪಾಳ್ಯ ವೃತ್ತದಲ್ಲಿ 16,800 ವಾಹನಗಳು ಒಂದು ತಾಸಿನಲ್ಲಿ ಸುಗಮವಾಗಿ ಸಂಚರಿಸಲು ಸಾಧ್ಯ ಇದೆ. ರಸ್ತೆಯೂ ವಿಸ್ತಾರವಿದೆ. ಆದರೆ, ಅಷ್ಟು ವಾಹನಗಳು ಒಂದು ತಾಸಿನಲ್ಲಿ ಸಂಚರಿಸದಿದ್ದರೂ ದಟ್ಟಣೆ ಆಗುತ್ತಿದೆ. ಅದಕ್ಕೆ ಕಾರಣ ಅವೈಜ್ಞಾನಿಕ ನಿರ್ವಹಣೆ ಎಂದು ಅಧ್ಯಯನ ತಂಡದ ಸದಸ್ಯರು ತಿಳಿಸಿದ್ದಾರೆ.

ಸಿಗ್ನಲ್‌ಗಳನ್ನು ಸಂಚಾರ ಪೊಲೀಸರೇ ನಿರ್ವಹಣೆ ಮಾಡುತ್ತಿದ್ದಾರೆ. ಸ್ವಯಂ ಚಾಲಿತ ಸಿಗ್ನಲ್ ವ್ಯವಸ್ಥೆ ಆಗಬೇಕಿದೆ. ಆಯಾ ಪಥದಲ್ಲೇ ವಾಹನ ಚಲಿಸುವ ವ್ಯವಸ್ಥೆ ಆಗಬೇಕು ಎಂದು ಅಧ್ಯಯನ ತಂಡದ ಸದಸ್ಯ ವೇಣುಗೋಪಾಲ್ 'ಪ್ರಜಾವಾಣಿ'ಗೆ ತಿಳಿಸಿದರು.




ವೇಗ ಪಡೆಯದ ಅಂಡರ್‌ಪಾಸ್ ಕಾಮಗಾರಿ

ಜಾಲಹಳ್ಳಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ಕಾಮಗಾರಿ ನನೆಗುದಿಗೆ ಬಿದ್ದಿದೆ. ಎಸ್‌ಎಂ ರಸ್ತೆಯ ಒಂದು ಬದಿಯಲ್ಲಿ ಮಾತ್ರ ಕಟ್ಟಡ ತೆರವುಗೊಳಿಸಿದ್ದು, ಕಾಮಗಾರಿ ವೇಗ ಪಡೆದುಕೊಂಡಿಲ್ಲ. ಪಾದಚಾರಿಗಳಿಗೆ ಸ್ಕೈವಾಕ್ ಸಹ ಇಲ್ಲ. ಬಸು ಹತ್ತಲು ಪ್ರಯಾಣಿಕರು ರಸ್ತೆ ದಾಟಿಯೇ ತೆರಳುತ್ತಿದ್ದಾರೆ. ಸಿಗ್ನಲ್ ಸಿಕ್ಕಿದ ತಕ್ಷಣವೇ ವಾಹನ ವೇಗವಾಗಿ ಬರುತ್ತವೆ. ಅಂಡರ್‌ಪಾಸ್ ನಿರ್ಮಾಣವಾದರೆ ಟಿವಿಎಸ್ ಕ್ರಾಸ್, ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ತೆರಳುವುದು ಸುಲಭವಾಗಲಿದೆ. ಪಾದಚಾರಿಗಳಿಗೂ ಅನುಕೂಲ ಎಂದು ಸ್ಥಳೀಯರು ಹೇಳಿದರು.

ಗೊರಗುಂಟೆಪಾಳ್ಯ: ಹತ್ತಾರು ಸಮಸ್ಯೆ

ಗೊರಗುಂಟೆಪಾಳ್ಯಕ್ಕೆ ಬಂದ ವಾಹನಗಳು, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಹೆಬ್ಬಾಳ, ಬಳ್ಳಾರಿ, ಹೈದರಾಬಾದ್, ನಾಯಂಡಹಳ್ಳಿ, ಕೆಂಗೇರಿ, ಮೈಸೂರು ರಸ್ತೆ ಕಡೆಗೆ ಇದೇ ವೃತ್ತದಿಂದ ತಿರುವು ಪಡೆದುಕೊಳ್ಳುತ್ತವೆ. ಇದರಿಂದ ದಿನಪೂರ್ತಿ ಈ ವೃತ್ತ ದಟ್ಟಣೆಯಿಂದ ಕೂಡಿರುತ್ತದೆ. ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಆಂಬುಲೆನ್ಸ್‌ಗಳು ಮುಂದಕ್ಕೆ ಸಾಗಲು ಸಾಧ್ಯವಾಗದ ಸ್ಥಿತಿ ಇರುತ್ತದೆ.



ತುಮಕೂರು ರಸ್ತೆಯಲ್ಲಿ ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಶನಿವಾರ ಅಪಾಯಕಾರಿಯಾಗಿ ಪ್ರಯಾಣಿಸುತ್ತಿದ್ದ ಯುವಕರು



ವಾಹನಗಳು ಹೊರ ಸೂಸುವ ಹೊಗೆಯಿಂದ ಮಾಲಿನ್ಯದ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಈ ಭಾಗದ ಜನರ ಆರೋಗ್ಯ ವಿಪರೀತ ಹದಗೆಡುತ್ತಿದೆ.
ರೇಷ್ಮಾ, ಪೀಣ್ಯ



ಜಾಲಹಳ್ಳಿ ಜಂಕ್ಷನ್‌ಗೆ ನಿತ್ಯ ಸಾವಿರಾರು ಮಹಿಳೆಯರು, ಮಕ್ಕಳು, ವೃದ್ಧರು ಬರುತ್ತಾರೆ. ಶೌಚಾಲಯದ ವ್ಯವಸ್ಥೆಯಿಲ್ಲದೆ ಪರದಾಡುತ್ತಿರುತ್ತಾರೆ. ತುಮಕೂರು ರಸ್ತೆಯಲ್ಲಿ ರಸ್ತೆ ದಾಟಲು ಸ್ಕೈವಾಕ್ ಇಲ್ಲ. ಇದರಿಂದ ಅನಾಹುತಗಳು ಸಂಭವಿಸುತ್ತಿವೆ.
ಭಾವನಾ, ವಿದ್ಯಾರ್ಥಿನಿ, ಚೊಕ್ಕಸಂದ್ರ



ಈ ಹೆದ್ದಾರಿಯಲ್ಲಿ ಬೈಕ್ ಓಡಿಸುವುದಕ್ಕೆ ಭಯವಾಗಲಿದೆ. ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ವಾಹನಗಳು ಬರುತ್ತವೆ. ಇದರಿಂದ ಹೆಚ್ಚು ಅಪಘಾತಗಳು ನಡೆಯುತ್ತಿವೆ.
ತಿಮ್ಮರಾಜು, ಕಾರ್ಮಿಕ



ಸಂಜೆ ಹಾಗೂ ರಾತ್ರಿ ವೇಳೆ ತುಮಕೂರು ರಸ್ತೆಯಲ್ಲಿ ವಾಹನ ಓಡಿಸಲು ಸಾಧ್ಯವಾಗುವುದಿಲ್ಲ. ದಟ್ಟಣೆ ಅವಧಿಯಲ್ಲಿ ಕಂಟೈನರ್‌ಗಳಿಗೆ ಪ್ರವೇಶ ನಿರ್ಬಂಧವಿದ್ದರೂ ತುಮಕೂರು ರಸ್ತೆಯಲ್ಲಿ ಬರುತ್ತಿವೆ.
ಎಂ.ರಾಜು, ಆಟೊ ಚಾಲಕ

ಸುದ್ದಿ 2 ನಿಮಿಷ

ಚಂದ್ರಬಾಬುಗೆ ಎ.ಸಿ ವ್ಯವಸ್ಥೆ: ಕೋರ್ಟ್ ಅನುಮತಿ

ರಾಜಮಹೇಂದ್ರವರಂ (ಪಿಟಿಐ): ಆಂಧ್ರಪ್ರದೇಶದ ರಾಜಮಹೇಂದ್ರವರಂ ಕಾರಾಗೃಹದಲ್ಲಿರುವ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರಿಗೆ ಹವಾನಿಯಂತ್ರಿತ ಕೊಠಡಿ ವ್ಯವಸ್ಥೆ ಕಲ್ಪಿಸಲು ವಿಜಯವಾಡದ ಎಸಿಬಿ ನ್ಯಾಯಾಲಯವು ಶನಿವಾರ ಅನುಮತಿ ನೀಡಿದೆ.

ಕೌಶಲ ಅಭಿವೃದ್ಧಿ ನಿಗಮದ ₹300 ಕೋಟಿ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದ ಚಂದ್ರಬಾಬು ಅವರು, ಸದ್ಯ ನ್ಯಾಯಾಂಗ ವಶದಲ್ಲಿದ್ದಾರೆ.

ಬೆಳಿಗ್ಗೆ ಸರ್ಕಾರಿ ಆಸ್ಪತ್ರೆಯ ವೈದ್ಯರ ತಂಡವು, ಮಾಜಿ ಮುಖ್ಯಮಂತ್ರಿ ಅವರ ಆರೋಗ್ಯ ತಪಾಸಣೆ ನಡೆಸಿತ್ತು. ಚಂದ್ರಬಾಬು ಅವರ ಆರೋಗ್ಯ ಸ್ಥಿರವಾಗಿದೆ. ಹಾಗಾಗಿ, ಅವರನ್ನು ಆಸ್ಪತ್ರೆಗೆ ದಾಖಲಿಸುವ ಅಗತ್ಯವಿಲ್ಲ. ಆದರೆ, ಅವರ ವಾಸ್ತವ್ಯಕ್ಕೆ ತಂಪಾದ ವಾತಾವರಣ ಕಲ್ಪಿಸಬೇಕಿದೆ ಎಂದು ಶಿಫಾರಸು ಮಾಡಿತ್ತು.

ವೈದ್ಯರ ಈ ಶಿಫಾರಸು ವರದಿ ಆಧರಿಸಿ ಚಂದ್ರಬಾಬು ಪರ ವಕೀಲರ ತಂಡವು ಕೋರ್ಟ್ ಮೊರೆ ಹೋಗಿತ್ತು.

'ಚರ್ಮದ ಅಲರ್ಜಿ ಸಮಸ್ಯೆಯಿಂದ ಅವರು ಬಳಲುತ್ತಿದ್ದಾರೆ. ಹಾಗಾಗಿ, ಕಾರಾಗೃಹದಲ್ಲಿರುವ ಅವರ ಕೊಠಡಿಗೆ ಹವಾನಿಯಂತ್ರಿತ ವ್ಯವಸ್ಥೆ ಕಲ್ಪಿಸಬೇಕು' ಎಂದು ಕೋರಿದ್ದ ಅರ್ಜಿಯನ್ನು ನ್ಯಾಯಾಲಯವು ಪುರಸ್ಕರಿಸಿದೆ.

'ಪಠ್ಯದ ಮೂಲಕ ವಿಷ ಉಣಿಸುವುದು ತಡೆಯಬೇಕು'



ಬೆಂಗಳೂರು: 'ಕ್ರಿಯಾರೂಪದಲ್ಲಿ ಮತ್ತು ನಮಗೆ ಗೊತ್ತಾಗದ ರೀತಿಯಲ್ಲಿ ಎಲ್ಲರ ಮನಸ್ಸಿಗೆ ವಿಷ ಉಣಿಸುವ ಕ್ರಿಯೆ ನಡೆಯುತ್ತಾ ಬಂದಿದೆ. ಅದೇ ಕ್ರಿಯೆಯನ್ನು ಪಠ್ಯದ ಮೂಲಕ ಮಾಡುವುದನ್ನು ತಡೆಯಬೇಕಿದೆ' ಎಂದು ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ ಹೇಳಿದರು.

ಬಿ. ಶ್ರೀಪಾದ್ ಭಟ್ ಅವರ 'ವಿಷವಟ್ಟಿ ಸುಡುವಲ್ಲಿ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ವಿಷ ಉಣಿಸುವ ಪ್ರಕ್ರಿಯೆ ಆರಂಭವಾದಾಗ ಯಾವುದೋ ಸಣ್ಣ ಗುಂಪು ಮಾಡುತ್ತಿದೆ ಎಂದು ನಿರ್ಲಕ್ಷಿಸಿದ್ದರಿಂದ, ಸರಿಯಾದ ಪ್ರತಿರೋಧ ತೋರದೇ ಇದ್ದಿದ್ದರಿಂದ, ಪ್ರತಿಸ್ಪಂದನೆ ನೀಡದೇ ಇದ್ದಿದ್ದರಿಂದ ಇಂದು ಬೃಹದಾಕಾರವಾಗಿ ಬೆಳೆದಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ವಿಷದ ಮೂಲ ಬೀಜ ಎಷ್ಟು ಸಮಯದಿಂದ ಇದೆ. ಮೂಲ ಉದ್ದೇಶವನ್ನು ಆಗು ಮಾಡಲು ಯಾವುದೆಲ್ಲ ತಂತ್ರವನ್ನು, ಅಧಿಕಾರವನ್ನು ಬಳಸಲಾಗಿದೆ ಎಂಬುದನ್ನು ಈ ಕೃತಿ ವಿವರಿಸುತ್ತದೆ. ಪಠ್ಯದಲ್ಲಿ ವಿಷ ಹೇಗೆ ಉಣಿಸಲಾಗುತ್ತಿದೆ ಎಂದು ಲೇಖಕರು ಕಟ್ಟಿಕೊಟ್ಟಿದ್ದಾರೆ. ಜಾತ್ಯತೀತ ಮನಸ್ಸು ಇರುವ ವಿದ್ವಾಂಸರು ಪಠ್ಯ ಪುಸ್ತಕ ಹೇಗಿರಬೇಕು ಎಂದು ಕಾಲಕಾಲಕ್ಕೆ ನೀಡಿದ್ದನ್ನು ಕೃತಿಯಲ್ಲಿ ಜೋಡಿಸಿ ನೀಡಲಾಗಿದೆ' ಎಂದು ವಿವರಿಸಿದರು.

'ಪಠ್ಯಪುಸ್ತಕದಲ್ಲಿ ಯಾವುದು ಇರಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇದೆ. ಆದರೆ ಅದನ್ನು ಎದುರುಗೊಳ್ಳುವುದು ಹೇಗೆ ಎಂಬುದರ ಬಗ್ಗೆ ಸ್ಪಷ್ಟತೆ ಬೇಕಾಗಿದೆ. ಹಿಂದೆ ಏನಾಯಿತು ಎಂಬ ವಿವರಣೆಗಳು ಇಲ್ಲಿವೆ. ಮುಂದೇನು ಮಾಡಬೇಕು ಎಂಬುದನ್ನು ಕಂಡುಕೊಳ್ಳಬೇಕು' ಎಂದು ತಿಳಿಸಿದರು.

ಕನ್ನಡ ಸಹಾಯಕ ಪ್ರಾಧ್ಯಾಪಕ ರವಿಕುಮಾರ್ ಬಾಗಿ ಕೃತಿ ಪರಿಚಯ ಮಾಡಿ, 'ವಿಷವಟ್ಟಿ ಸುಡುವಲ್ಲಿ ಕೃತಿ ಕನಿಷ್ಠ 5 ವರ್ಷಗಳ ಹಿಂದೆ ಬಂದಿದ್ದರೆ ಈಗ ಆಗಿರುವ ಹಾನಿಯನ್ನು ತಡೆಯಬಹುದಿತ್ತು' ಎಂದರು.

ರಾಮನಗರದಲ್ಲಿ ಬೆಂಗಳೂರಿನ ಕಸ ವಿಲೇವಾರಿ?

ಪ್ರಜಾವಾಣಿ ವಾರ್ತೆ

ರಾಮನಗರ: ರಾಜಧಾನಿ ಬೆಂಗಳೂರಿನಲ್ಲಿ ಕಸ ವಿಲೇವಾರಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ಸರ್ಕಾರ, ಅಲ್ಲಿ ನಿತ್ಯ ಉತ್ಪತ್ತಿಯಾಗುವ ಟನ್‌ಗಟ್ಟಲೆ ಕಸವನ್ನು ಹೊರಗಿನ ಜಿಲ್ಲೆಗಳಲ್ಲಿ ವಿಲೇವಾರಿ ಮಾಡಲು ಚಿಂತನೆ ನಡೆಸಿದೆ. ಅದಕ್ಕಾಗಿ, ರಾಮನಗರ ಜಿಲ್ಲೆಯಲ್ಲಿ 100 ಎಕರೆ ಜಾಗವನ್ನು ಗುರುತಿಸಲು ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಬೆಂಗಳೂರಿನ ಕಸ ವಿಲೇವಾರಿ ಘಟಕಗಳನ್ನು ಹೊರವಲಯದ ನಾಲ್ಕು ದಿಕ್ಕುಗಳಿಗೆ ಸ್ಥಳಾಂತರಿಸುವ ಯೋಜನೆ ಇದೆ. ಅದರಲ್ಲೂ ಕಲ್ಲು – ಬಂಡೆಗಳು ಇರುವ ಕಡೆ ವಿಲೇವಾರಿ ಮಾಡುವುದರಿಂದ ಕಸ ದುರ್ವಾಸನೆ ಬೀರುವುದು ತಪ್ಪುತ್ತದೆ ಎಂದಿದ್ದರು.

ಅದರ ಬೆನ್ನಲ್ಲೇ, ರಾಜಧಾನಿಗೆ 32 ಕಿ.ಮೀ. ದೂರವಿರುವ ರಾಮನಗರ ಜಿಲ್ಲೆಯ ಬಿಡದಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆಗೆ ಸೇರಿದ ಸರ್ಕಾರಿ ಜಾಗ ಗುರುತಿಸುವ ಕಾರ್ಯದಲ್ಲಿ ಅಧಿಕಾರಿಗಳು ನಿರತರಾಗಿದ್ದಾರೆ. ಇದರ ಜೊತೆಗೆ, ಪಕ್ಕದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭಾಗದಲ್ಲೂ ಹುಡುಕಾಟ ನಡೆದಿದೆ ಎನ್ನಲಾಗಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಜಿಲ್ಲಾಧಿಕಾರಿ ಡಾ.ಅವಿನಾಶ್ ಮೆನನ್ ರಾಜೇಂದ್ರನ್ ಅವರಿಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ. 'ಈ ಕುರಿತು ಅಧಿಕೃತವಾಗಿ ಯಾವುದೇ ಸೂಚನೆ ನಮಗೆ ಬಂದಿಲ್ಲ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ ಅವರು ಹೇಳಿದರು.

ತೆಲಂಗಾಣ: ₹ 48 ಕೋಟಿ ನಗದು ವಶ

ಹೈದರಾಬಾದ್ (ಪಿಟಿಐ): ತೆಲಂಗಾಣ ರಾಜ್ಯದಲ್ಲಿ ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಒಟ್ಟು ₹48.33 ಕೋಟಿ ನಗದು ಹಾಗೂ 37.4 ಕೆ.ಜಿ ಚಿನ್ನ ವಶಕ್ಕೆ ಪಡೆಯಲಾಗಿ ದೆ. ಅಕ್ರಮ ಚಟುವಟಿಕೆ ಹತ್ತಿಕ್ಕುವ ಕಾರ್ಯ ನಡೆಯುತ್ತಿದೆ ಎಂದು ರಾಜ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಶನಿವಾರ ನಡೆದ ಬೌದ್ಧ ಧಮ್ಮ ದೀಕ್ಷಾ ಸಮಾವೇಶ, ರಾಜ್ಯ ಬೌದ್ಧ ಯುವ ಸಮ್ಮೇಳನವನ್ನು ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಿದರು. ವಿನಯರಖ್ಖಿತ ಮಹಾಥೆರೋ, ಎಂ.ವೆಂಕಟಸ್ವಾಮಿ, ಹ.ರಾ. ಮಹೇಶ್ ಇದ್ದಾರೆ.

ಬೌದ್ಧ ಧಮ್ಮ ಸ್ವೀಕರಿಸಿದ 300ಕ್ಕೂ ಹೆಚ್ಚು ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರದ ನಾಗಸೇನಾ ಬುದ್ಧವಿಹಾರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯ ಬೌದ್ಧ ಯುವ ಸಮ್ಮೇಳನ, 67ನೇ ಧಮ್ಮ ದೀಕ್ಷಾ ಸಮಾವೇಶದಲ್ಲಿ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ 300ಕ್ಕೂ ಹೆಚ್ಚು ವಿವಿಧ ಜಾತಿಗಳ ಜನರು ಬೌದ್ಧ ಧಮ್ಮ ಸ್ವೀಕರಿಸಿದರು.

ಭಾರತೀಯ ಬುದ್ಧಿಸ್ಟ್ ಸಂಘ, ಕರ್ನಾಟಕ ಬುದ್ಧ ಸಮಾಜ, ಸಮತಾ ಸೈನಿಕ ದಳ, ದಲಿತ ಸಂಘರ್ಷ ಸಮಿತಿ ಹಾಗೂ ಸಮ್ಯಕ್ ಸಂಘಟನೆಗಳು ಕಾರ್ಯಕ್ರಮ ಆಯೋಜಿಸಿದ್ದವು.

ಕರ್ನಾಟಕ ತಮಿಳುನಾಡು, ಆಂಧ್ರಪ್ರದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಧಮ್ಮ ದೀಕ್ಷೆ ಪಡೆದ ಎಲ್ಲರಿಗೂ ನಾಗಪುರದ ಅಶೋಕ ಬೌದ್ಧ ವಿಹಾರದ ವಿನಯರಖ್ಖಿತ ಮಹಾಥೆರೋ ಅವರು ಅಂಬೇಡ್ಕರ್ ಅನುಸರಿಸಿದ್ದ 21 ಅಂಶಗಳನ್ನು ಬೋಧಿಸಿದರು.

ಧಮ್ಮ ದೀಕ್ಷಾ ಸಮಾವೇಶ ಉದ್ಘಾಟಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಬೌದ್ಧ ಧಮ್ಮ ಶೋಷಿತ ಸಮುದಾಯಗಳ ವಿಮೋಚನಾ ಮಾರ್ಗವಾಗಿದೆ. 22 ವರ್ಷಗಳು ನಿರಂತರವಾಗಿ ಬೌದ್ಧ ಧಮ್ಮ ಕುರಿತು ಅಧ್ಯಯನ ಮಾಡಿದ್ದ ಬಿ.ಆರ್. ಅಂಬೇಡ್ಕರ್ ಅವರು ಕೊನೆಗೆ ಅದೇ ಧಮ್ಮ ಸ್ವೀಕರಿಸಿದರು. ಅಂದಿನಿಂದಲೂ ಶೋಷಿತರು ಹೆಚ್ಚಿನ ಸಂಖ್ಯೆಯಲ್ಲಿ ಅನುಸರಿಸುತ್ತಿದ್ದಾರೆ ಎಂದರು.

ಬೀದರ್‌ನ ಅಣಬೂರು ಬುದ್ಧ ವಿಹಾರದ ದಮ್ಮಾನಂದ ಮಹಾಥೆರೋ, ಚಾಮರಾಜನಗರ ನಳಂದ ವಿಶ್ವವಿದ್ಯಾಲಯದ ಬೋಧಿದತ್ತ ಥೆರೋ, ನಾಗಸೇನಾ ಬುದ್ಧ ವಿಹಾರದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ಬಿಕ್ಕುಣಿ ಬುದ್ಧಮ್ಮ, ಕರ್ನಾಟಕ ಬೌದ್ಧ ಸಮಾಜದ ಅಧ್ಯಕ್ಷ ಹ.ರಾ. ಮಹೇಶ್, ಬಿಎಸ್‌ಐ ಕರ್ನಾಟಕದ ಅಧ್ಯಕ್ಷ ಸಾಕೆ ಶಾಮು, ನಿವೃತ್ತ ಐಎಎಸ್ ಅಧಿಕಾರಿಗಳಾದ ಎಚ್.ಸಿದ್ದಯ್ಯ, ಬಾಬುರಾವ್ ಮುಡುಬಿ, ನಿವೃತ್ತ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಇದ್ದರು.

ಸಮ್ಮೇಳನ ನಿರ್ಣಯ

- ಕರ್ನಾಟಕದ ಬೌದ್ಧ ಧಮ್ಮದ ಅನುಯಾಯಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ.
- ಬೌದ್ಧ ಧಮ್ಮ ಸ್ವೀಕರಿಸುವ ಪರಿಶಿಷ್ಟರಿಗೆ ಎಸ್‌ಸಿ, ಎಸ್‌ಟಿ ಸೌಲಭ್ಯ ಪಡೆಯಲು ಅವಕಾಶ.
- ಬುದ್ಧ ಪೂರ್ಣಿಮೆಗೆ ಸರ್ಕಾರಿ ರಜೆ ಘೋಷಣೆ.
- ಬೌದ್ಧ ಗುರುಗಳಿಗೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ

ಇಂದಿನಿಂದ 'ಬೆಂಗಳೂರು ಗೋಲ್ಡ್ ಫೆಸ್ಟಿವಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ವರ್ಷದ 'ಬೆಂಗಳೂರು ಗೋಲ್ಡ್ ಫೆಸ್ಟಿವಲ್' (ಬಿಜಿಎಫ್) ಅ.15ರಿಂದ ನ.30ರ ವರೆಗೆ ನಡೆಯಲಿದೆ ಎಂದು ಕರ್ನಾಟಕ ಜುವೆಲ್ಲರಿ ಅಸೋಸಿಯೇಷನ್ ಅಧ್ಯಕ್ಷ ಟಿ.ಎ. ಶರವಣ ತಿಳಿಸಿದರು.

ಅ.15ರಂದು ಬೆಳಿಗ್ಗೆ 11.30ಕ್ಕೆ ಜಯನಗರ ಗಣೇಶ ದೇವಸ್ಥಾನದಲ್ಲಿ ಹಬ್ಬಕ್ಕೆ ಚಾಲನೆ ನೀಡಲಾಗುವುದು. ಸುವರ್ಣ ಹಬ್ಬದ ಪ್ರಯುಕ್ತ ಬೆಂಗಳೂರಿನ 150 ಹಾಗೂ ಹೊರಜಿಲ್ಲೆಗಳ 50 ಸೇರಿ ಒಟ್ಟು 200 ಚಿನ್ನಾಭರಣ ಮಳಿಗೆಗಳಲ್ಲಿ ಪ್ರತಿ ₹ 5,000 ಮೌಲ್ಯದ ಚಿನ್ನ, ಬೆಳ್ಳಿ ಖರೀದಿಗೆ ಒಂದು ಕೂಪನ್‌ನಂತೆ ನೀಡಲಾಗುವುದು. ಚಿನ್ನದ ಗಟ್ಟಿ, ಬೆಳ್ಳಿ ಗಟ್ಟಿ, ಐ10 ಕಾರು ಸೇರಿದಂತೆ 3,600 ಬಹುಮಾನಗಳು ಇರಲಿವೆ. ಒಟ್ಟು 2.5 ಕೆ.ಜಿ. ಚಿನ್ನ, 43 ಕೆ.ಜಿ. ಬೆಳ್ಳಿ ಬಹುಮಾನ ಇರಲಿದೆ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಳೆದ ವರ್ಷ ಆರಂಭಿಸಿದ ಬಿಜಿಎಫ್ ಬೆಂಗಳೂರು ನಗರಕ್ಕೆ ಸೀಮಿತವಾಗಿತ್ತು. ಈ ವರ್ಷ ಇತರ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ. ದುಬೈ ಶಾಪಿಂಗ್ ಫೆಸ್ಟಿವಲ್‌ನಂತೆ ದೇಶ ವಿದೇಶಗಳಿಂದ ಗ್ರಾಹಕರು ಬರುವಂತಾಗಬೇಕು ಎಂದು ಜುವೆಲ್ಲರಿ ಅಸೋಸಿಯೇಷನ್ ಸಂಘದ ಅಧ್ಯಕ್ಷ ಸುರೇಶ್ ಗನ್ನ, ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್ ನ ಅಧ್ಯಕ್ಷ ಡಿ.ವಿ. ರಮೇಶ್ ತಿಳಿಸಿದರು.



'ಬೆಂಗಳೂರು ಗೋಲ್ಡ್ ಫೆಸ್ಟಿವಲ್' ಲೋಗೊ ಹಾಗೂ ಬಂಪರ್ ಬಹುಮಾನದ ಕೂಪನ್‌ಗಳನ್ನು ಕರ್ನಾಟಕ ಜುವೆಲ್ಲರಿ ಅಸೋಸಿಯೇಷನ್ ಅಧ್ಯಕ್ಷ ಟಿ.ಎ. ಶರವಣ, ಜುವೆಲ್ಲರಿ ಅಸೋಸಿಯೇಷನ್ ಸಂಘದ ಅಧ್ಯಕ್ಷ ಸುರೇಶ್ ಗನ್ನ, ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್ ನ ಅಧ್ಯಕ್ಷ ಡಿ.ವಿ. ರಮೇಶ್ ಬಿಡುಗಡೆ ಮಾಡಿದರು



ದಸರಾ ಬೊಂಬೆ

ದಸರಾ ಅಂಗವಾಗಿ ನಗರದ ಮಲ್ಲೇಶ್ವರದ ಅಂಗಡಿಯಲ್ಲಿ ಯುವತಿಯರಿಬ್ಬರು ದಸರಾ ಬೊಂಬೆ ಖರೀದಿಸಿದರು. –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

₹1ಕೋಟಿ ಮೌಲ್ಯದ ಚಿನ್ನ ವಶ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಮೂರು ಪ್ರತ್ಯೇಕ ಪ್ರಕರಣದಲ್ಲಿ ಒಟ್ಟು ₹1ಕೋಟಿ ಮೌಲ್ಯದ 1.7 ಕೆ.ಜಿ ಚಿನ್ನ ವಶಕ್ಕೆ ಪಡೆದು, ಆರೋಪಿಗಳನ್ನು ಬಂಧಿಸಿದ್ದಾರೆ.

ಸಿಂಗಪುರದಿಂದ ಆಗಮಿಸಿದ ಪ್ರಯಾಣಿಕನಿಂದ ಒಟ್ಟು ₹57.77 ಲಕ್ಷ ಮೌಲ್ಯದ 945 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ. ಕುವೈತ್‌ನಿಂದ ಬಂದ ಮತ್ತೊಬ್ಬ ಪ್ರಯಾಣಿಕ ಗುದದ್ವಾರದಲ್ಲಿ 689.65 ಗ್ರಾಂ ಚಿನ್ನ ಬಚ್ಚಿಟ್ಟುಕೊಂಡು ಕಳ್ಳ ಸಾಗಣೆ ಮಾಡುತ್ತಿರುವುದು ತಪಾಸಣೆ ವೇಳೆ ಪತ್ತೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ಶ್ರೀಲಂಕಾದಿಂದ ವಿಮಾನದ ಮೂಲಕ ಬಂದ ಪ್ರಯಾಣಿಕನೊಬ್ಬ 103.33 ಗ್ರಾಂ ಚಿನ್ನವನ್ನು ಒಳ ಉಡುಪಿನಲ್ಲಿ ಇಟ್ಟುಕೊಂಡು ಕಳ್ಳ ಸಾಗಣೆ ಮಾಡುವಾಗ ಸಿಕ್ಕಿಬಿದ್ದಿದ್ದಾನೆ.

'ದೇಸಿ' ಸಮ್ಮೇಳನ ಇದೇ 18ಕ್ಕೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಇದೇ 18ರಂದು ಪ್ರಥಮ 'ದೇಸಿ ಸಮ್ಮೇಳನ'ವನ್ನು ಜಿಕೆವಿಕೆಯ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಈ ಸಮ್ಮೇಳನವು ಸೆ. 29 ರಂದು ನಡೆಯಬೇಕಿತ್ತು. ಆದರೆ, ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು.

'ಈ ಸಮ್ಮೇಳನದಲ್ಲಿ ಬೆಂಗಳೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ ಮತ್ತು ರಾಮನಗರದ ಕೃಷಿ ಪರಿಕರ ಮಾರಾಟಗಾರರು ಭಾಗವಹಿಸಲಿದ್ದಾರೆ' ಎಂದು ಕೃಷಿ ವಿ.ವಿ ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣಬೈರೇಗೌಡ ಭಾಗವಹಿಸಲಿದ್ದಾರೆ ಎಂದಿದ್ದಾರೆ.

ನಿಧನ ವಾರ್ತೆ

ರವಿಕುಮಾರ್



ಬೆಂಗಳೂರು: ನಗರದ ಹಣಕಾಸು ಸಂಸ್ಥೆಯೊಂದರ ವ್ಯವಸ್ಥಾಪಕರಾಗಿದ್ದ ಎಸ್. ರವಿ ಕುಮಾರ್ (54) ಅವರು ಶುಕ್ರವಾರ (ಅ. 13) ನಿಧನರಾದರು.

ರವಿಕುಮಾರ್ ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ತ್ಯಾಜ್ಯ ವಿಲೇವಾರಿಯಲ್ಲಿ ಸ್ಪಷ್ಟ ಲೆಕ್ಕಾಚಾರ • ಸುಮಾರು 16 ಟನ್ ತ್ಯಾಜ್ಯ ಒಂದೇ 'ಕ್ಯಾಪ್ಸೂಲ್'ನಲ್ಲಿ ರವಾನೆ

ನಗರದಲ್ಲಿ 15 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್'

• ಆರ್. ಮಂಜುನಾಥ್

ಬೆಂಗಳೂರು: ನಗರದ ತ್ಯಾಜ್ಯ ವಿಂಗಡಣೆ ಹಾಗೂ ಸಾಗಣೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿರುವ 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್'ಗಳನ್ನು (ಎಸ್‌ಟಿಎಸ್) 15 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಥಾಪಿಸಲು ಬಿಬಿಎಂಪಿ ಮುಂದಾಗಿದೆ.

ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೂರು ವಿಶೇಷ ತನಿಖಾ ತಂಡಗಳು (ಎಸ್‌ಐಟಿ) ತನಿಖೆ ನಡೆಸುತ್ತಿವೆ. ಈ ತನಿಖೆಗಳ ಪರಿಶೀಲನೆ ಮುಗಿದ ಮೇಲೆ, ಹೊಸ ಎಸ್‌ಟಿಎಸ್‌ಗಳನ್ನು ಸ್ಥಾಪಿಸುವ ಯೋಜನೆಯನ್ನು ಬಿಬಿಎಂಪಿ ರೂಪಿಸಲಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿಯು ನಗರದ ಮೂರು ಪ್ರದೇಶದಲ್ಲಿ ನಿತ್ಯವೂ ತಲಾ 150 ಮೆಟ್ರಿಕ್ ಟನ್ ತ್ಯಾಜ್ಯ ಸಂಗ್ರಹಿಸಿ, ಅದನ್ನು ವೈಜ್ಞಾನಿಕವಾಗಿ ಸಂಸ್ಕರಣಾ ಘಟಕಗಳಿಗೆ ಸಾಗಣೆ ಮಾಡುವ ಎಸ್‌ಟಿಎಸ್‌ಗಳನ್ನು ಸ್ಥಾಪಿಸುತ್ತಿದೆ. ಕೋರಮಂಗಲದ ಎಸ್‌ಟಿಎಸ್ ನಿರ್ಮಾಣ ಪೂರ್ಣಗೊಂಡಿದ್ದು, ಎಸ್‌ಐಟಿ ತನಿಖೆ ನಡೆಯುತ್ತಿರುವುದರಿಂದ ಕಾರ್ಯನಿರ್ವಹಣೆ ಆರಂಭಿಸಿಲ್ಲ.



ಕೋರಮಂಗಲದಲ್ಲಿ ನಿರ್ಮಾಣಗೊಂಡು ಕಾರ್ಯಾಚರಣೆಗೆ ಕಾಯುತ್ತಿರುವ ಘನತ್ಯಾಜ್ಯ 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್'

ಕೋರಮಂಗಲದಲ್ಲಿ ನಿರ್ಮಾಣವಾಗಿರುವ 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್' ಕಾರ್ಯಾರಂಭಿಸಿದರೆ ಏಳು ವಾರ್ಡ್‌ಗಳ ತ್ಯಾಜ್ಯ ಆಟೊಗಳ ಮೂಲಕ ನೇರವಾಗಿ ಇಲ್ಲಿಗೆ ಬರಲಿದೆ. ಸಿ.ಸಿ ಟಿ.ವಿ ಕ್ಯಾಮೆರಾ ನಿಗಾದಲ್ಲಿ ಆಟೊದ ಬರುವಿಕೆಯಿಂದ ಹಿಡಿದು, ಅದರ ರೂಟ್ ನಂಬರ್, ಸಂಖ್ಯಾಫಲಕ, ತ್ಯಾಜ್ಯದ ತೂಕ ಎಲ್ಲವೂ ವೆಬ್‌ಸೈಟ್‌ನಲ್ಲಿ ದಾಖಲಾಗಲಿದೆ. ಆಟೊದಿಂದ ನೇರವಾಗಿ 'ಇಂಧನ ಸಾಗಿಸುವ ಕಂಟೈನರ್'ಗಳ ಮಾದರಿಯಲ್ಲಿರುವ 'ಕ್ಯಾಪ್ಸೂಲ್'ಗಳಿಗೆ ತ್ಯಾಜ್ಯ ರವಾನೆಯಾಗುತ್ತದೆ. ದ್ರವ–ತ್ಯಾಜ್ಯವನ್ನು ಹೊರಹಾಕಿ, ಕಂಪ್ರೆಸ್ ಮಾಡಿ ತುಂಬಲಾಗುತ್ತದೆ. 'ಕ್ಯಾಪ್ಸೂಲ್'ಗಳ ತಳಭಾಗದಲ್ಲೂ ದ್ರವ–ತ್ಯಾಜ್ಯ ಹೆಚ್ಚಿನ ಸಂಗ್ರಹಕ್ಕೆ ಅವಕಾಶವಿದೆ. ಇದನ್ನು ಜಿಪಿಎಸ್ ನಿಯಂತ್ರಣದಲ್ಲಿರುವ ಟ್ರಕ್‌ಗಳ ಮೂಲಕ ಸಂಸ್ಕರಣೆ ಘಟಕಗಳಿಗೆ ರವಾನಿಸಲಾಗುತ್ತದೆ.

ಪ್ರತಿ ವಾರ್ಡ್‌ನಲ್ಲಿ ಈಗ 2 ಕಾಂಪ್ಯಾಕ್ಟರ್‌ಗಳು, ಹತ್ತಾರು ಆಟೊಗಳ ಮೂಲಕ ತ್ಯಾಜ್ಯ ಸಂಗ್ರಹ ನಡೆಯುತ್ತಿದೆ. 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್' ಕಾರ್ಯನಿರ್ವಹಿಸಿದರೆ, ಸುಮಾರು 16 ಟನ್ ತ್ಯಾಜ್ಯ ಒಂದೇ 'ಕ್ಯಾಪ್ಸೂಲ್'ನಲ್ಲಿ ರವಾನೆಯಾಗುತ್ತದೆ. ಇದು ಯಾವುದೇ ರೀತಿಯ ದ್ರವ–ತ್ಯಾಜ್ಯ, ವಾಸನೆಯನ್ನೂ ಹೊರಹಾಕುವುದಿಲ್ಲ. ಅಲ್ಲದೆ, ಆಟೊದಿಂದ ತ್ಯಾಜ್ಯವನ್ನು 'ಕ್ಯಾಪ್ಸೂಲ್' ಒಳಗೆ ಸೇರಿಸುವ ಅವಧಿಯಲ್ಲೂ ವಾಸನೆ ಸ್ಟೇಷನ್‌ನಿಂದ ಹೊರಹೋಗದಂತೆ ಜೈವಿಕ ದ್ರವವನ್ನು ಸಿಂಪಡಿಸಲಾಗುತ್ತದೆ. ಒಣ ತ್ಯಾಜ್ಯ ಹಾಗೂ ಮಿಶ್ರ ತ್ಯಾಜ್ಯದ ವಿಂಗಡಣೆ, ಸಾಗಣೆಗೂ ಎಸ್‌ಟಿಎಸ್‌ನಲ್ಲಿ ಅವಕಾಶವಿದೆ.

ಒಂದು ಬಾರಿ ಆಟೊದಿಂದ ಕಸ ಎಸ್‌ಟಿಎಸ್‌ಗೆ ಬಂದರೆ ಅದನ್ನು ಸಂಸ್ಕರಣೆ ಘಟಕಕ್ಕೆ ವಿಲೇವಾರಿ ಮಾಡುವವರೆಗಿನ ಎಲ್ಲ ಜವಾಬ್ದಾರಿ ಗುತ್ತಿಗೆದಾರರದ್ದೇ ಆಗಿದೆ. ಅಲ್ಲದೆ, ಎಸ್‌ಟಿಎಸ್‌ನಲ್ಲಿರುವ ಎಲ್ಲ ಉಪಕರಣಗಳು, ಟ್ರಕ್‌ಗಳು ಬಿಬಿಎಂಪಿ ಮುಖ್ಯ ಆಯುಕ್ತರ ಹೆಸರಿನಲ್ಲೇ ಇವೆ. ಎಲ್ಲವೂ ಬಿಬಿಎಂಪಿಯ ಆಸ್ತಿಯೇ ಆಗಿರುತ್ತವೆ.

'ವಾರ್ಡ್‌ಗಳಲ್ಲಿ ತ್ಯಾಜ್ಯ ಸಂಗ್ರಹಣೆಗೆ ಸ್ಥಾಪಿಸಲಾಗಿರುವ ಮಿನಿ ಟ್ರಾನ್ಸ್‌ಫರ್ ಸ್ಟೇಷನ್‌ಗಳಿಂದ (ಎಂಟಿಎಸ್) ವಿಲೇವಾರಿಯ ಸಮಸ್ಯೆ ನಿವಾರಣೆಯಾಗಿಲ್ಲ. ಸಾಮಾನ್ಯ ಕಾಂಪ್ಯಾಕ್ಟರ್‌ಗಳಲ್ಲೇ ತ್ಯಾಜ್ಯ ಸಾಗಿಸುತ್ತಿದ್ದು, ಕಸ, ದ್ರವ–ತ್ಯಾಜ್ಯ ರಸ್ತೆಯಲ್ಲಿ ಸೋರುತ್ತಿದೆ. ಹೀಗಾಗಿ 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್' ಅನ್ನೇ ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ನಿರ್ಮಿಸಲು ಯೋಜಿಸಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಕಸದಿಂದ ಗೊಬ್ಬರಕ್ಕೆ ತಂತ್ರಜ್ಞಾನ

ರುದ್ರಾಕ್ಷ ವೇಸ್ಟ್ ಯುಟಿಲಿಟಿ ಸಂಸ್ಥೆ ಹಸಿ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ 'ವಾಸನೆ ರಹಿತ ತಂತ್ರಜ್ಞಾನವನ್ನು' ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಭೆಯ ಮುಂದೆ ಪ್ರಸ್ತುತ ಪಡಿಸಿದೆ. ಈ ಸಂಸ್ಥೆಗೆ, ಬಿಬಿಎಂಪಿಯ ತ್ಯಾಜ್ಯ ಸಂಸ್ಕರಣೆ ಘಟಕಗಳಲ್ಲಿ ಗೊಬ್ಬರ ತಯಾರಿಸಲು ಒಂದು ವರ್ಷ ಅವಕಾಶ ನೀಡಬೇಕು ಎಂದು ಮಂಡಳಿ ಸಲಹೆ ನೀಡಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ, ಅದರ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

'ಏರೋಬಿಕ್ ಸ್ಪಾಂಜ್ ಬೆಡ್ ಆರ್ಗ್ಯಾನಿಕ್ ಮೆಥಡ್'ನಲ್ಲಿ ಸ್ಪಾಂಜ್ ಬೆಡ್ ಮೇಲೆ ಹಸಿ ಕಸವನ್ನು ಸುಮಾರು 2 ಮೀಟರ್‌ನಷ್ಟು ಸುರಿಯಲಾಗುತ್ತದೆ. ನಂತರ 'ಸುರಭಿ' ಮಿಶ್ರಣ ಹಾಕಿ ವಾಸನೆಯನ್ನು ನಿವಾರಿಸಲಾಗುತ್ತದೆ. ಕಸದ ಮೇಲೆ 'ಆಮ್ಲಿಕ' ನೈಸರ್ಗಿಕ ದ್ರಾವಣ ಹಾಗೂ 'ಶಿಲೀಂಧ್ರ' ದ್ರಾವಣ ಸಿಂಪಡಣೆಯಿಂದ ಸೊಳ್ಳೆ, ನೊಣ, ದ್ರವ–ತ್ಯಾಜ್ಯದ ಸಮಸ್ಯೆ ಇರುವುದಿಲ್ಲ. 90 ದಿನದಲ್ಲಿ ಹಸಿ ತ್ಯಾಜ್ಯ ಗೊಬ್ಬರವಾಗುತ್ತದೆ' ಎಂದು ರುದ್ರಾಕ್ಷ ಸಂಸ್ಥೆಯ ಡಾ. ಸಿ. ಸೀನಪ್ಪ, ಡಾ. ಸುನೀತಾ ಅವರು ಮಾಲಿನ್ಯ ಮಂಡಳಿಯ ಸಭೆಯಲ್ಲಿ ಹೊಸ ತಂತ್ರಜ್ಞಾನದ ವಿವರವನ್ನು ನೀಡಿದ್ದಾರೆ.

'ಸಚಿವರಿಂದ ಬೇಡಿಕೆ'

'ಸಚಿವರಾದ ಕೆ.ಜೆ. ಜಾರ್ಜ್, ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂರಾವ್ ಅವರು ತಮ್ಮ ಕ್ಷೇತ್ರದಲ್ಲಿ 'ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್' ಸ್ಥಾಪಿಸುವಂತೆ ಬೇಡಿಕೆ ಸಲ್ಲಿಸಿದ್ದಾರೆ. ಇದಲ್ಲದೆ, ಹಲವು ಶಾಸಕರೂ ಸ್ಟೇಷನ್ ನಿರ್ಮಿಸಬೇಕೆಂದು ಕೇಳಿದ್ದಾರೆ. ಒಂದು ಸ್ಟೇಷನ್ ಸಿದ್ಧವಾಗಿದೆ. ಇನ್ನೆರಡು ನಿರ್ಮಾಣದ ಹಂತದಲ್ಲಿವೆ. ಇನ್ನೂ ಸುಮಾರು 15 ಸ್ಟೇಷನ್‌ಗಳನ್ನು ಸ್ಥಾಪಿಸಬೇಕೆಂದು ಆಲೋಚಿಸಲಾಗಿದ್ದು, ಈ ಬಗ್ಗೆ ಸ್ಪಷ್ಟ ಯೋಜನೆ ಶೀಘ್ರವೇ ತಯಾರಾಗಲಿದೆ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

ಸುದ್ದಿ 2 ನಿಮಿಷ

ಬಿಎಂಟಿಸಿ ಬಸ್ ಚಕ್ರ ಹರಿದು ಬಿ.ಇ ವಿದ್ಯಾರ್ಥಿ ಸಾವು

ಬೆಂಗಳೂರು: ಬಿಎಂಟಿಸಿ ಬಸ್ಸಿನ ಚಕ್ರ ತಲೆ ಮೇಲೆ ಹರಿದು ವಿದ್ಯಾರ್ಥಿ ಗಂಗಾಧರ (21) ಮೃತಪಟ್ಟಿದ್ದು, ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕ ಲೋಕೇಶ್ ಅವರನ್ನು ಯಶವಂತಪುರ ಸಂಚಾರ ಪೊಲೀಸರು ಬಂಧಿಸಿದ್ದಾರೆ.

'ಕಮಲಾನಗರ ನಿವಾಸಿ ಗಂಗಾಧರ, ನಗರದ ಕಾಲೇಜು ಒಂದರ ಎಂಜಿನಿಯರಿಂಗ್ (ಬಿ.ಇ) ವಿದ್ಯಾರ್ಥಿ. ಕಾಲೇಜು ಸಹಪಾಠಿ ನಿಖಿತ್ ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಗಂಗಾಧರ ಹಾಗೂ ನಿಖಿತ್, ಬಿ.ಇ 7ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇತ್ತೀಚೆಗೆ 15 ದಿನ ಎಚ್‌ಎಎಲ್‌ನಲ್ಲಿ ತರಬೇತಿ ಪಡೆದಿದ್ದರು. ತರಬೇತಿ ಪ್ರಮಾಣ ಪತ್ರ ನೀಡುವುದಾಗಿ ಎಚ್‌ಎಎಲ್‌ನವರು ಹೇಳಿದ್ದರು. ಪತ್ರ ಪಡೆಯಲು ಗಂಗಾಧರ ಹಾಗೂ ನಿಖಿತ್ ಅವರು ಶನಿವಾರ ಬೆಳಿಗ್ಗೆ ಮನೆಯಿಂದ ಹೊರಟಿದ್ದರು.'

'ನಿಖಿತ್ ಅವರು ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದರು. ಹಿಂಬದಿಯಲ್ಲಿ ಗಂಗಾಧರ ಕುಳಿತಿದ್ದರು. ಮಾರಪ್ಪನಪಾಳ್ಯದ ಬಳಿ ಬಿಎಂಟಿಸಿ ಬಸ್ ಹೊರಟಿತ್ತು. ಬಸ್ ಪಕ್ಕದಲ್ಲಿಯೇ ದ್ವಿಚಕ್ರ ವಾಹನ ತೆರಳುತ್ತಿತ್ತು. ಇದೇ ಸಂದರ್ಭದಲ್ಲಿ ಬಸ್, ಪಕ್ಕದಲ್ಲಿದ್ದ ದ್ವಿಚಕ್ರ ವಾಹನಕ್ಕೆ ತಾಗಿತ್ತು. ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು.'

'ಹಿಂಬದಿಯಲ್ಲಿದ್ದ ಗಂಗಾಧರ, ಬಸ್ಸಿನಡಿ ಬಿದ್ದಿದ್ದರು. ಅವರ ತಲೆ ಮೇಲೆಯೇ ಬಸ್ಸಿನ ಹಿಂಬದಿಯ ಚಕ್ರ ಹರಿದಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಂದು ತಿಳಿಸಿದರು.

ಒಂದೇ ಕುಟುಂಬದ ಮೂವರ ಸಾವು



ರಾಮನಗರ: ನಗರ ಹೊರವಲಯದ ಕೆಂಪೇಗೌಡನದೊಡ್ಡಿ ಬಳಿಯ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶನಿವಾರ ಬೆಳಿಗ್ಗೆ ಮುಂದೆ ಹೊರಟಿದ್ದ ಲಾರಿಗೆ ಒಮ್ನಿ ವ್ಯಾನ್ ಡಿಕ್ಕಿ ಹೊಡೆದು ಪತಿ–ಪತ್ನಿ ಸೇರಿದಂತೆ ಒಂದೇ ಕುಟುಂಬದವರು ಮೂವರು ಮೃತಪಟ್ಟಿದ್ದಾರೆ. ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ಪೀಣ್ಯ 2ನೇ ಹಂತದ ನಿವಾಸಿಗಳಾದ ರಾಜೇಶ್ (50), ಪತ್ನಿ ಸುಮಾ (45) ಹಾಗೂ ಅತ್ತೆ ಲಕ್ಕಮ್ಮ (65) ಮೃತರು. ಡಿಕ್ಕಿಯ ರಭಸಕ್ಕೆ ರಾಜೇಶ್ ಮತ್ತು ಸುಮಾ ಸ್ಥಳದಲ್ಲೇ ಮೃತಪಟ್ಟರು. ಗಂಭೀರವಾಗಿ ಗಾಯಗೊಂಡಿದ್ದ ಲಕ್ಕಮ್ಮ ಅವರು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಕೊನೆಯುಸಿರೆಳೆದರು. ಕಾರು ನಜ್ಜುಗುಜ್ಜಾಗಿದೆ.

ಮೃತ ದಂಪತಿ ಪುತ್ರರಾದ ಮೋಹನ್, ರೋಹನ್ ಹಾಗೂ ರಾಜೇಶ್ ಸಹೋದರ ಸುರೇಶ್ ಹಾಗೂ ಅವರ ಪುತ್ರ ಸೃಜನ್ ಗಾಯಗೊಂಡಿದ್ದಾರೆ. ಎಲ್ಲರಿಗೂ ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಪಿಎಸ್‌ಐ ಕೈ ಕಚ್ಚಿದ್ದ ಯುವತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡುಗೋಡಿ ಠಾಣೆ ವ್ಯಾಪ್ತಿಯ ಮಾಲ್‌ವೊಂದರಲ್ಲಿ ರಂಪಾಟ ಮಾಡಿ ಮಹಿಳಾ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ರೊಬ್ಬರ ಕೈಗೆ ಕಚ್ಚಿದ್ದ ಆರೋಪದಡಿ ಯುವತಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ದಾವಣಗೆರೆಯ 28 ವರ್ಷದ ಯುವತಿ, ನಗರದ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ವಾಸವಿದ್ದರು. ಹಲ್ಲೆ ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಯುವತಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿ ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದಾರೆ. ಅವರ ಕುಟುಂಬಸ್ಥರಿಗೂ ಮಾಹಿತಿ ನೀಡಲಾಗಿದೆ. ಅವರಿಂದಲೂ ಹೇಳಿಕೆ ಪಡೆಯಲಾಗುವುದು' ಎಂದು ತಿಳಿಸಿವೆ.

ಘಟನೆ ವಿವರ: 'ಯುವತಿಯು ಶುಕ್ರವಾರ ರಾತ್ರಿ ಸಿನಿಮಾ ನೋಡಲು ಮಾಲ್‌ಗೆ ಬಂದಿದ್ದರು. ಸಿನಿಮಾ ಮುಗಿದ ಬಳಿಕವೂ ಯುವತಿ ಸ್ಥಳದಿಂದ ಹೋಗಿರಲಿಲ್ಲ. ಇದನ್ನು ಪ್ರಶ್ನಿಸಿದ್ದ ಸಿಬ್ಬಂದಿ, 'ಮಾಲ್ ಅವಧಿ ಮುಗಿದಿದೆ. ಹೊರಟು ಹೋಗಿ' ಎಂದಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ಯುವತಿ, ಸಿಬ್ಬಂದಿಗೆ ಬೈದಿದ್ದರು. ಹಲ್ಲೆಗೂ ಯತ್ನಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'112ಕ್ಕೆ ಮಾಹಿತಿ ಬರುತ್ತಿದ್ದಂತೆ ಮಹಿಳಾ ಪಿಎಸ್‌ಐ ಹಾಗೂ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಅವರ ಜೊತೆಯಲ್ಲಿಯೂ ಯುವತಿ ಗಲಾಟೆ ಮಾಡಿದ್ದರು. ವಶಕ್ಕೆ ಪಡೆದು ಜೀಪಿನಲ್ಲಿ ಕೂರಿಸುವಾಗ ಮಹಿಳಾ ಪಿಎಸ್‌ಐ ಕೈಗೆ ಯುವತಿ ಕಚ್ಚಿದ್ದರು' ಎಂದು ಮೂಲಗಳು ತಿಳಿಸಿವೆ.

'ಠಾಣೆಗೆ ಕರೆತಂದಾಗಲೂ ಯುವತಿ ರಂಪಾಟ ಮುಂದುವರಿಸಿದ್ದರು. ಸಿಬ್ಬಂದಿ ಮೇಲೆ ಹಲ್ಲೆಗೂ ಯತ್ನಿಸಿದ್ದರು' ಎಂದು ಹೇಳಿವೆ.



ಪಿತೃಗೆ ನಮನ ನಗರದ ಬಳೇಪೇಟೆ ವೃತ್ತದ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನದ ಬಳಿ ಪಿತೃಪಕ್ಷದ (ಮಹಾಲಯ ಅಮಾವಾಸ್ಯೆ) ಅಂಗವಾಗಿ ವಿವಿಧೆಡೆಯಿಂದ ಬಂದಿದ್ದ ಜನರು ಕುಟುಂಬದ ಹಿರಿಯರನ್ನು ಸ್ಮರಿಸಿ ಪೂಜಿಸಿದರು. ಹಿರಿಯರಿಗೆ ಇಷ್ಟವಾದ ಖಾದ್ಯ, ಹೊಸ ಬಟ್ಟೆಗಳನ್ನಿಟ್ಟು ಪೂಜಿಸಲಾಯಿತು – ಪ್ರಜಾವಾಣಿ ಚಿತ್ರ

ಸ್ಕೇಟಿಂಗ್ ಮಾಡುತ್ತಿದ್ದವರ ಮೇಲೆ ಹಲ್ಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಬ್ಬನ್ ಉದ್ಯಾನದಲ್ಲಿ ಸ್ಕೇಟಿಂಗ್ ಮಾಡುತ್ತಿದ್ದವರ ಮೇಲೆ ಹಲ್ಲೆ ಮಾಡಲು ವ್ಯಕ್ತಿಯೊಬ್ಬರು ಯತ್ನಿಸಿದ್ದು, ಸಂತ್ರಸ್ತರು ಸಾಮಾಜಿಕ ಮಾಧ್ಯಮ 'ಎಕ್ಸ್' ಪೋಸ್ಟ್ ಮೂಲಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಬೆಂಗಳೂರು ಪೊಲೀಸ್ ಕಮಿಷನರೇಟ್ ಸಾಮಾಜಿಕ ಮಾಧ್ಯಮ ವಿಭಾಗದ ಸಿಬ್ಬಂದಿ, 'ಕಬ್ಬನ್ ಪಾರ್ಕ್ ಠಾಣೆ ಪೊಲೀಸರಿಗೆ ಮಾಹಿತಿ ರವಾನಿಸಲಾಗಿದೆ. ನಿಮ್ಮನ್ನು ಸಂಪರ್ಕಿಸಲಿದ್ದಾರೆ. ಠಾಣೆಗೆ ದೂರು ನೀಡಿ' ಎಂದಿದ್ದಾರೆ. ಆದರೆ, ಸದ್ಯಕ್ಕೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ.

ಆಗಿದ್ದೇನು?: ಕೆಲ ದಿನಗಳ ಹಿಂದೆಯಷ್ಟೇ ಹಲವರು ಸ್ಕೇಟಿಂಗ್ ಮಾಡುತ್ತ ಉದ್ಯಾನದಲ್ಲಿ ಸುತ್ತಾಡುತ್ತಿದ್ದರು. ಭದ್ರತಾ ಸಿಬ್ಬಂದಿ ಹೆಸರಿನಲ್ಲಿ ಎಲ್ಲರನ್ನೂ ತಡೆದಿದ್ದ ವ್ಯಕ್ತಿಯೊಬ್ಬರು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ನಂತರ, ಮೊಬೈಲ್ ಕಸಿದುಕೊಂಡು ಹಲ್ಲೆಗೆ ಯತ್ನಿಸಿದ್ದರೆಂದು ಹೇಳಲಾಗಿದೆ. ಇದೇ ಸಂಗತಿ 'ಎಕ್ಸ್' ಪೋಸ್ಟ್‌ನಲ್ಲಿದೆ.

ಆರೋಪಿ ಹಲ್ಲೆಗೆ ಯತ್ನಿಸಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿರುವ ಸಂತ್ರಸ್ತರು, ಅದನ್ನು ಸಾಮಾಜಿಕ ಮಾಧ್ಯಮಗಳಲ್ಲೂ ಅಪ್‌ಲೋಡ್ ಮಾಡಿದ್ದಾರೆ.

'ಉದ್ಯಾನದಲ್ಲಿ ಸ್ಕೇಟಿಂಗ್ ಮಾಡುವುದು ಸುರಕ್ಷಿತವೇ? ಭದ್ರತಾ ಸಿಬ್ಬಂದಿ ಹೆಸರಿನಲ್ಲಿ ಅಡ್ಡಗಟ್ಟಿ ಹಲ್ಲೆಗೆ ಯತ್ನಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಹಲವರು ಒತ್ತಾಯಿಸಿದ್ದಾರೆ.

ಕಾರ್ಮಿಕರನ್ನು ವಾಪಸ್ ಕರೆತನ್ನಿ: ಒಡಿಶಾ ಸಿ.ಎಂ

ಭುವನೇಶ್ವರ (ಪಿಟಿಐ): ಒಡಿಶಾದ ಕೇಂದ್ರಾಪಡಾ ಜಿಲ್ಲೆಯ ರಾಜಕನಿಕಾ ಬ್ಲಾಕ್‌ನ 35 ಕಾರ್ಮಿಕರ ಗುಂಪೊಂದು ತಾವು ಕೆಲಸ ಮಾಡುತ್ತಿದ್ದ ಲಾವೋಸ್‌ನ ಕಂಪನಿಯೊಂದರಲ್ಲೇ ಸೆರೆಯಾಳಾಗಿದೆ. ಸಂಕಷ್ಟದಲ್ಲಿ ಸಿಲುಕಿರುವ ತಮ್ಮನ್ನು ತುರ್ತಾಗಿ ವಾಪಸ್ ಕರೆಸಿಕೊಳ್ಳುವಂತೆ ತಮ್ಮ ಹಳ್ಳಿಗರಿಗೆ ವಿಡಿಯೊ ತುಣುಕೊಂದನ್ನು ಕಳಿಸಿಕೊಡುವ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ.

ತಾವು ಕೆಲಸ ಮಾಡುತ್ತಿದ್ದ ಪ್ಲೈವುಡ್ ಕಂಪನಿ ಒಂದೂವರೆ ತಿಂಗಳ ಹಿಂದೆಯೇ ತನ್ನ ಕೆಲಸ ಸ್ಥಗಿತಗೊಳಿಸಿದೆ. ನಮ್ಮ ಪಾಸ್‌ಪೋರ್ಟ್‌ಗಳನ್ನು ಬಲವಂತವಾಗಿ ಕಿತ್ತಿಟ್ಟುಕೊಂಡಿರುವುದರ ಜೊತೆಗೆ ಸಂಬಳವನ್ನು ಇನ್ನೂ ಪಾವತಿಸಿಲ್ಲದಿರುವುದರಿಂದ, ನಮಗೆ ಸ್ವದೇಶಕ್ಕೆ ಮರಳಲು ಸಾಧ್ಯವಾಗುತ್ತಿಲ್ಲ ಎಂದು ಕಾರ್ಮಿಕರು ವಿಡಿಯೊದಲ್ಲಿ ತಿಳಿಸಿದ್ದಾರೆ.

'ನಮ್ಮ ಬಳಿ ಆಹಾರವೂ ಇಲ್ಲ, ಹಣವೂ ಇಲ್ಲ. ಊರಿಗೆ ಮರಳಲು ಅನುಮತಿಯನ್ನು ನೀಡುತ್ತಿಲ್ಲ' ಎಂದಿದ್ದಾರೆ.

ಗುಜರಿ ಅಂಗಡಿ, ಮನೆಗಳಿಗೆ ತಗುಲಿದ ಬೆಂಕಿ • ಸುಟ್ಟು ಕರಕಲಾದ ದ್ವಿಚಕ್ರ ವಾಹನಗಳು

ಲಗ್ಗೆರೆಯಲ್ಲಿ ವಿದ್ಯುತ್ ಪರಿವರ್ತಕ ಸ್ಫೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎರಡು ಕಡೆ ಶನಿವಾರ ಬೆಂಕಿ ಅವಘಡಗಳು ಸಂಭವಿಸಿದ್ದು, ಗುಜರಿ ಅಂಗಡಿ–ಮನೆಗಳು ಹಾಗೂ ಅಗರಬತ್ತಿ ಕಾರ್ಖಾನೆಯಲ್ಲಿ ಹಾನಿ ಉಂಟಾಗಿದೆ.

ಲಗ್ಗೆರೆಯ ಚಾಮುಂಡಿ ನಗರದ ಹೈಟೆನ್ಶನ್ ಲೈನ್ ಸ್ಟ್ರೀಟ್‌ನಲ್ಲಿರುವ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡಿದ್ದು, ಗುಜರಿ ಅಂಗಡಿ ಹಾಗೂ ಅಕ್ಕ–ಪಕ್ಕದ ಮನೆಗಳಿಗೆ ಬೆಂಕಿ ವ್ಯಾಪಿಸಿ ಹಲವು ವಸ್ತುಗಳು ಸುಟ್ಟು ಕರಕಲಾಗಿವೆ.

ಶನಿವಾರ ಮಧ್ಯಾಹ್ನ ವಿದ್ಯುತ್ ಪರಿವರ್ತಕ ಏಕಾಏಕಿ ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡಿತ್ತು. ಪಕ್ಕದಲ್ಲಿದ್ದ ಗುಜರಿ ಅಂಗಡಿಯ ವಸ್ತುಗಳಿಗೂ ಬೆಂಕಿ ತಗುಲಿ ಉರಿಯಲಾರಂಭಿಸಿತ್ತು. ದಟ್ಟ ಹೊಗೆ ಆವರಿಸಿಕೊಂಡಿತ್ತು. ಗುಜರಿ ಅಂಗಡಿಯ ಅಕ್ಕ– ಪಕ್ಕದಲ್ಲಿರುವ ಎರಡು ಮನೆಗಳಿಗೂ ಬೆಂಕಿಯ ಬಿಸಿ ತಾಗಿತ್ತು.

ಕೆಲ ನಿಮಿಷಗಳಲ್ಲಿ ಗುಜರಿ ವಸ್ತಗಳೆಲ್ಲವೂ ಸುಟ್ಟು ಕರಕಲಾದವು. ಮನೆಗಳ ಹೊರಭಾಗದಲ್ಲಿದ್ದ ವಸ್ತುಗಳಿಗೆ ಬೆಂಕಿ ತಾಗಿತ್ತು. ಬೆಂಕಿಯ ತಾಪಕ್ಕೆ ಕಿಟಕಿ ಗಾಜುಗಳು ಒಡೆದಿದ್ದವು. ಶೆಡ್ ಹಾಗೂ ಗೋಡೆಗಳು ಬಿರುಕು ಬಿಟ್ಟಿದ್ದವು. ಮಾಹಿತಿ ತಿಳಿದ ಅಗ್ನಿಶಾಮಕ ದಳದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.



ವಿಜಯನಗರ ಪೈಪ್‌ಲೈನ್ ರಸ್ತೆಯಲ್ಲಿ ಬೆಂಕಿ ಅವಘಡದಿಂದ ಸುಟ್ಟಿರುವ ದ್ವಿಚಕ್ರ ವಾಹನಗಳು – ಪ್ರಜಾವಾಣಿ ಚಿತ್ರ

'ಹಲವು ವರ್ಷಗಳ ಹಿಂದೆ ವಿದ್ಯುತ್ ಪರಿವರ್ತಕ ಅಳವಡಿಸಲಾಗಿದೆ. ಇದಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಶೆಡ್ ನಿರ್ಮಿಸಿ ಗುಜರಿ ಅಂಗಡಿ ತೆರೆದು, ಹಳೇ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು. ಜೊತೆಗೆ, ಅಕ್ಕ–ಪಕ್ಕದಲ್ಲಿ ಮನೆಗಳೂ ಇವೆ' ಎಂದು ಸ್ಥಳೀಯರು ಹೇಳಿದರು.

'ಏಕಾಏಕಿ ಬೆಂಕಿ ಹೊತ್ತಿಕೊಂಡಿದ್ದರಿಂದ ಆತಂಕ ಉಂಟಾಗಿತ್ತು. ದಟ್ಟ ಹೊಗೆ ಇಡೀ ಪ್ರದೇಶವನ್ನು ಆವರಿಸಿತ್ತು. ಮನೆಯಿಂದ ಹೊರಗೆ ಓಡಿ ಬಂದ ಜನ ಸುರಕ್ಷಿತ ಸ್ಥಳಕ್ಕೆ ಹೋಗಿದ್ದರು. ಅವಘಡದಿಂದ ಸಾಕಷ್ಟು ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಸಾವು–ನೋವು ವರದಿಯಾಗಿಲ್ಲ' ಎಂದು ತಿಳಿಸಿದರು.

ಆಸರೆ ವೃದ್ಧಾಶ್ರಮದಲ್ಲಿ ಆತಂಕ: 'ಬೆಂಕಿ ಹೊತ್ತಿಕೊಂಡಿದ್ದ ಗುಜರಿ ಅಂಗಡಿ ಸಮೀಪದಲ್ಲಿ, ಆಸರೆ ವೃದ್ಧಾಶ್ರಮದ ಕಟ್ಟಡವಿದೆ. ಅಲ್ಲಿದ್ದ ವೃದ್ಧರು, ಅವಘಡದಿಂದ ಆತಂಕಗೊಂಡಿದ್ದರು. ಸಿಬ್ಬಂದಿ ಹಾಗೂ ಸ್ಥಳೀಯರು, ಎಲ್ಲ ವೃದ್ಧರನ್ನು ಬೇರೆಡೆ ಸ್ಥಳಾಂತರಿಸಿದರು' ಎಂದು ಸ್ಥಳೀಯರು ಹೇಳಿದರು.

ರಾಜಗೋಪಾಲನಗರ ಪೊಲೀಸರು, 'ಅವಘಡದಿಂದ ಗುಜರಿ ಅಂಗಡಿ ಸಂಪೂರ್ಣ ಸುಟ್ಟಿದೆ. ಅಕ್ಕ–ಪಕ್ಕದ ಮನೆಗಳಿಗೂ ಹಾನಿಯಾಗಿದೆ. ಸ್ಥಳೀಯರ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು. ಹಾನಿ ಎಷ್ಟಾಗಿದೆ? ಎಂಬುದರ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದರು.

ಅಗರಬತ್ತಿ ತಯಾರಿಕೆ ಘಟಕದಲ್ಲಿ ಬೆಂಕಿ: ವಿಜಯನಗರ ಬಳಿಯ ಪೈಪ್‌ಲೈನ್ ರಸ್ತೆಯಲ್ಲಿರುವ ಅಗರಬತ್ತಿ ತಯಾರಿಕೆ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಘಟಕದ ಎದುರು ನಿಲ್ಲಿಸಲಾಗಿದ್ದ 8 ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿವೆ.

'ಶನಿವಾರ ಬೆಳಿಗ್ಗೆ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡು ಉರಿಯಲಾರಂಭಿಸಿತ್ತು. ಘಟಕದ ಹೊರಗೂ ಬೆಂಕಿ ವ್ಯಾಪಿಸಿತ್ತು. ದ್ರಾವಣವೊಂದು ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದ್ದ ಬಗ್ಗೆ ಮಾಹಿತಿ ಇದೆ. ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಘಟಕದಲ್ಲಿದ್ದ ಕಾರ್ಮಿಕರು ಹೊರಗೆ ಹೋಗಿದ್ದರು. ಹೀಗಾಗಿ, ಯಾವುದೇ ಸಾವು ನೋವು ಸಂಭವಿಸಿಲ್ಲ. ದ್ವಿಚಕ್ರ ವಾಹನಗಳು ಸುಟ್ಟಿದ್ದು, ಮಾಲೀಕರಿಂದ ಹೇಳಿಕೆ ಪಡೆಯಬೇಕಿದೆ' ಎಂದರು.



ವಿಧಾನಸೌಧದ ಆವರಣದಲ್ಲಿರುವ ತೋಟದಲ್ಲಿ ಕಾರ್ಯನಿರ್ವಹಿಸುವ ಮಾಲಿಯೊಬ್ಬರು ತಮ್ಮ ಮಗನನ್ನು ತಳ್ಳುವ ಗಾಡಿಯಲ್ಲಿ ಕೂರಿಸಿಕೊಂಡು ಹೋದ ದೃಶ್ಯ –ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಪುಣೆ ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಮೇಯರ್ ಬಾಬುರಾವ್ ಸನಾಸ್ ಮೆಮೋರಿಯಲ್ ಪುಣೆ ಡರ್ಬಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಾಟ್ 2, ಡಾಯನ್ನೆ 1, ಮಾಸ್ಟರಿ 3
2ನೇ ರೇಸ್: ಸಾವರಿನ್‌ಗ್ರೇ 1, ಸೂಪರ್ ಇಂಪೋಸ್ 4, ನ್ಯೂಡೈಮನ್ಶನ್ 2
3ನೇ ರೇಸ್: ಅಥೇನಿಯನ್ 6, ಡ್ರೀಮ್ ಸೆಲ್ಲರ್ 5, ಜ್ಯುಕೋರ್ 9
4ನೇ ರೇಸ್: ಮಾರ್ಕೆಟ್ ಕಿಂಗ್ 2, ಅಹೆಡ್ ಆಫ್ ಮೈ ಟೈಮ್ 1, ಜೋಕ್ವಿನ್ 3
5ನೇ ರೇಸ್: ಜಮಾರಿ 6, ಎನೇಬ್ಲರ್ 4, ಡ್ರೀಮ್ ಅಲೈಯನ್ಸ್ 3
6ನೇ ರೇಸ್: ಜ್ಯೂಕ್ಕಾರೊ 7, ಡೆಕಕಾರ್ನ್ 2, ಸ್ಲೋನ್ ಸ್ಕ್ವೇರ್ 10
7ನೇ ರೇಸ್: ಫ್ಲೈಯಿಂಗ್ ಸ್ಕಾಟ್ಸ್‌ಮ್ಯಾನ್ 8, ಫಾರ್ಚೂನೇಟ್ ಸನ್ 9, ಇಟ್ಸ್ ಮೈ ಟೈಮ್ 7

ಉತ್ತಮ ಬೆಟ್: ಅಥೇನಿಯನ್

ಜಾಕ್‌ಪಾಟ್ **3,4,5,6,7** ಟ್ರಿಬಲ್ **4,5,6**

ನಗರದಲ್ಲಿ ಇಂದು

ನವರಾತ್ರಿ ವಿಶೇಷ
ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5ರಿಂದ
'ನಿಮಿಷಾಂಬಾದೇವಿಗೆ ಅರಿಸಿನ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ
ಗಂಧ, ಅರಿಸಿನ ಕುಂಕುಮ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ
ಗಣಪತಿ ಪೂಜೆ, ಕಳಶ ಸ್ಥಾಪನೆ, ನವದುರ್ಗಿ ಅವಹಾನೆ, ಗಣಹೋಮ, ಜಪ ಪಾರಾಯಣ, ಚಂಡಿ ಪಾರಾಯಣ ಮಧ್ಯಾಹ್ನ 12, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಅಮ್ಮನಿಗೆ ಪುಷ್ಪಾರ್ಚನೆ, ಮಹಾಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ
ದೇವಿಗೆ ಅರಿಸಿನ ಕುಂಕುಮ ಅಲಂಕಾರ: ದುರ್ಗಾ ಪೂಜೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 4ರಿಂದ
ವಚನ ನವರಾತ್ರಿ: ಆಶಯ ನುಡಿ: ಪ್ರಭು ಇಸುವನಹಳ್ಳಿ, 'ಆಚಾರ ಪತ್ನಿ ಗಂಗಾಂಬಿಕೆ' ಕುರಿತು ಉಪನ್ಯಾಸ: ತೇಜಸ್ವಿನಿ ಮಲ್ಲಿಕಾರ್ಜುನ, ಅತಿಥಿಗಳು: ಅನುಪಮ ಪಂಚಾಕ್ಷರಿ, ಜಯಾ ಹಣ್ಣೆ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5
ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ, ಮಕ್ಕಳಿಗಾಗಿ ಕಥಾ ಕಾರ್ನರ್, ಸಂಗೀತ ಸಂಭ್ರಮ: 'ಕೋಳಿ ಎಸರು', ಚಿತ್ರ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ
ದೇವಿಗೆ ಅಭಿಷೇಕ ಮತ್ತು ಬಂಡೆ ಮಹಾಕಾಳಿ ಅಲಂಕಾರ, ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6
ದುರ್ಗಾ ಮಹೇಶ್ವರಮ್ಮ ದೇವಿಗೆ 'ಶೈಲಪುತ್ರಿ ದೇವಿ ಅಲಂಕಾರ': ಭಜನೆ: ರಾಜರಾಜೇಶ್ವರಿ ಮಾತೃ ಭಜನೆ ಮಂಡಳಿ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾರಾಜಪುರ, ಸಂಜೆ 6
ದೇವಿಗೆ ಪೂಜೆ, ಅಲಂಕಾರ, ಮಹಾನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ದೇವಿ ಭಜನೆ: ಮಂಗಳಾ ಭಾಸ್ಕರ್, ಮುತ್ತಾಂಜನೇಯಸ್ವಾಮಿ ಮಹಿಳಾ ಸತ್ಸಂಗ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನ, ವಿಜಯನಗರ, ಸಂಜೆ 6
ನವರಾತ್ರಿ ಸಾಂಸ್ಕೃತಿಕ ಸಿಂಚನ: ಉದ್ಘಾಟನೆ: ಲಕ್ಷ್ಮೀಭಟ್, ಅತಿಥಿ: ಆರ್. ಪ್ರಕಾಶ್, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರಕುಮಾರ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ
ಯಲ್ಲಮ್ಮದೇವಿಗೆ ಅರಿಸಿನ ಕುಂಕುಮ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದ ಪೇಟೆ ರಸ್ತೆ, ಯಲಹಂಕ, ಸಂಜೆ 6.30
ಮಹಾಗಣಪತಿ ಹೋಮ, ಗಾಯನ: ಅದಿತಿ ಬಿ. ಪ್ರಹ್ಲಾದ್, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7
ದೊಡ್ಡಮ್ಮದೇವಿಗೆ ವಿಶೇಷ ಪೂಜೆ, ಅಭಿಷೇಕ, ಅರಿಸಿನ ಕುಂಕುಮ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮದೇವಿ ಅಭಿವೃದ್ಧಿ ಸಮಿತಿ, ಚಿಕ್ಕ ದೇವಸಂದ್ರ, ಕೆ.ಆರ್. ಪುರ, ಸಂಜೆ 7.30
'ದಸರಾ ಗೊಂಬೆ ಹಬ್ಬ'
'ರಾಮಾಯಣದಲ್ಲಿ ಋಷಿಗಳು' ಕುರಿತು ಉಪನ್ಯಾಸ: ಕೆ.ಜಿ. ರಾಘವನ್, ಅತಿಥಿಗಳು: ರಿತೇಶ್ ಕುಮಾರ್ ಸಿಂಗ್, ಅಧ್ಯಕ್ಷತೆ: ಚಿರಂಜೀವಿ ಸಿಂಗ್, ಆಯೋಜನೆ ಮತ್ತು ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11
ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ಜಗನ್ನಾಥ ಸ್ವಾಮೀಜಿ, ಅಭಿನವ ಎಚ್ಚರ ಸ್ವಾಮೀಜಿ, ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಪಿ.ಎನ್. ಶ್ರೀನಿವಾಸಚಾರಿ, ಕೆ.ಎಸ್. ಪ್ರಭಾಕರ್, ಡಾ.ಸಿ.ಆರ್. ಚಂದ್ರಶೇಖರ್, ಬಿ.ಎಲ್. ವೇದಮೂರ್ತಿ, ಆಯೋಜನೆ: ಗಂಗಾಧರೇಶ್ವರ ಸ್ವಾಮಿ ವಿಶ್ವಕರ್ಮ ಸಾಂಸ್ಕೃತಿಕ ಸಮಿತಿ, ಸ್ಥಳ: ಮಹೇಶ್ವರಿ ಕಲ್ಯಾಣ ಮಂಟಪ, ವಾಟಾಳ್ ನಾಗರಾಜ್ ರಸ್ತೆ, ಲುಲು ಮಾಲ್ ಎದುರುಗಡೆ, ಬೆಳಿಗ್ಗೆ 11
ಕರ್ನಾಟಕ ವಿಚಾರವಾದಿಗಳ ಪಕ್ಷದ ಉದ್ಘಾಟನೆ: ಅತಿಥಿ: ಎನ್. ಲಕ್ಷ್ಮಣಸ್ವಾಮಿ, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್, ಕೆ.ಆರ್. ವೃತ್ತ, ಬೆಳಿಗ್ಗೆ 11
'ಶ್ರೀಕೃಷ್ಣ ಸಂಧಾನ' ನಾಟಕ ಪ್ರದರ್ಶನ: ಅತಿಥಿಗಳು: ನಾರಾಯಣಮೂರ್ತಿ, ಜಿ.ಪಿ.ಒ ಚಂದ್ರಶೇಖರ, ಚಿಕ್ಕಣ್ಣ, ಮಾಯಣ್ಣ, ಹನುಮಂತರಾಜು, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30
'ಶ್ರೀಶನೇಶ್ವರ ಪ್ರಭಾವ ಅಥವಾ ವಿಕ್ರಮರಾಜನ ವಿಜಯ' ನಾಟಕ ಪ್ರದರ್ಶನ: ಆಯೋಜನೆ: ಶನೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30
ಬಂಜಗೆರೆ ಜಯಪ್ರಕಾಶ್ ಅವರ 'ಬೇಗಂಪುರ', ವಿಕಾಸ್ ಆರ್. ಮೌರ್ಯ ಅವರ 'ಅಂಬೇಡ್ಕರ್ ಜಗತ್ತು' ಪುಸ್ತಕಗಳ ಬಿಡುಗಡೆ: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಪುಸ್ತಕಗಳ ಪರಿಚಯ: ದು. ಸರಸ್ವತಿ, ಶ್ವೇತಾರಾಣಿ ಎಚ್.ಕೆ. ಆಯೋಜನೆ: ಜೀರುಂಡೆ ಪುಸ್ತಕ ಪ್ರಕಾಶನ, ಸ್ಥಳ: ಎಚ್.ಎನ್. ನರಸಿಂಹಯ್ಯ ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4
'ಕಾರಂತರು ಮತ್ತು ಜೀವನ ಶ್ರದ್ಧೆ' ಉಪನ್ಯಾಸ: ನಾ. ಸೋಮಶೇಖರ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನ, ಆರ್.ಟಿ. ನಗರ, ಸಂಜೆ 4ರಿಂದ
ಸಂಗೀತೋತ್ಸವ ಹಾಗೂ 'ಸಂಗೀತ ಸಾಧಕ ಪ್ರಶಸ್ತಿ' ಪ್ರದಾನ: ಶ್ರೀನಿವಾಸ ಪ್ರಭು, ಉದ್ಘಾಟನೆ: ಅಭಿಜಿತ್ ಕುಲಕರ್ಣಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿ: ಅಚ್ಯುತ್ ಬಿದರಹಳ್ಳಿ, ಪ್ರಶಸ್ತಿ ಪುರಸ್ಕೃತರು: ವಾಗೀಶ್ ಭಟ್, ಆಯೋಜನೆ: ಗುರು ಸಮರ್ಥ ಸಂಗೀತ ವಿದ್ಯಾಲಯ, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 4
ಉದ್ಘಾಟನಾ ಸಮಾರಂಭ: ಅತಿಥಿಗಳು: ಗುಂಡೂರಾವ್, ಯು.ಬಿ. ವೆಂಕಟೇಶ್, ಔದಗಿರಿ ರಾಮಚಂದ್ರ, ಆಯೋಜನೆ: ಎ.ಡಿ. ಫೌಂಡೇಷನ್, ಸ್ಥಳ: ಉದಯ ಸೌಹಾರ್ದ ಸಹಕಾರ ಸಂಘ, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಸಂಜೆ 6.30
ರೆಡ್‌ಬುಲ್ ಆಫ್ ದಿ ಶೋ: ಗಾಯನ: ಸುನಿಧಿ ಚೌಹಾಣ್, ಆಯೋಜನೆ: ರೆಡ್‌ಬುಲ್, ಸ್ಥಳ: ಕೆ.ವಿ. ಗ್ರೌಂಡ್, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಮಲ್ಲೇಶ್ವರ, ಸಂಜೆ 6.30
'ಅಂಸಗಂತಗಳು' ನಾಟಕ ಪ್ರದರ್ಶನ: ಆಯೋಜನೆ: ಕಲಾವಿಲಾಸಿ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30
'ಗಾಂಪರ ಗುಂಪು' ನಾಟಕ ಪ್ರದರ್ಶನ: ರಚನೆ: ದಾಶರಥಿ ದೀಕ್ಷಿತ್, ನಿರ್ದೇಶನ: ಅಶೋಕ್ ನೀನಾಸಂ, ಆಯೋಜನೆ: ಸ್ಟೇಜ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.30

ಪೇರೂರು ಜಾರು ಅವರ 'ಕನ್ನಾಡ ಕಣ್ಮಣಿ ಡಾ. ರಾಜಕುಮಾರ್' ಕಾವ್ಯ ಪುಸ್ತಕ ಬಿಡುಗಡೆ: ಉಪಸ್ಥಿತಿ: ಎಲ್. ಹನುಮಂತಯ್ಯ, ಲಕ್ಷ್ಮೀ ಗೋವಿಂದರಾಜ್, ಎಸ್.ಎ. ಗೋವಿಂದರಾಜ್, ಕೆ. ಷರೀಫಾ, ಕವಿರಾಜ್, ಆಯೋಜನೆ: ವಿಶಾಲ ಜನಸಂಕುಲ, ಸ್ಥಳ: ಹಸಿರು ತೋಟ, ಮಂತ್ರಿಮಾಲ್ ಎದುರು, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಸಂಜೆ 4




ಕೆ. ಷರೀಫಾ

ಶಿರಡಿ ಸಾಯಿ ಗಾನ ಮಹೋತ್ಸವ: ಸಾನ್ನಿಧ್ಯ: ವಿ.ಎ. ನಾಗರಾಜ್, ಉದ್ಘಾಟನೆ: ಪುಟ್ಟಣ್ಣ, ಅತಿಥಿಗಳು: ವೂಡೇ ಪಿ. ಕೃಷ್ಣ, ಶ್ರೀನಿವಾಸ್ ಜಿ. ಕಪ್ಪಣ್ಣ, ಮನೋರಂಜನ್ ರವಿಚಂದ್ರನ್, ಬಿ.ಪಿ. ಪ್ರಕಾಶ್, ಚಂದ್ರಕಲಾ ಗಿರೀಶ್ ಲಕ್ಕಣ್ಣ, ಅಧ್ಯಕ್ಷತೆ: ಜಿ. ಪದ್ಮಾವತಿ, ಗಾಯನ: ಬಂಡ್ಲಹಳ್ಳಿ ವಿಜಯಕುಮಾರ್, ಪ್ರಭಾ ಇನಾಂದಾರ್, ನಿರಂಜನ್ ಹಿರೇಮಠ್, ಅಪರ್ಣ ಪ್ರಸನ್ನ, ಚೇತನರಾಮ್, ರಕ್ಷಿತಾ ಮೇಘನಾ, ವರ್ಣಶ್ರೀ ವಿ. ಮೂರೂರು, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5.55



ಶ್ರೀನಿವಾಸ್ ಜಿ. ಕಪ್ಪಣ್ಣ



ದರ್ಶನ್ ಶಂಕರ್

ನೃತ್ಯ ಸಂಭ್ರಮ: ಪ್ರಸ್ತುತಿ: ದರ್ಶನ್ ಶಂಕರ್, ಆಯೋಜನೆ ಮತ್ತು ಸ್ಥಳ: ಅರ್ಕ ಕಲಾ ಕುಟೀರ್ ಟ್ರಸ್ಟ್‌ನ ಸಭಾಂಗಣ, ಕೊತ್ತನೂರು ದಿನ್ನೆ, ಸಂಜೆ 6

ಉತ್ಸವಕ್ಕೆ ಚಾಲನೆ ನೀಡಲಿರುವ ಹಂಸಲೇಖ • ಅ.24ರಂದು ವಿಜಯದಶಮಿ ಮೆರವಣಿಗೆ, ಜಂಬೂಸವಾರಿ

ಬರದ ನಡುವೆ ದಸರೆಗೆ ಚಾಲನೆ ಇಂದು

• ಎಂ. ಮಹೇಶ

ಮೈಸೂರು: ಬರ ಹಾಗೂ ಕಾವೇರಿ ನದಿ ನೀರು ಹಂಚಿಕೆಯ ವಿಷಯದಲ್ಲಿ ಎದುರಾಗಿರುವ ಸಮಸ್ಯೆಯ ನಡುವೆಯೇ, ಸಂಭ್ರಮದ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದೆ.

ಅ.15ರಂದು ಬೆಳಿಗ್ಗೆ 10.15ರಿಂದ 10.36ರೊಳಗೆ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಯ ಅಗ್ರ ಪೂಜೆಯೊಂದಿಗೆ ಹತ್ತು ದಿನಗಳ ಉತ್ಸವಕ್ಕೆ ಚಾಲನೆ ದೊರೆಯಲಿದೆ. ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಬಳಿಕ ವಿವಿಧ ವೇದಿಕೆಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದ್ದು, ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿವೆ.

ಜಿಲ್ಲೆಯ ಎಲ್ಲ 9 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಅದರ ಮಧ್ಯೆಯೂ, ಉತ್ಸವವನ್ನು ವೈಭವದಿಂದ ಆಯೋಜಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆಗಳು, ವೃತ್ತಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

> **ನಾಡಿಗೆ ಬರದ ಸ್ಥಿತಿ ಆವರಿಸಿದ್ದರೂ ವೈಭವ, ಸಂಭ್ರಮ ಹಾಗೂ ಪಾರಂಪರಿಕ ಮೆರುಗಿಗೆ ಕೊರತೆಯಾಗದಂತೆ ಸಾಂಪ್ರದಾಯಿಕ ರೀತಿಯಲ್ಲಿ ದಸರಾ ಆಚರಿಸಲು ಕ್ರಮ ವಹಿಸಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮೊದಲ ದಿನವಾದ ಭಾನುವಾರ ಬರೋಬ್ಬರಿ 11 ಕಾರ್ಯಕ್ರಮಗಳು ಉದ್ಘಾಟನೆಗೊಳ್ಳಲಿವೆ. ಕುಪ್ಪಣ್ಣ ಉದ್ಯಾನದಲ್ಲಿ ಫಲಪುಷ್ಪ ಪ್ರದರ್ಶನ, ಚಲನಚಿತ್ರೋತ್ಸವ, ಸ್ಕೌಟ್ಸ್ ಮೈದಾನದಲ್ಲಿ ಆಹಾರ ಮೇಳ, ದೊಡ್ಡಕೆರೆ ಮೈದಾನದಲ್ಲಿ ಕುಸ್ತಿ ಪಂದ್ಯಾವಳಿ, ವಸ್ತುಪ್ರದರ್ಶನ, ಸೆನೆಟ್ ಭವನದಲ್ಲಿ ಯೋಗ ದಸರಾ, ಕಲಾಮಂದಿರದಲ್ಲಿ ಅಖಿಲ ಭಾರತ ಹಾಗೂ ರಾಜ್ಯ ಮಟ್ಟದ ಶಿಲ್ಪಕಲಾ ಪ್ರದರ್ಶನ, ಓವೆಲ್ ಮೈದಾನದಲ್ಲಿ ಕನ್ನಡ ಪುಸ್ತಕ ಮಾರಾಟ ಮೇಳ, ರಂಗಾಯಣದಲ್ಲಿ ನವರಾತ್ರಿ ರಂಗೋತ್ಸವ ಗರಿಗೆದರಲಿದೆ. ನ್ಯೂ ಸಯ್ಯಾಜಿರಾವ್ ರಸ್ತೆಯ ಹಸಿರು ಮಂಟಪದಲ್ಲಿ ವಿದ್ಯುತ್ ದೀಪಾಲಂಕಾರಕ್ಕೆ ಅಧಿಕೃತ ಚಾಲನೆ ದೊರೆಯಲಿದೆ. ಕ್ರೀಡಾಕೂಟ ಈಗಾಗಲೇ ಆರಂಭಗೊಂಡಿದೆ.

ಅಂಬಾವಿಲಾಸ ಅರಮನೆ ಆವರಣ ಸೇರಿದಂತೆ 10 ವಿವಿಧ ವೇದಿಕೆಗಳಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಸೌರಭವನ್ನು ಮುಖ್ಯಮಂತ್ರಿ


ಮೈಸೂರು ದಸರಾ ಅಂಗವಾಗಿ ಚಾಮುಂಡಿಬೆಟ್ಟದಲ್ಲಿನ ಚಾಮುಂಡೇಶ್ವರಿಯ ಉತ್ಸವ ಮೂರ್ತಿಗೆ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಶನಿವಾರ ಅಲಂಕಾರ ಮಾಡಿದರು —ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಸಂಜೆ 7ಕ್ಕೆ ಉದ್ಘಾಟಿಸಲಿದ್ದಾರೆ. ಕಲಾವಿದೆ ಪದ್ಮಾ ಮೂರ್ತಿ ಅವರಿಗೆ 2023-24ನೇ ಸಾಲಿನ 'ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ' ಪ್ರದಾನ ಮಾಡಲಾಗುವುದು.

ಈ ಬಾರಿ ಏರ್‌ಶೋ ನಡೆಯಲಿದ್ದು, ಅ.22ರಂದು ರಿಹರ್ಸಲ್ ಹಾಗೂ 23ರಂದು ಮುಖ್ಯ ಪ್ರದರ್ಶನ ಇರಲಿದೆ.

ಉತ್ಸವದ ಪ್ರಮುಖ ಆಕರ್ಷಣೆಯಾದ ವಿಜಯದಶಮಿ ಮೆರವಣಿಗೆಯು ಅ.24ರಂದು ನಡೆಯಲಿದ್ದು, ಅಂದು ಮಧ್ಯಾಹ್ನ 1.46ರಿಂದ 2.08ರವರೆಗೆ ಅರಮನೆ ಬಲರಾಮ ದ್ವಾರದಲ್ಲಿ ನಂದಿಧ್ವಜ ಪೂಜೆ ನೆರವೇರಲಿದೆ. ಸಂಜೆ 4.40ರಿಂದ 5ರವರೆಗೆ ಅರಮನೆ ಒಳಾವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು.

ಗಜಪಡೆಯ ನಾಯಕ ಅಭಿಮನ್ಯು ಆನೆ ಹೊರಲಿರುವ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ಅಲಂಕರಿಸಿಡಲಾಗುವ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿ ಜಂಬೂಸವಾರಿ ಉದ್ಘಾಟಿಸಲಿದ್ದಾರೆ. ಮೆರವಣಿಗೆಯು ಬನ್ನಿಮಂಟಪದ ತಲುಪಿದ ಬಳಿಕ, ಅಲ್ಲಿನ ಮೈದಾನದಲ್ಲಿ ಸಂಜೆ 7.30ಕ್ಕೆ ಪಂಜಿನ ಕವಾಯತು ಪ್ರದರ್ಶನ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಕವಾಯತು ವೀಕ್ಷಿಸಿ, ಗೌರವವಂದನೆ ಸ್ವೀಕರಿಸಲಿದ್ದಾರೆ. ಈ ಪ್ರದರ್ಶನದೊಂದಿಗೆ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಸಿದ್ದರಾಮಯ್ಯಗೆ 6ನೇ ದಸರಾ

ಮೈಸೂರು ಜಿಲ್ಲೆಯವರೇ ಆಗಿರುವ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿಯಾಗಿ ಇದು 6ನೇ ಹಾಗೂ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಇದು 3ನೇ ದಸರಾ.

ಅರಮನೆಯಲ್ಲೂ ಸಿದ್ಧತೆ

ಮೈಸೂರು ರಾಜವಂಶಸ್ಥರು ಅರಮನೆಯಲ್ಲಿ ಭಾನುವಾರದಿಂದಲೇ ಶರನ್ನವರಾತ್ರಿ ಆಚರಿಸಲಿದ್ದಾರೆ. ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನಖಚಿತ ಸಿಂಹಾಸನದಲ್ಲಿ ಕುಳಿತು 9ನೇ ವರ್ಷದ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಬೆಳಿಗ್ಗೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.

ಮಡಿಕೇರಿ: ಇಂದಿನಿಂದ ಕರಗೋತ್ಸವ

ಮಡಿಕೇರಿ: 'ಬೆಳಕಿನ ದಸರಾ' ಎನಿಸಿದ ಮಡಿಕೇರಿ ದಸರೆಗೆ ಮುನ್ನುಡಿ ಬರೆಯಲಿರುವ ಕರಗೋತ್ಸವವು ಅ. 15ರಂದು ಸಂಜೆ 4.30ಕ್ಕೆ ಇಲ್ಲಿನ ಪಂಪಿನಕೆರೆಯ ಆವರಣದಲ್ಲಿ ಆರಂಭವಾಗಲಿದೆ.

ನಗರದ 4 ಶಕ್ತಿ ದೇವತೆಗಳಾದ ಕೋಟೆ ಮಾರಿಯಮ್ಮ, ಕುಂದೂರುಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ ಹಾಗೂ ಕಂಚಿಕಾಮಾಕ್ಷಮ್ಮ ಅವರ ಕರಗಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಪೂಜೆ ಸಲ್ಲಿಸಿ ಕರಗೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ ಗೋಣಿಕೊಪ್ಪಲಿನಲ್ಲಿ ಸಂಜೆ 7.30ಕ್ಕೆ ಗೋಣಿಕೊಪ್ಪಲು ದಸರಾ ಕಾರ್ಯಕ್ರಮಗಳನ್ನು ಉದ್ಘಾಟಿಸಲಿದ್ದಾರೆ.

2000ಕ್ಕೂ ಹೆಚ್ಚು ವಿಶೇಷ ಬಸ್

ಬೆಂಗಳೂರು: ದಸರಾ ಮಹೋತ್ಸವ ಮತ್ತು ಶಾಲಾ, ಕಾಲೇಜುಗಳಿಗೆ ರಜೆ ಇರುವುದರಿಂದ ಪ್ರವಾಸ ಹೋಗುವವರ ಸಂಖ್ಯೆ ಹೆಚ್ಚಾಗುವುದರಿಂದ ಕೆಎಸ್‌ಆರ್‌ಟಿಸಿ 2000ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಅ.20ರಿಂದ 29ರವರೆಗೆ ಈ ವಿಶೇಷ ಸಾರಿಗೆ ಇರಲಿದೆ.

ಕರ್ನಾಟಕ ಸಾರಿಗೆ (ವೇಗದೂತ), ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಇ.ವಿ ಪವರ್ ಪ್ಲಸ್, ಅಂಬಾರಿ ಕ್ಲಬ್ ಕ್ಲಾಸ್, ಅಂಬಾರಿ ಉತ್ಸವ್ ಹಾಗೂ ಪಲ್ಲಕ್ಕಿ ಸಾರಿಗೆ ಸೇವೆಗಳ ಜೊತೆಗೆ ಹೆಚ್ಚುವರಿ ಬಸ್‌ಗಳ ಸಂಚಾರ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.



ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಹೊರಡಲಿವೆ. ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶೃಂಗೇರಿ, ಹೊರನಾಡು, ಶಿವಮೊಗ್ಗ, ಮಡಿಕೇರಿ, ಮಂಗಳೂರು, ದಾವಣಗೆರೆ, ಗೋಕರ್ಣ, ಕೊಲ್ಲೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಕಾರವಾರ, ಬಳ್ಳಾರಿ, ಹೊಸಪೇಟೆ, ಕಲಬುರಗಿ, ರಾಯಚೂರು ಮುಂತಾದ ಸ್ಥಳಗಳಿಗೆ ಹಾಗೂ ನೆರೆರಾಜ್ಯಗಳ ಹೈದರಾಬಾದ್, ಚೆನ್ನೈ, ಊಟಿ, ಕೊಡೈಕೆನಾಲ್, ಸೇಲಂ, ತಿರುಚಿನಾಪಳ್ಳಿ, ಪುದುಕೋಟೆ, ಮಧುರೈ, ಪಣಜಿ, ಶಿರಡಿ, ಪುಣೆ, ಎರ್ನಾಕುಲಂ, ಪಾಲ್‌ಘಾಟ್ ಹಾಗೂ ಇತರೆ ಸ್ಥಳಗಳಿಗೆ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಇರಲಿದೆ.

ದಸರಾಕ್ಕೆ 600 ವಿಶೇಷ ಬಸ್: ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರಿಗೆ ಪ್ರತ್ಯೇಕವಾಗಿ 250 ಹೆಚ್ಚುವರಿ ವಾಹನಗಳ ಕಾರ್ಯಾಚರಣೆ ಇರಲಿದೆ. ಇದಲ್ಲದೇ ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ, ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಾದ ಚಾಮುಂಡಿ ಬೆಟ್ಟ, ಕೆ.ಆರ್.ಎಸ್.ಅಣೆಕಟ್ಟು/ಬೃಂದಾವನ ಉದ್ಯಾನ, ಶ್ರೀರಂಗಪಟ್ಟಣ, ನಂಜನಗೂಡು ಸೇರಿದಂತೆ ಮಡಿಕೇರಿ, ಮಂಡ್ಯ, ಮಳವಳ್ಳಿ, ಹೆಚ್.ಡಿ.ಕೋಟೆ, ಚಾಮರಾಜನಗರ, ಹುಣಸೂರು, ಕೆ.ಆರ್.ನಗರ, ಗುಂಡ್ಲುಪೇಟೆ ಸ್ಥಳಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು 350 ಹೆಚ್ಚುವರಿ ವಾಹನಗಳು ಸೇರಿ ಒಟ್ಟಾರೆ 600 ದಸರಾ ವಿಶೇಷ ವಾಹನಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರಿಗೆ 'ಫ್ಲೈ ಬಸ್' ಮೂಲಕ ನೇರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. www.ksrtc.karnataka.gov.in ವೆಬ್ ಸೈಟ್ ಅಥವಾ ಮೊಬೈಲ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ಮೈಸೂರು ಗ್ರಾಮಾಂತರ, ನಗರ ಬಸ್ ನಿಲ್ದಾಣಗಳಲ್ಲಿ 'ಮಾಹಿತಿ ಕೇಂದ್ರ' ವನ್ನು ಪ್ರತ್ಯೇಕವಾಗಿ ತೆರೆಯಲಾಗುವುದು ಎಂದಿದ್ದಾರೆ.

ವರ್ಚುವಲ್‌ನಲ್ಲೂ ವೀಕ್ಷಣೆಗೆ ವ್ಯವಸ್ಥೆ

ಮೈಸೂರು: ಇಲ್ಲಿ ಅ.15ರಂದು ನಡೆಯಲಿರುವ ದಸರಾ ಮಹೋತ್ಸವದ ಉದ್ಘಾಟನೆ ಹಾಗೂ ಅ.24ರಂದು ಆಯೋಜಿಸಲಾಗಿರುವ ವಿಜಯದಶಮಿ ಮೆರವಣಿಗೆಯನ್ನು ಸಾರ್ವಜನಿಕರು ವರ್ಚುವಲ್ ಆಗಿ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ವಾರ್ತಾ ಇಲಾಖೆ ತಿಳಿಸಿದೆ.

Facebook Link- https://facebook.mysoredasara. gov.in

YouTube Link- https://youtube.mysoredasara. gov.in

Website Link- https://mysoredasara.gov.in/

ಈ ಲಿಂಕ್‌ಗಳ ಮೂಲಕ, ನೇರಪ್ರಸಾರ ಮಾಡಲಾಗುವ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


ಬಣ್ಣದಲ್ಲಿ 'ಶಿವ' ದಸರಾ ಪ್ರಯುಕ್ತ ಕುದ್ರೋಳಿ ಗೋಕರ್ಣನಾಥ ದೇವಾಲಯಕ್ಕೆ ವಿದ್ಯುದ್ದೀಪಾಲಂಕಾರ ಮಾಡಲಾಗಿದ್ದು, ಕಾರಂಜಿಯ ಬಣ್ಣದಲ್ಲಿ ಕಂಗೊಳಿಸುತ್ತಿರುವ ದೇವಾಲಯ ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್


ಮಹಿಷ ದಸರಾ ಬದಲು ಮಹಿಷೋತ್ಸವ

ಪ್ರಜಾವಾಣಿ ವಾರ್ತೆ

ಉಡುಪಿ: ನಗರದಲ್ಲಿ ಮಹಿಷ ದಸರಾ ಆಚರಣೆಗೆ ಜಿಲ್ಲಾ ಆಡಳಿತ ಅನುಮತಿ ನಿರಾಕರಿಸಿದೆ. ಜಿಲ್ಲಾ ಆಡಳಿತದ ಈ ಕ್ರಮ ಖಂಡಿಸಿರುವ ಸಂಘಟಕರು, ಇದೇ 15ರಂದು ಮಹಿಷ ದಸರಾ ಬದಲು ಮಹಿಷೋತ್ಸವ ಆಚರಿಸುವುದಾಗಿ ತಿಳಿಸಿದ್ದಾರೆ.

'ಜಿಲ್ಲೆಯಲ್ಲಿ ಮಹಿಷ ದಸರಾ ಪರವಾಗಿ ಅಥವಾ ವಿರುದ್ಧವಾಗಿ ಯಾವುದೇ ಪ್ರತಿಭಟನೆ, ಮೆರವಣಿಗೆ ಮಾಡುವಂತಿಲ್ಲ, ಬ್ಯಾನರ್, ಬಂಟಿಂಗ್ಸ್ ಅಳವಡಿಸುವಂತಿಲ್ಲ. ಮುಂಜಾಗ್ರತಾ ಕ್ರಮವಾಗಿ ಅ.14ರ ಸಂಜೆ 6ರಿಂದ ಹಾಗೂ ಅ.15ರ ಸಂಜೆ 6ರವರೆಗೆ ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ' ಎಂದು ಜಿಲ್ಲಾಧಿಕಾರಿ ವಿದ್ಯಾಕುಮಾರಿ ತಿಳಿಸಿದ್ದಾರೆ.

ಸರ್ಕಾರದ ಇಬ್ಬಗೆ ನೀತಿ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ



ಹುಕ್ಕೇರಿ (ಬೆಳಗಾವಿ ಜಿಲ್ಲೆ): 'ಮೈಸೂರಿನಲ್ಲಿ ಒಂದೆಡೆ ಮಹಿಷಾಸುರ ಮರ್ದಿನಿಯ ದಸರೆಯನ್ನು ಸರ್ಕಾರವೇ ಆಚರಿಸುತ್ತದೆ. ಇನ್ನೊಂದೆಡೆ, ಮಹಿಷ ದಸರೆಗೂ ಅವಕಾಶ ನೀಡುತ್ತದೆ. ಇದು ಸರ್ಕಾರದ ಇಬ್ಬಗೆಯ ನೀತಿ. ಇದರಿಂದ ಭವಿಷ್ಯದ ಪೀಳಿಗೆಗೆ ಕೆಟ್ಟ ಸಂದೇಶ ಹೋಗುತ್ತದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ತಿಳಿಸಿದರು.

'ಮಹಿಷಾಸುರ ಮರ್ದಿನಿ ಎಂದರೆ ರಾಕ್ಷಸನ ಸಂಹಾರ ಮಾಡಿದವಳು ಎಂದರ್ಥ. ಈ ನೆನಪಿಗಾಗಿ ಪೌರಾಣಿಕ ಕಾಲದಿಂದ ದಸರೆ ಆಚರಿಸಲಾಗುತ್ತಿದೆ. ಇದಕ್ಕೆ ತದ್ವಿರುದ್ಧವಾಗಿ ಕೆಲವರು ಮಹಿಷ ದಸರೆ ಆಚರಿಸುತ್ತಾರೆ. ಇದು ಯಾವ ಸಂದೇಶ ನೀಡುತ್ತದೆ? ಕೆಟ್ಟ ಪರಂಪರೆಗೆ ಮಣೆ ಹಾಕುವ ಸರ್ಕಾರದ ನಡೆ ಸರಿಯಲ್ಲ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಈ ಅವಧಿಯಲ್ಲಿ ಅವಹೇಳನಕಾರಿ ಘೋಷಣೆ ಕೂಗುವಂತಿಲ್ಲ, ಭಾಷಣ ಮಾಡುವಂತಿಲ್ಲ, ಶಸ್ತ್ರಾಸ್ತ್ರ ಇಟ್ಟುಕೊಂಡು ಓಡಾಡುವಂತಿಲ್ಲ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಸಂವಿಧಾನ ಬಾಹಿರ: ಮೂಲನಿವಾಸಿಗಳ ಸಾಂಸ್ಕೃತಿಕ ಹಬ್ಬವಾದ ಮಹಿಷ ದಸರಾಕ್ಕೆ ಕಾನೂನು ಸುವ್ಯವಸ್ಥೆಯ ನೆಪವೊಡ್ಡಿ ಅನುಮತಿ ನಿರಾಕರಿಸಿರುವ ಹಿನ್ನೆಲೆಯಲ್ಲಿ ಅ.15ರಂದು ಬೆಳಿಗ್ಗೆ 10.30ಕ್ಕೆ ಆದಿ ಉಡುಪಿಯ ಜಿಲ್ಲಾ ಅಂಬೇಡ್ಕರ್ ಭವನದಲ್ಲಿ ಮಹಿಷೋತ್ಸವ ಆಚರಿಸಲು ನಿರ್ಧರಿಸಲಾಗಿದೆ ಎಂದು ಜನಪರ ಹೋರಾಟಗಾರ ಜಯನ್ ಮಲ್ಪೆ ತಿಳಿಸಿದ್ದಾರೆ.

ಮಹಿಷ ದಸರಾ ಅಂಗವಾಗಿ ಮೆರವಣಿಗೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಒಳಾಂಗಣ ವೇದಿಕೆಯಲ್ಲಿ ಮಾತ್ರ ಮಹಿಷೋತ್ಸವ ಮಾಡಲಾಗುವುದು. ಇದಕ್ಕೆ ನಿಷೇಧಾಜ್ಞೆ ಅನ್ವಯವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಗುತ್ತಿಗೆದಾರ ಆತ್ಮಹತ್ಯೆ ಸಿಬಿಐ ತನಿಖೆಗೆ ಬೊಮ್ಮಾಯಿ ಆಗ್ರಹ

ಪ್ರಜಾವಾಣಿ ವಾರ್ತೆ


ರಾಜೀವ್

ಕೊಪ್ಪಳ: ಹಣಕಾಸಿನ ವಿಚಾರವಾಗಿ ಆದ ಸಮಸ್ಯೆಯಿಂದಾಗಿ ಇಲ್ಲಿನ ಬಿ.ಟಿ. ಪಾಟೀಲ ನಗರದ ಗುತ್ತಿಗೆದಾರ ರಾಜೀವ್ ಬಗಾಡೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕುರಿತು ನಗರಸಭೆಯ ಸದಸ್ಯ ಸೇರಿ ಏಳು ಜನರ ವಿರುದ್ಧ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ.

ರಾಜೀವ್ ಅ. 10ರಂದು ಇಲ್ಲಿನ ಫಿಶ್ ಲ್ಯಾಂಡ್ ಹೋಟೆಲ್ ಬಳಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾಗ ನಗರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಲಾಗಿತ್ತು. ಅಲ್ಲಿ ಶುಕ್ರವಾರ ರಾತ್ರಿ ಮೃತಪಟ್ಟಿದ್ದಾರೆ.

ಮಗನ ಸಾವಿನ ಕುರಿತು ತಂದೆ ಮೋಹನ್ ಬಗಾಡೆ ದೂರು ನೀಡಿದ್ದು, 'ನನ್ನ ಮಗನಿಂದ ಸಾಲದ ರೂಪದಲ್ಲಿ ಪಡೆದುಕೊಂಡಿದ್ದ ಹಣ ವಾಪಸ್ ಕೇಳಿದ್ದಕ್ಕೆ ಅವಮಾನ ಮಾಡಿದ್ದಾರೆ. ಕಿರುಕುಳ ನೀಡಿ, ಬೆದರಿಕೆ ಹಾಕಿ ಏಳು ಜನ ಮಗನ ಆತ್ಮಹತ್ಯೆಗೆ ಕಾರಣರಾಗಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗುತ್ತಿಗೆದಾರರಾದ ದೊಡ್ಡಪ್ಪ ಹರಿಗುರ, ರಫಿ ಎಂ., ಕಾಂಗ್ರೆಸ್ ಮುಖಂಡರೂ ಆದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪ್ರಸನ್ನ ಗಡಾದ, ಮಲ್ಲಿಕಾರ್ಜುನ ಹೆಗ್ಗಾವಿ, ಮುನಿ ವಿಜಯಕುಮಾರ್, ನಗರಸಭೆ ಸದಸ್ಯ ಜೆಡಿಎಸ್ ಪಕ್ಷದ ಚನ್ನಪ್ಪ ಕೊಟ್ಯಾಳ ಹಾಗೂ ಮಾಜಿ ಸದಸ್ಯ ಡಾ.ಉಪೇಂದ್ರ ರಾಜು ವಿರುದ್ಧ ದೂರು ದಾಖಲಾಗಿದೆ.

ಮೊದಲ ಆರೋಪಿಯಾಗಿರುವ ದೊಡ್ಡಪ್ಪ ಹರಿಗುರ ಎಂಬುವರ ಬಳಿ ರಾಜೀವ್ ಉಪಗುತ್ತಿಗೆದಾರರಾಗಿ ಕಾಮಗಾರಿ ಮಾಡುತ್ತಿದ್ದರು. ಸ್ವಂತ ಹಣ ಹಾಕಿ ಕೆಲಸ ಮಾಡಿದರೂ ಹಣ ನೀಡಲು ದೊಡ್ಡಪ್ಪ ವಿನಾಕಾರಣ ಸತಾಯಿಸುತ್ತಿದ್ದರು. ಬಳ್ಳಾರಿಯ ಗುತ್ತಿಗೆದಾರ ಮಲ್ಲಿಕಾರ್ಜುನ ಹೆಗ್ಗಾವಿ ಅವರ ಬಳಿ ರಾಜೀವ್ ₹1 ಲಕ್ಷ ಪಡೆದು ವಾಪಸ್ ನೀಡಿದ್ದರೂ ಮಲ್ಲಿಕಾರ್ಜುನ ಹಣ ಕೊಡುವಂತೆ ಬೆದರಿಸಿ ಕಿರುಕುಳ ನೀಡಿದ್ದರು. ಪದೇ ಪದೇ ಮನೆಗೆ ಬಂದು ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಸರ್ಕಾರಿ ಕೆಲಸವನ್ನು ನನ್ನ ಮಗ ಮತ್ತು ಕೊಪ್ಪಳದ ಮುನಿ ವಿಜಯಕುಮಾರ್ ಎಂಬುವರು ಜೊತೆಗೆ ಪಾಲುದಾರಿಕೆಯಲ್ಲಿ ಮಾಡುತ್ತಿದ್ದರು. ವಿಜಯಕುಮಾರ್ ನನ್ನ ಮಗನ ಬಳಿ ₹8 ಲಕ್ಷ ಸಾಲ ಪಡೆದು ವಾಪಸ್ ಕೊಟ್ಟಿಲ್ಲ. ನಗರಸಭೆ ಮಾಜಿ ಸದಸ್ಯ ಉಪೇಂದ್ರ ರಾಜು ₹5 ಲಕ್ಷ ಪಡೆದುಕೊಂಡಿದ್ದು ಇದಕ್ಕೆ ಉಪೇಂದ್ರ ಇಲ್ಲಿನ ದಿವಟರ ನಗರದಲ್ಲಿರುವ ತಮ್ಮ ಮನೆಯನ್ನು ಒತ್ತೆ ಇಟ್ಟಿದ್ದಾರೆ. ಕೊಟ್ಟ ಸಾಲ ವಾಪಸ್ ಕೊಡುವಂತೆ ಕೇಳಿದರೆ ಅವಮಾನಿಸಿದ್ದಾರೆ. ನಗರಸಭೆ ಸದಸ್ಯ ಚೆನ್ನಪ್ಪ ಕೊಟ್ಯಾಳ ಕೂಡ ₹2 ಲಕ್ಷ ಪಡೆದು ವಾಪಸ್ ಕೊಟ್ಟಿಲ್ಲ' ಎಂದಿದ್ದಾರೆ.

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಬೆಂಗಳೂರು: ಗುತ್ತಿಗೆದಾರ ಮತ್ತು ಅವರ ಸಂಬಂಧಿಕರ ಮನೆಗಳಲ್ಲಿ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡರುವ ₹ 42 ಕೋಟಿ ನಗದು ಮೂಲದ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗುತ್ತಿಗೆದಾರರಿಗೆ ಬಾಕಿ ಬಿಲ್ ಮೊತ್ತ ಪಾವತಿಯಾದ ತಕ್ಷಣ ಒಬ್ಬ ಗುತ್ತಿಗೆದಾರ ಹಾಗೂ ಅವರ ಸಂಬಂಧಿಕರ ಮನೆಯಲ್ಲಿ ಇಷ್ಟೊಂದು ದೊಡ್ಡ ಮೊತ್ತ ಪತ್ತೆಯಾಗಿರುವುದು ಇದೇ ಮೊದಲು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಕಮಿಷನ್ ಹಾವಳಿ ಹೆಚ್ಚಾಗಿದೆ' ಎಂದರು.

ಈಗ ಪತ್ತೆಯಾಗಿರುವ ಹಣದ ಕುರಿತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಗುತ್ತಿಗೆದಾರರ ಸಂಘವೇ ಕೇಂದ್ರ: 'ಗುತ್ತಿಗೆದಾರರ ಸಂಘದವರು ನಮ್ಮ ಸರ್ಕಾರದ ವಿರುದ್ಧ ದಾಖಲೆ ಇಲ್ಲದೆ ಸುಳ್ಳು ಆರೋಪ ಮಾಡಿದ್ದರು. ಈಗ ಗುತ್ತಿಗೆದಾರರ ಸಂಘವೇ ಕಮಿಷನ್ ಸಂಗ್ರಹ ಕೇಂದ್ರವಾಗಿದೆ. ಗುತ್ತಿಗೆದಾರ ಮತ್ತು ಸರ್ಕಾರ ಒಟ್ಟಾಗಿ ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ' ಎಂದು ಬೊಮ್ಮಾಯಿ ಆರೋಪಿಸಿದರು.

'ಕಮಿಷನ್ ಪಡೆದಿದ್ದನ್ನು ಯಾರಾದರೂ ನೋಡಿದ್ದಾರಾ? ಎಂದು ಸಿದ್ದರಾಮಯ್ಯ ಕೇಳಿದ್ದಾರೆ. ನಮ್ಮ ಸರ್ಕಾರದ ವಿರುದ್ಧ ಶೇಕಡ 40ರಷ್ಟು ಕಮಿಷನ್ ಆರೋಪ ಮಾಡಿದಾಗ ಅವರು ನೋಡಿದ್ದರಾ? ಈ ಪ್ರಕರಣವನ್ನೂ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ತನಿಖೆಗೆ ವಹಿಸಲಿ ಅಥವಾ ಲೋಕಾಯುಕ್ತದ ತನಿಖೆಗೆ ವಹಿಸಲಿ' ಎಂದು ಆಗ್ರಹಿಸಿದರು.

'ಕೈ ಹೈಕಮಾಂಡ್‌ಗಾಗಿ ಲೂಟಿ'


ಆರ್.ಅಶೋಕ

'ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಹಣ ಸಂದಾಯ ಮಾಡಲು ರಾಜ್ಯದ ಲೂಟಿ ಮಾಡಲಾಗುತ್ತಿದೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರದ ನಿಜ ಬಣ್ಣ ಬಯಲಾಗಿದೆ' ಎಂದು ಬಿಜೆಪಿ ಶಾಸಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಐದು ರಾಜ್ಯಗಳ ಚುನಾವಣೆಗೆ ಸಾವಿರಾರು ಕೋಟಿ ರೂಪಾಯಿ ಕೊಡುವುದಾಗಿ ರಾಜ್ಯ ಸರ್ಕಾರದ ಪ್ರಮುಖರು ಕಾಂಗ್ರೆಸ್ ಹೈಕಮಾಂಡ್‌ಗೆ ವಾಗ್ದಾನ ಮಾಡಿದ್ದಾರೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರಿಂದ ಶಹಬ್ಬಾಸ್ ಗಿರಿ ಪಡೆಯಲು ಲೂಟಿಗೆ ಇಳಿದಿದ್ದಾರೆ' ಎಂದು ಆರೋಪಿಸಿದರು.

ಅರಸೀಕೆರೆ ಗುತ್ತಿಗೆದಾರನಿಗೆ ಐಟಿ ಕರೆ

ಅರಸೀಕೆರೆ: ಬೆಂಗಳೂರಿನ ಅಪಾರ್ಟ್‌ಮೆಂಟ್‌ನಲ್ಲಿ ಗುರುವಾರ ಸಂಜೆ ವಶಕ್ಕೆ ಪಡೆದಿರುವ ₹ 42 ಕೋಟಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಅಧಿಕಾರಿಗಳು ತಾಲ್ಲೂಕಿನ ಗುತ್ತಿಗೆದಾರ ಹೇಮಂತ್ ಅವರನ್ನು ವಿಚಾರಣೆಗೆ ಕರೆದಿದ್ದಾರೆ. ಅವರು, ಬಿಬಿಎಂಪಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿರುವ ಮಾರ್ಕಂಡೇಯ ಅವರ ಪುತ್ರ. ಅವರ ಸಹೋದರ ದರ್ಶನ್ ಶಿವಮೊಗ್ಗದ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕಾಮಗಾರಿ ನಿರ್ವಹಿಸುತ್ತಿದ್ದಾರೆ.

ಎಚ್‌ಡಿಕೆ ಐಟಿ ಇಲಾಖೆ ಪ್ರತಿನಿಧಿಯೇ: ಡಿಕೆಶಿ ಪ್ರಶ್ನೆ



ಬೆಂಗಳೂರು: 'ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಗುತ್ತಿಗೆದಾರರೊಬ್ಬರ ಮನೆ ಮೇಲೆ ದಾಳಿ ಮಾಡಿರುವ ವಿಚಾರದಲ್ಲಿ ನನ್ನ ಹೆಸರು ತಳುಕು ಹಾಕಿ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ ಆದಾಯ ತೆರಿಗೆ ಇಲಾಖೆಯ ಪ್ರತಿನಿಧಿಯೇನೂ ಅಲ್ಲ. ಆದರೂ ಮಾತನಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ಐಟಿ ದಾಳಿ ಬೆನ್ನಲ್ಲೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮಾಡುತ್ತಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಯಾರು ಏನು ಆರೋಪ ಮಾಡುತ್ತಾರೋ ಮಾಡಲಿ. ಆದಾಯ ಇಲಾಖೆ ಅಧಿಕಾರಿಗಳ ದಾಳಿ, ತನಿಖೆ ಮುಗಿದ ನಂತರ ತಮ್ಮ ಹೇಳಿಕೆಯನ್ನು ಪ್ರಕಟಿಸಲಿ. ಆ ನಂತರ ನಾನು ಪ್ರತಿಕ್ರಿಯೆ ನೀಡುತ್ತೇನೆ' ಎಂದರು.

'ನನ್ನ ವಿರುದ್ಧ ಆರೋಪ ಮಾಡುತ್ತಿರುವ ಕುಮಾರಸ್ವಾಮಿ ಆಗಲಿ, ಬಿಜೆಪಿ ನಾಯಕರಾಗಲಿ ಆದಾಯ ಇಲಾಖೆ ಪ್ರತಿನಿಧಿಗಳೇನೂ ಅಲ್ಲ. ನಾನು ತಿಹಾರ್ ಜೈಲಿಗೆ ಹೋಗುತ್ತೇನೆ ಎಂದು ಕುಮಾರಸ್ವಾಮಿ ಈಗಾಗಲೇ ಹೇಳಿದ್ದಾರೆ. ಆ ಮೂಲಕ, ತಾನು ಏನು ಮಾಡಲು ಹೊರಟಿದ್ದೇನೆ ಎಂಬುದನ್ನು ಹೇಳಿದ್ದಾರೆ' ಎಂದರು.

'ಐಟಿ ದಾಳಿ ರಾಜಕೀಯ ಪ್ರೇರಿತ'

'ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ವೇಳೆ ಗುತ್ತಿಗೆದಾರರೊಬ್ಬರ ಮನೆಯಲ್ಲಿ ಪತ್ತೆಯಾದ ₹ 42 ಕೋಟಿ ಕಾಂಗ್ರೆಸ್‌ನವರ ಕಮಿಷನ್ ಹಣ ಎಂದು ಆರೋಪಿಸುತ್ತಿರುವುದು ಹಾಸ್ಯಾಸ್ಪದ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಐಟಿ, ಇಡಿ ಬಿಜೆಪಿಯವರ ಕೈಯಲ್ಲೇ ಇದೆ. ತನಿಖೆ ಮಾಡಲಿ. ಚೈತ್ರಾ ಕುಂದಾಪುರ ಪ್ರಕರಣದಲ್ಲಿ ಹಣ ವರ್ಗಾವಣೆ ನಡೆದಿತ್ತಲ್ಲವೇ? ಆಗ ಐಟಿ ದಾಳಿ ಯಾಕೆ ಆಗಿಲ್ಲ. ಈಗ ರಾಜಕೀಯ ಪ್ರೇರಿತವಾಗಿ ದಾಳಿ ಮಾಡಿದ್ದಾರೆ' ಎಂದು ಕಿಡಿಕಾರಿದರು.

ಕಾಂಗ್ರೆಸ್‌ನಿಂದ ಭ್ರಷ್ಟಾಚಾರದ ಗ್ಯಾರಂಟಿ: ಟೀಕೆ

ನವದೆಹಲಿ: 'ಗ್ಯಾರಂಟಿಗಳ ಹೆಸರಿನಲ್ಲಿ ಜನರನ್ನು ಮರುಳುಗೊಳಿಸಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಭ್ರಷ್ಟಾಚಾರದ ಗ್ಯಾರಂಟಿ ನೀಡಿದೆ' ಎಂದು ಕೇಂದ್ರ ಕೌಶಲಾಭಿವೃದ್ಧಿ ಸಚಿವ ರಾಜೀವ್ ಚಂದ್ರಶೇಖರ್ ಟೀಕಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಐಟಿ ದಾಳಿಗೊಳಗಾದ ಗುತ್ತಿಗೆದಾರ ಅಂಬಿಕಾಪತಿ ಈ ಹಿಂದೆ ಕಾಂಗ್ರೆಸ್ ಪರವಾಗಿ ನಿಂತಿದ್ದರು. ಬಿಜೆಪಿ ಸರ್ಕಾರದ ಮೇಲೆ ಶೇ 40 ಕಮಿಷನ್ ಆರೋಪ ಮಾಡಿ ಜನರ ದಿಕ್ಕು ತಪ್ಪಿಸಿದ್ದರು. ಅವರ ಭ್ರಷ್ಟಾಚಾರದ ಬೃಹತ್ ನಾಟಕ ಇದೀಗ ಬಹಿರಂಗಗೊಂಡಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಗುತ್ತಿಗೆದಾರರ ಬಣ್ಣ ಬಯಲಾಗಲಿದೆ' ಎಂದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಯಾತ್ರೆ ಬಗ್ಗೆ ಪದೇ ಪದೇ ಮಾತನಾಡುತ್ತಾರೆ. ಆದರೆ, ಅವರ ಪಕ್ಷದ ನಾಯಕರು ಹಾಗೂ ಇಂಡಿಯಾ ಮೈತ್ರಿಕೂಟದ ಪಾಲುದಾರರು ಭಾರತ್ ಲೂಟೋ ಯಾತ್ರೆ ಆರಂಭಿಸಿದ್ದಾರೆ' ಎಂದು ಅವರು ಹೇಳಿದರು.

ದಸರಾ ಮಹೋತ್ಸವದಲ್ಲಿ ಕಾರ್ಯಕ್ರಮ ನೀಡಲು ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರಿಂದ ₹3 ಲಕ್ಷ ಕಮಿಷನ್ ಕೇಳಿರುವುದು ನಾಚಿಕೆಗೇಡು. ಸಾಂಸ್ಕೃತಿಕ ಕ್ಷೇತ್ರದ ಮೇರು ಪ್ರತಿಭೆಗೆ ಕರ್ನಾಟಕ ಸರ್ಕಾರ ಅವಮಾನ ಮಾಡಿದೆ ಎಂದರು.

ಕಲುಷಿತ ನೀರು: ಮತ್ತೊಂದು ಸಾವು?

ಪ್ರಜಾವಾಣಿ ವಾರ್ತೆ

ತ್ಯಾವಣಿಗೆ (ದಾವಣಗೆರೆ): ಸಮೀಪದ ಮತ್ತಿ ಗ್ರಾಮದಲ್ಲಿ ಶನಿವಾರ ವೃದ್ಧೆಯೊಬ್ಬರು ಅಸುನೀಗಿದ್ದು, ಕಲುಷಿತ ನೀರು ಕುಡಿದು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ಶುಕ್ರವಾರ ಸಂಜೆ ವಾಂತಿ–ಭೇದಿಯಿಂದ ಅಸ್ವಸ್ಥಗೊಂಡಿದ್ದ ಗ್ರಾಮದ ಕೆಂಚಮ್ಮ (65) ಅವರನ್ನು ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ. ಕೆಂಚಮ್ಮ ಸಾವಿಗೆ ಕಲುಷಿತ ನೀರೇ ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಆದರೆ ಅಧಿಕಾರಿಗಳು ಇದನ್ನು ನಿರಾಕರಿಸಿದ್ದಾರೆ.

'ಕೆಂಚಮ್ಮ ಮೂತ್ರಪಿಂಡ ವೈಫಲ್ಯದಿಂದ ಮೃತಪಟ್ಟಿದ್ದಾರೆ' ಎಂದು ಡಿಎಚ್‌ಒ ಎಸ್.ಷಣ್ಮುಖಪ್ಪ ತಿಳಿಸಿದ್ದಾರೆ.

ಡಿಎಚ್‌ಒ, ಜಿಲ್ಲಾ ಸರ್ವೇಕ್ಷಣಾಧಿಕಾರಿ, ತಹಶೀಲ್ದಾರ್ ನೇತೃತ್ವದ ಅಧಿಕಾರಿಗಳ ತಂಡ ಶನಿವಾರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಕಾಯ್ದೆ ದುರ್ಬಳಕೆ: ₹1.5 ಲಕ್ಷ ವಾಪಸಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಎಸ್ಸಿ-ಎಸ್ಟಿ) ದೌರ್ಜನ್ಯ ತಡೆ ಕಾಯ್ದೆ ಸೇರಿದಂತೆ ಹಲವು ಆರೋಪಗಳಡಿ ಸುಳ್ಳು ದೂರು ದಾಖಲಿಸಿದ್ದ ಶಿಕ್ಷಕರೊಬ್ಬರಿಂದ ₹ 1.5 ಲಕ್ಷ ವಸೂಲಿ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬಾಗಲಕೋಟೆ ಜಿಲ್ಲೆಯ ಮರಡಿ ಮಲ್ಲೇಶ್ವರ ಹೈಸ್ಕೂಲ್ ಮುಖ್ಯ ಶಿಕ್ಷಕ ಶಿವಲಿಂಗಪ್ಪ ಬಿ. ಕೆರಕಲ ಮಟ್ಟಿ ವಿರುದ್ಧದ ಪ್ರಕರಣಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿದೆ.

'ಅರ್ಜಿದಾರ ಶಿವಲಿಂಗಪ್ಪ ಬಿ.ಕೆರಕಲಮಟ್ಟಿ ವಿರುದ್ಧ ಶಿಕ್ಷಕ ಚಂದ್ರು ರಾಥೋಡ್ ಕ್ರಿಮಿನಲ್ ದೂರು ದಾಖಲಿಸಿರುವುದು, ನಂತರ ಸಮಾಜ ಕಲ್ಯಾಣ ಇಲಾಖೆಯಿಂದ ಆರ್ಥಿಕ ನೆರವು ಪಡೆದಿರುವುದು ಸಾಬೀತಾಗಿದೆ. ಆದರೆ, ಅವರ ಈ ದೂರುಗಳು ನಕಲಿಯಾಗಿದ್ದು, ಸುಳ್ಳಿನಿಂದ ಮತ್ತು ದುರುದ್ದೇಶದಿಂದ ಕೂಡಿವೆ ಎಂಬುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ತೆರಿಗೆ ಹಣದಿಂದ ಪಡೆದಿರುವ ₹ 1.5 ಲಕ್ಷ ವಾಪಸು ಪಡೆಯಬೇಕು' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಪ್ರಕರಣವೇನು?: ಚಂದ್ರು ರಾಥೋಡ್ 1988ರ ಡಿಸೆಂಬರ್ 12ರಂದು ಶಿಕ್ಷಕರಾಗಿ ಸೇವೆಗೆ ಸೇರಿದ್ದರು. ದುರ್ನಡತೆ ಹಿನ್ನೆಲೆಯಲ್ಲಿ 2012ರಲ್ಲಿ ಅವರನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಈ ಕುರಿತಂತೆ ರಾಥೋಡ್ ನ್ಯಾಯಾಂಗ ಹೋರಾಟ ನಡೆಸಿ ಯಶಸ್ವಿಯಾಗಿದ್ದರು. ಇದರನ್ವಯ, 'ರಾಥೋಡ್ ಅವರನ್ನು ಪುನಃ ಸೇವೆಗೆ ಸೇರಿಸಿಕೊಳ್ಳಬೇಕು. ಹಿಂಬಾಕಿ ನೀಡಬೇಕು' ಎಂದು ಹೈಕೋರ್ಟ್ 2020ರಲ್ಲಿ ಸರ್ಕಾರಕ್ಕೆ ಆದೇಶಿಸಿತ್ತು.

ಏತನ್ಮಧ್ಯೆ ಚಂದ್ರು ರಾಥೋಡ್, 'ಮುಖ್ಯ ಶಿಕ್ಷಕರು ನನ್ನನ್ನು ಪುನಃ ಸೇವೆಗೆ ಸೇರಿಸಿಕೊಳ್ಳಲು ₹ 10.50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾರೆ' ಎಂದು ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಒಟ್ಟು ಮೂರು ದೂರು ದಾಖಲಿಸಿದ್ದರು.

ಗರುಡನ ಉಕ್ಕಡ ಬಳಿಯ ಹೆದ್ದಾರಿಯಲ್ಲಿ ಸರಣಿ ಅಪಘಾತ

ಹೊತ್ತಿ ಉರಿದ ಕಾರು, ಎಸ್ಪಿ ಕಾರು ಜಖಂ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಗರುಡನ ಉಕ್ಕಡ ಬಳಿ ಶನಿವಾರ ಸರಣಿ ಅಪಘಾತ ಸಂಭವಿಸಿದ್ದು, ಲಾರಿ ಡಿಕ್ಕಿಯಿಂದ ಕಾರು ಹೊತ್ತಿ ಉರಿದಿದೆ. ಕಾರಿನಲ್ಲಿದ್ದ ಬೆಂಗಳೂರಿನ ದಂಪತಿ ಯಶಸ್ವಿನಿ–ರವಿಕುಮಾರ್ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರೊಂದಿಗೆ ಇದ್ದ ರಾಘವೇಂದ್ರ ಕಾರಿನಿಂದ ಹೊರಕ್ಕೆ ಜಿಗಿದು ಪಾರಾಗಿದ್ದಾರೆ.

ಬೆಂಗಳೂರಿನಿಂದ ಮೈಸೂರು ಕಡೆ ಬರುತ್ತಿದ್ದ ಕಾರಿಗೆ ಸಿಮೆಂಟ್ ಸಾಗಿಸುತ್ತಿದ್ದ ಲಾರಿ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡಿತು. ಉರಿಯುತ್ತಿದ್ದ ಕಾರಿನೊಳಗೆ ಸಿಲುಕಿದ್ದ ದಂಪತಿಯನ್ನು, ಗ್ರಾಮಾಂತರ ಠಾಣೆ ಸಿಪಿಐ ಬಿ.ಜಿ. ಕುಮಾರ್, ಕಾನ್‌ಸ್ಟೆಬಲ್‌ಗಳಾದ ಹಫೀಜ್ ಅಹಮದ್ ಮತ್ತು ನವೀನ್ ಅವರು ಗಾಜು ಒಡೆದು ರಕ್ಷಿಸಿದರು. 'ಅವರನ್ನು ಕಾರಿನಿಂದ ಹೊರಗೆ ಎಳೆಯುವಾಗ ಮತ್ತೊಂದು ಕಾರು ರಭಸವಾಗಿ ಪಕ್ಕದಲ್ಲಿ ಹಾದು ಹೋಯಿತು. ತಕ್ಷಣ ಪಕ್ಕಕ್ಕೆ ಜಿಗಿದು ಪಾರಾದೆವು' ಎಂದು ಸಿಪಿಐ ಬಿ.ಜಿ.ಕುಮಾರ್ ತಿಳಿಸಿದರು. ಅವರ ಕೈಗೂ ಬೆಂಕಿ ಮತ್ತು ಗಾಜು ತಾಕಿ ಗಾಯಗಳಾಗಿವೆ.

ಕಾರು ಸಂಪೂರ್ಣ ಭಸ್ಮವಾಗಿದೆ. ಘಟನೆಯಿಂದಾಗಿ ವಾಹನ ಸಂಚಾರ ಅರ್ಧ ತಾಸು ಸ್ಥಗಿತಗೊಂಡಿತ್ತು. ಗರುಡನ ಉಕ್ಕಡದಿಂದ ಗೌಡಹಳ್ಳಿ ಗೇಟ್ ವರೆಗೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೆಂಕಿ ನೋಡಲು ಪ್ರಯಾಣಿಕರು ಮತ್ತು ಆಸುಪಾಸಿನ ಗ್ರಾಮಗಳ ನೂರಾರು ಜನ ನೆರೆದಿದ್ದರು.

ಎಸ್ಪಿ ಕಾರು ಜಖಂ: ಮಂಡ್ಯದಿಂದ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ ಎಸ್ಪಿ ಎನ್. ಯತೀಶ್ ಅವರ ಕಾರಿಗೆ ಹಿಂದಿನಿಂದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಕಾರಿನ ಹಿಂಭಾಗ ಜಖಂಗೊಂಡಿದೆ. ಎನ್. ಯತೀಶ್ ಮತ್ತು ಸಹಾಯಕ ಅಪಾಯದಿಂದ ಪಾರಾಗಿದ್ದಾರೆ.





1. ಶ್ರೀರಂಗಪಟ್ಟಣ ತಾಲ್ಲೂಕಿನ ಗರುಡನ ಉಕ್ಕಡ ಗ್ರಾಮದ ಬಳಿಯ ಹೆದ್ದಾರಿಯಲ್ಲಿ ಶನಿವಾರ ಸಿಮೆಂಟ್ ಸಾಗಿಸುವ ಲಾರಿ ಡಿಕ್ಕಿ ಹೊಡೆದು ಕಾರು ಹೊತ್ತಿ ಉರಿದ ದೃಶ್ಯ
2. ಕಾರು ಡಿಕ್ಕಿಯಿಂದ ಎಸ್ಪಿ ಎನ್. ಯತೀಶ್ ಅವರು ಪ್ರಯಾಣಿಸುತ್ತಿದ್ದ ಕಾರು ಜಖಂಗೊಂಡಿದೆ

ಉಚಿತ ಅವಲಕ್ಕಿ, ಜಿಲೇಬಿ

ಇಂದೋರ್ (ಪಿಟಿಐ): ನಗರದ ಪ್ರಸಿದ್ಧ ಆಹಾರ ಕೇಂದ್ರ ‘56 ದುಕಾನ’ ನಲ್ಲಿರುವ ಅಂಗಡಿಗಳ ಮಾಲೀಕರು ವಿಧಾನಸಭಾ ಚುನಾವಣೆಯಲ್ಲಿ ಬೆಳಿಗ್ಗೆ 9 ಗಂಟೆಯೊಳಗೆ ಮತ ಚಲಾಯಿಸಿದವರಿಗೆ ಪೋಹ (ಅವಲಕ್ಕಿ) ಮತ್ತು ಜಿಲೇಬಿ ಒಳಗೊಂಡ ಉಚಿತ ತಿನಿಸು ನೀಡಲು ನಿರ್ಧರಿಸಿದ್ದಾರೆ.

‘ಸ್ವಚ್ಛತೆಗೆ ಸಂಬಂಧಿಸಿದಂತೆ ಇಂದೋರ್ ದೇಶದಲ್ಲಿ ಅಗ್ರಸ್ಥಾನದಲ್ಲಿದೆ. ಮತದಾನದ ವಿಷಯದಲ್ಲೂ ನಗರ ಅಗ್ರಸ್ಥಾನದಲ್ಲಿ ಇರಬೇಕೆಂದು ಬಯಸುತ್ತೇವೆ. ಇದಕ್ಕಾಗಿ, ಮತ ಚಲಾಯಿಸಿದವರಿಗೆ ಅವಲಕ್ಕಿ ಮತ್ತು ಜಿಲೇಬಿ ನೀಡಲು ನಿರ್ಧರಿಸಿದ್ದೇವೆ’ ಎಂದು 56 ದುಕಾನ ವ್ಯಾಪಾರಿಗಳ ಸಂಘದ ಅಧ್ಯಕ್ಷ ಗುಂಜನ್ ಶರ್ಮಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮತದಾನದ ದಿನವಾದ ನ. 17 ರಂದು ಬೆಳಿಗ್ಗೆ 9 ಗಂಟೆವರೆಗೆ ಮಾತ್ರ ಉಚಿತ ಕೊಡುಗೆ ಇರುತ್ತದೆ. ಬಳಿಕ ಪ್ರತಿ ಮತದಾರರಿಗೆ ಪೋಹ -ಜಿಲೇಬಿ ಬಿಲ್‌ನಲ್ಲಿ ಶೇಕಡಾ 10 ರಷ್ಟು ವಿಶೇಷ ರಿಯಾಯಿತಿ ನೀಡಲಾಗುವುದು ಎಂದು ಶರ್ಮಾ ಹೇಳಿದರು.

ಪೊನ್ನಲ ಲಕ್ಷ್ಮಯ್ಯಗೆ ಬಿಆರ್‌ಎಸ್ ಆಹ್ವಾನ

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷ ತೊರೆದ ಪೊನ್ನಲ ಲಕ್ಷ್ಮಯ್ಯ ಅವರನ್ನು ಸಚಿವ ಕೆ.ಟಿ.ರಾಮರಾವ್ ಅವರು ಶನಿವಾರ ಭೇಟಿ ಮಾಡಿ, ಬಿಆರ್‌ಎಸ್ ಸೇರುವಂತೆ ಆಹ್ವಾನ ನೀಡಿದರು. ಭಾನುವಾರ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರನ್ನು ಭೇಟಿ ಮಾಡಿದ ಬಳಿಕ ನಿರ್ಧಾರ ಪ್ರಕಟಿಸಲಾಗುವುದು ಎಂದು ಲಕ್ಷ್ಮಯ್ಯ ತಿಳಿಸಿದ್ದಾರೆ.

ಕಾಂಗ್ರೆಸ್ ಪಟ್ಟಿ ಬಿಡುಗಡೆ ಇಂದು

ಛತ್ತೀಸಗಢ (ಪಿಟಿಐ): ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಭೂಪೇಶ್ ಬಘೆಲ್ ಹೇಳಿದ್ದಾರೆ.

ಎರಡನೇ ಹಂತದಲ್ಲಿ ಮತ್ತೊಂದು ಪಟ್ಟಿ ಬಿಡುಗಡೆ ಮಾಡಲಾಗುವುದು. ಅಭ್ಯರ್ಥಿಗಳ ಗೆಲುವಿಗೆ ಪಕ್ಷ ಕಾರ್ಯತಂತ್ರ ರೂಪಿಸುತ್ತಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಮಧ್ಯಪ್ರದೇಶ: ಲ್ಯಾಪ್‌ಟಾಪ್, ಬೈಸಿಕಲ್ ವಿತರಣೆ ಏಕೆ ನಿಲ್ಲಿಸಿದ್ದೀರಿ– ಮುಖ್ಯಮಂತ್ರಿ ಚೌಹಾಣ್ ಪ್ರಶ್ನೆ

ಬಿಜೆಪಿ–ಕಾಂಗ್ರೆಸ್ ನಾಯಕರ ವಾಕ್ಸಮರ

ಭೋಪಾಲ್ (ಪಿಟಿಐ): ರಾಜ್ಯದಲ್ಲಿ ಜನ ಕಲ್ಯಾಣ ಯೋಜನೆಗಳ ಅನುಷ್ಠಾನ ಕುರಿತು ಪ್ರಿಯಾಂಕಾ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು ಹಾಗೂ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನಡುವೆ ವಾಕ್ಸಮರ ನಡೆದಿದೆ.

‘ಚೌಹಾಣ್ ಅವರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಹಾಗೂ ಭಾರತೀಯ ಜನತಾ ಪಕ್ಷದಂತೆ ಕಾಂಗ್ರೆಸ್‌ನಲ್ಲಿ ಸರ್ವಾಧಿಕಾರವಿಲ್ಲ’ ಎಂದು ಪ್ರಿಯಾಂಕಾ ಪ್ರತಿಪಾದಿಸಿದರೆ, ‘ಕಮಲ್ ನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಬಿಜೆಪಿ ಸರ್ಕಾರದ ಜನ ಕಲ್ಯಾಣ ಯೋಜನೆಗಳನ್ನು ಏಕೆ ನಿಲ್ಲಿಸಲಾಯಿತು’ ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ.

‘ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್ ನಾಥ್ ಅವರು ಸುಳ್ಳು ಘೋಷಣೆಗಳನ್ನು ಮಾಡುವಂತೆ ಒತ್ತಾಯಿಸುವ ಮೂಲಕ ಗಾಂಧಿ ಕುಟುಂಬಕ್ಕೆ ಮೋಸ ಮಾಡುತ್ತಿದ್ದಾರೆ’ ಎಂದು ಶಿವರಾಜ್ ಸಿಂಗ್ ಚೌಹಾಣ್ ಶುಕ್ರವಾರ ಬೆಳಿಗ್ಗೆ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಸಂಜೆ ‘ಎಕ್ಸ್’ನಲ್ಲಿ ತಿರುಗೇಟು ನೀಡಿದ ಪ್ರಿಯಾಂಕಾ, ‘ತಮ್ಮ ಪಕ್ಷವು ಶಿಕ್ಷಣ ಮತ್ತು ಮಕ್ಕಳ ಬಗ್ಗೆ ಮಾತನಾಡುತ್ತಿದ್ದರೆ, ಜನರ ಗಮನವನ್ನು ಬೇರೆಡೆಗೆ ಸೆಳೆಯುವವರು ಬೇರೊಂದು ವಿಷಯವನ್ನು ಅರ್ಥ ಮಾಡಿಕೊಂಡಂತೆ ತೋರುತ್ತದೆ. ಕಾಂಗ್ರೆಸ್‌ನಲ್ಲಿ ಸರ್ವಾಧಿಕಾರವಿಲ್ಲ’ ಎಂದರು.

ವಿದ್ಯಾರ್ಥಿವೇತನ ಯೋಜನೆಯಡಿ ಜಾತಿ, ಧರ್ಮ ಮತ್ತು ವರ್ಗ ಲೆಕ್ಕಿಸದೆ ಮಧ್ಯಪ್ರದೇಶದ ಪ್ರತಿ ಮಗುವಿಗೆ ತಮ್ಮ ಪಕ್ಷವು ವಿದ್ಯಾರ್ಥಿವೇತನ ನೀಡಲಿದೆ ಎಂದು ಅವರ ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಚೌಹಾಣ್, ‘ನಾನು ಗಮನವನ್ನು ಬೇರೆಡೆಗೆ ಸೆಳೆಯುತ್ತಿಲ್ಲ, ಆದರೆ, ಗಮನ ಸೆಳೆಯುತ್ತಿದ್ದೇನೆ. ನಿಮಗೆ ಭರವಸೆಗಳನ್ನು ಘೋಷಿಸುವಂತೆ ಹೇಳಿದ ವ್ಯಕ್ತಿಗಳ ಸಾಧನೆ ಕಳಪೆ ಇದೆ’ ಎಂದು ಕಿಡಿಕಾರಿದ್ದಾರೆ.

‘ರಾಜ್ಯದಲ್ಲಿ ತಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಮತ್ತು ಬೈಸಿಕಲ್ ವಿತರಣೆ ಸೇರಿದಂತೆ ಯೋಜನೆಗಳನ್ನು ಏಕೆ ನಿಲ್ಲಿಸಿದ್ದೀರಿ ಎಂದು ಪ್ರಿಯಾಂಕಾ ಅವರು ಕಮಲ್ ನಾಥ್ ಅವರನ್ನು ಕೇಳಬೇಕು. ಶಾಲಾ ಶಿಕ್ಷಣ ಸೇರಿದಂತೆ ಅನೇಕ ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ಏಕೆ ನಿಲ್ಲಿಸಲಾಯಿತು?. ಕಾಂಗ್ರೆಸ್ ಸರ್ಕಾರವು ಯಾವ ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ನಿಲ್ಲಿಸಿದೆ ಎಂಬುದನ್ನು ನಿಮಗೆ ಕಾಲಕಾಲಕ್ಕೆ ನೆನಪಿಸುತ್ತೇನೆ’ ಎಂದು ಹೇಳಿದರು.

ಚೌಹಾಣ್‌ಗೆ ತಿರುಗೇಟು ನೀಡಿದ ಕಮಲ್ ನಾಥ್, ‘ಚೌಹಾಣ್ ಅವರು ಗಾಂಧಿ ಕುಟುಂಬದ ವಿರುದ್ಧ ಅನುಚಿತ ಭಾಷೆ ಬಳಸುತ್ತಿದ್ದಾರೆ. ಪ್ರಿಯಂಕಾ ಅವರ ತಂದೆ ರಾಜೀವ್ ಗಾಂಧಿ ತಾಯ್ನಾಡಿಗಾಗಿ ತಮ್ಮ ಪ್ರಾಣ ಅರ್ಪಿಸಿದರು. ಅವರ ಅಜ್ಜಿ ಇಂದಿರಾ ಗಾಂಧಿ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಜೀವನ ಅರ್ಪಿಸಿದರು’ ಎಂದು ತಿಳಿಸಿದರು.

> **ಇಡೀ ದೇಶವು ಗಾಂಧಿ ಕುಟುಂಬದ ಬಗ್ಗೆ ಹೆಮ್ಮೆ ಪಡುತ್ತದೆ. ಕಾಂಗ್ರೆಸ್ ಪಕ್ಷವು ಸುಳ್ಳು ಭರವಸೆಗಳನ್ನು ಜನರಿಗೆ ನೀಡುವುದಿಲ್ಲ**
> **ಕಮಲ್ ನಾಥ್**
> ಮಧ್ಯ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ

ಗೆಲ್ಲುವ ಅಭ್ಯರ್ಥಿಗಳಿಗೆ ಟಿಕೆಟ್: ಗೆಹಲೋತ್



ಜೈಪುರ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ನಾಲ್ವರು ಹಾಲಿ ಶಾಸಕರಿಗೆ ಟಿಕೆಟ್ ನೀಡದಂತೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ರಾಜಸ್ಥಾನ ಕಾಂಗ್ರೆಸ್ ಚುನಾವಣಾ ಸಮಿತಿಯು ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚೆ ನಡೆಸಿದೆ.

ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ದೊತಸ್ರ ನೇತೃತ್ವದ ಸಮಿತಿಯು ದೆಹಲಿಯಲ್ಲಿ ನಡೆಯಲಿರುವ ಪಕ್ಷದ ಸ್ಕ್ರೀನಿಂಗ್ ಕಮಿಟಿ ಸಭೆಯಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಪ್ರಸ್ತಾಪಿಸಲಿದೆ.

ಶುಕ್ರವಾರ ಸಂಜೆ ಪಕ್ಷದ ವಾರ್ ರೂಂನಲ್ಲಿ ನಡೆದ ಸಭೆಯಲ್ಲಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಸಮಿತಿಯ ಇತರ ಸದಸ್ಯರು ಭಾಗ ವಹಿಸಿದ್ದರು. ಸಭೆ ನಡೆಯುವ ವೇಳೆ ವಿವಿಧ ಕ್ಷೇತ್ರಗಳ ಪಕ್ಷದ ಕಾರ್ಯಕರ್ತರು ಕೆಲ ಹಾಲಿ ಶಾಸಕರ ವಿರುದ್ಧ ಪ್ರತಿಭಟನೆ ನಡೆಸಿ, ಟಿಕೆಟ್ ನೀಡಬಾರದು ಎಂದು ಒತ್ತಾಯಿಸಿದರು. ‘ಕಾರ್ಯಕರ್ತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಮಾತನ್ನು ಕೇಳುತ್ತೇವೆ. ಸೂಕ್ತವಾದದ್ದನ್ನು ಸ್ಕ್ರೀನಿಂಗ್ ಸಮಿತಿಗೆ ತಿಳಿಸಲಾಗುವುದು’ ಎಂದು ದೊತಸ್ರ ಹೇಳಿದರು.

ಅಶೋಕ್ ಗೆಹಲೋತ್ ಮಾತನಾಡಿ, ‘ಚುನಾವಣೆ ಸಮಯದಲ್ಲಿ ಸಂಸದ ಅಥವಾ ಶಾಸಕರ ವಿರುದ್ಧ ವ್ಯತಿರಿಕ್ತ ಟೀಕೆ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಇಂತಹ ಹೇಳಿಕೆಗಳು ನಿಜವಾಗಿರಬಹುದು ಅಥವಾ ಸುಳ್ಳಾಗಿರಬಹುದು. ಇದರಲ್ಲಿ ಪಿತೂರಿಯೂ ಇರಬಹುದು. ಅಂತಿಮವಾಗಿ ಪಕ್ಷದ ಹೈಕಮಾಂಡ್ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡಲಾಗುವುದು ಮತ್ತು ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು’ ಎಂದು ಅವರು ಹೇಳಿದರು. ಪಕ್ಷದಲ್ಲಿ ಎಲ್ಲವೂ ಸುಗಮವಾಗಿ ನಡೆಯುತ್ತಿದೆ. ಪೂರ್ವ ರಾಜಸ್ಥಾನದ ಬರಾನ್ ನಿಂದ ಚುನಾವಣಾ ಪ್ರಚಾರ ಪ್ರಾರಂಭಿಸಲಾಗುವುದು. ಅ. 16 ರಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ. ಪೂರ್ವ ರಾಜಸ್ಥಾನದ 13 ಜಿಲ್ಲೆಗಳಲ್ಲಿ ಸಣ್ಣ ಮತ್ತು ದೊಡ್ಡ ರ‍್ಯಾಲಿಗಳನ್ನು ನಡೆಸಲಾಗುವುದು ಎಂದರು.

ಚುನಾವಣಾ ಕಣದಲ್ಲಿ...

- ತೆಲಂಗಾಣ ರಾಜ್ಯದಲ್ಲಿ ಆಡಳಿತಾರೂಢ ಬಿಆರ್‌ಎಸ್ ಭ್ರಷ್ಟಾಚಾರ ಮತ್ತು ವಂಶಪಾರಂಪರ್ಯ ರಾಜಕೀಯವನ್ನು ಕೊನೆಗೊಳಿಸಬಲ್ಲ ಏಕೈಕ ಪಕ್ಷ ಬಿಜೆಪಿ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.
- ಬಿಆರ್‌ಎಸ್ ಮುಖ್ಯಸ್ಥ, ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರು ಪಕ್ಷದ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಲಿದ್ದಾರೆ.
- ಕರ್ನಾಟಕದ ಗುತ್ತಿಗೆದಾರರ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದ ವೇಳೆ ವಶಪಡಿಸಿಕೊಂಡ ₹42 ಕೋಟಿಗೂ ಅಧಿಕ ನಗದನ್ನು ಮುಂದಿನ ತಿಂಗಳು ಐದು ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಗೆ ಬಳಸಿಕೊಳ್ಳಲು ಕಾಂಗ್ರೆಸ್ ಯತ್ನಿಸಿದೆ ಎಂದು ಮಧ್ಯಪ್ರದೇಶ ಬಿಜೆಪಿ ಮುಖ್ಯಸ್ಥ ವಿ.ಡಿ.ಶರ್ಮಾ ಆರೋಪಿಸಿದ್ದಾರೆ.

ಪಟ್ಟಣ ತೊರೆಯಲು ಇಸ್ರೇಲ್ ಗಡುವು ● ಮನೆಗಳಲ್ಲೇ ಉಳಿಯುವಂತೆ ಹಮಾಸ್ ಆಗ್ರಹ

ಗುಳೆ ಹೊರಟ ಪ್ಯಾಲೆಸ್ಟೀನಿಯನ್ನರು

ದೈರ್- ಅಲ್- ಬಲಾಹ್, ಗಾಜಾ ಪಟ್ಟಿ (ಎಪಿ): ಇಸ್ರೇಲ್ ಮಿಲಿಟರಿ ಆದೇಶದ ಬಳಿಕ ಪ್ಯಾಲೆಸ್ಟೀನಿಯನ್ನರು ಗಾಜಾ ಉತ್ತರ ಭಾಗವನ್ನು ತೊರೆದು ದಕ್ಷಿಣದತ್ತ ಧಾವಿಸಲು ಮುಗಿಬೀಳುವ ದೃಶ್ಯಗಳು ಶನಿವಾರ ಇಲ್ಲಿ ಕಂಡು ಬಂದವು.

ಸಾಮಾಜಿಕ ಮಾಧ್ಯಮ ಮತ್ತು ವಿಮಾನದಿಂದ ಕರಪತ್ರಗಳನ್ನು ತೂರುವ ಮೂಲಕ ಇಸ್ರೇಲ್, ಗಾಜಾದ ನಾಗರಿಕರು ಪಟ್ಟಣ ತೊರೆಯುವಂತೆ ಮತ್ತೆ ಒತ್ತಾಯಿಸಿದ್ದರೆ, ಮನೆಗಳಲ್ಲೇ ಉಳಿಯುವಂತೆ ಹಮಾಸ್ ಮುಖ್ಯಸ್ಥ ಇಸ್ಮಾಯಿಲ್ ಹನಿಯೆ ಆಗ್ರಹಿಸಿದ್ದಾರೆ.

ಈ ಮಧ್ಯೆ, ಗಾಜಾ ಪಟ್ಟಣದ ಆಸ್ಪತ್ರೆಗಳನ್ನು ತೆರವುಗೊಳಿಸಲು ನೀಡಿದ ಗಡುವನ್ನು ಇಸ್ರೇಲ್ 10 ತಾಸು ವಿಸ್ತರಿಸಿದೆ ಎಂದು ಪ್ಯಾಲೆಸ್ಟೀನಿಯನ್ನರ ರೆಡ್ ಕ್ರೆಸೆಂಟ್ ಸೊಸೈಟಿ ಹೇಳಿದೆ.

ಆದರೆ ಆಸ್ಪತ್ರೆಯಲ್ಲಿರುವ ರೋಗಿಗಳನ್ನು ಮತ್ತು ಇತರರನ್ನು ಸ್ಥಳಾಂತರಿಸಲು ಸಾಧ್ಯವಾಗುವುದಿಲ್ಲ. ಸಾಮೂಹಿಕ ನಿರ್ಗಮನವು ವಿವರಿಸಲಾಗದ ಮಾನವ ಸಂಕಷ್ಟಕ್ಕೆ ಕಾರಣವಾಗುತ್ತದೆ ಎಂದು ವಿಶ್ವಸಂಸ್ಥೆ ಮತ್ತು ನೆರವು ತಂಡಗಳು ಅಭಿಪ್ರಾಯ ಪಟ್ಟಿವೆ.

ಸಾವಿರಾರು ಪ್ಯಾಲೆಸ್ಟೀನಿಯನ್ನರು ಈಗಾಗಲೇ ಎಚ್ಚರಿಕೆಗೆ ಓಗೊಟ್ಟಿದ್ದು ದಕ್ಷಿಣದತ್ತ ಸಾಗುತ್ತಿದ್ದಾರೆ ಎಂದು ಇಸ್ರೇಲಿ ಮಿಲಿಟರಿ ಹೇಳಿದೆ.

ಪಟ್ಟಣವನ್ನು ಇಸ್ರೇಲ್ ಬಹುತೇಕ ವಶಕ್ಕೆ ತೆಗೆದುಕೊಂಡಿರುವುದರಿಂದ ಆಹಾರ, ಇಂಧನ ಮತ್ತು ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗಿದೆ.



ಈಜಿಪ್ಟ್ ಪ್ರವೇಶಿಸಲು ಶನಿವಾರ ರಫಾ ಗೇಟ್ ಬಳಿ ಪ್ಯಾಲೆಸ್ಟೀನಿಯನ್ನರು ಕಾದಿದ್ದರು — ಎಎಫ್‌ಪಿ ಚಿತ್ರ

ಕಾರು, ಟ್ರಕ್ಕು ಮತ್ತು ಕತ್ತೆ ಗಾಡಿಗಳಲ್ಲಿ ಮನೆ ಸಾಮಗ್ರಿ ಹೇರಿಕೊಂಡು ಜನರು ತೆರಳುತ್ತಿರುವುದರಿಂದ ಮುಖ್ಯ ರಸ್ತೆಯು ದಟ್ಟಣೆಯಿಂದ ಕೂಡಿದೆ.

ಕೆಲವರು 20 ಕಿ.ಮೀ ದೂರ ಹೋಗಿದ್ದಾರೆ. ಆದರೆ ರಸ್ತೆಗಳು ವಾಯು ದಾಳಿಯಿಂದ ನಾಶವಾಗಿ ರುವುದು ಮತ್ತು ಇಂಧನ ಕೊರತೆ ಅವರ ಪಯಣಕ್ಕೆ ಅಡ್ಡಿಯಾಗಿದೆ.

ಸಾವಿರಾರು ಜನರು ದೈರ್ ಅಲ್ ಬಲಾಹ್‌ನಲ್ಲಿ ವಿಶ್ವಸಂಸ್ಥೆ ನಡೆಸುತ್ತಿರುವ ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಕೆಲವರು ರಾತ್ರಿ ಹೊರಗಡೆ ನೆಲದಲ್ಲಿ ಅಥವಾ ತರಗತಿಯಲ್ಲಿದ್ದ ಕುರ್ಚಿಗಳ ಮೇಲೆ ನಿದ್ರಿಸಿದ್ದಾರೆ.



ಗಾಜಾ ಗಡಿಯಿಂದ ದಕ್ಷಿಣ ಭಾಗಕ್ಕೆ ತೆರಳಲು ಅವಕಾಶ ಕಲ್ಪಿಸುವ ರಫಾ ಕ್ರಾಸಿಂಗ್‌ನಲ್ಲಿ ಮುಂಜಾಗ್ರತಾ ಕ್ರಮವಾಗಿ ತಾತ್ಕಾಲಿಕ ತಡೆಗೋಡೆಯನ್ನು ಈಜಿಪ್ಟ್ ನಿರ್ಮಿಸಿದೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ವಾಯುದಾಳಿ ಆರಂಭವಾದ ಬಳಿಕ ಈ ಕ್ರಾಸಿಂಗ್ ಅನ್ನು ಮುಚ್ಚಲಾಗಿದೆ.

ಪಡೆಗಳು ಹಿಂದಕ್ಕೆ: ಬಂಡಕೋರರನ್ನು ಸದೆಬಡೆಯಲು ಮತ್ತು 150 ಒತ್ತೆಯಾಳುಗಳನ್ನು ಪತ್ತೆ ಹಚ್ಚಲು ಮಿಲಿಟರಿ ಪಡೆಗಳು ಗಾಜಾದಲ್ಲಿ ಶುಕ್ರವಾರ ತಾತ್ಕಾಲಿಕವಾಗಿ ಭೂದಾಳಿ ನಡೆಸಿದವು. ಪಡೆಗಳು ನಂತರದಲ್ಲಿ ವಾಪಸ್ಸಾಗಿವೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಇಸ್ರೇಲ್ ದಾಳಿಯಿಂದ 724 ಮಕ್ಕಳು ಮತ್ತು 458 ಮಹಿಳೆಯರು ಸೇರಿದಂತೆ 2,200 ಜನರು ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದ್ದರೆ, ಹಮಾಸ್ ದಾಳಿಯಿಂದಾಗಿ ಇಸ್ರೇಲ್‌ನ 1,300ಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. 1500 ಬಂಡುಕೋರರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಸರ್ಕಾರ ಹೇಳಿದೆ.

ಗಾಜಾ ಗಡಿಯ ಸುತ್ತಲೂ ಇಸ್ರೇಲ್ ತನ್ನ ಪಡೆಗಳನ್ನು ನಿಯೋಜಿಸಿದೆ. ಆದರೆ ಭೂದಾಳಿ ನಡೆಸುವ ಬಗ್ಗೆ ನಿರ್ಧಾರ ಇನ್ನೂ ಪ್ರಕಟಿಸಿಲ್ಲ. ‘ನಾವು ಹಮಾಸ್ ಬಂಡುಕೋರರನ್ನು ನಾಶಗೊಳಿಸುತ್ತೇವೆ’ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ರಾತ್ರಿ ಪುನರುಚ್ಚರಿಸಿದ್ದಾರೆ.

ಭೇಟಿ: ಅಮೆರಿಕದ ವಿದೇಶಾಂಗ ಸಚಿವ ಆ್ಯಂಟನಿ ಬ್ಲಿಂಕನ್ ಶನಿವಾರ ಸೌದಿ ಅರೇಬಿಯಾದ ವಿದೇಶಾಂಗ ಸಚಿವ ಫೈಸಲ್ ಬಿನ್ ಫರ್ಹಾನ್ ಅವರನ್ನು ರಿಯಾದ್‌ನಲ್ಲಿ ಭೇಟಿಯಾಗಿದ್ದಾರೆ. ಗಾಜಾ ಪ್ರಜೆಗಳನ್ನು ಇಸ್ರೇಲ್ ರಕ್ಷಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

ಇಸ್ರೇಲ್ ಆದೇಶ ಕಾರ್ಯಸಾಧುವಲ್ಲ: ವಿಶ್ವಸಂಸ್ಥೆ

ಗಾಜಾದಿಂದ ದಕ್ಷಿಣ ಭಾಗಕ್ಕೆ 24 ಗಂಟೆಗಳಲ್ಲಿ ತೆರಳುವಂತೆ ಸೂಚಿಸಿರುವ ಇಸ್ರೇಲ್‌ನ ಆದೇಶವು ಅತ್ಯಂತ ಅಪಾಯಕಾರಿ ಮತ್ತು ಕಾರ್ಯ ಸಾಧುವಲ್ಲ ಎಂದು ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟನಿಯೊ ಗುಟೆರಸ್ ಹೇಳಿದ್ದಾರೆ.

ಯುದ್ಧಕ್ಕೆ ಕೂಡ ಕೆಲ ನಿಯಮಗಳಿವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಗಾಜಾ ಪಟ್ಟಿಯಲ್ಲಿರುವ ವಿಶ್ವಸಂಸ್ಥೆಯ ಎಲ್ಲಾ ಸಿಬ್ಬಂದಿ ಮತ್ತು ವಿಶ್ವಸಂಸ್ಥೆಯು ಅಲ್ಲಿ ನಡೆಸುತ್ತಿರುವ ಶಾಲೆಗಳು, ಆರೋಗ್ಯ ಕೇಂದ್ರಗಳು, ಕ್ಲಿನಿಕ್‌ಗಳಿಗೆ ಕೂಡ ಇಸ್ರೇಲ್ ಆದೇಶ ಅನ್ವಯವಾಗಲಿದೆ.

ಈಜಿಪ್ಟ್ ತಲುಪಿದ ನೆರವು ಸಾಮಗ್ರಿ

ಕೈರೊ (ರಾಯಿಟರ್ಸ್): ಅಮೆರಿಕ ಮತ್ತು ಟರ್ಕಿಯಿಂದ ವೈದ್ಯಕೀಯ ಮತ್ತು ನೆರವು ಸಾಮಗ್ರಿಗಳನ್ನು ಹೊತ್ತ ವಿಮಾನಗಳು ಈಜಿಪ್ಟ್‌ನ ಎಲ್– ಅರಿಷ್ ವಿಮಾನನಿಲ್ದಾಣ ತಲುಪಿವೆ.

ಈ ಸಾಮಗ್ರಿಗಳನ್ನು ಸುರಕ್ಷಿತವಾಗಿ ಗಾಜಾಕ್ಕೆ ಕೊಂಡೊಯ್ಯಲು ಸಾಧ್ಯವಾಗುವವರೆಗೆ ಇಲ್ಲಿಯೇ ಕಾಯಲಾಗುವುದು. ವೈದ್ಯಕೀಯ ಮತ್ತು ಅಗತ್ಯ ಸಾಮಗ್ರಿ ಹೊತ್ತ ಒಟ್ಟು ಐದು ವಿಮಾನಗಳು ಈವರೆಗೆ ಈಜಿಪ್ಟಿಗೆ ಬಂದಿವೆ ಎಂದು ರೆಡ್ ಕ್ರೆಸೆಂಟ್‌ನ ಅಧಿಕಾರಿ ತಿಳಿಸಿದರು.

ಇಲ್ಲಿಂದ ಗಾಜಾಕ್ಕೆ ಮಾರ್ಗ ಕಲ್ಪಿಸುವ ರಫಾ ಕ್ರಾಸಿಂಗ್ ಸಂಚಾರಕ್ಕೆ ಮುಕ್ತಗೊಳ್ಳುವುದನ್ನು ನಿರೀಕ್ಷಿಸಲಾಗುತ್ತಿದೆ ಎಂದು ಡಬ್ಲ್ಯುಎಚ್ ಒ ಕೂಡ ಹೇಳಿದೆ. ಪ್ಯಾಲೆಸ್ಟೀನಿಯನ್ನರ ನೆಲೆ ಮೇಲೆ ಇಸ್ರೇಲ್ ದಾಳಿ ಆರಂಭವಾದ ಬಳಿಕ ರಫಾ ಕ್ರಾಸಿಂಗ್ ಅನ್ನು ಬಂದ್ ಮಾಡಲಾಗಿದೆ. ಗಾಜಾದಿಂದ ಜನರು ದಕ್ಷಿಣ ಭಾಗಕ್ಕೆ ತೆರಳಬೇಕೆನ್ನುವ ತನ್ನ ಆದೇಶವನ್ನು ಇಸ್ರೇಲ್ ಮರುಪರಿಶೀಲಿಸಬೇಕು. ಇಲ್ಲದಿದ್ದಲ್ಲಿ ಇದು ಬಹುದೊಡ್ಡ ಮಾನವ ದುರಂತ ಆಗಲಿದೆ ಎಂದು ಡಬ್ಲ್ಯುಎಚ್‌ಒದ ಮಹಾ ನಿರ್ದೇಶಕ ಟೆಡ್ರೊಸ್ ಅಧಾನೋಮ್ ಘೆಬ್ರೆಯೆಸಿಸ್ ಹೇಳಿದರು.

ರಫಾ ಕ್ರಾಸಿಂಗ್ ಮೂಲಕ ಗಾಜಾಕ್ಕೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಶನಿವಾರ ಈಜಿಪ್ಟ್, ಇಸ್ರೇಲ್ ಮತ್ತು ಕತಾರ್ ಜೊತೆ ಮಾತುಕತೆ ನಡೆಸಲಾಗಿದೆ ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ಅಧಿಕಾರಿ ತಿಳಿಸಿದರು.

9 ಒತ್ತೆಯಾಳುಗಳ ಸಾವು

24 ಗಂಟೆಗಳಲ್ಲಿ ಇಸ್ರೇಲ್ ಬಾಂಬ್‌ದಾಳಿಗೆ ನಾಲ್ವರು ವಿದೇಶಿಯರು ಸೇರಿದಂತೆ 9 ಒತ್ತೆಯಾಳುಗಳು ಮೃತಪಟ್ಟಿದ್ದಾರೆ ಎಂದು ಹಮಾಸ್ ಹೇಳಿದೆ. ಶುಕ್ರವಾರದ ದಾಳಿಯಲ್ಲಿ 13 ಒತ್ತೆಯಾಳುಗಳು ಹತ್ಯೆಗೀಡಾಗಿದ್ದಾಗಿ ಸಂಘಟನೆ ತಿಳಿಸಿತ್ತು. ಇದರಿಂದಾಗಿ ಒಟ್ಟು 22 ಒತ್ತೆಯಾಳುಗಳು ಸಾವಿಗೀಡಾಗಿದ್ದಾರೆ.

ಈ ಮಧ್ಯೆ ಒತ್ತೆಯಾಳುಗಳಾಗಿರುವ ತಮ್ಮ ಪ್ರೀತಿ ಪಾತ್ರರ ಬಿಡುಗಡೆಗೆ ವಿಶ್ವವು ನೆರವು ನೀಡಬೇಕು ಎಂದು ಹಮಾಸ್‌ನಿಂದ ಅಪಹರಣಕ್ಕೆ ಒಳಗಾದವರ ಬಂಧುಗಳು ಕೋರಿದ್ದಾರೆ.

ಶನಿವಾರ ಅ. 7ರಂದು ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಿಢೀರ್ ದಾಳಿ ನಡೆಸಿದ ವೇಳೆ 150 ಮಂದಿಯನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದರು.

> **ಅಗತ್ಯ ಸಾಮಗ್ರಿ ಸಂತ್ರಸ್ತರಿಗೆ ತಲುಪುವುದು ತಡವಾದಷ್ಟೂ ತೊಂದರೆ ಹೆಚ್ಚಲಿದೆ. ಅಪಾಯದ ಅಂಚಿನಲ್ಲಿರುವ ರೋಗಿಗಳು ಅಸು ನೀಗಲೂಬಹುದು**
> **ಟೆಡ್ರೊಸ್ ಅಧಾನೋಮ,** ಡಬ್ಲ್ಯುಎಚ್‌ಒ ಮಹಾ ನಿರ್ದೇಶಕ

> **ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ಮಾಡಿರುವ ದಾಳಿ ಅಲ್‌ಕೈದಾ ಉಗ್ರರು ಅಮೆರಿಕ ಮೇಲೆ ಮಾಡಿದ ದಾಳಿಗಿಂತ ಹೀನಾಯ**
> **ಜೋ ಬೈಡನ್,** ಅಮೆರಿಕ ಅಧ್ಯಕ್ಷ

ಮತ್ತೆ 9 ಕನ್ನಡಿಗರು ವಾಪಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಆಪರೇಷನ್ ಅಜಯ್ ಕಾರ್ಯಾಚರಣೆಯ ಭಾಗವಾಗಿ ಎರಡನೇ ವಿಶೇಷ ವಿಮಾನದಲ್ಲಿ ಇಸ್ರೇಲ್‌ನಿಂದ 235 ಭಾರತೀಯರು ತಾಯ್ನಾಡಿಗೆ ಶನಿವಾರ ಮರಳಿದರು. ಇದರಲ್ಲಿ 9 ಮಂದಿ ಕನ್ನಡಿಗರು ಸೇರಿದ್ದಾರೆ.

‘ಯುದ್ಧ ಆರಂಭವಾದ ಬಳಿಕ ನಮ್ಮಲ್ಲಿ ಆತಂಕ ಹೆಚ್ಚಾಯಿತು. ನಾವಿದ್ದ ಜಾಗದಲ್ಲಿ ರಾಕೆಟ್ ದಾಳಿ ಕಾಣುತ್ತಿತ್ತು. ಮೂರು ದಿನಗಳ ಹಿಂದೆ ಭಾರತೀಯ ರಾಯಭಾರಿ ಕಚೇರಿಯಿಂದ ಮಾಹಿತಿ ಬಂತು. ಉತ್ತಮ ವ್ಯವಸ್ಥೆ ಮಾಡಿ ನಮ್ಮನ್ನು ಕರೆದುಕೊಂಡು ಬಂದರು’ ಎಂದು ನಂಜನಗೂಡಿನ ಚೇತನ್ ದಂಪತಿ ತಿಳಿಸಿದರು.

ಇಸ್ರೇಲ್‌ನಲ್ಲಿರುವ ತಮ್ಮ ಮಗನ ಮನೆಗೆ ತೆರಳಿದ್ದ ಬೆಂಗಳೂರಿನ ಸುಮತಿ, ‘ನಾವು ಇದ್ದ ಕಡೆಯಲ್ಲಿ ಯಾವುದೇ ಆತಂಕದ ಸ್ಥಿತಿ ಇರಲಿಲ್ಲ’ ಎಂದರು. ಇಸ್ರೇಲ್‌ನಿಂದ ಬಂದ ಭಾರತೀಯರನ್ನು ವಿದೇಶಾಂಗ ಖಾತೆ ರಾಜ್ಯ ಸಚಿವ ರಾಜ್‌ಕುಮಾರ್ ರಂಜನ್ ಸಿಂಗ್ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.

ಇಸ್ರೇಲ್‌ನಿಂದ ಮತ್ತೆರಡು ವಿಮಾನಗಳು ಭಾರತಕ್ಕೆ

ಇಸ್ರೇಲ್‌ನಿಂದ ಭಾರತಕ್ಕೆ ಶನಿವಾರ ಎರಡು ವಿಶೇಷ ವಿಮಾನಗಳು ಹೊರಡಲಿದ್ದು, ಭಾನುವಾರ ಬೆಳಿಗ್ಗೆ ಅವು ಭಾರತ ತಲುಪಲಿವೆ.

ಈ ಪೈಕಿ ಮೊದಲನೇ ವಿಮಾನದಲ್ಲಿ 197 ಭಾರತೀಯರು ಸ್ವದೇಶಕ್ಕೆ ಮರಳುತ್ತಿದ್ದಾರೆ. ಎರಡನೇ ವಿಮಾನದಲ್ಲಿ 330 ಜನರು ಮರಳಲಿದ್ದಾರೆ. ಏರ್ ಇಂಡಿಯಾದ ಮತ್ತೊಂದು ವಿಮಾನವು ಇಸ್ರೇಲ್‌ಗೆ ಭಾನುವಾರ ತೆರಳಲಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

ಸ್ಥಗಿತ: ಭಾರತ ಮತ್ತು ಇಸ್ರೇಲ್‌ನ ಟೆಲ್ ಅವೀವ್ ನಡುವಿನ ವಿಮಾನ ಸಂಚಾರವನ್ನು ಅಕ್ಟೋಬರ್ 18ರ ವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ.

ಪ್ರಮುಖ ಬೆಳವಣಿಗೆ

- ವಾಯು, ಭೂ ಮತ್ತು ನೌಕಾದಾಳಿಯ ಮೂಲಕ ಸಮನ್ವಯತೆಯೊಂದಿಗೆ ಗಾಜಾ ಪಟ್ಟಿ ಮೇಲೆ ಯುದ್ಧ ನಡೆಸಲು ಸಜ್ಜಾಗಿರುವುದಾಗಿ ಇಸ್ರೇಲ್ ಮಿಲಿಟರಿ ಪ್ರಕಟಿಸಿದೆ.
- ದಾಳಿಯನ್ನು ಇಸ್ರೇಲ್ ನಿಲ್ಲಿಸಬೇಕು. ಹಿಜ್ಬುಲ್ಲಾ ತಂಡವೇನಾದರೂ ಯುದ್ಧದಲ್ಲಿ ಪಾಲ್ಗೊಂಡರೆ ಮಧ್ಯಪ್ರಾಚ್ಯದ ಇತರೆಡೆಗೂ ಅದು ವ್ಯಾಪಿಸಲಿದೆ. ಆಗ ಇಸ್ರೇಲ್‌ನಲ್ಲಿ ‘ಭಾರಿ ಭೂಕಂಪನ‘ ಆಗಲಿದೆ ಎಂದು ಇರಾನ್ ಎಚ್ಚರಿಸಿದೆ.
- ಇಸ್ರೇಲ್ ಯಾವುದೇ ದಾಳಿ ನಡೆಸಿದರೂ ಅದನ್ನು ಎದುರಿಸಲು ಉಗ್ರರ ಗುಂಪು ಸಿದ್ಧವಿದೆ ಎಂದು ಇರಾನ್‌ನ ವಿದೇಶಾಂಗ ಸಚಿವ ಹೊಸೈನ್ ಹೇಳಿದರು. ಬೈರೂತ್‌ನಲ್ಲಿ ಮಾತನಾಡಿದ ಅವರು, ಹಿಜ್ಬುಲ್ಲಾ ಉಗ್ರರ ನಾಯಕರನ್ನು ತಾವು ಭೇಟಿಯಾಗಿದ್ದಾಗಿ ತಿಳಿಸಿದರು.

ರಾಯಿಟರ್ಸ್ ಪತ್ರಕರ್ತನ ಹತ್ಯೆ ಪ್ರಕರಣ ● ಕ್ಷಿಪಣಿಯಿಂದ ಸಾವು: ಲೆಬನಾನ್

‘ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ದೂರು’

ಕೈರೊ/ಬೈರೂತ್ (ರಾಯಿಟರ್ಸ್): ಪತ್ರಕರ್ತ ಇಸ್ಸಾಂ ಅಬ್ದುಲ್ಲಾ ಅವರನ್ನು ಇಸ್ರೇಲ್ ಉದ್ದೇಶಪೂರ್ವಕವಾಗಿ ಹತ್ಯೆಗೈದಿದೆ ಎಂದು ಆರೋಪಿಸಿರುವ ಲೆಬನಾನ್ ವಿದೇಶಾಂಗ ಸಚಿವರು, ಈ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಅಧಿಕೃತವಾಗಿ ದೂರು ನೀಡುವುದಾಗಿ ಹೇಳಿದ್ದಾರೆ.

‘ಇಸ್ರೇಲ್ ಕೃತ್ಯವು ಅಭಿಪ್ರಾಯ ವ್ಯಕ್ತಪಡಿಸುವುದರ ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆದ ಘೋರ ದಾಳಿ ಮತ್ತು ಅಪರಾಧ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಕ್ಷಿಪಣಿಯಿಂದ ಪತ್ರಕರ್ತನ ಸಾವು’: ‘ಇಸ್ರೇಲ್ ನಡೆಸಿದ ಕ್ಷಿಪಣಿ ದಾಳಿಗೆ ರಾಯಿಟರ್ಸ್ ಪತ್ರಕರ್ತ ಇಸ್ಸಾಂ ಅಬ್ದುಲ್ಲಾ ಮೃತಪಟ್ಟರು’ ಎಂದು ಲೆಬನಾನ್ ಸೇನೆಯು ತನ್ನ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಿದೆ.

ದಾಳಿ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಪತ್ರಕರ್ತರು ಕಾರಿನಲ್ಲಿದ್ದರು.

‘ಪತ್ರಕರ್ತನ ಸಾವಿಗೆ ವಿಷಾದಿಸುತ್ತೇವೆ. ಇದು ದುರದೃಷ್ಟಕರ ಘಟನೆ. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ರಿಚರ್ಡ್ ಹೆಚ್ಟ್ ಅವರು ಪ್ರತಿಕ್ರಿಯಿಸಿದ್ದಾರೆ. ಆದರೆ ಈ ಸಾವಿಗೆ ಇಸ್ರೇಲ್ ಸೇನೆ ಕಾರಣವೇ ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ.

ದಕ್ಷಿಣ ಲೆಬನಾನ್ ಗಡಿಯಲ್ಲಿ ಇಸ್ರೇಲ್ ಸೇನೆ ಮತ್ತು ಲೆಬನಾನ್ ಬಂಡುಕೋರರ ನಡುವೆ ನಡೆಯುತ್ತಿರುವ ಕದನದ ವರದಿ ಮಾಡಲು ಅಂತರರಾಷ್ಟ್ರೀಯ ಪತ್ರಕರ್ತರ ಗುಂಪು ಅಲ್ಮಾ-ಅಲ್- ಶಾಬ್ ಎಂಬ ಗ್ರಾಮಕ್ಕೆ ತೆರಳಿತ್ತು. ಈ ವೇಳೆ ನಡೆದ ಕ್ಷಿಪಣಿ ದಾಳಿ ನಡೆದಿದೆ.

ದಾಳಿಯಲ್ಲಿ ತನ್ನ ಸಂಸ್ಥೆಯ ಇನ್ನಿಬ್ಬರು ಪತ್ರಕರ್ತರು ಗಾಯಗೊಂಡಿರುವುದಾಗಿ ರಾಯಿಟರ್ಸ್ ಹೇಳಿದೆ. ಅಲ್- ಜಝೀರಾ ವಾಹಿನಿಯ ವರದಿಗಾರ ಮತ್ತು ವಿಡಿಯೊಗ್ರಾಫರ್ ಕೂಡ ಗಾಯಗೊಂಡಿದ್ದಾರೆ ಎಂದು ಅಲ್ ಜಝೀರಾ ಹೇಳಿದೆ. ಎಎಫ್‌ಪಿಯ ಇಬ್ಬರು ಪತ್ರಕರ್ತರು ಮೃತಪಟ್ಟಿರುವುದಾಗಿ ಸುದ್ದಿಸಂಸ್ಥೆ ತಿಳಿಸಿದೆ.

ಇಸ್ಸಾಂ ಅಂತ್ಯಕ್ರಿಯೆ: ಇಸ್ಸಾಂ ಅಬ್ದುಲ್ಲಾ ಅವರ ಅಂತಿಮ ಸಂಸ್ಕಾರವನ್ನು ದಕ್ಷಿಣ ಲೆಬನಾನ್‌ನ ಖಿಯಾಮ್ ಪಟ್ಟಣದಲ್ಲಿ ಶನಿವಾರ ನೆರವೇರಿಸಲಾಯಿತು.

ಅದಕ್ಕೂ ಮೊದಲು, ಅವರ ಮೃತದೇಹಕ್ಕೆ ಲೆಬನಾನ್ ಧ್ವಜ ಹೊದಿಸಿ, ಖಿಯಾಮ್ ಪಟ್ಟಣದಲ್ಲಿ ಮೆರವಣಿಗೆ ನಡೆಸಲಾಯಿತು. ನೂರಾರು ಜನರು ಇಸ್ಸಾಂ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಹತ್ತಕ್ಕೂ ಹೆಚ್ಚು ಪತ್ರಕರ್ತರು ಮತ್ತು ಲೆಬನಾನ್‌ನ ಜನಪ್ರತಿನಿಧಿಗಳು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ತೆಲಂಗಾಣ: ಕೆ. ಚಂದ್ರಶೇಖರ್ ರಾವ್ ನೇತೃತ್ವದ ಸರ್ಕಾರದ ವಿರುದ್ಧ ಪ್ರತಿಭಟನೆ

ಉದ್ಯೋಗಾಕಾಂಕ್ಷಿ ಆತ್ಮಹತ್ಯೆ: ಆಕ್ರೋಶ

ಹೈದರಾಬಾದ್ (ಪಿಟಿಐ): ‘ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುತ್ತಿದ್ದ 23 ವರ್ಷ ವಯಸ್ಸಿನ ಪ್ರವಲ್ಲಿಕಾ ಎಂಬ ಯುವತಿಯು ಇಲ್ಲಿಯ ಅಶೋಕನಗರದ ಹಾಸ್ಟೆಲ್‌ನಲ್ಲಿ ಶುಕ್ರವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ಶನಿವಾರ ಹೇಳಿದ್ದಾರೆ.

ತೆಲಂಗಾಣ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಮುಂದೂಡಿದ್ದೇ ಯುವತಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಎಂದು ದೂರಿರುವ ಉದ್ಯೋಗಾಕಾಂಕ್ಷಿಗಳು ಮತ್ತು ವಿರೋಧಪಕ್ಷಗಳು ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ನೇತೃತ್ವದ ತೆಲಂಗಾಣ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

‘ಆತ್ಮಹತ್ಯೆ ಕುರಿತ ಸುದ್ದಿ ಶುಕ್ರವಾರ ರಾತ್ರಿ ಬಹಿರಂಗವಾಗುತ್ತಿದ್ದಂತೆ ಭಾರಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಶೋಕನಗರದಲ್ಲಿ ನೆರೆದು ಬಿಆರ್‌ಎಸ್ ನೇತೃತ್ವದ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. ಯುವತಿಯ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸುವಾಗಲೂ ಪ್ರತಿಭಟನನಿರತ ವಿದ್ಯಾರ್ಥಿಗಳು ಪೊಲೀಸರನ್ನು ತಡೆಯಲು ಮುಂದಾದರು. ಪೊಲೀಸರು ವಿದ್ಯಾರ್ಥಿಗಳನ್ನು ಅಲ್ಲಿಂದ ಚದುರಿಸಲು ಯತ್ನಿಸಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆತ್ಮಹತ್ಯೆಗೆ ಶರಣಾದ ಯುವತಿ ವರಂಗಲ್ ಮೂಲದವರು. ಯುವತಿಯ ಕೋಣೆಯಲ್ಲಿದ್ದ ಮರಣ ಪತ್ರವನ್ನು ವಶಕ್ಕೆ ಪಡೆಯಲಾಗಿದೆ. ಹೆತ್ತವರಿಗಾಗಿ ಏನನ್ನೂ ಮಾಡಲು ಸಾಧ್ಯವಾಗಲಿಲ್ಲ ಎಂದು ಯುವತಿಯು ಪೋಷಕರಿಗೆ ಪತ್ರದ ಮೂಲಕ ಕ್ಷಮೆ ಯಾಚಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಯುವಜನರ ಕನಸುಗಳನ್ನು ಕೊಂದಿದೆ’

ನವದೆಹಲಿ: ‘ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್ ಸರ್ಕಾರವು ಯುವಜನರ ಕನಸುಗಳು ಮತ್ತು ಆಶೋತ್ತರಗಳನ್ನು ಕೊಂದಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ವಾಗ್ದಾಳಿ ನಡೆಸಿದ್ದಾರೆ.

ಕಳೆದ 10 ವರ್ಷಗಳಲ್ಲಿ ಬಿಜೆಪಿ ರಿಶ್ತೇದಾರ್ (ಸಂಬಂಧಿ) ಸಮಿತಿಯಾದ ಬಿಆರ್‌ಎಸ್ ಮತ್ತು ಬಿಜೆಪಿ ತಮ್ಮ ಅಸಮರ್ಥತೆಯಿಂದ ರಾಜ್ಯವನ್ನು ಹಾಳುಮಾಡಿವೆ. ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದರೆ, ಉದ್ಯೋಗ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಿದೆ. ಯುಪಿಎಸ್‌ಸಿ ಪರೀಕ್ಷೆ ಮಾದರಿಯಲ್ಲಿ ಟಿಎಸ್‌ಪಿಎಸ್‌ಪಿ ಪರೀಕ್ಷೆಯನ್ನು ನಡೆಸಿ, ಒಂದು ವರ್ಷದಲ್ಲಿ 2 ಲಕ್ಷ ಉದ್ಯೋಗಗಳನ್ನು ಭರ್ತಿ ಮಾಡುತ್ತದೆ ಎಂದಿದ್ದಾರೆ.

ಕಾಂಗ್ರೆಸ್‌ನ ಇತರ ನಾಯಕರೂ ಯುವತಿ ಆತ್ಮಹತ್ಯೆ ಘಟನೆಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ‘ರಾಜ್ಯದ ಲೋಕಸೇವಾ ಆಯೋಗದ ಪರೀಕ್ಷೆಯನ್ನು ಪದೇ ಪದೆ ಮುಂದೂಡಿದ್ದಕ್ಕೆ ಬೇಸತ್ತು ಯುವತಿ ಆತ್ಮಹತ್ಯೆ ಮಾಡಿಕೊಂಡ ವಿಷಯ ಕೇಳಿ ತೀವ್ರವಾಗಿ ನೋವುಂಟಾಗಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಆತ್ಮಹತ್ಯೆ ದುಃಖ ತರಿಸುವುದಿಲ್ಲವೇ’

‘ಉದ್ಯೋಗಾಕಾಂಕ್ಷಿಯೊಬ್ಬಳು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಅಂಥವರ ಕೂಗು ಕವಿತಾ ಅವರಿಗೆ ಕೇಳುವುದಿಲ್ಲವೇ’ ಎಂದು ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರು ಬಿಆರ್‌ಎಸ್‌ನ ನಾಯಕಿ ಕೆ. ಕವಿತಾ ರೆಡ್ಡಿ ಅವರನ್ನು ಎಕ್ಸ್‌ನಲ್ಲಿ ಪ್ರಶ್ನಿಸಿದ್ದಾರೆ.

‘ಯುವತಿಯ ಸಾವಿಗೆ ಸಂತಾಪ ಸೂಚಿಸುವುದನ್ನು ಬಿಟ್ಟು, ಸಾವನ್ನು ರಾಜಕೀಯಗೊಳಿಸಿರುವುದು ರೇವಂತ್ ಅವರು ಪಾಲಿಸುವ ನೀತಿಯೇ’ ಎಂದು ಕವಿತಾ ಪ್ರತಿಕ್ರಿಯಿಸಿದ್ದಾರೆ. ಗ್ರೂಪ್–2 ಸೇವಾ ಪರೀಕ್ಷೆಗಳನ್ನು ಮುಂದೂಡುವಂತೆ ಕಾಂಗ್ರೆಸ್ ಹಿರಿಯ ನಾಯಕ ಡಿ. ಶ್ರೀಧರ್ ಬಾಬು ಮತ್ತು ರೇವಂತ್ ಅವರು ಒತ್ತಾಯಿಸಿರಲಿಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ಶಿಕ್ಷಣ, ಧರ್ಮಶ್ರದ್ಧೆಯಿದ್ದರೆ ಒಳ್ಳೆಯವನು ಎನ್ನಲಾಗದು: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣವಿದೆ ಮತ್ತು ದೇವರಲ್ಲಿ ಭಕ್ತಿ ಇದೆ ಎಂಬ ತನ್ನದೇ ಅಭಿಪ್ರಾಯದ ಆಧಾರದಲ್ಲಿ ವ್ಯಕ್ತಿಯೊಬ್ಬ ಒಳ್ಳೆಯವನು ಎಂದು ನ್ಯಾಯಾಲಯವು ಘೋಷಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಿಳೆಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಆರೋಪ ಹೊತ್ತ ಹರ್ವಿಂದರ್ ಸಿಂಗ್ ಅಲಿಯಾಸ್ ಬಚ್ಚು ಎಂಬಾತನನ್ನು ಖುಲಾಸೆಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹಿಮಾಚಲ ಪ್ರದೇಶದ ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಆತ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದ್ರೇಶ್ ಹಾಗೂ ಜೆ.ಬಿ. ಪಾರ್ದೀವಾಲಾ ಅವರಿದ್ದ ವಿಭಾಗೀಯ ನ್ಯಾಯಪೀಠ ನಡೆಸಿತು.



‘ವ್ಯಕ್ತಿಯು ಶಿಕ್ಷಣ ಪಡೆದ ಮಾತ್ರಕ್ಕೆ ಅಥವಾ ದೇವರ ಮೇಲೆ ಭಕ್ತಿ ಹೊಂದಿದ್ದಾನೆ ಎಂಬ ಅಂಶವನ್ನು ಪರಿಗಣಿಸಿ ಆತನ ಚಾರಿತ್ರ್ಯವನ್ನು ನಿರ್ಣಯಿಸಲಾಗದು’ ಎಂದು ನ್ಯಾಯಪೀಠ ಹೇಳಿದೆ.

ಸಾಕ್ಷಿಯಾಗಿದ್ದ ವ್ಯಕ್ತಿಯು ಒಳ್ಳೆಯವನು ಮತ್ತು ಸುಶಿಕ್ಷಿತ ಎಂಬ ಕಾರಣ ಕೊಟ್ಟು ಸಾಕ್ಷ್ಯಕ್ಕೆ ಹೈಕೋರ್ಟ್ ಮಾನ್ಯತೆ ನೀಡಿತ್ತು. ಆದರೆ, ಸಾಕ್ಷಿಯು ಸುಶಿಕ್ಷಿತ ಮತ್ತು ಒಳ್ಳೆಯವನಾಗಿದ್ದರೂ ಆತನ ನಡವಳಿಕೆ ಶಂಕಾಸ್ಪದವಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವ್ಯಕ್ತಿಯು ನಡತೆಯನ್ನು ರೂಪಿಸಿಕೊಳ್ಳಬೇಕು ಮತ್ತು ಖ್ಯಾತಿಯನ್ನು ಗಳಿಸಿಕೊಳ್ಳಬೇಕು. ನಡತೆಯ ಕಾರಣಕ್ಕೆ ಖ್ಯಾತಿ ದೊರೆಯಬಹುದು. ಆದರೆ, ಈ ಎರಡೂ ಭಿನ್ನ ವಿಷಯಗಳು ಎಂದು ಪೀಠವು ಹೇಳಿದೆ.

ವ್ಯಕ್ತಿಯೊಬ್ಬನ ಪ್ರಸಿದ್ಧಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ಗ್ರಹಿಕೆಯು ತಪ್ಪಾಗಿದೆ. ವಿಚಾರಣಾ ನ್ಯಾಯಾಲಯದಲ್ಲಿ ಆತ ಮಂಡಿಸಿದ ಪುರಾವೆಯನ್ನೂ ಸಮರ್ಪಕವಾಗಿ ಮರು ಪರಿಶೀಲನೆ ನಡೆಸಿಲ್ಲ ಎಂದು ಹೇಳಿದ ನ್ಯಾಯಪೀಠವು, ಸೂಕ್ತ ಪುರಾವೆ ಒದಗಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿ ಹೈಕೋರ್ಟ್‌ನಿಂದ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಆಪಾದಿತನನ್ನು ಖುಲಾಸೆಗೊಳಿಸಿದೆ.

ವಿಜ್ಞಾನಿಗಳಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ್ ಸಲಹೆ

ಮೌಲ್ಯವರ್ಧನೆಗೊಳ್ಳುವ ರಾಗಿ ತಳಿ ಗುರುತಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರು ರಾಗಿಯನ್ನು ಬೆಳೆದರೆ ಸಾಲದು, ಅದನ್ನು ಬಳಸುವಂತಾಗಬೇಕು. ರಾಗಿಯ ಮೌಲ್ಯವರ್ಧನೆ ಮಾಡುವ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಬೇಕಿದೆ' ಎಂದು ಗಾಂಧಿ ಕೃಷಿ ವಿಶ್ವವಿದ್ಯಾಲಯದ(ಜಿಕೆವಿಕೆ) ಕುಲಪತಿ ಡಾ ಎಸ್‌.ವಿ. ಸುರೇಶ್ ಸಲಹೆ ನೀಡಿದರು.

ಐಸಿಎಆರ್, ಜಿಕೆವಿಕೆ, ಸಹಜ ಸಮೃದ್ಧ, ವಾಸನ್, ಆರ್‌ಆರ್‌ಎ ನೆಟ್‌ವರ್ಕ್ ಮತ್ತು ಕಾಪ್ಸ್ ಫಾರ್ ಎಚ್‌ಡಿ ಸಂಸ್ಥೆಗಳ ಸಹಯೋಗಲ್ಲಿ ವಿವಿಯಲ್ಲಿ ನಡೆದ 'ಕರ್ನಾಟಕದಲ್ಲಿ ರಾಗಿಯ ಸುಸ್ಥಿರ ಉತ್ಪಾದನಾ ಪದ್ಧತಿಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆಗೆ ಸೂಕ್ತವಾದ ರಾಗಿ ತಳಿಗಳನ್ನು ಗುರುತಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾರ್ಯವನ್ನು ವಿಜ್ಞಾನಿಗಳು ಕೈಗೆತ್ತಿಕೊಳ್ಳಬೇಕು' ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿ ಕೃಷಿ ಸಂಶೋಧನಾ ನಿರ್ದೇಶಕ ಡಾ.ವೆಂಕಟೇಶ್ 'ಬೆಂಗಳೂರು ಕೃಷಿ ವಿ.ವಿ ಇದುವರೆಗೂ 36 ರಾಗಿ ತಳಿಗಳನ್ನು ಬಿಡುಗಡೆ ಮಾಡಿದೆ. ಬದಲಾಗುತ್ತಿರುವ ವಾತಾವರಣಕ್ಕೆ ಅನುಗುಣವಾಗಿ ರಾಗಿ ಸಾಗುವಳಿ ಪದ್ದತಿಗಳನ್ನು ಅಳವಡಿಸಿಕೊಂಡು ಇಳುವರಿಯನ್ನು ಕಾಯ್ದುಕೊಳ್ಳಬೇಕಿದೆ' ಎಂದರು.

ಕೃಷಿ ವಿಜ್ಞಾನಿಗಳಾದ ಡಾ.ಪ್ರಕಾಶ್ ಕಮ್ಮರಡಿ ಮತ್ತು ಡಾ.ಎನ್. ದೇವಕುಮಾರ್ ಮಾತನಾಡಿ, 'ಸಾಂಪ್ರದಾಯಿಕ ರಾಗಿ ತಳಿಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಗುಳಿ ರಾಗಿ ಪದ್ಧತಿಯಂತಹ ರೈತ ಮೂಲದ ರಾಗಿಯ ಉತ್ಪಾದನಾ ಪದ್ದತಿಗಳ ಬಗ್ಗೆ ಸಂಶೋಧನೆ ಮತ್ತು ಪ್ರಚಾರ ಮಾಡುವ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ 22 ರಾಗಿ ತಳಿಗಳನ್ನು ಸಂರಕ್ಷಿಸಿರುವ ರಾಣೆಬೆನ್ನೂರು ತಾಲ್ಲೂಕಿನ ಇಟಗಿ ಗ್ರಾಮದ ರೇವಣಪ್ಪ ಪೂಜಾರ ಮತ್ತು ಸಮುದಾಯ ಕೃಷಿ ಮೂಲಕ 76 ರಾಗಿ ತಳಿಗಳನ್ನು ಬೆಳೆಸಿ ಗುಣಲಕ್ಷಣಗಳನ್ನು ದಾಖಲಿಸುತ್ತಿರುವ ಕುಂದಗೋಳ ತಾಲ್ಲೂಕಿನ ಮತಿಗಟ್ಟಿಯ ವಿನಾಯಕ ಮಹಿಳಾ ಸಂಘ ಮತ್ತು ಮಾದರಿ ರಾಗಿ ಕೃಷಿಕ ತಿಪಟೂರು ತಾಲ್ಲೂಕಿನ ಕರಿಕೆರೆ ರಮೇಶ್ ಅವರನ್ನು ಸನ್ಮಾನಿಸಲಾಯಿತು.

'ಮಳೆಯಾಶ್ರಯದಲ್ಲಿ ಸಿರಿಧಾನ್ಯ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು', 'ರಾಗಿ ಉತ್ಪಾದನಾ ತಾಂತ್ರಿಕತೆಗಳು' ಮತ್ತು ದೇಸಿ ರಾಗಿ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು

ಜಿಕೆವಿಕೆಯ ಅಖಿಲ ಭಾರತ ಸುಸಂಘಟಿತ ಸಿರಿಧಾನ್ಯ ಸಂಶೋಧನಾ ಪ್ರಾಯೋಜನೆ ಮುಖ್ಯಸ್ಥರಾದ ಡಾ.ಟಿ.ಇ. ನಾಗರಾಜ, ಹಿರಿಯ ವಿಜ್ಞಾನಿ ಡಾ.ಟಿ.ಎಸ್. ಸುಕನ್ಯ ಮತ್ತು ಸಹಜ ಸಮೃದ್ದದ ನಿರ್ದೇಶಕರಾದ ಜಿ.ಕೃಷ್ಣ ಪ್ರಸಾದ್ ಉಪಸ್ಥಿತರಿದ್ದರು.



ಕಾರ್ಯಾಗಾರದಲ್ಲಿ 'ದೇಸಿ ರಾಗಿ' ತಳಿಗಳ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು

ಮುಖ್ಯಾಂಶಗಳು

- 'ಬೆಂಗಳೂರು ಕೃಷಿ ವಿ.ವಿಯಿಂದ ಈವರೆಗೆ 36 ರಾಗಿ ತಳಿ ಬಿಡುಗಡೆ'
- ರಾಗಿ ತಳಿ ಸಂರಕ್ಷಿಸುತ್ತಿರುವ ಮೂವರಿಗೆ ಸನ್ಮಾನ

ಪಾಸ್ತಾ ಯಂತ್ರದಲ್ಲಿ ಚಿನ್ನ ಕಳ್ಳ ಸಾಗಣೆ

ದೇವನಹಳ್ಳಿ: ದುಬೈನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರೊಬ್ಬರು ಪಾಸ್ತಾ ತಯಾರಿಕೆ ಯಂತ್ರದಲ್ಲಿ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದನ್ನು ಶನಿವಾರ ಕಸ್ಟಮ್ ಅಧಿಕಾರಿಗಳು ಪತ್ತೆ ಹಚ್ಚಿ, ವಶಕ್ಕೆ ಪಡೆದಿದ್ದಾರೆ.

ಪಾಸ್ತಾ ತಯಾರಿಕೆ ಯಂತ್ರದಲ್ಲಿ ಚಿನ್ನದ ಸರಳು ಇಟ್ಟು ಕಳ್ಳ ಸಾಗಣೆ ಮಾಡುತ್ತಿರುವುದು ತನಿಖೆಯಿಂದ ತಿಳಿದು ಬಂದಿದೆ. ಪ್ರಯಾಣಿಕನನ್ನು ಬಂಧಿಸಲಾಗಿದೆ. ಒಟ್ಟು 598 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

ಕುವೆಂಪು ಈಗ ನಿಷ್ಠುರ ಭಾಷಣ ಮಾಡಿದ್ದರೆ ಪೆಟ್ಟು ಬೀಳುತ್ತಿತ್ತು

ಬರಹದ ಮೊನಚು ಮೊಟಕಾಗಲು ರಾಜಕಾರಣ ಕಾರಣ: ರಹಮತ್

ಬೆಂಗಳೂರು: 'ನಮ್ಮ ಕಾಲದ ರಾಜಕಾರಣದ ಒತ್ತಡವು ಬರವಣಿಗೆಯ ಮೊನಚನ್ನು ಕಡಿಮೆ ಮಾಡಿದೆ' ಎಂದು ಸಾಹಿತಿ ರಹಮತ್ ತರೀಕೆರೆ ವಿಷಾದ ವ್ಯಕ್ತಪಡಿಸಿದರು.

'ಆಕೃತಿ ಪುಸ್ತಕ' ಆಯೋಜಿಸಿದ್ದ 'ಬಾಳ ಚಿತ್ರಗಳ ಕುಲುಮೆ ಮತ್ತು ಇತರ ಪುಸ್ತಕಗಳ ಬಗ್ಗೆ' ಶನಿವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.


'ವಿಚಾರ ಕ್ರಾಂತಿಗೆ ಆಹ್ವಾನದಂತಹ ನಿಷ್ಠುರ ಭಾಷಣವನ್ನು ಕುವೆಂಪು ಅವರು ಟಿ.ವಿಗಳಿಲ್ಲದ ಕಾಲದಲ್ಲಿ ಮಾಡಿದ್ದರು. ಈ ಕಾಲದಲ್ಲಿ ಅಂತಹ ಭಾಷಣ ಮಾಡಿದ್ದರೆ ಅವರಿಗೂ ಪೆಟ್ಟು ಬೀಳುತ್ತಿದ್ದವು. 1992ರ ಬಳಿಕ ನೇರ ಮಾತು ಮತ್ತು ಮೊಣಚಿನ ಬರಹಗಳು ಕಡಿಮೆ. ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್ ಹತ್ಯೆಯ ಬಳಿಕ ಬಹುತೇಕರು ಸುರಕ್ಷತೆಯ ಪೊರೆಯೊಳಗೆ ಸೇರಿಕೊಂಡರು. ನನ್ನ ಬರಹದ ಮೇಲೂ ಈ ಪ್ರಭಾವ ಆಗಿರುತ್ತದೆ' ಎಂದು ವಿಶ್ಲೇಷಿಸಿದರು.

'ಮುಸ್ಲಿಂ ಲೇಖಕರ ಸಂಘ ಹುಟ್ಟಿಕೊಂಡಾಗ ನಾನು ಟೀಕಿಸಿದ್ದೆ. ಕುವೆಂಪು ಅವರ ಬರಹಗಳನ್ನು ಕಟು ವಿಮರ್ಶೆಗೆ ಒಳಪಡಿಸಿದ್ದೆ. ಆದರೆ, ಈ ಕಾಲದ ವಿಷ ಪಸರಿಸುವ ರಾಜಕಾರಣಕ್ಕೆ ಕುವೆಂಪು ಅವರೇ ಔಷಧವಾಗಬೇಕಿದೆ. ತನ್ನ ಧರ್ಮವನ್ನು ವಿಮರ್ಶಿಸಲು ಹೊರಟರೆ ಅದು ಇನ್ನೊಬ್ಬರಿಗೆ ಆಯುಧವಾಗುತ್ತದೆ ಎಂದಣಿಸಿದಾಗ ಬರಹಗಾರ ಹಿಂಜರಿಯುತ್ತಾನೆ' ಎಂದು ಹೇಳಿದರು.

'ನಮ್ಮ ಬದುಕು, ಆಹಾರ, ಉಡುಗೆಯನ್ನು ಇನ್ನ್ಯಾರೋ ನಿಯಂತ್ರಿಸುತ್ತಿದ್ದಾರೆ. ಬರವಣಿಗೆ, ಮಾತುಗಳಿಗೆ ಕಡಿವಾಣಗಳು ಬಿದ್ದಿವೆ. ಒಡೆದು ಹೋದ ಸಮಾಜದಲ್ಲಿ ಆತ್ಯಂತಿಕ ಸೌಹಾರ್ದದ ವಾತಾವರಣ ಉಂಟಾಗುವುದು ಸುಲಭವಲ್ಲ. ಮುಕ್ತವಾಗಿ ಬರೆಯುವ, ಟೀಕಿಸುವ, ವಿಮರ್ಶಿಸುವ, ಮಾತನಾಡುವ ಸ್ವಾತಂತ್ರ್ಯದ ದಿನಗಳು ಮತ್ತೆ ಬರಬೇಕು ಎಂದು ಆಶಿಸಿದರು.

'ಆತ್ಮಕತೆ ಇತಿಹಾಸದ ದಾಖಲೆಯಾಗಬಾರದು ಎಂಬ ಉದ್ದೇಶವನ್ನು ಇಟ್ಟುಕೊಂಡೇ ಬೇರೆ ರೀತಿಯ ಪ್ರಯೋಗ ಮಾಡಿದ್ದೇನೆ. ಕ್ರಮಬದ್ಧವಾಗಿರದೇ ಲಲಿತ ಪ್ರಬಂಧದ ಶೈಲಿಯಲ್ಲಿ ಪ್ರೀತಿ ಪಾತ್ರರಿಗೆ ಕೀಟಲೆ ಮಾಡುವ ದಾಟಿಯಲ್ಲಿ ಬರೆದಿದ್ದೇನೆ. ಈ ಪ್ರಯೋಗ ಯಶಸ್ವಿಯಾಗುತ್ತದೆಯೇ ಇಲ್ಲವೇ ಎಂಬುದು ಗೊತ್ತಿಲ್ಲ' ಎಂದು ತಿಳಿಸಿದರು.

'ತಂದೆ ಕುಲುಮೆ ಮಾಡಿಕೊಂಡಿದ್ದರು. ಅದರಿಂದ ಕುಟುಂಬ ಬದುಕುತ್ತಿತ್ತು. ಪ್ರಜ್ಞಾಪೂರ್ವಕವಾಗಿ ಜಾತ್ಯತೀತವಾಗಿತ್ತು ಎಂದು ಹೇಳಲಾರೆ. ಆದರೆ, ಎಲ್ಲ ಧರ್ಮ, ಎಲ್ಲ ಭಾಷೆ ಜನರೊಂದಿಗೆ ಸಹಜವಾಗಿ ವ್ಯವಹರಿಸುವ ವಾತಾವರಣ ಇತ್ತು. ಅದೇ ನಮ್ಮನ್ನು ಬೆಳೆಸಿತು' ಎಂದರು.



ಬೋರ್ಡ್ ಪರೀಕ್ಷೆ: ರುಪ್ಸ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪಠ್ಯಕ್ರಮದ 5, 8, 9 ಹಾಗೂ 11ನೇ ತರಗತಿ ವಿದ್ಯಾರ್ಥಿಗಳಿಗೆ ನಿಗದಿ ಮಾಡಿರುವ 'ಬೋರ್ಡ್ ಪರೀಕ್ಷೆ'ಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ಆಕ್ಷೇಪ ತೀವ್ರ ವ್ಯಕ್ತಪಡಿಸಿದೆ.

ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಗೆ ವಾರ್ಷಿಕ ಪರೀಕ್ಷೆಗಳನ್ನು ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅವಕಾಶ ನೀಡಿದೆ.

ಈ ನಿಯಮ ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ ಶಾಲೆಗಳಿಗೆ ಅನ್ವಯಿಸುವುದಿಲ್ಲ. ಶಿಕ್ಷಣ ಇಲಾಖೆಯ ಈ ನಿರ್ಧಾರ ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ಉಲ್ಲಂಘನೆ. ಮಕ್ಕಳಲ್ಲಿ ಪರೀಕ್ಷಾ ಭಯದ ವಾತಾವರಣ ಮೂಡಿಸಿದೆ ಎಂದು ರುಪ್ಸ-ಕರ್ನಾಟಕದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ದೂರಿದ್ದಾರೆ.

ಕರ್ನಾಟಕ ಶಿಕ್ಷಣ ಕಾಯಿದೆಯ ನಿಯಮಗಳಂತೆ ಕಲಿಕೆಯ ಪ್ರಗತಿ ಪರಿಶೀಲಿಸಲು 2012ರಿಂದ ನಿರಂತರ ಮೌಲ್ಯಾಂಕನ ಪದ್ದತಿ ಜಾರಿಗೊಳಿಸಲಾಗಿದೆ. ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಅತ್ಯಂತ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗುತ್ತಿದೆ. ಮತ್ತೆ ಮಕ್ಕಳಿಗೆ ಪರೀಕ್ಷಾ ಭಯ ತುಂಬಲಾಗಿದೆ. ಕೇಂದ್ರ ಪಠ್ಯಕ್ರಮದ ಶಾಲೆಗಳಲ್ಲಿ 10ನೇ ತರಗತಿಯವರೆಗೆ ಪರೀಕ್ಷೆ ಇರುವುದಿಲ್ಲ ಎಂಬ ಕಾರಣಕ್ಕೆ ಸಾವಿರಾರು ಮಕ್ಕಳು ರಾಜ್ಯ ಪಠ್ಯಕ್ರಮದ ಶಾಲೆ ತೊರೆಯುತ್ತಿದ್ದಾರೆ ಎಂದಿದ್ದಾರೆ.

ಬಾಹ್ಯಾಕಾಶ ತಂತ್ರಜ್ಞಾನ ಒಳಿತಿಗೆ ಬಳಕೆ ಆಗಲಿ

ದೊಡ್ಡಬಳ್ಳಾಪುರ: 'ಚಂದ್ರಯಾನ-2ರ ಸೋಲು ಕಲಿಸಿದ ಪಾಠದಿಂದ ನಾವು ಹೆಚ್ಚಿನ ಸಂಶೋಧನೆ, ಪರಿ ಶ್ರಮದ ಮೂಲಕ ಚಂದ್ರಯಾನ-3 ಯಶಸ್ವಿಯಾಗಲು ಸಹಕಾರಿಯಾಗಿದೆ' ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಗೌರವಾಧ್ಯಕ್ಷ ಹಾಗೂ ಇಸ್ರೊ ಮಾಜಿ ಅಧ್ಯಕ್ಷ ಡಾ. ಎ. ಎಸ್. ಕಿರಣ್ ಕುಮಾರ್ ಹೇಳಿದರು.

ನಗರದ ಬೆಸೆಂಟ್ ಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನಿಂದ ಶನಿವಾರ ಪ್ರಾರಂಭವಾದ ಎರಡು ದಿನಗಳ ರಾಜ್ಯಮಟ್ಟದ ನಾಯಕತ್ವ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಭೂಮಿಯ ಹೊರಗಿನ ಇತರ ಗ್ರಹಗಳ ಬಗ್ಗೆ ನಮ್ಮಲ್ಲಿ ಇರುವ ಕುತೂಹಲಗಳನ್ನು ಚಂದ್ರಯಾನ-3 ತಣಿಸಲಿದೆ. ವಿಶ್ವದ ಇತರ ದೇಶಗಳು ಬಾಹ್ಯಾಕಾಶ ಸಂಶೋಧನೆಗಳನ್ನು ಮಿಲಿಟರಿ ಬಲವೃದ್ಧಿಗಾಗಿ ಬಳಸಿಕೊಳ್ಳುತ್ತಾರೆ. ಆದರೆ, ಭಾರತ ದೂರಸಂಪರ್ಕ ಸೇರಿದಂತೆ ಮಾನವನ ಪ್ರಗತಿಗಾಗಿ ಬಾಹ್ಯಾಕಾಶ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುತ್ತಿದೆ ಎಂದರು.

ವಾರ್ಷಿಕ ₹ 6 ಸಾವಿರ ಕೋಟಿ ವಹಿವಾಟು ● ತಯಾರಕರಿಗೆ ಲಾಭ; ಕಾರ್ಮಿಕರಿಗೆ ನೋವು

ಶಿವಕಾಶಿ ಪಟಾಕಿ: ಸಾವಿನೊಂದಿಗೆ ಸೆಣಸು


ಶಿವಕಾಶಿಯಲ್ಲಿ ಪಟಾಕಿ ತಯಾರಿಸಿ ಬಿಸಿಲಿನಲ್ಲಿ ಒಣಗಿಸುತ್ತಿರುವ ದೃಶ್ಯ.

● ಆದಿತ್ಯ ಕೆ.ಎ.

ಬೆಂಗಳೂರು: ಕಪ್ಪಿಟ್ಟ ಕೈಗಳು, ಬಾಡಿದ ಮುಖ, ಅಪಾಯಕಾರಿ ರಾಸಾಯನಿಕದ ಗಾಳಿ ಸೇವಿಸಿ ನಿತ್ರಾಣಗೊಂಡ ದೇಹ, ದೂಳು ಮಿಶ್ರಿತ ವಾತಾವರಣದಿಂದ ಬಾಧಿಸುತ್ತಿರುವ ಮಾರಣಾಂತಿಕ ಕಾಯಿಲೆಗಳು...

ಇದು ದೇಶದಲ್ಲಿ ಅತೀ ಹೆಚ್ಚು ಪಟಾಕಿ ತಯಾರಿಸುವ ಪ್ರಮುಖ ತಾಣವಾದ ತಮಿಳುನಾಡಿನ ಶಿವಕಾಶಿಯಲ್ಲಿ ಸಾವಿರಾರು ಕಾರ್ಮಿಕರು ಎದುರಿಸುತ್ತಿರುವ ಯಾತನೆ.

ಹಸಿವು, ನಿರುದ್ಯೋಗ, ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ, ಬಡತನ ಸ್ಥಳೀಯ ಜನರನ್ನು ಅತ್ಯಂತ ಅಪಾಯಕಾರಿ ಕೆಲಸಕ್ಕೆ ದೂಡಿದೆ. ಪಟಾಕಿ ಉದ್ಯಮದಲ್ಲಿ ದುಡಿಯುತ್ತಿರುವ ಕಾರ್ಮಿಕರ ಇಡೀ ಬದುಕು ಪಟಾಕಿ ಕುಲುಮೆಯಲ್ಲಿ ಬೆಂದುಹೋಗುತ್ತಿದೆ. ಪಟಾಕಿ ತಯಾರಿಕೆ ಘಟಕದ ನೂರಾರು ಮಾಲೀಕರು 'ಬೆಳಕಿನ ಹಬ್ಬ'ದಲ್ಲಿ ಕೈತುಂಬ ಕಾಸು ಸಂಪಾದಿಸಿದರೆ, ಕಾರ್ಮಿಕರು ಸಾವಿನ ಜತೆಗೆ ನಿತ್ಯ ಸೆಣಸಾಡುತ್ತಿದ್ದಾರೆ.

ಬೆಂಗಳೂರಿನಿಂದ ಶಿವಕಾಶಿ 500 ಕಿ.ಮೀ ದೂರದಲ್ಲಿದೆ. ಸಾವಿರಾರು ಪಟಾಕಿ ತಯಾರಿಕೆಯ ಪುಟ್ಟ ಪುಟ್ಟ ಘಟಕಗಳು ಒಂದೇ ಸ್ಥಳದಲ್ಲಿ ಹಬ್ಬಿಕೊಂಡಿವೆ. ವಾರ್ಷಿಕವಾಗಿ ₹ 6 ಸಾವಿರ ಕೋಟಿಯಷ್ಟು ವಹಿವಾಟು ನಡೆಯುತ್ತಿದೆ ಎಂದೇ ಅಂದಾಜಿಸಲಾಗಿದೆ. ಪಟಾಕಿ ತಯಾರಿಕೆ ದೊಡ್ಡ ಉದ್ಯಮವಾಗಿ ಬೆಳೆದಿದ್ದರೂ ಕಾರ್ಮಿಕರು ಅಸಂಘಟಿತ ವಲಯದಲ್ಲೇ ನರಳುತ್ತಿದ್ದಾರೆ. ಕಾರ್ಮಿಕರಿಗೆ ಹೇಳಿಕೊಳ್ಳುವ ಸೌಲಭ್ಯಗಳು ಇಲ್ಲ.

ಸವಲತ್ತು ಇಲ್ಲವಾದರೂ ಆಯುಧ ಪೂಜೆ, ವಿಜಯದಶಮಿ, ದೀಪಾವಳಿ, ಲೋಕಸಭೆ–ವಿಧಾನಸಭೆಗೆ ಚುನಾವಣೆ ಘೋಷಣೆಯಾದ ಸಂದರ್ಭಗಳಲ್ಲಿ ಕಾರ್ಮಿಕರಿಗೆ ಕೈತುಂಬ ಕೆಲಸ ಲಭಿಸುತ್ತದೆ. ಆಗ ವಹಿವಾಟು ಹೆಚ್ಚಾಗುತ್ತದೆ. ಆದರೆ, ಕಾರ್ಮಿಕರ ಸುರಕ್ಷತೆ ಎಂಬುದು ಮರೀಚಿಕೆಯಾಗಿದೆ. ಅವರಿಗೆ ಭವಿಷ್ಯ ನಿಧಿ ಸೌಲಭ್ಯ ಸಹ ಇಲ್ಲ. ನಿತ್ಯದ ಕೂಲಿ ಅಷ್ಟೆ. ಕಾರ್ಮಿಕರ ಭವಿಷ್ಯ ಅತಂತ್ರವಾಗಿದೆ ಎಂದು ಶಿವಕಾಶಿಯಲ್ಲಿ ಪಟಾಕಿ ಖರೀದಿಸುವ ರಾಜ್ಯದ ವ್ಯಾಪಾರಸ್ಥರು ಹೇಳುತ್ತಾರೆ.

ಶಿವಕಾಶಿಯಲ್ಲಿ ಕಾರ್ಮಿಕರಿಗೆ ತಮ್ಮ ಕೆಲಸವೇ ಜೀವಕ್ಕೆ ಆಪತ್ತು ತರುತ್ತಿದೆ. ದೇಹ ನಿಧಾನವಾಗಿ ಸುಡುತ್ತಿದ್ದರೂ, ಅದರ ಅರಿವಿಲ್ಲದೆ ಕಾರ್ಮಿಕರು ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಕೆಲವೊಮ್ಮೆ ಸಂಭವಿಸುವ ದುರಂತದಿಂದ ಬೆಂಕಿಯ ಕೆನ್ನಾಲಿಗೆಗೆ ಕಾರ್ಮಿಕರು ಸಿಲುಕಿ ಬದುಕನ್ನೇ ಮುಗಿಸುತ್ತಿದ್ದಾರೆ ಎಂದು ಶಿವಕಾಶಿ ಘಟಕವೊಂದರ ಪಟಾಕಿ ಖರೀದಿದಾರರು ಹೇಳುತ್ತಾರೆ.

'ದೀಪಾವಳಿ ಹಬ್ಬದ ವೇಳೆ ತಾತ್ಕಾಲಿಕ ಪರವಾನಗಿ ಪಡೆದು ಮಾರಾಟ ಮಾಡುತ್ತೇವೆ. ಶಿವಕಾಶಿಯಿಂದ ತಂದ ಪಟಾಕಿಗಳನ್ನು ಮಳಿಗೆಯಲ್ಲಿ ಜೋಡಿಸಿ ಗ್ರಾಹಕರನ್ನು ಆಕರ್ಷಿಸುತ್ತೇವೆ. ಸಿಡಿಮದ್ದುಗಳು ಭಾರಿ ಶಬ್ದ, ಬೆಳಕು ಹೊಮ್ಮಿಸುತ್ತ ಸಂಭ್ರಮ ತರುತ್ತವೆ. ಆದರೆ, ಕಾರ್ಮಿಕರ ಪಾಲಿಗೆ ಕತ್ತಲು ಕವಿಯುವಂತೆ ಮಾಡುತ್ತಿವೆ' ಎಂದು ಅವರೂ ಹೇಳುತ್ತಾರೆ.

ಅತ್ತಿಬೆಲೆ ಪಟಾಕಿ ದುರಂತವಾದ ಎರಡೇ ದಿನವೇ ಶಿವಕಾಶಿ ಬಳಿಯ ವಿರಗಲೂರಿನಲ್ಲಿ ನಡೆದ ಪಟಾಕಿ ದುರಂತದಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಪ್ರತಿವರ್ಷ ತಯಾರಿಕೆ ಘಟಕಗಳಲ್ಲಿ ಅಲ್ಲದೇ ಗೋದಾಮು, ಮಾರಾಟದ ಸ್ಥಳ, ಸಾಗಣೆ ವೇಳೆ ಅವಘಡಗಳು ಸಂಭವಿಸುತ್ತಿವೆ. 2012ರ ಸೆಪ್ಟೆಂಬರ್‌ನಲ್ಲಿ ನಡೆದ ಅಗ್ನಿ ದುರಂತದಲ್ಲಿ 39 ಕಾರ್ಮಿಕರು ಸುಟ್ಟು ಕರಕಲಾಗಿದ್ದರು. 2022ರಲ್ಲೂ ಶಿವಕಾಶಿಯ ಪುದುಪಟ್ಟಿ ಎಂಬಲ್ಲಿ ಸಂಭವಿಸಿದ ದುರಂತದಲ್ಲಿ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದರು. ಶಿವಕಾಶಿ ಸುತ್ತಮುತ್ತಲಿನ ಪಟಾಕಿ ತಯಾರಿಕೆ ಘಟಕಗಳಲ್ಲಿ ಪ್ರಾಣ ಕಳೆದುಕೊಳ್ಳುವ ಕಾರ್ಮಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಯಾವುದೇ ಸುರಕ್ಷತಾ ನಿಯಮ ಪಾಲಿಸದಿರುವುದಕ್ಕೆ ಸಾಕ್ಷಿಯಾಗಿದೆ.

ಅಧಿಕ ಉಷ್ಣಾಂಶವೇ ತಯಾರಿಕೆಗೆ ವರದಾನ: ಪಟಾಕಿ ತಯಾರಿಕೆಗೆ ಬಿಸಿಲು ವಾತಾವರಣ ಇರಬೇಕು. ಹೀಗಾಗಿ, ಶಿವಕಾಶಿ ಸೂಕ್ತ ಸ್ಥಳ ಎನಿಸಿದೆ. ಅಲ್ಲಿ ಯಾವಾಗಲೂ ಅಧಿಕ ಉಷ್ಣಾಂಶವೇ ದಾಖಲಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಆ ರೀತಿಯ ವಾತಾವರಣ ಇಲ್ಲ. ಹೀಗಾಗಿ, ತಮಿಳುನಾಡಿನ ಮಧುರೈ ಹಾಗೂ ವಿರುಧನಗರ ಜಿಲ್ಲೆಗಳಲ್ಲಿ ಅಂದಾಜು 1,500 ಕಾರ್ಖಾನೆಗಳಿವೆ. ಈ ಎರಡು ಜಿಲ್ಲೆಗಳ ಬಹುತೇಕ ಮನೆಗಳಲ್ಲೂ ಪಟಾಕಿ ತಯಾರಿಸಲಾಗುತ್ತಿದೆ. ಮನೆ ಎದುರು ಸಿಡಿಮದ್ದು ಒಣಗಿಸಲು ಹಾಕಿರುವ ದೃಶ್ಯ ಸಾಮಾನ್ಯವಾಗಿ ಕಾಣಿಸುತ್ತದೆ. ಈ ಸ್ಥಳದಲ್ಲಿ ಪಟಾಕಿ ತಯಾರಿಕೆ ಇನ್ನೂ ಯಾಂತ್ರೀಕರಣಗೊಂಡಿಲ್ಲ. ಪುಟ್ಟ ಕೊಠಡಿಗಳಲ್ಲಿ ಕಾರ್ಮಿಕರು ಕೈಯಿಂದಲೇ ಪಟಾಕಿ ತಯಾರಿಸುತ್ತಿದ್ದಾರೆ. ಕೈಗವಸು ಬಳಸದೇ ಅಪಾಯಕಾರಿ ರಾಸಾಯನಿಕ ಮಿಶ್ರಣ ಮಾಡುತ್ತಾರೆ. ಸ್ಫೋಟಕಗಳನ್ನೂ ತುಂಬುತ್ತಾರೆ. 'ಇದು ಅನಾಹುತ ತರುತ್ತಿದೆ' ಎಂದು ಶಿವಕಾಶಿಯಿಂದ ಪಟಾಕಿ ಖರೀದಿಸುವ ವ್ಯಾಪಾರಿಯೊಬ್ಬರು ಹೇಳುತ್ತಾರೆ.

ಮತ್ತೆ ಉದ್ಯಮ ಚೇತರಿಕೆ: ಹಸಿರು ಪಟಾಕಿ ಬಳಕೆಗೆ ಮಾತ್ರ ಈ ಹಿಂದೆ ಸುಪ್ರೀಂಕೋರ್ಟ್ ಅವಕಾಶ ನೀಡಿ ಆದೇಶಿಸಿತ್ತು. ಅದಾದ ಮೇಲೆ ಮಾಲಿನ್ಯಕಾರಕ ಹೊಗೆ ಸೂಸುವ ಪಟಾಕಿ ತಯಾರಿಕೆ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು. ಕೋವಿಡ್ ಸಾಂಕ್ರಾಮಿಕದ ವೇಳೆ ಶಿವಕಾಶಿಯಲ್ಲಿ ಬಹುತೇಕ ಕಾರ್ಖಾನೆಗಳು ಬಾಗಿಲು ಮುಚ್ಚಿದ್ದವು. ಸಾವಿರಾರು ಕಾರ್ಮಿಕರು ಪರ್ಯಾಯ ಕೆಲಸಗಳತ್ತ ಹೊರಳಿದ್ದರು. ಈಗ ಮತ್ತೆ ಪಟಾಕಿ ಉದ್ಯಮ ಚೇತರಿಸಿಕೊಂಡಿದೆ. ಕಾರ್ಮಿಕರು ಮತ್ತೆ ಇದೇ ಕೆಲಸದತ್ತ ಮರಳಿದ್ದಾರೆ.

ಈಗ ಹಲವು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದ್ದು ಉದ್ಯಮಕ್ಕೆ ಪೂರಕ ಎನಿಸಿದೆ. ಎಲ್ಲ ಮಾದರಿ ಸಿಡಿಮದ್ದುಗಳು ತಯಾರಿಕೆ ದುಪ್ಪಟ್ಟು ಪ್ರಮಾಣದಲ್ಲೇ ನಡೆಯುತ್ತಿದೆ. ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಸ್ಥೆಯು ಸುರಕ್ಷತೆ ನಿಯಮ ಅಳವಡಿಸದಿದ್ದರೂ ಅನುಮತಿ ನೀಡುತ್ತಿದೆ ಎಂದು ಹೆಸರು ಹೇಳಲು ಬಯಸದ ಮಾರಾಟಗಾರರು ಆಪಾದಿಸುತ್ತಾರೆ.

ಗಡಿಯಲ್ಲಿ ಅಕ್ರಮ ಸಾಗಣೆ: ಕಣ್ಮುಚ್ಚಿ ಕುಳಿತ ಅಧಿಕಾರಿಗಳು

ಬೆಂಗಳೂರು: ತಮಿಳುನಾಡಿನಿಂದ ಕರ್ನಾಟಕಕ್ಕೆ ರಾಷ್ಟ್ರೀಯ ಹೆದ್ದಾರಿ ಮೂಲಕವೇ ಅಕ್ರಮವಾಗಿ ಪಟಾಕಿ ಸಾಗಣೆ ಆಗುತ್ತಿದ್ದು, ಭದ್ರತಾ ವೈಫಲ್ಯ ಎದ್ದು ಕಾಣುತ್ತಿದೆ.

ತಮಿಳುನಾಡಿನ ವಿರುಧನಗರ ಜಿಲ್ಲೆಯ ಶಿವಕಾಶಿಯಲ್ಲಿ ಅತೀ ಹೆಚ್ಚು ತರಹೇವಾರಿ ಪಟಾಕಿಗಳನ್ನು ದೊಡ್ಡ ಗಾತ್ರದ ಬಾಕ್ಸ್‌ಗಳಲ್ಲಿ ತುಂಬಿ, ಕಂಟೇನರ್ ಮೂಲಕ ಕರ್ನಾಟಕಕ್ಕೆ ರವಾನಿಸಲಾಗುತ್ತದೆ. ಈ ಲಾರಿಗಳು ರಾಜಾರೋಷವಾಗಿ ಕರ್ನಾಟಕ ಪ್ರವೇಶಿಸುತ್ತಿದ್ದು, ಗಡಿಯ ಭದ್ರತೆ ಜವಾಬ್ದಾರಿ ವಹಿಸಿಕೊಂಡಿರುವ ಪೊಲೀಸರು ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಅಧಿಕಾರಿಗಳ ಕರ್ತವ್ಯಲೋಪ ಹಾಗೂ ಕೆಲವರ 'ಲಂಚ'ದ ಆಸೆಯಿಂದ, ಅನಧಿಕೃತವಾಗಿ ಪಟಾಕಿಗಳು ರಾಜ್ಯಕ್ಕೆ ಸರಬರಾಜು ಆಗುತ್ತಿದೆ. ಅತ್ತಿಬೆಲೆಯ ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆಯಲ್ಲಿ ಸಂಭವಿಸಿದ್ದ ದುರಂತವೇ ಇದಕ್ಕೆ ಸಾಕ್ಷಿ ಎಂದು ಅತ್ತಿಬೆಲೆಯ ನಿವಾಸಿ ಎಂ. ರಘುವೀರ್ ಬೇಸರ ವ್ಯಕ್ತಪಡಿಸಿದರು

'ತಮಿಳುನಾಡಿನಿಂದ ಹೊಸೂರು ಮಾರ್ಗವಾಗಿ ನಿತ್ಯವೂ ಸಾವಿರಾರು ವಾಹನಗಳು ರಾಜ್ಯಕ್ಕೆ ಬರುತ್ತದೆ. ತಪಾಸಣೆಗೆಂದು ಗಡಿಯಲ್ಲಿ ಸೂಕ್ತ ವ್ಯವಸ್ಥೆ ಇಲ್ಲ. ಸ್ಥಳೀಯ ಪೊಲೀಸರು ಅಥವಾ ಆರ್‌ಟಿಒ ಅಧಿಕಾರಿಗಳು ಮಾತ್ರ ಆಗಾಗ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಾರೆ. ಅದು ಸಹ ನೆಪಕ್ಕಷ್ಟೇ. ಅಧಿಕಾರಿಗಳ ಕರ್ತವ್ಯಲೋಪ ಹಾಗೂ ಕೆಲ ಅಧಿಕಾರಿಗಳ 'ಲಂಚಾವತಾರ'ದಿಂದ ಗಡಿಯಲ್ಲಿ ಸೂಕ್ತ ರೀತಿಯಲ್ಲಿ ತಪಾಸಣೆ ಆಗುತ್ತಿಲ್ಲ' ಎಂದರು.

ಗಡಿಯಲ್ಲೇ ಅಕ್ರಮ ದಾಸ್ತಾನು: ತಮಿಳುನಾಡು ಗಡಿರೇಖೆಯಿಂದ (ಚೆನ್ನೈ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ) ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ 4 ಕಿ.ಮೀ ದೂರದಲ್ಲಿ ಕರ್ನಾಟಕ ಆರ್‌ಟಿಒ ಚೆಕ್‌ಪೋಸ್ಟ್ ಇದೆ. 3 ಕಿ.ಮೀ ದೂರದಲ್ಲಿ ಅತ್ತಿಬೆಲೆ ಪೊಲೀಸ್ ಠಾಣೆಯಿದೆ. ಆದರೆ, ಗಡಿ ರೇಖೆ ಬಳಿ ಯಾವುದೇ ಚೆಕ್‌ಪೋಸ್ಟ್ ಇಲ್ಲ.

ಗಡಿರೇಖೆ ಬಳಿ ಚೆಕ್‌ಪೋಸ್ಟ್ ಇಲ್ಲದಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಪಟಾಕಿ ವ್ಯಾಪಾರಿಗಳು, ಆರ್‌ಟಿಒ ಚೆಕ್‌ಪೋಸ್ಟ್ ಹಾಗೂ ಅತ್ತಿಬೆಲೆ ಪೊಲೀಸ್ ಠಾಣೆಯಿಂದ ದೂರವಿರುವ ಗಡಿಭಾಗದಲ್ಲಿ ಮಳಿಗೆ ಹಾಗೂ ಗೋದಾಮುಗಳನ್ನು ನಿರ್ಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ.

'ಯಾವ ಕಂಟೇನರ್‌ನಲ್ಲಿ ಪಟಾಕಿ ಬಂತು? ಎಷ್ಟು ಬಂತು? ಎಲ್ಲಿಂದ ಎಲ್ಲಿಗೆ ಸಾಗಿಸಲಾಗುತ್ತಿದೆ ? ಎಂಬಿತ್ಯಾದಿ ಮಾಹಿತಿಯನ್ನು ಯಾರೊಬ್ಬರೂ ಕೇಳುವುದಿಲ್ಲ. ಕೆಲ ಆರ್‌ಟಿಒ ಹಾಗೂ ಪೊಲೀಸ್ ಸಿಬ್ಬಂದಿ, ಪಟಾಕಿ ವ್ಯಾಪಾರಿಗಳ ಮಾಹಿತಿದಾರರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕೈಬಿಸಿ ಮಾಡಿದರೆ, ಅಕ್ರಮ ಸಾಗಣೆ ನಿತ್ಯವೂ ಸುಲಭ' ಎಂದು ಸ್ಥಳೀಯ ನಿವಾಸಿ ರಮೇಶ್ ಆರೋಪಿಸಿದರು. 'ತಮಿಳುನಾಡಿ ಗಡಿರೇಖೆಯಲ್ಲಿ ಚೆಕ್‌ಪೋಸ್ಟ್ ನಿರ್ಮಿಸಬೇಕು. ಪಟಾಕಿ ಸೇರಿದಂತೆ ಎಲ್ಲ ಬಗೆಯ ವಸ್ತುಗಳ ತಪಾಸಣೆಗೆ ಕ್ರಮ ಕೈಗೊಳ್ಳಬೇಕು. ಗಡಿಭಾಗದಲ್ಲಿ ತಲೆಎತ್ತಿರುವ ಪಟಾಕಿ ಅಕ್ರಮ ಮಳಿಗೆಗಳನ್ನು ತೆರವು ಮಾಡಬೇಕು. ಇಲ್ಲದಿದ್ದರೆ, ಪುನಃ ಅವಘಡಗಳು ತಪ್ಪಿದ್ದಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ಪೂರಕ ಮಾಹಿತಿ: ಆನೇಕಲ್ ಶಿವಣ್ಣ


ಶಿವಕಾಶಿಯಲ್ಲಿ ಪಟಾಕಿ ತಯಾರಿಕೆಯಲ್ಲಿ ತೊಡಗಿದ್ದ ಮಹಿಳೆಯರು

ಪಟಾಕಿ: ಅಕ್ರಮದ್ದೇ ಕಾರುಬಾರು

ಒಂದನೇ ಪುಟದಿಂದ

ಆದರೆ, ನಿಯಮಗಳನ್ನು ಮೀರಿ ಪಟಾಕಿ ವ್ಯವಹಾರ ನಡೆಯುತ್ತಿದೆ. ತಯಾರಕರು ಹಾಗೂ ಮಾರಾಟಗಾರರು, ಹಲವು ಇಲಾಖೆಯ ಕೆಲ ಅಧಿಕಾರಿಗಳ ಕೈ ಬಿಸಿ ಮಾಡಿ ರಾಜಾರೋಷವಾಗಿ ಅಕ್ರಮ ವಹಿವಾಟು ನಡೆಸುತ್ತಿರುವ ಆರೋಪವಿದೆ.

'ಹಲವು ವರ್ಷಗಳಿಂದ ಈ ಅಕ್ರಮ ವಹಿವಾಟು ನಡೆಯುತ್ತಿದೆ. ಕಾನೂನು ಜಾರಿಮಾಡಬೇಕಾದ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಪುರಸಭೆ, ಅಗ್ನಿಶಾಮಕ ದಳ, ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಇವರೆಲ್ಲರ ನಿರ್ಲಕ್ಷ್ಯದಿಂದಲೇ ಮೇಲಿಂದ ಮೇಲೆ ಅವಘಡಗಳು ಸಂಭವಿಸುತ್ತಿವೆ' ಎಂದು ಅತ್ತಿಬೆಲೆಯ ನಿವಾಸಿಗಳು ದೂರಿದರು.

ಹಬ್ಬಕ್ಕೆ ತಾತ್ಕಾಲಿಕ ಪರವಾನಗಿ: ದೀಪಾವಳಿ, ಗಣೇಶ ಹಬ್ಬದಂದು ಪಟಾಕಿಗಳಿಗೆ ಬೇಡಿಕೆ ಹೆಚ್ಚು. ಇಂಥ ಸಂದರ್ಭದಲ್ಲಿ ಪಟಾಕಿಗಳ ಮಾರಾಟಕ್ಕೆ ತಾತ್ಕಾಲಿಕ ಅನುಮತಿ ನೀಡಲಾಗುತ್ತದೆ. ಕಮಿಷನರೇಟ್ ವ್ಯಾಪ್ತಿಯಲ್ಲಿ ಪೊಲೀಸ್ ಕಮಿಷನರ್ ಹಾಗೂ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ಇಲಾಖೆಗಳಿಂದ ಎನ್‌ಒಸಿ ಪಡೆದುಕೊಂಡು ಅನುಮತಿ ಮಂಜೂರು ಮಾಡುತ್ತಾರೆ. 'ಹಬ್ಬದ ದಿನಗಳಂದು ಕನಿಷ್ಠ 3 ದಿನ ಹಾಗೂ ಗರಿಷ್ಠ 5 ದಿನ ಪಟಾಕಿ ಮಾರಾಟಕ್ಕೆ ಅನುಮತಿ ನೀಡಲು ಅವಕಾಶವಿದೆ. ತೆರೆದ ಸ್ಥಳ ಅಥವಾ ಮೈದಾನದಲ್ಲಿ ಮಳಿಗೆಗಳನ್ನು ತೆರೆದು ಪಟಾಕಿ ಮಾರಬಹುದಾಗಿದೆ. ಆದರೆ, ಪಟಾಕಿ ಸಂಗ್ರಹ ಸಾಮರ್ಥ್ಯ ಗರಿಷ್ಠ 100 ಕೆ.ಜಿ ಮಾತ್ರ' ಎಂದು ಅಗ್ನಿಶಾಮಕ ದಳ ಮತ್ತು ತುರ್ತು ಸೇವೆಗಳ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ತಾತ್ಕಾಲಿಕ ಪರವಾನಗಿ ಪಡೆದಿರುವ ವ್ಯಾಪಾರಿಗಳು, ದೊಡ್ಡ ಪ್ರಮಾಣದಲ್ಲಿ ಪಟಾಕಿ ಸಂಗ್ರಹಿಸಿ ಮಾರುತ್ತಿದ್ದಾರೆ. ಮಳಿಗೆಯಲ್ಲೂ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಇಂಥ ಮಳಿಗೆಗಳು ಕಂಡರೂ ಕಾಣದಂತೆ ಅಧಿಕಾರಿಗಳು ವರ್ತಿಸುತ್ತಾರೆ. ಅಕ್ರಮ ಮಳಿಗೆಗಳ ಬಗ್ಗೆ ದೂರು ನೀಡಿದರೂ ಕ್ರಮ ಕೈಗೊಳ್ಳುವುದಿಲ್ಲ' ಎಂದು ಸ್ಥಳೀಯ ನಿವಾಸಿ ಲಕ್ಷ್ಮಿಪತಿ ದೂರಿದರು.

'ಗರಿಷ್ಠ 1,200 ಕೆ.ಜಿ ಪಟಾಕಿ ಸಂಗ್ರಹಿಸಿಕೊಂಡು ಮಾರಲು 'ಎಲ್‌ಇ–6' ಅಡಿ ಜಿಲ್ಲಾಧಿಕಾರಿಗಳು ಪರವಾನಗಿ ನೀಡುತ್ತಾರೆ. ಅತ್ತಿಬೆಲೆ, ಆನೇಕಲ್, ಚಂದಾಪುರ ಹಾಗೂ ಸುತ್ತಮುತ್ತ ಇರುವ ಬಹುತೇಕ ಮಳಿಗೆಗಳು ಪರವಾನಗಿ ಹೊಂದಿವೆ. ಆದರೆ, ಸಾಮರ್ಥ್ಯ ಮೀರಿ ಹೆಚ್ಚಿನ ಪ್ರಮಾಣದಲ್ಲಿ ಅಕ್ರಮವಾಗಿ ಪಟಾಕಿ ಸಂಗ್ರಹಿಸಿ ಮಾರುತ್ತಿದ್ದಾರೆ. ಇದುವೇ ಅವಘಡಕ್ಕೆ ಕಾರಣವಾಗುತ್ತಿದೆ' ಎಂದು ಅಧಿಕಾರಿ ಸಂಶಯ ವ್ಯಕ್ತಪಡಿಸಿದರು.

'ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ ನಂತರ, ಜಿಲ್ಲಾಧಿಕಾರಿ ಪರಿಶೀಲನೆ ನಡೆಸುತ್ತಾರೆ. ನಂತರ, ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಕಂದಾಯ ಇಲಾಖೆ ಹಾಗೂ ವಿದ್ಯುತ್ ಸರಬರಾಜು ಕಂಪನಿಗೆ ಪತ್ರ ಬರೆದು ನಿರಾಕ್ಷೇಪಣಾ ಪತ್ರ ನೀಡುವಂತೆ ಸೂಚಿಸುತ್ತಾರೆ. ಬಳಿಕ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಬೇಕಾಗುತ್ತದೆ. ಪರವಾನಗಿ ಪಡೆಯಲು ಬೇಕಾದ ಎಲ್ಲ ಅಂಶಗಳನ್ನು ಪರಿಗಣಿಸಿ ಸಂಬಂಧಪಟ್ಟ ಇಲಾಖೆಯವರು ನಿರಾಕ್ಷೇಪಣಾ ಪತ್ರ ನೀಡುತ್ತಾರೆ. ಬಳಿಕವೇ ಜಿಲ್ಲಾಧಿಕಾರಿ ಪರವಾನಗಿ ಮಂಜೂರು ಮಾಡುತ್ತಾರೆ' ಎಂದು ಅಗ್ನಿಶಾಮಕ ದಳದ ಅಧಿಕಾರಿ ಹೇಳಿದರು. ಆದರೆ ಬಹುತೇಕ ಲೈಸೆನ್ಸ್‌ಗಳು ನಿಯಮ ಉಲ್ಲಂಘಿಸಿದ್ದರೂ ಅಧಿಕಾರಿಗಳು ಮೌನವಾಗಿರುವುದು ಸಂಶಯಕ್ಕೆ ಕಾರಣವಾಗುತ್ತದೆ.

ಮರು ಪ್ಯಾಕಿಂಗ್ ಅಪಾಯಕಾರಿ: 'ಅತ್ತಿಬೆಲೆ ಹಾಗೂ ಸುತ್ತಮುತ್ತ ಹಲವು ಮಳಿಗೆಗಳು ತಮ್ಮದೇ ಅಕ್ರಮ ಗೋದಾಮು ಹೊಂದಿವೆ. ಅದೇ ಗೋದಾಮಿನಲ್ಲಿ ಮರು ಪ್ಯಾಕಿಂಗ್ ಸಹ ನಡೆಯುತ್ತಿದ್ದು, ಇದು ಅಪಾಯಕಾರಿ ಹಾಗೂ ಅಕ್ರಮ. ಇದಕ್ಕೆ ಕಡಿವಾಣ ಇಲ್ಲದಂತಾಗಿದೆ' ಎಂದು ಅತ್ತಿಬೆಲೆ ಗಡಿಯಲ್ಲಿ ಸ್ಥಳೀಯ ನಿವಾಸಿ ಅಮ್ಜದ್ ಹೇಳಿದರು.

ಗೋದಾಮು ನಿರ್ವಹಣೆಗೆ ಪ್ರತ್ಯೇಕ ಪರವಾನಗಿ: 'ಪಟಾಕಿ ಸಂಗ್ರಹಿಸಿಡಲು ಗೋದಾಮು ನಿರ್ಮಾಣಕ್ಕೆ ಪ್ರತ್ಯೇಕ ಪರವಾನಗಿ ಪಡೆಯಬೇಕು. ಆದರೆ, ಜನವಸತಿ ಹಾಗೂ ವಾಣಿಜ್ಯ ಚಟುವಟಿಕೆ ಸ್ಥಳಗಳಲ್ಲಿ ಗೋದಾಮು ತೆರೆಯಲು ಅನುಮತಿ ಇಲ್ಲ' ಎಂದು ಅಧಿಕಾರಿ ತಿಳಿಸಿದರು.

'ಅತ್ತಿಬೆಲೆ ಬಳಿ ಗೋದಾಮು ನಿರ್ವಹಣೆಗೆ ಯಾರೊಬ್ಬರೂ ಈ ರೀತಿಯ ಪರವಾನಗಿ ಪಡೆದಿಲ್ಲ' ಎಂದು ಆರೋಪಿಸುವ ಸ್ಥಳೀಯರು, '150ಕ್ಕೂ ಹೆಚ್ಚು ಮಳಿಗೆಗಳು ಅಕ್ರಮವಾಗಿ ನಡೆಯುತ್ತಿದ್ದರೂ ಅಧಿಕಾರಿಗಳು ಪ್ರಶ್ನೆ ಮಾಡಿರಲಿಲ್ಲ. ಈಗ ದುರಂತ ಸಂಭವಿಸುತ್ತಿದ್ದಂತೆ, ಒಂದೊಂದೇ ಮಳಿಗೆಗಳಿಗೆ ಅಧಿಕಾರಿಗಳು ದಾಳಿ ಮಾಡುತ್ತಿದ್ದಾರೆ. ಬಹುತೇಕ ವ್ಯಾಪಾರಿಗಳು, ಮಳಿಗೆಗಳಿಗೆ ಬೀಗ ಹಾಕಿ ನಾಪತ್ತೆಯಾಗಿದ್ದಾರೆ' ಎಂದರು.

ನಿಯಮ ಪಾಲಿಸದ ವ್ಯಾಪಾರಿಗಳು: 'ಪಟಾಕಿ ತಯಾರಿಕೆ, ಸಂಗ್ರಹ ಹಾಗೂ ಮಾರಾಟಕ್ಕೆ ಸಾಕಷ್ಟು ನಿಯಮಗಳು ಇವೆ. ಆದರೆ, ವ್ಯಾಪಾರಿಗಳು ಬಹುತೇಕ ನಿಯಮಗಳನ್ನು ಪಾಲಿಸುವುದಿಲ್ಲ. ಇಲಾಖೆಗಳ ಅಧಿಕಾರಿಗಳಿಗೂ ಈ ಸಂಗತಿ ಗೊತ್ತಿದೆ. ಅವರೆಲ್ಲರೂ ವ್ಯಾಪಾರಿಗಳಿಂದ ಹಣ ಪಡೆದು ಎನ್‌ಒಸಿ ನೀಡುತ್ತಾರೆ. ಅವಘಡ ಸಂಭವಿಸಿದಾಗ ಮಾತ್ರ, ನಿಯಮಗಳ ಮಾತು ಬರುತ್ತಿದೆ' ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನ ಮೇಲೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪಟಾಕಿ ಅವಘಡ ತಡೆಗೆ ಕೇವಲ ನಿಯಮ ರೂಪಿಸಿದರೆ ಸಾಲದು. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ನೋಡಿಕೊಳ್ಳಬೇಕು. ಎನ್‌ಒಸಿ ನೀಡುವ ಅಧಿಕಾರಿಗಳು, ಆರಂಭದಲ್ಲಿಯೇ ಅಕ್ರಮ ಪತ್ತೆ ಮಾಡಿದರೆ ಅನಾಹುತಗಳನ್ನು ತಪ್ಪಿಸಬಹುದು ಎಂಬುದು ಸಾರ್ವಜನಿಕರ ಅಭಿಪ್ರಾಯ.

ಲಂಚಕ್ಕೂ ದರ ಪಟ್ಟಿ: 'ಪಟಾಕಿ ಸಾಗಣೆ, ಸಂಗ್ರಹ ಹಾಗೂ ಮಾರಾಟ ಮಳಿಗೆಯಿಂದ ಪಡೆಯುವ ಲಂಚಕ್ಕೂ ಕೆಲ ಅಧಿಕಾರಿಗಳು ದರ ಪಟ್ಟಿ ನಿಗದಿಪಡಿಸಿದ್ದಾರೆ. ಪೊಲೀಸ್ ಠಾಣೆಯ ಕೆಲ ಸಿಬ್ಬಂದಿ ಹಾಗೂ ಸ್ಥಳೀಯ ಸಂಸ್ಥೆಗಳ ಕೆಲ ಸಿಬ್ಬಂದಿ, ಪಟಾಕಿ ವ್ಯಾಪಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಈ ಹಣದಲ್ಲಿ ಹಿರಿಯ ಅಧಿಕಾರಿಗಳಿಗೂ ಪಾಲ ನೀಡುವುದಾಗಿ ಸಿಬ್ಬಂದಿ ಹೇಳಿಕೊಳ್ಳುತ್ತಿದ್ದಾರೆ. ಹೀಗಾಗಿಯೇ, ಗಡಿಯಲ್ಲಿ ಪಟಾಕಿ ಅಕ್ರಮ ವಹಿವಾಟು ರಾಜಾರೋಷವಾಗಿ ನಡೆಯುತ್ತಿದೆ' ಎಂದು ಸ್ಥಳೀಯರು ದೂರಿದರು.

ಬಾಲ ಕಾರ್ಮಿಕರ ನೇಮಕ: 'ವ್ಯಾಪಾರಿಗಳು, ಕಡಿಮೆ ಸಂಬಳಕ್ಕೆ ಬರುವ ಕಾರ್ಮಿಕರನ್ನೇ ಹುಡುಕಿ ಕರೆತರುತ್ತಾರೆ. ಅದರಲ್ಲೂ ಬಾಲಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುತ್ತಾರೆ. ಅವರಿಂದ ಪಟಾಕಿ ರೀ ಪ್ಯಾಕಿಂಗ್, ಬಾಕ್ಸ್‌ಗಳ ಸಾಗಣೆ ಮಾಡಿಸುತ್ತಾರೆ' ಎಂದು ಅತ್ತಿಬೆಲೆ ನಿವಾಸಿಗಳು ದೂರುತ್ತಾರೆ.

> **ಪಟಾಕಿ ಅಕ್ರಮ ವಹಿವಾಟಿನ ಬಗ್ಗೆ ಪರಿಶೀಲನೆ ನಡೆಸಿ, ಲೋಪಗಳು ಹಾಗೂ ಬಿಗಿ ನಿಯಮಗಳ ಜಾರಿ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು**
> **ಅಲೋಕ್ ಮೋಹನ್,**
> ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ)

ಕಾನೂನು ಏನು ಹೇಳುತ್ತದೆ

- **ತಾತ್ಕಾಲಿಕ ಪರವಾನಗಿ:** ತೆರೆದ ಮತ್ತು ಮೈದಾನ ಸ್ಥಳದಲ್ಲಿ ಪಟಾಕಿ ಮಳಿಗೆ ನಿರ್ಮಿಸಬೇಕು. ಅಗ್ನಿ ಸುರಕ್ಷತಾ ಕ್ರಮಗಳಿರಬೇಕು. ಅಗ್ನಿ ನಂದಿಸುವ ಬಗ್ಗೆ ಸಿಬ್ಬಂದಿ ತರಬೇತಿ ಪಡೆದಿರಬೇಕು. ಅವಘಡ ಸಂದರ್ಭದಲ್ಲಿ ಜನರು ಪಾರಾಗಲೂ ತುರ್ತು ನಿರ್ಗಮನ ಬಾಗಿಲುಗಳು ಇರಬೇಕು
- **ಎಲ್‌ಇ–6 ಪರವಾನಗಿ:** ಪಟಾಕಿ ಸಂಗ್ರಹದ ಶೆಡ್ ಸುತ್ತಲು 3 ಮೀಟರ್ ಸೆಟ್‌ಬ್ಯಾಕ್ ಬಿಡಬೇಕು. ಕಾಂಪೌಡ್ ಎತ್ತರ 1.8 ಮೀಟರ್ ಇರಬೇಕು. ಶೆಡ್‌ನ ಮುಂದೆ ಹಾಗೂ ಹಿಂಭಾಗದಲ್ಲಿ ಬಾಗಿಲು ಇರಬೇಕು ಜನವಸತಿ ಹಾಗೂ ವಾಣಿಜ್ಯ ಪ್ರದೇಶಗಳಿಂದ ದೂರವಿರಬೇಕು.
- **ಗೋದಾಮು:** ಮನೆಗಳು ಇರುವ ಜಾಗದಿಂದ 40 ಮೀಟರ್ ದೂರವಿರಬೇಕು. ರೈಲ್ವೆ ಹಳಿ ಪಕ್ಕದಲ್ಲಿ ಇರಬಾರದು. ವಿದ್ಯುತ್ ಸಂಪರ್ಕ ರಹಿತವಾಗಿರಬೇಕು. ನುರಿತ ಸಿಬ್ಬಂದಿ ನೇಮಿಸಿಕೊಳ್ಳಬೇಕು. ಅಗ್ನಿ ಸುರಕ್ಷತಾ ಕ್ರಮಗಳು ಕಡ್ಡಾಯ. ಸಂಬಂಧಪಟ್ಟ ಇಲಾಖೆಗಳ ಎನ್‌ಒಸಿ ಇರಬೇಕು
- **ಪಟಾಕಿ ತಯಾರಿಕೆ–ದೊಡ್ಡ ಪ್ರಮಾಣದ ದಾಸ್ತಾನು:** ಜನವಸತಿ ಪ್ರದೇಶದಿಂದ ದೂರವಿರಬೇಕು. ಅಗ್ನಿ ಸುರಕ್ಷತಾ ಕ್ರಮಗಳು ಇರಬೇಕು. ನುರಿತ ಸಿಬ್ಬಂದಿ ಇರಬೇಕು. ಸಿಬ್ಬಂದಿ ಸುರಕ್ಷತೆಗೆ ಸಲಕರಣೆಗಳನ್ನು ಬಳಸಿಕೊಳ್ಳಬೇಕು. ಮೈದಾನ ಹಾಗೂ ತೆರೆದ ಸ್ಥಳದಲ್ಲಿ ತಯಾರಿಕೆ ಮಾಡಬೇಕು. ಇದಕ್ಕೆಲ್ಲ ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ಪರವಾನಗಿ ಕಡ್ಡಾಯ.

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 15-10-1998

● ಭಾರತೀಯ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್‌ಗೆ ನೊಬೆಲ್ ಪ್ರಶಸ್ತಿ

ಸ್ಟಾಕ್‌ಹೋಂ (ಸ್ವೀಡನ್) (ಎಪಿ) ಅ. 14– ಬ್ರಿಟನ್ನಿನ ಕೆಂಬ್ರಿಜ್‌ನಲ್ಲಿರುವ ಟ್ರಿನಿಟಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಅಮಾರ್ತ್ಯ ಸೇನ್ ಅವರಿಗೆ ಅರ್ಥಶಾಸ್ತ್ರಕ್ಕಾಗಿ ನೀಡುವ ಪ್ರತಿಷ್ಠಿತ 'ನೊಬೆಲ್ ಪುರಸ್ಕಾರ' ದೊರೆತಿದೆ.

'ಬರಗಾಲ ಮತ್ತು ಬಡತನದ ಹಿಂದಿರುವ ಆರ್ಥಿಕ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ 'ಕ್ಷೇಮಾಭಿವೃದ್ಧಿ ಶಾಸ್ತ್ರ'ಕ್ಕೆ ಪ್ರೊ. ಸೇನ್ ಅವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ' ಎಂದು 'ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್' ಹೇಳಿದೆ.

50 ವರ್ಷಗಳ ಹಿಂದೆ
ಸೋಮವಾರ, 15-10-1978

● ಡೆಮಾಸ್ಕಸ್ ಮೇಲೆ ಇಸ್ರೇಲಿ ಷೆಲ್: ಸೈನ್ಯದಲ್ಲಿ ಉಗ್ರ ಟ್ಯಾಂಕ್ ಕಾಳಗ

ಟೆಲ್ ಅವೀವ್, ಅ.14– ಸಿರಿಯಾದ ಮಿಲಿಟರಿ ಕೋಟೆಯನ್ನು ಧೂಳಿಪಟ ಮಾಡಿ ಮುನ್ನುಗ್ಗುತ್ತಿರುವ ಇಸ್ರೇಲ್ ಪಡೆಗಳು ಭಾನುವಾರ ಡೆಮಾಸ್ಕಸ್ ನಗರಕ್ಕೆ ಕೇವಲ 25 ಕಿ.ಮೀ ದೂರದಲ್ಲಿದ್ದು, ಡೆಮಾಸ್ಕಸ್ ಉಪನಗರಗಳ ಮೇಲೆ ಷೆಲ್ ದಾಳಿ ಆರಂಭಿಸಿವೆಯೆಂದು ಟೆಲ್ ಅವೀವ್ ತಿಳಿಸಿದೆ.

ಸಿರಿಯಾ ರಂಗದಲ್ಲಿ ಯುದ್ಧ ಅಕ್ಷರಶಃ ನಿರ್ಧಾರವಾಗಿ ಹೋಗಿದೆ. ಇಸ್ರೇಲಿ ಪಡೆಗಳು ಇಲ್ಲಿ ತಮ್ಮ ಹತೋಟಿ ಸಾಧಿಸಿವೆ ಎಂದು ಟೆಲ್ ಅವೀವ್ ಹೇಳಿದೆ.

ಸೂಯೆಜ್ ಕಾಲುವೆ ರಣರಂಗದಲ್ಲಿ ಇಸ್ರೇಲ್ ಈಜಿಪ್ಟ್ ಪಡೆಗಳ ಉಗ್ರ ಆಕ್ರಮಣವನ್ನು ಎದುರಿಸುತ್ತಿದ್ದು, ಇನ್ನೂರಕ್ಕೂ ಹೆಚ್ಚು ಈಜಿಪ್ಟ್ ಟ್ಯಾಂಕುಗಳನ್ನು ನಾಶಪಡಿಸಿದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಅಕ್ಟೋಬರ್ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪ್ರತಿಪ್ರದ್ ಗಂ. 24-33 ನಕ್ಷತ್ರ: ಚಿತ್ತಾ ಗಂ. 18-12 ಯೋಗ: ವೈಧೃತಿ ಗಂ 10-24 ಕರಣ: ಕಿಸ್ತುಂಘ್ನ ಗಂ. 12-02, ಕನ್ಯಾ ಮಾಸದ 28 ನೇ ದಿನ, ಮಳೆನಕ್ಷತ್ರ: ಚಿತ್ರ 2.
ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-24 ಸೂರ್ಯಾಸ್ತ: 06-08, ಮುಸ್ಲಿಂ ದಿನಾಂಕ: 29 ರಬಿಉಲ್ಲಾವಲ್, ದಿನ ವಿಶೇಷ: ಶರವನ್ನವರಾತ್ರಾರಂಭ, ಮಹಾರಾಜ ಅಗ್ರಸೇನರ ಜಯಂತಿ, ಅದೃಷ್ಟ ಸಂಖ್ಯೆ : 10, 1

ಮೇಷ: ಮಿತ್ರರೊಡಗೂಡಿ ಸಣ್ಣಮಟ್ಟದ ಉತ್ಪಾದನಾ ಘಟಕ ಪ್ರಾರಂಭಿಸುವ ಯೋಚನೆ ಬರಲಿದೆ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ. ಕುಟುಂಬದಲ್ಲಿ ಸಂತೋಷದ ವಾತಾವರಣ ನಿಮ್ಮಿಂದ ಸೃಷ್ಟಿಯಾಗಲಿದೆ.

ವೃಷಭ: ನಿಮ್ಮ ನಿಲುವನ್ನು ಬದಲಿಸಿಕೊಳ್ಳುವುದರಿಂದ ಎಲ್ಲರ ಪ್ರೀತಿಗೆ ಪಾತ್ರರಾಗುತ್ತೀರಿ. ಮದುವೆಗೆ ಇರುವ ಅಡಚಣೆ, ಸಮಸ್ಯೆ ಬಗೆಹರಿಸಿಕೊಳ್ಳುವ ಬಗ್ಗೆ ಗಮನಹರಿಸಿ. ನಿಮ್ಮ ತಂಡವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುತ್ತೀರಿ.

ಮಿಥುನ: ಬೇರೆಯವರ ಸಹಾಯ ಪಡೆಯದೇ ನಿಮ್ಮ ಶ್ರಮದಿಂದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಲಾಭದಾಯಕ. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ ಇರಲಿದೆ.

ಕರ್ಕಾಟಕ: ಜೀವನ ಶೈಲಿಯಲ್ಲಿ ಸಮತೋಲಿತ ದಿನಚರಿಯನ್ನು ಅನುಸರಿಸುವುದು ಒಳ್ಳೆಯದು. ಜಟಿಲವಾದ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಕ್ತ ಸಲಹೆಯನ್ನು ಮಾರ್ಗದರ್ಶಕರಲ್ಲಿ ಕೇಳಿ ತಿಳಿಯುವುದು ಉತ್ತಮ.

ಸಿಂಹ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆ ಹಂತಹಂತವಾಗಿ ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ಸಿಹಿ ಪದಾರ್ಥಗಳ ತಯಾರಿಕರಿಗೆ ಹೆಸರಾಂತ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾಲ ಒದಗಿಬರಲಿದೆ.

ಕನ್ಯಾ: ನಿಮ್ಮ ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ನಿಮ್ಮ ಯೋಜನೆಗಳು ಕಾರ್ಯಗತ ಗೊಳ್ಳವುದರ ಬಗ್ಗೆ ಶನೈಶ್ಚರನಲ್ಲಿ ಪೂಜೆ ಪ್ರಾರ್ಥನೆ ನೆಡೆಸಿ. ಹಣಕಾಸು ಪರಿಸ್ಥಿತಿ ಉತ್ತಮಗೊಳ್ಳುವುದು.

ತುಲಾ: ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ರಾಜಕೀಯ ವ್ಯಕ್ತಿಗಳಿಂದ ವೈಯಕ್ತಿಕ ಅನುಕೂಲ ಆಗುವ ಲಕ್ಷಣಗಳಿದೆ. ನಿಮ್ಮಲ್ಲಿ ಸಾಮಾಜಿಕವಾದ ಕಳಕಳಿ ಹೆಚ್ಚಲಿದೆ.

ವೃಶ್ಚಿಕ: ಮನೆಯಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಆದರಿಂದಾಗಿ ಮನೆಯ ವಾತಾವರಣ ಸರಿಯಾಗಿರುವುದು. ನಿಮ್ಮ ಶ್ರಮದ ದುಡಿಮೆಗೆ ಉತ್ತಮ ಫಲ ದೊರೆಕುವುದು.

ಧನು: ಕೆಲವೊಂದು ಸಮಸ್ಯೆಗಳಿಗೆ ಪೊಲೀಸರಿಂದ ಪರಿಹಾರ ತೆಗೆದುಕೊಳ್ಳುವುದು ಉತ್ತಮ ಮತ್ತು ಅನಿವಾರ್ಯ ಎಂದು ಅನಿಸಲಿದೆ. ಸಹಕಾರಿ ರಂಗದಲ್ಲಿನ ವ್ಯಕ್ತಿಗಳಿಗೆ ಶುಭ ದಿನ. ಸಂತಾನದ ಸುದ್ದಿ ಆನಂದ ತರಲಿದೆ.

ಮಕರ: ಹಲವು ದಿನದ ಬಿಡುವಿಲ್ಲದ ಕೆಲಸದಿಂದ ಬಳಲಿರುವ ನೀವು ವಿಶ್ರಾಂತಿಗಾಗಿ ಸ್ವಲ್ಪ ಸಮಯವನ್ನು ಮೀಸಲಿಡುವುದು ಉತ್ತಮ. ಸ್ಥಗಿತಗೊಂಡ ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು.


ಕುಂಭ: ಅಚ್ಚರಿಯ ಸುದ್ದಿ ಅನ್ಯರ ಮೂಲಕ ತಿಳಿಯಲಿದೆ. ಅದನ್ನು ಯಾರಲ್ಲೂ ಹೇಳಿಕೊಳ್ಳದೇ ಇರುವುದು ಉತ್ತಮ. ಕೆಲಸದ ನಿಮಿತ್ತ ದೂರದ ಊರಿಗೆ ತೆರಳಬೇಕಾಗಬಹುದು. ಆಸೆ ನಿರಾಸೆಯಾಗುವ ಲಕ್ಷಣಗಳಿವೆ.

ಮೀನ: ಗೆಲುವು ಸಾಧಿಸಲು ವಿವೇಚನೆ ಅಗತ್ಯವೆನ್ನುವುದನ್ನು ಮರೆಯದಿರಿ. ಇಷ್ಟದ ಕೆಲಸ ಈಡೇರಿಸಿಕೊಳ್ಳಲು ಹಿರಿಯರ ಮನ ಒಲಿಸಬೇಕಾಗುವುದು. ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ ಇರಲಿದೆ.

ಪದಬಂಧ 5471
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವರನಿಗೆ ಕೇಳಿಸಿದ ಧ್ವನಿ (2)
3.ಪ್ರಸವದ ವೇಳೆ ಕೈಗೊಂಡಿರುವ ಪಯಣ (3)
6.ವಿಷಯಾಸಕ್ತನಿವನು (3)
8.ಈ ಪರಿ ಕರದಲ್ಲಿ ಹಿಡಿದಿರುವ ಸಾಮಾನು (4)
10.ವರ ಪಡೆದುಕೊಂಡಿರುವ ಸುತ (3)
11.ಕಣದಲ್ಲಿ ನಡೆದಿರುವ ಲಗ್ನ (3)
12.ವಿರುದ್ಧ ರಸಗಳು ಕೂಡಿಕೊಳ್ಳುವುದು (4)
15.ಮರದ ಬಳಿಯಿರುವ ಮೊಸಳೆ (3)
17.ಚನ್ನಾಗಿ ಮಾತನಾಡುವವನು (3)
18.ಜನರು ನೆರೆದಿರುವೆಡೆಯಲ್ಲೇ ಈ ಪ್ರವಾಹ! (2)

ಮೇಲಿಂದ ಕೆಳಕ್ಕೆ
2.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಅವಾರ (3)
3.ಪ್ರತೀಕಾರ ತೀರಿಸಿಕೊಳ್ಳುವವನ ಚಿಹ್ನೆ! (3)
4.ದೂರವೇನಲ್ಲ ಹತ್ತಿರವೇ ಬಿಡಿ! (3)
5.ನೂರರ ಮೊತ್ತ (3)
7.ತಾರ ಹಿಡಿದಿರುವ ತಂತಿ ವಾದ್ಯ (3)
9.ಮರದ ಹತ್ತಿರವಿರುವ ನಲ್ಲ (3)
10.ಅಷ್ಟ ದಿಕ್ಪಾಲಕರಲ್ಲಿಯೇ ಈತ ಬಲು ಶ್ರೀಮಂತ (3)
11.ಕನ್ನ ಹಾಕಿ ಕದ್ದೊಯ್ದ ಚಿನ್ನ (3)
13.ಒಳ್ಳೆಯ ಗುಣದಿಂದ ಕೂಡಿರುವ ವ್ಯಕ್ತಿ! (3)
14.ಮಂತ್ರಿ ಅಥವಾ ಅಮಾತ್ಯ (3)
15.ಮರದಲ್ಲಿ ಸವಿಯಾದುದು ಇದೆ (3)
16.ಸಾಗಿಸುವಿಕೆಯನ್ನು ಹೀಗೆನ್ನಿ (3)



5470ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ವಕ್ರೋಕ್ತಿ 4.ದರ್ಶನ 5ಸಮೀಕ್ಷಕ 6.ಪಾರುಪತ್ಯ 7.ಕವಿ 9.ತತ 13.ಸರದಾರ 14.ಅರಾಜಕ 15.ಲಾವಣಿ 16.ಉರಗ

ಮೇಲಿಂದ ಕೆಳಕ್ಕೆ: 1.ಉದಯೋನ್ಮುಖ 2.ವನಪಾಲಕ 3.ಪ್ರೋಕ್ಷಣೆ 5.ಸತ್ವವಂತ 8.ವಿಧ್ವಂಸಕ 10.ತಿಪ್ಪರಲಾಗ 11.ಉರವಣಿಸು 12.ಗುರಾಣಿ

ಸುಡೊಕು 5857

				2		7		3
6	2	9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5856 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

3.47 ಲಕ್ಷ ಫಲಾನುಭವಿಗಳ ನಿರಾಸಕ್ತಿ : ಬೆಳಗಾವಿ ಪ್ರಥಮ, ಉಡುಪಿ ಜಿಲ್ಲೆಗೆ ಕೊನೆಯ ಸ್ಥಾನ

ಪಡಿತರ ಪಡೆಯದ ಕಾರ್ಡ್‌ದಾರರು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಅಂತ್ಯೋದಯ, ಬಿಪಿಎಲ್ ಪಡಿತರ ಕಾರ್ಡ್ ಪಡೆದು, ಆಹಾರಧಾನ್ಯಕ್ಕಾಗಿ ಫಲಾನುಭವಿಗಳು ಅಲೆದಾಡುತ್ತಾರೆ. ಆದರೆ, ರಾಜ್ಯದಲ್ಲಿ 3.47 ಲಕ್ಷ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ವುಳ್ಳವರು 6 ತಿಂಗಳಿನಿಂದ ನ್ಯಾಯಬೆಲೆ ಅಂಗಡಿಗಳಿಂದ ಆಹಾರಧಾನ್ಯವನ್ನೇ ಪಡೆದಿಲ್ಲ.


ಅಂತ್ಯೋದಯ ಕಾರ್ಡ್‌ವುಳ್ಳವರಿಗೆ ಪ್ರತಿ ತಿಂಗಳಿಗೆ 35 ಕೆ.ಜಿ ಅಕ್ಕಿ ನೀಡಲಾಗುತ್ತದೆ. ಬಿಪಿಎಲ್ ಕಾರ್ಡ್‌ವುಳ್ಳವರಿಗೆ ತಲಾ 10 ಕೆ.ಜಿಯಂತೆ ಅಕ್ಕಿ ಘೋಷಿಸಲಾಗಿದೆ. ಈ ಪೈಕಿ 5 ಕೆ.ಜಿ ಅಕ್ಕಿ ವಿತರಿಸಿ ಹಾಗೂ ಇನ್ನುಳಿದ 5 ಕೆ.ಜಿ ಅಕ್ಕಿಯ ಮೊತ್ತ ಕೊಡಲಾಗುತ್ತದೆ.

ನ್ಯಾಯಬೆಲೆಗಳ ಅಂಗಡಿಯಿಂದ ಪಡಿತರ ಪಡೆಯದ ಫಲಾನುಭವಿಗಳು ಐದು ಕೆ.ಜಿ ಅಕ್ಕಿಗೆ ಬದಲು ನೀಡುತ್ತಿರುವ ಹಣ ಪಡೆಯಲು ದಾಖಲೆಗಳನ್ನು ಸಲ್ಲಿಸಿಲ್ಲ

ಚನ್ನಬಸಪ್ಪ ಕೊಡ್ಲಿ, ಜಂಟಿ ನಿರ್ದೇಶಕ, ಆಹಾರ, ನಾಗರಿಕ ಸರಬರಾಜು ಇಲಾಖೆ

ರಾಜ್ಯದಲ್ಲಿ 10.88 ಲಕ್ಷ ಅಂತ್ಯೋದಯ ಮತ್ತು 1.16 ಕೋಟಿ ಬಿಪಿಎಲ್ ಕಾರ್ಡ್‌ದಾರರು ಇದ್ದಾರೆ. ಆ ಪೈಕಿ 14,826 ಅಂತ್ಯೋದಯ ಹಾಗೂ 3.32 ಲಕ್ಷ ಬಿಪಿಎಲ್ ಕಾರ್ಡ್ ಹೊಂದಿದವರು ಆಹಾರ ಧಾನ್ಯ ಪಡೆದಿಲ್ಲ.

ಪಡಿತರ ಪಡೆಯದಿರುವವರಲ್ಲಿ 37,880 ಕಾರ್ಡ್‌ದಾರರು ಹೊಂದಿರುವ ಬೆಳಗಾವಿ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದ್ದರೆ, 40,681



ಕಾರ್ಡ್‌ದಾರರನ್ನು ಹೊಂದಿರುವ ಉಡುಪಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ.

ಆಹಾರ ಧಾನ್ಯ ಒಯ್ಯಲು ಬಯೊಮೆಟ್ರಿಕ್ ಕಡ್ಡಾಯ ಮಾಡುವ ಮುನ್ನ ಶೇ 99ರಷ್ಟು ಅಕ್ಕಿ ವಿತರಣೆ ಆಗುತ್ತಿತ್ತು. ಬಯೊಮೆಟ್ರಿಕ್ ಮಾಡಿದ ಬಳಿಕ ಶೇ 85 ರಿಂದ 90ರಷ್ಟು ಮಾತ್ರ ಅಕ್ಕಿ ವಿತರಣೆಯಾಗುತ್ತಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳ ಸೌಲಭ್ಯ ಪಡೆಯಲು ಕೆಲವರು ಬಿಪಿಎಲ್ ಕಾರ್ಡ್ ಮಾಡಿಸಿಕೊಂಡಿದ್ದಾರೆ. ಅವರಿಗೆ ಪಡಿತರ ಪಡೆಯಲು ಅವಕಾಶವಿಲ್ಲ. ಹಿಂದೆ ಇದ್ದ ಭಾಗ್ಯಲಕ್ಷ್ಮಿ ಬಾಂಡ್ ಪಡೆಯಲು, ಪಿಂಚಣಿ ಪಡೆಯಲು ಕೆಲವರು ಪಡಿತರ ಚೀಟಿ ಹೊಂದಿದ್ದಾರೆ.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಸಹಾಯಧನ ಪಡೆಯಲು ಹೊಲಗಳನ್ನು ಮಕ್ಕಳ ಹೆಸರಿಗೆ ಮಾಡಿ, ಪ್ರತ್ಯೇಕ ಕುಟುಂಬ ಮಾಡಿದವರೂ ಕಾರ್ಡ್ ಪಡೆದಿದ್ದಾರೆ. ಅವರೆಲ್ಲರೂ ಪಡಿತರ ಪಡೆಯಲು ಬರುತ್ತಿಲ್ಲ.

ಬಾಗಲಕೋಟೆ, ವಿಜಯಪುರ, ರಾಯಚೂರು, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಗುಳೆ ಹೋಗುವುದು ಜಾಸ್ತಿ. ಆ ಜಿಲ್ಲೆಗಳಲ್ಲಿ ಪಡಿತರ ಪಡೆಯದಿರುವವರ ಸಂಖ್ಯೆ ಹೆಚ್ಚಿದೆ. 'ಗುಳೆ ಹೋದವರು ಬಯೊಮೆಟ್ರಿಕ್ ಕೊಡಲಾಗದ ಕಾರಣಕ್ಕೆ ಅಕ್ಕಿ ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ' ಎಂದು ಅಧಿಕಾರಿಗಳು ಹೇಳುತ್ತಾರೆ.

'ಬಯೊಮೆಟ್ರಿಕ್‌ಗೂ ಮುನ್ನ ಬಹುತೇಕ ಫಲಾನುಭವಿಗಳು ಪಡಿತರ ಪಡೆದಿದ್ದಾರೆ ಎಂದು ನ್ಯಾಯಬೆಲೆ ಅಂಗಡಿಯವರು ತೋರಿಸುತ್ತಿದ್ದರು. ಬಯೊಮೆಟ್ರಿಕ್ ಬಳಿಕ ಬೇರೆಯವರು ಪಡಿತರ ಪಡೆಯಲಾಗುತ್ತಿಲ್ಲ' ಎನ್ನುತ್ತಾರೆ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಚನ್ನಬಸಪ್ಪ ಕೊಡ್ಲಿ.

ಜಗನ್ಮಾತೆಯ ಅರ್ಚನೆ

• ಶ್ರೀಧರ ಭಟ್ಟ ಐನಕೈ

ನವರಾತ್ರಿ ಇಂದಿನಿಂದ

ಈಶ್ವರನು ಮಾಯೆಯ ಗುಣತ್ರಯಗಳಿಗೆ ಅನುಗುಣವಾಗಿ ಬ್ರಹ್ಮ-ವಿಷ್ಣು-ರುದ್ರ ಎಂದೆನಿಸಿಕೊಂಡು ಸೃಷ್ಟಿ-ಸ್ಥಿತಿ-ಲಯ ಕಾರ್ಯವನ್ನು ಮಾಡುವನು. ಇಂತಹ ಸಗುಣಬ್ರಹ್ಮದ ಅನಿರ್ವಚನೀಯ ಶಕ್ತಿಯನ್ನು ಸರಸ್ವತೀ-ಲಕ್ಷ್ಮೀ-ಪಾರ್ವತೀ ಎಂದು ಕರೆಯಲಾಗಿದೆ. ಈ ಶಕ್ತಿತ್ರಯದ ತಾದಾತ್ಮ್ಯ ಅನುಸಂಧಾನ ವಿಶೇಷವಾಗಿ ಶರನ್ನವರಾತ್ರಿಯಲ್ಲಿ ಅನಾದಿಯಿಂದಲೂ ನಡೆದುಕೊಂಡು ಬಂದಿದೆ. ಈ ಸಂದರ್ಭದಲ್ಲಿ ಜಗತ್ತಿನ ಮೂಲ ಸ್ವರೂಪಿಣಿಯೂ ನಿಯಾಮಕಳೂ ಆದ ತ್ರಿಪುರಸುಂದರಿಯನ್ನು ಒಂಬತ್ತು ದಿನಗಳ ಕಾಲ ನಾನಾ ಪ್ರಕಾರದಲ್ಲಿ ನಾನಾ ರೂಪದಲ್ಲಿ ಧ್ಯಾನ ಅರ್ಚನ ಪೂಜೆ ಉಪಾಸನಾದಿಗಳೊಂದಿಗೆ ಆಸ್ತಿಕರು ಅರ್ಚಿಸುವರು, ಭಜಿಸುವರು. ಶಾರದಾತಿಲಕ, ಪ್ರಪಂಚಸಾರ, ಮಂತ್ರಮಹೋದಧಿ, ನಿರ್ಣಯಸಿಂಧು, ನವರಾತ್ರಕಲ್ಪ ಮುಂತಾದ ಗ್ರಂಥಗಳಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಮ್ಮ ಪೂರ್ವಜರು ನೀಡಿರುವರು.

ಒಂದನೆಯ ದಿನ ಕುಮಾರಿ, ಎರಡನೆಯ ದಿನ ತ್ರಿಮೂರ್ತಿ, ಮೂರನೆಯ ದಿವಸ ಕಲ್ಯಾಣಿ, ನಾಲ್ಕನೆಯ ದಿನ ರೋಹಿಣಿ, ಐದನೆಯ ದಿನ ಕಾಳಿ, ಆರನೆಯ ದಿನ ಚಂಡಿ, ಏಳನೆಯ ದಿವಸ ಶಾಂಭವಿ, ಎಂಟನೆಯ ದಿನ ದುರ್ಗಾ, ಒಂಬತ್ತನೆಯ ದಿವಸ ಭದ್ರಾ ಎಂಬುದಾಗಿ ಪೂಜಿಸುವ ಪದ್ಧತಿಯಿದೆ. ಹೀಗೆ ಅಖಂಡ ಭಾರತದ ತುಂಬೆಲ್ಲ ನಾನಾ ವಿಧವಾಗಿ ನವದುರ್ಗಾ ಅನುಷ್ಠಾನವು ಅನಾದಿ ಕಾಲದಿಂದಲೂ ಸಾಗಿಬಂದಿದೆ. ಪ್ರಾಚೀನ ಕಾಲದಿಂದಲೂ ಜಗನ್ಮಾತೆಯನ್ನು ದುರ್ಗಾ, ನವದುರ್ಗಾ, ವನದುರ್ಗಾ, ಕಾಳಿ, ಮಹಾಕಾಳಿ ಎಂದು ಮಾತ್ರವಲ್ಲದೆ, ಮಂಕಾಳಿ, ಸಿರಿದೇವಿ, ಯಲ್ಲಮ್ಮ, ಮಲ್ಲಮ್ಮ, ಮಂಕಾಳಮ್ಮ, ಚೌಡಿ, ಹೊನ್ನಮ್ಮ – ಹೀಗೆ ಜಾನಪದೀಯ ಹೆಸರುಗಳಿಂದಲೂ ಭಜಿಸುವರು. 'ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ' ಎಂಬ ಉಕ್ತಿಯಂತೆ ಪರಬ್ರಹ್ಮ ಮಹಿಷಿಯಾದ ಜಗನ್ಮಾತೆಯ ಪೂಜೆ, ಅರ್ಚನೆ, ಭಜನೆ, ಧ್ಯಾನ, ಸ್ತುತಿ, ನುತಿಗಳು ಅವ್ಯಾಹತವಾಗಿ ಸಾಗುತ್ತಿವೆ. ಅವಳು ಆ ಜಾತಿ ಈ ಜಾತಿ, ಕೆಂಪು ಕಪ್ಪು ಬಿಳಿ ಎಂಬ ಭೇದಗಳಿಲ್ಲದೆ ಎಲ್ಲರೂ ಪೂರ್ಣ ಪ್ರಮಾಣದಲ್ಲಿ ತಾಯಿಯ ರೂಪದಲ್ಲಿ ಪೂಜಿಸುವ ಅಂಬಾಭವಾನಿ. ಜಗನ್ಮಾತೆಯಾದ ಬಾಲಾ ತ್ರಿಪುರಸುಂದರಿಯು ಲೋಕ ಕ್ಷೇಮಕ್ಕಾಗಿ ನಾನಾ ಅವತಾರಗಳನ್ನು ತಾಳಿ ದುಷ್ಟಮರ್ದನ, ಶಿಷ್ಟಪಾಲನವನ್ನು ಮಾಡಿದಳು. ಅವಳ ವಿವಿಧ ರೂಪದಲ್ಲಿ ಮಾಡಿರುವ ಲೋಕಸಂಗ್ರಹಕಾರ್ಯವನ್ನು ಸ್ಮರಿಸುವುದು ಸನಾತನ ಭಾರತೀಯನ ಆದ್ಯ ಕರ್ತವ್ಯವಾಗಿದೆ.



ನವರಾತ್ರಿಯ ಒಂಬತ್ತು ದಿನಗಳ ಕಾಲ ದೇವಿಯನ್ನು ನಾನಾ ವಿಧದಲ್ಲಿ ಆಸ್ತಿಕರು ಭಜಿಸುವರು. ಮೊದಲ ದಿನ ಶೈಲಪುತ್ರಿಯಾಗಿಯೂ, ಎರಡನೆಯ ದಿನ ಸ್ವಾಧಿಷ್ಠಾನದ ಅಭಿಮಾನೀ ದೇವತೆಯಾದ ಬ್ರಹ್ಮಚಾರಿಣಿಯ ರೂಪದಲ್ಲಿಯೂ ಜಗನ್ಮಾತೆಯನ್ನು ಅರ್ಚಿಸಲಾಗುತ್ತದೆ. ಮೂರನೆಯ ದಿನ ಚಂದ್ರಘಂಟಾದೇವಿ ಎಂಬ ಹೆಸರಿನ ಅಧಿಷ್ಠಾತೃದೇವತೆಯ ರೂಪದಲ್ಲಿಯೂ, ನಾಲ್ಕನೆಯ ದಿನ ಕೂಷ್ಮಾಂಡಾದೇವಿಯಾಗಿಯೂ, ಐದನೆಯ ದಿನ ಸ್ಕಂದ ಮಾತೆಯಾಗಿಯೂ, ಆರನೆಯ ದಿನದಂದು ಕಾತ್ಯಾಯನೀ ದೇವಿಯನ್ನಾಗಿಯೂ ಉಪಾಸನೆ ಮಾಡುವರು. ಏಳನೆಯ ದಿನ ಕಾಳರಾತ್ರಿಯೆಂದೂ, ಎಂಟನೆಯ ದಿನ ಮಹಾಗೌರಿಯ ರೂಪಲ್ಲೂ, ಒಂಬತ್ತನೆಯ ದಿನ ಸಿದ್ಧಿದಾತ್ರಿ ಎಂಬ ಹೆಸರಿನಿಂದಲೂ ಪೂಜಿಸಲಾಗುತ್ತದೆ. ಒಂಬತ್ತು ದಿನಗಳ ಕಾಲ ನಾನಾ ವಿಧವಾಗಿ ಜಗನ್ಮಾತೆಯನ್ನು ಸ್ತುತಿಸಿ, ಅರ್ಚಿಸಿ, ಪೂಜಿಸಿ ಸಮಸ್ತ ಲೋಕದ ಕ್ಷೇಮವನ್ನು ಬಯಸಿ, ನಾವೂ ಜೀವನದಲ್ಲಿ ಧನ್ಯತೆಯನ್ನು ಹೊಂದೋಣ.

(ಲೇಖನದ ಪೂರ್ಣಪಾಠಕ್ಕೆ ನೋಡಿ https://www.prajavani.net)

ಶ್ರೀಗಂಧ ಕದ್ದು ಸಿಕ್ಕಿಬಿದ್ದ ಹುಲಿಬೇಟೆ ಆರೋಪಿ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರ, ಮಧ್ಯಪ್ರದೇಶ ಸೇರಿ ದೇಶದ ವಿವಿಧ ಅಭಯಾರಣ್ಯಗಳಲ್ಲಿ ಹುಲಿಗಳನ್ನು ಬೇಟೆಯಾಡಿ, ಅದರ ದೇಹದ ಭಾಗಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ಆರೋಪಿಯನ್ನು ಖಾನಾಪುರ ವಲಯ ಅರಣ್ಯಾಧಿಕಾರಿಗಳ ತಂಡ ಬಂಧಿಸಿದೆ.

'ಮಧ್ಯಪ್ರದೇಶದ ದಾಮೋ ಜಿಲ್ಲೆಯ ಚಿಕಾ ಅಲಿಯಾಸ್ ಕೃಷ್ಣ ಪಟ್ಟೆ ಪವಾರ್ ಬಂಧಿತ ಆರೋಪಿ. ಶ್ರೀಗಂಧದ ಮರಗಳ ತುಂಡುಗಳನ್ನು ಕದ್ದ ಆರೋಪದ ಮೇಲೆ ಶುಕ್ರವಾರ ಬಂಧಿಸಿ, ವಿಚಾರಣೆ ನಡೆಸಿದಾಗ ಆತ ಅಂತರರಾಜ್ಯ ಹುಲಿ ಬೇಟೆಗಾರ ಎಂಬುದು ಗೊತ್ತಾಗಿದೆ' ಎಂದು ವಲಯ ಅರಣ್ಯ ಅಧಿಕಾರಿ ನಾಗರಾಜ ಬಾಳೆಹೊಸೂರ ತಿಳಿಸಿದ್ದಾರೆ.

ಪತ್ತೆ ಹೇಗೆ?: ಜುಲೈನಲ್ಲಿ ತಾಲ್ಲೂಕಿನ ಜಳಗಾ ಗ್ರಾಮದ ಬಳಿ ಶ್ರೀಗಂಧ ಮರಗಳ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯು ಬೆಳಗಾವಿ ತಾಲ್ಲೂಕಿನ ಕಲಖಾಂಬ ಗ್ರಾಮದ ಬಳಿ ಇರುವುದು ಗೊತ್ತಾಯಿತು. ವಿಚಾರಣೆ ವೇಳೆ ಆತ ಬೇರೆ ಬೇರೆ ರಾಜ್ಯಗಳಲ್ಲಿ ಹುಲಿಗಳನ್ನು ಬೇಟೆಯಾಡಿದ ವಿಷಯ ಗೊತ್ತಾಯಿತು' ಎಂದು ಅವರು ತಿಳಿಸಿದ್ದಾರೆ.

'ಕೆಲ ವರ್ಷಗಳ ಹಿಂದೆ ಮೃತಪಟ್ಟ ಹುಲಿ ಬೇಟೆಗಾರ ಸಂಸಾಚಂದ್ ತಂಡದ ಸದಸ್ಯರಲ್ಲಿ ಈತ ಕೂಡ ಒಬ್ಬ ಎಂಬುದು ಗೊತ್ತಾಗಿದೆ. ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಮೇಲಘಾಟ್ ಅರಣ್ಯದಲ್ಲಿ ಹುಲಿ, ಕರಡಿಗಳನ್ನು ಬೇಟೆಯಾದ ಬಗ್ಗೆ ದೂರು ದಾಖಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಮಹಾರಾಷ್ಟ್ರ ರಾಜ್ಯದ ಅರಣ್ಯ ಇಲಾಖೆ ಹಾಗೂ ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೊ ಜೊತೆಗೆ ಸಂವಹನ ಸಾಧಿಸಿ, ವಿವರವಾದ ತನಿಖೆ ನಡೆಸುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಉಪ ಅರಣ್ಯ ಮಹಾ ನಿರೀಕ್ಷಕರಿಂದ ಸೂಚನೆ ಬಂದಿದೆ. ತನಿಖೆ ಪ್ರಗತಿಯಲ್ಲಿದೆ' ಎಂದು ಅವರು ತಿಳಿಸಿದ್ದಾರೆ.

ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಚವ್ಹಾಣ ಮಾರ್ಗದರ್ಶನ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರ್ ಕಲ್ಲೋಳಿಕರ ನೇತೃತ್ವದಲ್ಲಿ, ಖಾನಾಪುರ ವಲಯ ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಯ ತಂಡ ಕಾರ್ಯಾಚರಣೆ ನಡೆಸಿತು.

ಚಪ್ಪಲಿ ರಿಪೇರಿ ಮಾಡುವ ವ್ಯಕ್ತಿಗೆ ಗಣರಾಜ್ಯೋತ್ಸವಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ಉಡುಪಿ: ಕುಂದಾಪುರದ ಶಾಸ್ತ್ರೀ ಸರ್ಕಲ್‌ನಲ್ಲಿ ಚಪ್ಪಲಿ ರಿಪೇರಿ ಮಾಡುವ ಮಣಿಕಂಠ ಅವರಿಗೆ ನವದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವದಲ್ಲಿ ಭಾಗವಹಿಸಲು ಕೇಂದ್ರ ಸರ್ಕಾರದಿಂದ ಆಹ್ವಾನ ನೀಡಲಾಗಿದೆ.

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಫಲಾನುಭವಿ ಆಗಿರುವುದರಿಂದ ಮಣಿಕಂಠ ಅವರನ್ನು ಆಯ್ಕೆ ಮಾಡಲಾಗಿದೆ. ಇವರು 23 ವರ್ಷಗಳಿಂದ ಚಪ್ಪಲಿ ರಿಪೇರಿ ಮಾಡುವ ವೃತ್ತಿಯಲ್ಲಿ ತೊಡಗಿದ್ದಾರೆ.

ಮೊದಲ ಸಲ ವಿಮಾನಯಾನ: 'ಜೀವನದಲ್ಲಿ ಮೊದಲ ಬಾರಿಗೆ ವಿಮಾನ ಹತ್ತುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ. ಅದಕ್ಕಿಂತ ಹೆಚ್ಚಾಗಿ ಚಪ್ಪಲಿ ರಿಪೇರಿ ಮಾಡುವ ವ್ಯಕ್ತಿಯನ್ನು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವಕ್ಕೆ ಆಹ್ವಾನ ನೀಡಿರುವುದು ಹೆಚ್ಚು ಖುಷಿ ಕೊಟ್ಟಿದೆ' ಎಂದು ಮಣಿಕಂಠ ತಿಳಿಸಿದರು.

'ದೆಹಲಿಗೆ ತೆರಳಲು ಹಾಗೂ ಹತ್ತಿರದಿಂದ ಗಣರಾಜ್ಯೋತ್ಸವವನ್ನು ಕಣ್ತುಂಬಿಕೊಳ್ಳಲು ಕಾತರನಾಗಿದ್ದೇನೆ. ಪ್ರಯಾಣಕ್ಕೆ ಅಗತ್ಯ ಟಿಕೆಟ್ ವ್ಯವಸ್ಥೆ ಮಾಡುವುದಾಗಿ ಕುಂದಾಪುರ ಪುರಸಭೆಯ ಅಧಿಕಾರಿಗಳು ತಿಳಿಸಿದ್ದಾರೆ' ಎಂದರು.



ಕುಂದಾಪುರದ ಶಾಸ್ತ್ರೀ ಸರ್ಕಲ್‌ನಲ್ಲಿ ಚಪ್ಪಲಿ ರಿಪೇರಿ ಮಾಡುವ ಮಣಿಕಂಠ

'ಅಜ್ಜ ಹಾಗೂ ತಂದೆ 7 ದಶಕಗಳ ಕಾಲ ಚಪ್ಪಲಿ ಹೊಲಿಯುವ ವೃತ್ತಿ ಮಾಡಿದ್ದಾರೆ. ತಂದೆಯ ಬಳಿಕ ಸರ್ಕಾರದ ನೆರವಿನೊಂದಿಗೆ ಲಿಡ್ಕರ್ ಮಳಿಗೆ ಹಾಕಿಕೊಂಡು ಚಪ್ಪಲಿ ರಿಪೇರಿ ಮಾಡುವ ವೃತ್ತಿ ಮುಂದುವರಿಸಿದ್ದೇನೆ. ಇಬ್ಬರು ಮಕ್ಕಳು ಕಾಲೇಜು ಓದುತ್ತಿದ್ದಾರೆ. ಚಪ್ಪಲಿ ಹೊಲಿಯುವ ಕಾಯಕ ಬದುಕು ಕಟ್ಟಿಕೊಟ್ಟಿದ್ದು ವೃತ್ತಿ ಬಗ್ಗೆ ಹೆಮ್ಮೆ ಹಾಗೂ ತೃಪ್ತಿ ಇದೆ' ಎಂದು ತಿಳಿಸಿದರು.

ಸ್ವನಿಧಿ ಫಲಾನುಭವಿ: 'ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ಮೂರು ಬಾರಿ ಸಾಲ ಪಡೆದಿದ್ದೇನೆ. ಮೊದಲ ಸಲ 10 ಸಾವಿರ, ಎರಡನೇ ಬಾರಿ 20 ಸಾವಿರ, ಮೂರನೇ ಬಾರಿ 50 ಸಾವಿರ ಸಾಲ ಪಡೆದಿದ್ದು ಸಮಯಕ್ಕೆ ಸರಿಯಾಗಿ ಮರು ಪಾವತಿ ಮಾಡುತ್ತಿದ್ದೇನೆ. ಲೇವಾದೇವಿದಾರರ ಮುಂದೆ ಹಣಕ್ಕಾಗಿ ಕೈಚಾಚುವ ಪರಿಸ್ಥಿತಿ ಸ್ವನಿಧಿಯಿಂದ ದೂರವಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಮಹಿಳೆಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ

ಘಟಪ್ರಭಾ (ಬೆಳಗಾವಿ ಜಿಲ್ಲೆ): ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಮಹಿಳೆಯರ ಗುಂಪೊಂದು, ಮಹಿಳೆಯೊಬ್ಬರ ಕೊರಳಿಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿದೆ. ಈ ಸಂಬಂಧ 13 ಮಂದಿ ಮಹಿಳೆಯರ ವಿರುದ್ಧ ದೂರು ದಾಖಲಾಗಿದೆ.

ಇಲ್ಲಿನ ಮೃತ್ಯುಂಜಯ ವೃತ್ತದಲ್ಲಿ ರಾತ್ರಿ 9ರ ಸುಮಾರಿಗೆ ಸೇರಿದ ಕೆಲ ಮಹಿಳೆಯರು ಶ್ರೀದೇವಿ ಎಂಬುವರನ್ನು ತರಾಟೆಗೆ ತೆಗೆದುಕೊಂಡರು. ನಂತರ ಚಪ್ಪಲಿ, ಬೂಟುಗಳನ್ನು ಕಟ್ಟಿ ಹಾರ ಮಾಡಿ ಕೊರಳಿಗೆ ಹಾಕಿ ರಸ್ತೆಯಲ್ಲಿ ನಡೆಸಿದರು. ಇದರ ವಿಡಿಯೊ ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ಹಲ್ಲೆಗೆ ಒಳಗಾದ ಮಹಿಳೆ ದೂರು ನೀಡಿದ್ದಾರೆ. ತನಿಖೆ ನಡೆಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಿಜೆಪಿಯ ಮಾಜಿ ಸಿ.ಎಂ ಕಾಂಗ್ರೆಸ್‌ಗೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಬಿಜೆಪಿ ಹಾಗೂ ಜೆಡಿಎಸ್‌ನ 30ಕ್ಕೂ ಹೆಚ್ಚು ಮುಖಂಡರು ಶೀಘ್ರವೇ ಕಾಂಗ್ರೆಸ್ ಸೇರಲಿದ್ದಾರೆ. ಇದರಲ್ಲಿ ಬಿಜೆಪಿಯ ಮಾಜಿ ಮುಖ್ಯಮಂತ್ರಿಯೊಬ್ಬರೂ ಇದ್ದಾರೆ' ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಹೇಳಿದ್ದಾರೆ.

'ಪಕ್ಷಕ್ಕೆ ಬರುವವರೆಲ್ಲರೂ ನಮ್ಮ ನಾಯಕರ ಸಂಪರ್ಕದಲ್ಲಿದ್ದಾರೆ. ರಾಜ್ಯದಲ್ಲಿ ಬಿಜೆಪಿಯು ಆಂತರಿಕ ಸಮಸ್ಯೆಯಿಂದ ಬಳಲುತ್ತಿದೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಗಳನ್ನು ಕೊಂದು ತಾಯಿ ಆತ್ಮಹತ್ಯೆ; ಮಗನ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ: ತಾಲ್ಲೂಕಿನ ಹುಲಿಕಟ್ಟೆ ಗ್ರಾಮದಲ್ಲಿ ಶನಿವಾರ ಮಗಳನ್ನು ಕೊಂದು, ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಯಿಯ ಹೊಡೆತದಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಮಗನನ್ನು ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಮಾಬಾನು (19) ಕೊಲೆಯಾದವರು. ಬೇಗಂ (56) ಆತ್ಮಹತ್ಯೆ ಮಾಡಿಕೊಂಡವರು. ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಅಮಾನುಲ್ಲಾಗೆ (16) ಚಿಕಿತ್ಸೆ ಮುಂದುವರೆದಿದೆ. ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ ಎಂದು ಹರಪನಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮನೆಯಲ್ಲಿ ಬೇಗಂ ಮತ್ತು ಶಮಾಬಾನು ಮಾತ್ರ ಇರುತ್ತಿದ್ದರು. ಹಾರಕನಾಳು ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿ ಅಮಾನುಲ್ಲಾ ದಸರಾ ರಜೆಗೆಂದು ಮನೆಗೆ ಬಂದಿದ್ದ. ಶುಕ್ರವಾರ ರಾತ್ರಿ ಮಲಗಿದ್ದ ವೇಳೆ ತಾಯಿ ಕಟ್ಟಿಗೆಯಿಂದ ಇಬ್ಬರು ಮಕ್ಕಳ ತಲೆಗೆ ಬಲವಾಗಿ ಹೊಡೆದ ಪರಿಣಾಮ ಮಗಳು ಮೃತಪಟ್ಟರೆ, ಮಗ ಪ್ರಜ್ಞೆ ಕಳೆದುಕೊಂಡ' ಎಂದು ಅವರು ಮಾಹಿತಿ ನೀಡಿದ್ದಾರೆ.

ಅಬಕಾರಿ ಡಿ.ಸಿ ಸೇರಿ ನಾಲ್ವರು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ಮದ್ಯದ ಅಂಗಡಿ ಆರಂಭಕ್ಕೆ ಪರವಾನಗಿ ಕೊಡಲು ಲಂಚ ಪಡೆಯುತ್ತಿರುವಾಗ ಅಬಕಾರಿ ಉಪ ಆಯುಕ್ತೆ ಸೇರಿ ನಾಲ್ವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಶೈಲಶ್ರೀ



ಅಶೋಕ



ಸ್ವಪ್ನ



ಶೀಲಾ

ಜಿಲ್ಲಾ ಅಬಕಾರಿ ಉಪ ಆಯುಕ್ತೆ ಸ್ವಪ್ನ, ಪ್ರಥಮ ದರ್ಜೆ ಸಹಾಯಕ ಅಶೋಕ ಎಚ್.ಎಂ., ಹರಿಹರ ಅಬಕಾರಿ ವಲಯ ಕಚೇರಿಯ ಅಬಕಾರಿ ನಿರೀಕ್ಷಕಿ ಶೀಲಾ, ದ್ವಿತೀಯ ದರ್ಜೆ ಸಹಾಯಕಿ ಶೈಲಶ್ರೀ ಬಂಧಿತರು.

ಹರಿಹರದ ಅಮರಾವತಿ ಬಳಿ ಮದ್ಯದ ಅಂಗಡಿ ಆರಂಭಿಸಲು ಡಿ.ಜಿ.ರಘುನಾಥ ಎಂಬುವರು ಅರ್ಜಿ ಸಲ್ಲಿಸಿದ್ದರು. ಅವರ ಬಳಿ ಆರೋಪಿಗಳು ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಅಬಕಾರಿ ಇಲಾಖೆ ಕಚೇರಿಯಲ್ಲಿ ಆರೋಪಿ ಅಶೋಕ ಎಚ್.ಎಂ. ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸರು ಬಂಧಿಸಿದರು. ಲಂಚದ ಹಣದಲ್ಲಿ ಪಾಲು ಕೇಳಿದ್ದ ಆರೋಪದ ಮೇರೆಗೆ ಇತರ ಮೂವರನ್ನು ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ಮತ್ತೊಬ್ಬ ಅಧಿಕಾರಿಯೊಬ್ಬರ ಪಾತ್ರವೂ ಇದೆ ಎಂಬ ಮಾಹಿತಿ ಇದೆ. ಅವರ ಹೆಸರನ್ನು ದಾವಣಗೆರೆ ಲೋಕಾಯುಕ್ತ ಎಸ್‌ಪಿ ಎಂ.ಎಸ್. ಕೌಲಾಪೂರೆ ಬಹಿರಂಗಪಡಿಸಿಲ್ಲ.

ವೈದ್ಯಕೀಯ ಕೋರ್ಸ್: ಮೊದಲ ವರ್ಷದ ಪ್ರವೇಶಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌನ್ಸೆಲಿಂಗ್ ಸುತ್ತುಗಳಲ್ಲಿ ಮೆರಿಟ್ ಆಧಾರದಲ್ಲಿ ಅರ್ಹತೆ ಪಡೆದಿದ್ದರೂ ಎಂಬಿಬಿಎಸ್ ಪ್ರವೇಶ ನಿರಾಕರಿಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕ್ರಮ ಪ್ರಶ್ನಿಸಿ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿದೆ.

'ಪ್ರವೇಶ ನೀಡುವಂತೆ ಕೆಇಎಗೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ಸೈಯ್ಯದ್ ಅದಿಲ್ ಬಿಲಾಸ್, ಪೂರ್ಣವ ಸೆಂಥಿಲ್ ಹಾಗೂ ಎಂ.ಸಾಧನಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಶನಿವಾರ ವಿಚಾರಣೆ ನಡೆಸಿದ ವಿಶೇಷ ವಿಭಾಗೀಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ನ್ಯಾಯಮೂರ್ತಿ ಎ.ವಿಜಯಕುಮಾರ್ ಪಾಟೀಲ್ ಈ ಕುರಿತಂತೆ ಆದೇಶಿಸಿದ್ದಾರೆ.

'ನಾವು ನೀಟ್ ಪರೀಕ್ಷೆ ಪಾಸಾಗಿ ವೈದ್ಯಕೀಯ ಪದವಿ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಹರಾಗಿದ್ದೆವು. ಕೆಇಎ ನಡೆಸಿದ್ದ ಮೊದಲ ಸುತ್ತಿನಲ್ಲೇ ಮೆರಿಟ್ ಆಧಾರದಲ್ಲಿ ಆಯ್ಕೆಯಾಗಿದ್ದೆವು. ಆದರೆ, ಕಾಲೇಜಿಗೆ ಪ್ರವೇಶ ಪಡೆಯಲು ಆಗಿಲ್ಲ' ಎಂದು ಅರ್ಜಿದಾರರು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿದಾರರ ಪರ ಹಿರಿಯ ವಕೀಲ ಉದಯ ಹೊಳ್ಳ ಅವರ ವಾದ ಮನ್ನಿಸಿದ ನ್ಯಾಯಪೀಠ, 'ಮೂವರೂ ವಿದ್ಯಾರ್ಥಿಗಳಿಗೆ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಅನುಮತಿ ನೀಡಬೇಕು' ಎಂದು ಕೆಇಎಗೆ ನಿರ್ದೇಶಿಸಿದೆ. ಅಂತೆಯೇ, 'ಈ ಆದೇಶವು ಅರ್ಜಿಯ ಅಂತಿಮ ವಿಚಾರಣೆ ನಂತರ ಹೊರಬರುವ ತೀರ್ಪಿಗೆ ಒಳಪಟ್ಟಿರುತ್ತದೆ' ಎಂದು ಹೇಳಿದೆ.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-12102023-249336
CG-DL-E-12102023-249336
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 4241] NEW DELHI, WEDNESDAY, OCTOBER 11, 2023/ ASVINA 19, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ನವದೆಹಲಿ ದಿನಾಂಕ 10ನೇ ಅಕ್ಟೋಬರ್,2023

ಅಧಿಸೂಚನೆ

ಸಂ.ಎಲ್‌ಎಕ್ಯೂ/ಎನ್‌ಹೆಚ್–ರಾಹೆವಿ/548ಬಿ/2023–24

ಎಸ್.ಓ.ನಂ.4412(ಇ) ಕೇಂದ್ರ ಸರಕಾರಕ್ಕೆ ಪ್ರಸ್ತುತ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–548ಬಿ ರಲ್ಲಿ (ವಿಜಯಪುರ–ಸಂಕೇಶ್ವರ ಸೆಕ್ಷನ್) ಕಿಮೀ.0.00 ರಿಂದ ಕಿಮೀ.80.00 ರವರೆಗೆ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂದು ಕಂಡು ಬಂದಿರುತ್ತದೆ, ಆದಕಾರಣ ಕೇಂದ್ರ ಸರ್ಕಾರವು ರ್‍ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನ ಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಇದ್ದವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂ–ಸ್ವಾಧೀನಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿ ಧಾರವಾಡ ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಯಿಸಿ ಈ ಬಗ್ಗೆ ಇತರ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು. ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಇದ್ದವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ: ಈ ಕೆಳಕಂಡ ಶೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯ ವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/– ವಿಶೇಶಭೂಸ್ವಾಧೀನಾಧಿಕಾರಿಗಳು
ರಾಷ್ಟ್ರೀಯಹೆದ್ದಾರಿ, ಧಾರವಾಡ

ಅನುಸೂಚಿ

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಹಾಯ್ದು ಹೋಗಿರುವ (ವಿಜಯಪುರ–ಸಂಕೇಶ್ವರ ವಿಭಾಗ) ರಾಷ್ಟ್ರೀಯ ಹೆದ್ದಾರಿ–548ಬಿ ರ ಕಿಮೀ.0.00 ರಿಂದ 80.00 ರ ವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆ : ಬೆಳಗಾವಿ

ಕ್ರ.ಸಂ	ಸರ್ವೇ/ಪ್ಲಾಟ ನಂ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರಮೀಟರಗಳಲ್ಲಿ)	ವಿಸ್ತೀರ್ಣ ಹೆಕ್ಟರ್‌ಗಳಲ್ಲಿ)
1	2	3	4	5	6
ತಾಲೂಕ : ಅಥಣಿ					
ಗ್ರಾಮ : ಅಥಣಿ					
1	2134	ಖಾಸಗಿ	ಖುಷ್ಕಿ	859.5261	0.0859526
2	2135	ಖಾಸಗಿ	ಖುಷ್ಕಿ	8230.6636	0.8230660
3	680	ಖಾಸಗಿ	ಖುಷ್ಕಿ	29.0026	0.0029003
4	681	ಖಾಸಗಿ	ಖುಷ್ಕಿ	104.3164	0.0104316
5	693	ಖಾಸಗಿ	ಖುಷ್ಕಿ	1200.4642	0.1200460
ಗ್ರಾಮ : ತೆಲಸಂಗ					
6	391	ಖಾಸಗಿ	ಖುಷ್ಕಿ	735.8885	0.0735889
7	393	ಖಾಸಗಿ	ಖುಷ್ಕಿ	3291.273	0.3291270
8	394	ಖಾಸಗಿ	ಖುಷ್ಕಿ	627.224	0.0627224
ಗ್ರಾಮ : ಬಡಚಿ					
9	50	ಖಾಸಗಿ	ಖುಷ್ಕಿ	2659.321	0.2659320
ಗ್ರಾಮ : ಬಾಡಗಿ					
10	168	ಖಾಸಗಿ	ಖುಷ್ಕಿ	1776.848	0.1776850
11	200	ಖಾಸಗಿ	ಖುಷ್ಕಿ	1549.610	0.1549610
ಗ್ರಾಮ : ಕೊಕಟನೂರ					
12	644	ಖಾಸಗಿ	ಖುಷ್ಕಿ	1014.096	0.1014100
13	645	ಖಾಸಗಿ	ಖುಷ್ಕಿ	169.064	0.0169064
				ಒಟ್ಟು	2.2247292

[F.No.RW/BNG/NH/548B/3A]
ABHAY JAIN, Dy.Secy.

ಯುರೋಪ್ ಸಂಸತ್ ಡೆಪ್ಯುಟಿ ಸ್ಪೀಕರ್ ಎದುರು ಓಂ ಬಿರ್ಲಾ ಪ್ರತಿಭಟನೆ

ನವದೆಹಲಿ (ಪಿಟಿಐ): ಭಾರತದ ಆಂತರಿಕ ವಿಷಯಗಳ ಕುರಿತು ಯುರೋಪಿನ ಸಂಸತ್‌ನಲ್ಲಿ ನಿರ್ಣಯ ಕೈಗೊಂಡಿದ್ದನ್ನು ಖಂಡಿಸಿ ಯುರೋಪಿನ ಸಂಸತ್ ಡೆಪ್ಯುಟಿ ಸ್ಪೀಕರ್ ನಿಕೋಲಾ ಬೀರ್ ಅವರ ಎದುರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಶನಿವಾರ ತೀವ್ರ ಪ್ರತಿಭಟನೆ ದಾಖಲಿಸಿದರು.

'ನಿಕೋಲಾ ಬೀರ್ ಅವರನ್ನು ಭೇಟಿಯಾದಾಗ ಬಿರ್ಲಾ ಅವರು ಭಾರತದ ಸಾರ್ವಭೌಮತ್ವದ ಬಗ್ಗೆ ಒತ್ತಿಹೇಳಿದರು. ಭಾರತದ ಆಂತರಿಕ ವಿಷಯಗಳ ಬಗ್ಗೆ ಯುರೋಪ್ ಸಂಸತ್ತಿನಲ್ಲಿ ನಿರ್ಣಯ ಮಂಡಿಸಿದ್ದರ ವಿರುದ್ಧ ತೀವ್ರ ಪ್ರತಿಭಟನೆ ದಾಖಲಿಸಿದರು' ಎಂದು ಲೋಕಸಭೆ ಕಾರ್ಯಾಲಯ ಹೇಳಿಕೆಯಲ್ಲಿ ತಿಳಿಸಿದೆ.

'ಪ್ರತಿ ರಾಷ್ಟ್ರವು ಮತ್ತು ಸಂಸತ್ತು ಸಾರ್ವಭೌಮ. ಬೇರೆ ದೇಶಗಳ ಆಂತರಿಕ ವಿಷಯಗಳನ್ನು ಬೇರೆಯವರು ಚರ್ಚಿಸುವಂತಿಲ್ಲ' ಎಂದು ಬಿರ್ಲಾ ಅವರು ನಿಕೋಲಾ ಬೀರ್ ಅವರಿಗೆ ತಿಳಿಸಿದರು.

ಇದೇ ವೇಳೆ ಬಿರ್ಲಾ ಅವರು, ಮುಂದಿನ ವರ್ಷ ದೇಶದಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆ ಸಮಯದಲ್ಲಿನ ಪ್ರಜಾಪ್ರಭುತ್ವದ ವೈಭವ ವೀಕ್ಷಿಸಲು ನಿಕೋಲಾ ಅವರನ್ನು ಆಹ್ವಾನಿಸಿದರು.

ಪಿ20 ಶೃಂಗಸಭೆಯ ಯಶಸ್ಸಿಗೆ ಮತ್ತು ಭಾರತ ಹಾಗೂ ಯುರೋಪ್ ಸಂಸತ್ತು ನಿಕಟ ಸಂಬಂಧ ಕಾಯ್ದುಕೊಂಡಿರುವುದಕ್ಕೆ ನಿಕೋಲಾ ಅವರು, ಬಿರ್ಲಾ ಅವರನ್ನು ಅಭಿನಂದಿಸಿದರು. 'ಸದ್ಯ ಯುರೋಪ್ ಸವಾಲಿನ ಸಮಯ ಎದುರಿಸುತ್ತಿದೆ. ಭಾರತದ ಸಹಕಾರ ಯುರೋಪ್‌ಗೆ ಬೇಕಿದೆ' ಎಂದೂ ನಿಕೋಲಾ ಒತ್ತಿ ಹೇಳಿದರು.

ಜುಲೈನಲ್ಲಿ, ಯುರೋಪಿನ ಸಂಸತ್‌ನಲ್ಲಿ ಮಣಿಪುರ ಹಿಂಸಾಚಾರ ಕುರಿತು ನಿರ್ಣಯ ಅಂಗೀಕರಿಸಲಾಗಿತ್ತು. ಇದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ದ್ವೀಪರಾಷ್ಟ್ರದ ಅಂತರ್ಯುದ್ಧದ ಕಾರಣದಿಂದ ನಾಲ್ಕು ದಶಕಗಳ ಹಿಂದೆ ಸ್ಥಗಿತವಾಗಿದ್ದ ಸೇವೆ

ಭಾರತ–ಶ್ರೀಲಂಕಾ ದೋಣಿ ಸೇವೆ ಶುರು

ನಾಗಪಟ್ಟಣಂ/ನವದೆಹಲಿ (ಪಿಟಿಐ): ಶ್ರೀಲಂಕಾದ ಅಂತರ್ಯುದ್ಧದ ಕಾರಣದಿಂದಾಗಿ 40 ವರ್ಷಗಳ ಹಿಂದೆ ರದ್ದಾಗಿದ್ದ ಶ್ರೀಲಂಕಾ–ಭಾರತ ನಡುವಣ ಪ್ರಯಾಣಿಕ ದೋಣಿ ಸಂಚಾರ ಸೇವೆ ಶನಿವಾರ ಪುನರಾರಂಭಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ದೆಹಲಿಯಿಂದಲೇ ವರ್ಚುವಲ್ ಆಗಿ ಪ್ರಯಾಣಿಕ ದೋಣಿಗೆ ಚಾಲನೆ ನೀಡಿದರು.

ತಮಿಳುನಾಡಿನ ನಾಗಪಟ್ಟಣಂ ಮತ್ತು ಉತ್ತರ ಶ್ರೀಲಂಕಾದ ಜಾಫ್ನಾ ಬಳಿಯ ಕಂಕಸಂತುರೈ ನಡುವಣ ದೋಣಿ ಸೇವೆಯು ಎರಡು ದೇಶಗಳ ಪ್ರಾಚೀನ ಕಡಲ ಮಾರ್ಗ ಪುನರ್‌ಸ್ಥಾಪಿಸುವ ಗುರಿ ಹೊಂದಿದೆ.

ಶಿಪ್ಪಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾ (ಎಸ್‌ಸಿಐ) ಈ ವೇಗದ ದೋಣಿಯನ್ನು ನಿರ್ವಹಿಸುತ್ತಿದೆ. 150 ಪ್ರಯಾಣಿಕರನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿರುವ ದೋಣಿಯು, ನಾಗಪಟ್ಟಣಂ ಮತ್ತು ಕಂಕಸಂತುರೈ ನಡುವಿನ ಸುಮಾರು 60 ನಾಟಿಕಲ್ ಮೈಲು (110 ಕಿಮೀ) ದೂರವನ್ನು ಸಮುದ್ರದ ಪರಿಸ್ಥಿತಿಗಳಿಗೆ ಅನುಗುಣವಾಗಿ ಸುಮಾರು ಮೂರೂವರೆ ಗಂಟೆಗಳಲ್ಲಿ ಕ್ರಮಿಸಲಿದೆ.


ಭಾರತ ಮತ್ತು ಶ್ರೀಲಂಕಾ ನಡುವೆ ಸಂಚರಿಸಲಿರುವ ಚೆರಿಯಾಪಾನಿ ಹೆಸರಿನ ಪ್ರಯಾಣಿಕ ದೋಣಿ

'ಚೆರಿಯಪಾನಿ' ಹೆಸರಿನ ದೋಣಿಯು ಮೊದಲ ಯಾನದಲ್ಲಿ ಶ್ರೀಲಂಕಾಕ್ಕೆ 50 ಪ್ರಯಾಣಿಕರೊಂದಿಗೆ ಪ್ರಯಾಣಿಸಿತು. ಸಂಜೆಯ ವೇಳೆಗೆ ಭಾರತಕ್ಕೆ ಮರಳಲಿದೆ. ಚೊಚ್ಚಲ ಯಾನದಲ್ಲಿದ್ದ ಪ್ರಯಾಣಿಕರು ಶ್ರೀಲಂಕಾಕ್ಕೆ ದೋಣಿಯಲ್ಲಿ ತೆರಳುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

> ಭಾರತದ ರಾಮೇಶ್ವರಂ- ಶ್ರೀಲಂಕಾದ ತಲೈಮನ್ನಾರ್ ನಡುವಿನ ಸಾಂಪ್ರದಾಯಿಕ ಮಾರ್ಗ ಸೇರಿ ಇತರ ಬಂದರುಗಳ ನಡುವೆ ದೋಣಿ ಸಂಚಾರ ಪ್ರಾರಂಭಿಸಲು ಎರಡೂ ದೇಶಗಳು ಕಾರ್ಯೋನ್ಮುಕವಾಗಿವೆ
> – **ಜೈಶಂಕರ್,** ವಿದೇಶಾಂಗ ಸಚಿವ

ಸಂಪರ್ಕ ಬಲದ ಗುರಿ

1982ಕ್ಕೂ ಹಿಂದೆ ತಮಿಳುನಾಡಿನ ತೂತ್ತುಕುಡಿ, ಚೆನ್ನೈ ಮತ್ತು ಕೊಲಂಬೊ ನಡುವೆ ಇಂಡೋ-ಸಿಲೋನ್ ಎಕ್ಸ್‌ಪ್ರೆಸ್ ದೋಣಿ ಸಂಚಾರ ಸೇವೆ ಇತ್ತು. ಪ್ರಾಚೀನವಾದ ಈ ಮಾರ್ಗವನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಸದ್ಯ ಹೊಸ ದೋಣಿ ಸೇವೆ ಯೋಜನೆಯು ಒಳಗೊಂಡಿದೆ. ಜತೆಗೆ, ಭಾರತದ ಈ ಪ್ರಯತ್ನವು ನೆರೆಹೊರೆಯವರೊಂದಿಗೆ ಮತ್ತು ಹಿಂದೂ ಮಹಾಸಾಗರದ ಪ್ರದೇಶದಲ್ಲಿ ಸಂಪರ್ಕವನ್ನು ಬಲಪಡಿಸುವ ಮಹತ್ವದ ಉದ್ದೇಶ ಒಳಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೋಣಿ ಸಂಚಾರ ಸೇವೆ ಪ್ರಾರಂಭಿಸುವ ಸಲುವಾಗಿ ನಾಗಪಟ್ಟಣಂ ಬಂದರಿನಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸುವಲ್ಲಿ ಭಾರತ ಸರ್ಕಾರವು ತಮಿಳುನಾಡಿಗೆ ನೆರವು ನೀಡುತ್ತಿದೆ. ಅಂತೆಯೇ, ಶ್ರೀಲಂಕಾ ಸರ್ಕಾರವು ಕಂಕಸಂತುರೈ ಬಂದರಿನಲ್ಲಿ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸುತ್ತಿದೆ ಎಂದಿದ್ದಾರೆ.

ಗಿನ್ನಿಸ್ ಪುಸ್ತಕ: ಭಾರತದ 60ಕ್ಕೂ ಹೆಚ್ಚು ಸಾಧನೆಗಳ ಪಟ್ಟಿ

ಉದ್ಯಮಿ ಮುಕೇಶ್ ಅಂಬಾನಿಯವರ 27 ಅಂತಸ್ತಿನ ಗಗನಚುಂಬಿ ನಿವಾಸಕ್ಕೆ ಪಟ್ಟಿಯಲ್ಲಿ ಸ್ಥಾನ

ನವದೆಹಲಿ (ಪಿಟಿಐ): ಗಿನ್ನಿಸ್ ವಿಶ್ವ ದಾಖಲೆಗಳಿಗೆ ಸಂಬಂಧಿಸಿದ ಹೊಸ ಆವೃತ್ತಿಯ ಪುಸ್ತಕ ಬಿಡುಗಡೆಯಾಗಿದ್ದು, ಜಗತ್ತಿನ 2,638 ಸಾಧನೆ/ದಾಖಲೆಗಳನ್ನು ಪಟ್ಟಿ ಮಾಡಲಾಗಿದೆ. ಅತ್ಯಂತ ಹೆಚ್ಚು ಮಳೆ ಬೀಳುವ ಮೇಘಾಲಯದ ಚಿರಾಪುಂಜಿ ಸೇರಿ ಭಾರತದ 60ಕ್ಕೂ ಹೆಚ್ಚು ದಾಖಲೆಗಳು ಈ ಪುಸ್ತಕದಲ್ಲಿ ಸ್ಥಾನ ಪಡೆದಿವೆ.

ಗಿನ್ನಿಸ್ ದಾಖಲೆಯ ಪುಸ್ತಕವನ್ನು ಭಾರತದಲ್ಲಿ 'ಪೆಂಗ್ವಿನ್ ರ‍್ಯಾಂಡಮ್ ಹೌಸ್' ಪ್ರಕಾಶನ ಪ್ರಕಟಿಸಿದ್ದು, 9 ಅಧ್ಯಾಯ ಒಳಗೊಂಡಿದೆ. ಪುಸ್ತಕದ ಮುಖಪುಟವನ್ನು ಪ್ರಶಸ್ತಿ ವಿಜೇತ ಕಲಾವಿದ ರಾಡ್ ಹಂಟ್ ಚಿತ್ರಿಸಿದ್ದಾರೆ.

ದೇಶದಲ್ಲಿ ಅತಿ ಹೆಚ್ಚು ಪ್ರಮಾಣದ ಮಳೆಯಾಗುವ ಚಿರಾಪುಂಜಿಯು ಅತ್ಯಂತ ಹಳೇ ದಾಖಲೆಗಳ ಪೈಕಿ ಒಂದೆನಿಸಿಕೊಂಡಿದೆ. 1995ರ ಜೂನ್ 15-16 ರಂದು ಚಿರಾಪುಂಜಿಯು 48 ಗಂಟೆಗಳ ಅವಧಿಯಲ್ಲಿ 2.493 ಮೀ (8 ಅಡಿ 2 ಇಂಚು) ಮಳೆ ಕಂಡಿತ್ತು. ಈ ಪ್ರದೇಶದಲ್ಲಿ ಹೆಚ್ಚು ಮಳೆಯಾಗುವುದು ಸಾಮಾನ್ಯವೇ ಆದರೂ, ಕೇವಲ 48 ತಾಸುಗಳಲ್ಲಿ ಈ ಪರಿಯ ಮಳೆಯಾಗಿದ್ದು ವಿರಳ. ಇದನ್ನು ವಿಶ್ವ ಹವಾಮಾನ ಸಂಘಟನೆಗಳು ಖಾತ್ರಿಪಡಿಸಿವೆ' ಎಂದು ಪುಸ್ತಕದಲ್ಲಿ ವಿವರಿಸಲಾಗಿದೆ.

ತಮ್ಮ ಹಳೇ ಕಾರಿನಲ್ಲಿ 1989–1991 ನಡುವಿನ ಅವಧಿಯಲ್ಲಿ ವಿಶ್ವ ಪರ್ಯಟನೆ ಮಾಡಿ, ಆರು ಖಂಡಗಳನ್ನು ಸುತ್ತಿದ ಭಾರತದ ದಂಪತಿ ಚೌಧರಿ ಮತ್ತು ಅವರ ಪತ್ನಿ ನೀನಾ ಚೌಧರಿಯವರೂ ಗಿನ್ನಿಸ್ ದಾಖಲೆ ಪುಸ್ತಕದ ಸಾಧಕರ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ. ದಂಪತಿ 1989ರ ನ.17ರಂದು ತಮ್ಮ ಕಾಂಟೆಸ್ಸಾ ಕಾರಿನಲ್ಲಿ ಪರ್ಯಟನೆ ಆರಂಭಿಸಿದ್ದರು. 69 ದಿನ 19 ಗಂಟೆಗಳ ಕಾಲ ಜಗತ್ತಿನಾದ್ಯಂತ ಸಂಚಾರ ನಡೆಸಿದ್ದರು. ಅವರ ಯಾನದೆಹಲಿಯಲ್ಲಿಅಂತ್ಯಗೊಂಡಿತ್ತು.

ಜಾನಪದ ಸಂಗೀತಗಾರ, ಪದ್ಮಶ್ರೀ ಪುರಸ್ಕೃತ ತಂಗಾ ಡಾರ್ಲಾಂಗ್ ಅವರು ಗಿನ್ನಿಸ್ ದಾಖಲೆ ಪುಸ್ತದಲ್ಲಿ ಸ್ಥಾನ ಪಡೆದಿದ್ದಾರೆ. ತ್ರಿಪುರಾದ ಮುರುಯಿ ಗ್ರಾಮದವರಾದ ಡಾರ್ಲಾಂಗ್ ಅವರು ಕೊನೆಯ ಬುಡಕಟ್ಟು ಸಂಗೀತಗಾರ. ತ್ರಿಪುರಾದ ಡಾರ್ಲಾಂಗ್ ಬುಡಕಟ್ಟು ಜನರ ವಾದ್ಯ 'ರೋಸೆಮ್' ರಕ್ಷಣೆಯಲ್ಲಿ ಅವರು ನಿರತರಾಗಿದ್ದಾರೆ.

62.8 ಸೆಂ.ಮೀ.ನ (24.7 ಅಂಗುಲ) ನಾಗಪುರದ ಜ್ಯೋತಿ ಅಮ್ಗೆ ಎಂಬುವವರು ಅತ್ಯಂತ ಕುಬ್ಜ ಮಹಿಳೆ ಎನಿಸಿಕೊಂಡಿದ್ದು, ಇವರಿಗೂ ಗಿನ್ನಿಸ್ ದಾಖಲೆ ಮನ್ನಣೆ ದೊರೆತಿದೆ.

ಅವಧಿ ಪೂರ್ವವಾಗಿ ಜನಿಸಿದ್ದ 445 ಜನ ಹೈದರಾಬಾದ್‌ನ 'ರೈನ್‌ಬೋ ಹಾಸ್ಪಿಟಲ್ಸ್ ಇಂಡಿಯಾ'ದಲ್ಲಿ 2016ರ ನವೆಂಬರ್ 17ರಂದು ಒಟ್ಟಾಗಿ ಸೇರಿದ್ದರು. ಈ ಘಟನೆಯನ್ನು ದಾಖಲೆಯಾಗಿ ಪರಿಗಣಿಸಲಾಗಿದೆ.

'ತಾರಕ್ ಮೆಹ್ತಾ ಕಾ ಉಲ್ಟಾ ಚಶ್ಮಾ' ಧಾರಾವಾಹಿಯು 2022 ಜುಲೈ 2ಕ್ಕೆ 3500 ಸಂಚಿಕೆಗಳನ್ನು ಕಂಡಿದೆ. ಇದು ಅತೀ ದೀರ್ಘ ಧಾರಾವಾಹಿ ಎನಿಸಿಕೊಂಡಿದ್ದು, ದಾಖಲೆ ಬರೆದಿದೆ.

ಉದ್ಯಮಿ ಮುಕೇಶ್ ಅಂಬಾನಿಯವರ 27 ಅಂತಸ್ತಿನ ಗಗನಚುಂಬಿ ನಿವಾಸ ವಿಶ್ವದ ಅತಿದೊಡ್ಡ, ಎತ್ತರದ ಮತ್ತು ಅತ್ಯಂತ ದುಬಾರಿ ಖಾಸಗಿ ನಿವಾಸವೆನಿಸಿಕೊಂಡಿದೆ.

ಯುನೆಸ್ಕೊ ಗುರುತಿಸಿರುವ 1,154 ಪಾರಂಪರಿಕ ತಾಣಗಳ ಪೈಕಿ ಆಗ್ರಾದ ತಾಜ್‌ಮಹಲ್ 2022ರ ಮಾರ್ಚ್‌ನಲ್ಲಿ 1.4 ದಶಲಕ್ಷ ಹುಡುಕಾಟಗಳನ್ನು ಕಂಡಿದ್ದು, ಇದನ್ನೂ ಗಿನ್ನಿಸ್ ಪುಸ್ತಕದಲ್ಲಿ ಸೇರಿಸಲಾಗಿದೆ. ಇನ್ನು, ತಮಿಳುನಾಡಿನ ಜೆ. ಜೆಸ್ಸಿಕಾ (ಒಂದು ಪಾದದ ಮೇಲೆ ನಿಂತು ಒಂದು ನಿಮಿಷದಲ್ಲಿ 213 ಹುಲಾ ಹೂಪ್ ತಿರುಗಿಸಿದ ಸಾಧನೆ) ಮತ್ತು ರೂಪಾ ಗಣೇಶನ್ (1 ಗಂಟೆ, 15 ನಿಮಿಷ 5 ಸೆಕೆಂಡ್ ಕಾಲ ಮತ್ಸ್ಯಕನ್ಯೆ ಯೋಗ ಭಂಗಿ ಪ್ರದರ್ಶನ) ಮಧ್ಯ ಪ್ರದೇಶದ ಆದಿತ್ಯ ಪಚೋಲಿ (ದೊಡ್ಡ ಪೇಟ) ಮತ್ತು ಗಿನ್ನಿಸ್ ರಿಷಿ (ದೇಹದ ಮೇಲೆ 366ಕ್ಕೂ ಹೆಚ್ಚು ಧ್ವಜದ ಹಚ್ಚೆ ಹೊಂದಿರುವ ವ್ಯಕ್ತಿ) ಅವರ ಹೆಸರು ಗಿನ್ನಿಸ್ ಪುಸ್ತಕದಲ್ಲಿ ಸ್ಥಾನ ಪಡೆದಿದೆ.

ದಾಖಲೆ ಬರೆದ ಮತ್ಸ್ಯಕನ್ಯೆ ಪ್ರತಿಮೆ

ಭಾರತೀಯ ಶಿಲ್ಪಿ ಕನಾಯಿ ಕುಂಜಿರಾಮನ್ ಅವರು ರೂಪಿಸಿದ 'ಜಲಕನ್ಯಕಾ' (ಮತ್ಸ್ಯಕನ್ಯೆ) ಪ್ರತಿಮೆಯನ್ನೂ ಪುಸ್ತಕದಲ್ಲಿ ದಾಖಲಿಸಲಾಗಿದೆ. ಇದು ವಿಶ್ವದಲ್ಲೇ ಅತಿ ದೊಡ್ಡ ಮತ್ಸಕನ್ಯೆಯ ಶಿಲ್ಪವೆನಿಸಿಕೊಂಡಿದೆ. ಕೇರಳದ ತಿರುವನಂತಪುರಂನ ಶಂಕುಮುಖಂ ಬೀಚ್‌ನಲ್ಲಿರುವ ಮತ್ಸ್ಯಕನ್ಯೆ 26.5 ಮೀ (87 ಅಡಿ) ಉದ್ದ ಮತ್ತು 7.6 ಮೀ (25 ಅಡಿ) ಎತ್ತರವಿದೆ.

ವಿವಾಹಕ್ಕೆ ಅಸಮ್ಮತಿ ಯುವತಿಗೆ ಚಾಕು ಇರಿತ

ನವದೆಹಲಿ (ಪಿಟಿಐ): 'ವಿವಾಹದ ಪ್ರಸ್ತಾಪ ನಿರಾಕರಿಸಿದ ಯುವತಿಯನ್ನು ಸುಮಾರು 13 ಬಾರಿ ಇರಿದ 27 ವರ್ಷದ ಯುವಕನೊಬ್ಬನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಗೌರವ್ ಪಾಲ್ ಬಂಧಿತ ಯುವಕ. ದಕ್ಷಿಣ ದೆಹಲಿಯ ಲಡೋ ಸರಾಯಿ ಪ್ರದೇಶದಲ್ಲಿ ಯುವತಿಗೆ ಗುರುವಾರ ಮುಂಜಾನೆ ಚಾಕುವಿನಿಂದ ಇರಿಯಲಾಗಿದೆ' ಎಂದಿದ್ದಾರೆ.

'ಗೌರವ್ ಪಾಲ್‌ನ ಚಿಕ್ಕಪ್ಪ ಸೇರಿದಂತೆ ಇಬ್ಬರು ಸಂಬಂಧಿಕರು ಕಳೆದ ತಿಂಗಳು ವಿವಾಹ ಪ್ರಸ್ತಾಪದೊಂದಿಗೆ ಯುವತಿಯ ಕುಟುಂಬವನ್ನು ಭೇಟಿಯಾಗಿದ್ದರು. ಆದರೆ ಜಾತಿಯ ಕಾರಣದಿಂದ ಯುವತಿಯ ತಾಯಿ ಪ್ರಸ್ತಾಪವನ್ನು ತಿರಸ್ಕರಿಸಿದ್ದರು. ಅಲ್ಲದೇ ಯುವತಿ ಸಹ ಪಾಲ್‌ನ ಮೊಬೈಲ್ ಸಂಖ್ಯೆಯನ್ನು ನಿರ್ಬಂಧಿಸಿದ್ದರು. ಇದನ್ನು ಸಹಿಸಿಕೊಳ್ಳಲಾಗದೇ ಪಾಲ್ ಈ ಕೃತ್ಯ ಎಸಗಿದ್ದಾನೆ' ಎಂದು ಮಾಹಿತಿ ನೀಡಿದ್ದಾರೆ.

'ಆರೋಪಿಯು ಯುವತಿಯ ಮುಖ, ತೊಡೆ ಹಾಗೂ ಕೈಗಳಿಗೆ ಚಾಕುವಿನಿಂದ ಇರಿದಿದ್ದಾನೆ. ಆತನ ವಿರುದ್ಧ ಸೆಕ್ಷನ್ 307ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದು, ಯುವತಿ ಅಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ' ಎಂದೂ ಅವರು ತಿಳಿಸಿದ್ದಾರೆ.

ಪುಟಾಣಿಗಳ ಜತೆ ಶಾ ಸಂವಾದ

ಅಹಮದಾಬಾದ್ (ಪಿಟಿಐ): ಕೇಂದ್ರ ಗೃಹ ಸಚಿವ ಮತ್ತು ಗಾಂಧಿನಗರ ಸಂಸದ ಅಮಿತ್ ಶಾ ಅವರು ತಮ್ಮ ಕ್ಷೇತ್ರದಲ್ಲಿ ಅಂಗನವಾಡಿ ಮಕ್ಕಳೊಂದಿಗೆ ಶನಿವಾರ ಸಂವಾದ ನಡೆಸಿದರು.

ಬಳಿಕ ಅವರು ಭಾರತ–ಪಾಕಿಸ್ತಾನ ವಿಶ್ವಕಪ್ ಪಂದ್ಯ ವೀಕ್ಷಿಸಲು ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ತೆರಳಿದರು.

'ಕ್ಷೇತ್ರದ ಸಂಸದನಾಗಿ, ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಲಭ್ಯವಾಗುವ ಸೌಲಭ್ಯಗಳು ಅಂಗನವಾಡಿ ಮಕ್ಕಳಿಗೂ ಲಭ್ಯವಾಗುತ್ತಿವೆಯೇ ಎಂದು ಪರಿಶೀಲಿಸಲು ಪ್ರಯತ್ನಿಸುತ್ತಿದ್ದೇನೆ' ಎಂದು ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ನನ್ನ ಲೋಕಸಭಾ ಕ್ಷೇತ್ರದ ಅಂಗನವಾಡಿ ಕೇಂದ್ರಗಳ ಮಕ್ಕಳೊಂದಿಗೆ ಗೇಮಿಂಗ್ ವಲಯಕ್ಕೆ ತೆರಳಿದ್ದೆ. ಇಲ್ಲಿ ಮಕ್ಕಳು ಅವರ ಇಷ್ಟದ ಆಟಗಳನ್ನು ಆಡುತ್ತಾ ಖುಷಿಪಟ್ಟರು. ಮಕ್ಕಳ ಉಲ್ಲಾಸ ಕಂಡು ಹೃದಯ ತುಂಬಿ ಬಂತು. ಅಂಗನವಾಡಿ ಮಕ್ಕಳಿಗೆ ಉತ್ತಮ ಶಿಕ್ಷಣ, ಪೌಷ್ಠಿಕ ಆಹಾರ ಹಾಗೂ ಆಟಿಕೆಗಳನ್ನು ನೀಡಲು ನಿರಂತರ ಪ್ರಯತ್ನ ಮಾಡಲಾಗುತ್ತಿದೆ' ಎಂದು ಹೇಳಿದ್ದಾರೆ.


ಕೇಂದ್ರ ಗೃಹ ಸಚಿವ ಮತ್ತು ಗಾಂಧಿನಗರ ಸಂಸದ ಅಮಿತ್ ಶಾ ತಮ್ಮ ಕ್ಷೇತ್ರದಲ್ಲಿ ಅಂಗನವಾಡಿ ಮಕ್ಕಳೊಂದಿಗೆ ಶನಿವಾರ ಸಂವಾದ ನಡೆಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಆ.23 ರಾಷ್ಟ್ರೀಯ ಬಾಹ್ಯಾಕಾಶ ದಿನ: ಅಧಿಸೂಚನೆ

ನವದೆಹಲಿ (ಪಿಟಿಐ): ಚಂದ್ರಯಾನ–3, ಚಂದ್ರನ ಮೇಲಿಳಿದ ನೆನಪಿಗಾಗಿ ಆಗಸ್ಟ್ 23ನ್ನು 'ರಾಷ್ಟ್ರೀಯ ಬಾಹ್ಯಾಕಾಶ ದಿನ'ವನ್ನಾಗಿ ಆಚರಿಸುವ ಸಂಬಂಧ ಬಾಹ್ಯಾಕಾಶ ಇಲಾಖೆಯು ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರಿನಲ್ಲಿರುವ ಇಸ್ರೊದ ಮುಖ್ಯ ಕಚೇರಿಗೆ ಆ.26ರಂದು ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ, 'ಇನ್ಮುಂದೆ ಪ್ರತಿ ವರ್ಷವೂ ಆ.23ನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನಾಗಿ ಆಚರಿಸಲಾಗುವುದು' ಎಂದು ಘೋಷಿಸಿದ್ದರು.

ಭಾರತ – ಸ್ವಿಟ್ಜರ್‌ಲೆಂಡ್ ಬಾಂಧವ್ಯ ವೃದ್ಧಿ: ಹೆಕ್ನರ್

ನವದೆಹಲಿ (ಪಿಟಿಐ): ಇಂದಿನ ಯುದ್ಧ ಯುಗದಲ್ಲಿ ಶಾಂತಿಯುತ ಮತ್ತು ಸ್ನೇಹಪರ ಸಂಬಂಧಕ್ಕೆ ಭಾರತ ಮತ್ತು ಸ್ವಿಟ್ಜರ್‌ಲೆಂಡ್ ನಡುವಿನ ಬಾಂಧವ್ಯ ನಿದರ್ಶನವಾಗಿದೆ ಎಂದು ಸ್ವಿಟ್ಜರ್‌ಲೆಂಡ್ ರಾಯಭಾರಿ ರಾಲ್ಫ್ ಹೆಕ್ನರ್ ಹೇಳಿದ್ದಾರೆ.

ಉಭಯ ದೇಶಗಳ ನಡುವಿನ 75 ವರ್ಷಗಳ ಸ್ನೇಹಪರ ಬಾಂಧವ್ಯದ ಪ್ರತೀಕವಾಗಿ ನವದೆಹಲಿಯ ಸ್ವಿಟ್ಜರ್‌ಲೆಂಡ್ ರಾಯಭಾರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಉಭಯ ದೇಶಗಳ ನಡುವಿನ ಬಾಂಧವ್ಯ ಇನ್ನಷ್ಟು ವೃದ್ಧಿಯಾಗಿದೆ ಎಂದರು.

75 ವರ್ಷಗಳ ಹಿಂದೆ ಭಾರತ ಮತ್ತು ಸ್ವಿಟ್ಜರ್‌ಲೆಂಡ್ ಸ್ನೇಹ ಮತ್ತು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ್ದವು. ಸ್ವಾತಂತ್ರ್ಯಲಭಿಸಿದ ನಂತರ ಈ ಒಪ್ಪಂದಕ್ಕೆ ಸಹಿ ಹಾಕುವ ಮೊದಲ ದೇಶವಾಗಿ ಸ್ವಿಟ್ಜರ್‌ಲೆಂಡ್ ಅನ್ನು ಭಾರತ ಆಯ್ಕೆ ಮಾಡಿಕೊಂಡಿತ್ತು.

ಕಾರ್ಯಕ್ರಮದ ಅಂಗವಾಗಿ ರಾಯಭಾರ ಕಚೇರಿಯನ್ನು ಹೂವುಗಳಿಂದ ಅಲಂಕರಿಸಲಾಗಿತ್ತು.

ಜಮ್ಮು: ಮಾನಸಿಕ ಅಸ್ವಸ್ಥ ಬಾಲಕ ಪಾಕ್‌ಗೆ ಹಸ್ತಾಂತರ

ಜಮ್ಮು (ಪಿಟಿಐ): 'ಗಡಿ ದಾಟಿ ಭಾರತಕ್ಕೆ ಪ್ರವೇಶಿಸಲು ಯತ್ನಿಸುತ್ತಿದ್ದ ಸಂದರ್ಭ ಬಂಧಿಸಲಾಗಿದ್ದ ಮಾನಸಿಕ ಅಸ್ವಸ್ಥ ಬಾಲಕನನ್ನು ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಎಲ್‌ಒಸಿ ಮೂಲಕ ಪಾಕಿಸ್ತಾನದ ಅಧಿಕಾರಿಗಳಿಗೆ ಶನಿವಾರ ಹಸ್ತಾಂತರಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇರ್ಷಾದ್ ಅಹ್ಮದ್ ಎಂಬ ಬಾಲಕ ದೇಶಕ್ಕೆ ಪ್ರವೇಶಿಸಲು ಶುಕ್ರವಾರ ಯತ್ನಿಸಿದ್ದ. ಶನಿವಾರ ಮಧ್ಯಾಹ್ನದ ವೇಳೆ ಚಕನ್ ದಾ ಬಾಗ್ ಗಡಿ ಮೂಲಕ ಪಾಕಿಸ್ತಾನ ಸೇನಾಧಿಕಾರಿಗಳಿಗೆ ಬಾಲಕನನ್ನು ಒಪ್ಪಿಸಲಾಗಿದೆ' ಎಂದರು.

'ಬಾಲಕನನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸುವ ವೇಳೆ ಪೂಂಛ್ ಮತ್ತು ಪಿಒಕೆಯ ನಾಗರಿಕ ಅಧಿಕಾರಿಗಳು ಸ್ಥಳದಲ್ಲಿದ್ದರು' ಎಂದೂ ಮಾಹಿತಿ ನೀಡಿದರು.

ಮೊಬೈಲ್ ವ್ಯಸನ: ತಾಯಿಯನ್ನು ಕೊಂದ ಮಗ

ಕಾಸರಗೋಡು (ಪಿಟಿಐ): ಮಗನ ಮೊಬೈಲ್ ವ್ಯಸನವನ್ನು ಪ್ರಶ್ನಿಸಿದ್ದಕ್ಕೆ ಆತನಿಂದ ಹಲ್ಲೆಗೊಳಗಾಗಿ, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಕಣ್ಣಿಚಿರದ ರುಕ್ಮಿಣಿ (63) ಶನಿವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾರದ ಹಿಂದೆ ರುಕ್ಮಿಣಿ ತನ್ನ ಪುತ್ರ ಸುಜಿತ್‌ನ ಮೊಬೈಲ್ ವ್ಯಸನದ ಬಗ್ಗೆ ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಆತ, ತಾಯಿಯ ತಲೆಯನ್ನು ಗೋಡೆಗೆ ಬಡಿದಿದ್ದಾನೆ. ಗಂಭೀರವಾಗಿ ಗಾಯಗೊಂಡ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಪಿಯನ್ನು ಬಂಧಿಸಲಾಗಿದೆ ಎಂದಿದ್ದಾರೆ.

'ಪದೇ ಪದೇ ತಾಯಿ ಪ್ರಶ್ನಿಸುತ್ತಿದ್ದಕ್ಕೆ ಸಿಟ್ಟಿನಿಂದ ಹಲ್ಲೆ ನಡೆಸಿದೆ ಎಂಬುದನ್ನು ಆರೋಪಿಯು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಈತ ಮಾನಸಿಕ ಅಸ್ವಸ್ಥನಾಗಿರುವುದರಿಂದ, ಕೋಯಿಕ್ಕೋಡ್‌ನ ಕುದಿರವಟ್ಟಂನ ಸರ್ಕಾರಿ ಮಾನಸಿಕ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ ಪದಗ್ರಹಣದಲ್ಲಿ ಲೋಪ- ಪಿಐಎಲ್

ವ್ಯಕ್ತಿಗೆ ₹5 ಲಕ್ಷ ದಂಡ ವಿಧಿಸಿದ 'ಸುಪ್ರೀಂ'



ನವದೆಹಲಿ (ಪಿಟಿಐ): ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸ್ವೀಕರಿಸಿದ ಪ್ರಮಾಣ ವಚನವು ದೋಷಪೂರಿತವಾಗಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ವ್ಯಕ್ತಿಯೊಬ್ಬರಿಗೆ ಸುಪ್ರೀಂ ಕೋರ್ಟ್ ₹5 ಲಕ್ಷ ದಂಡ ವಿಧಿಸಿದೆ. 'ಇದು ಪ್ರಚಾರಕ್ಕಾಗಿ ನಡೆದ ಅವಿವೇಕದ ಪ್ರಯತ್ನ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

'ಪ್ರಮಾಣ ವಚನ ಸ್ವೀಕರಿಸುವಾಗ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ತಮ್ಮ ಹೆಸರಿಗೂ ಮೊದಲು 'ನಾನು' ಎಂದು ಉಲ್ಲೇಖಿಸಲಿಲ್ಲ. ಇದು ಸಂವಿಧಾನದ ಮೂರನೇ ಪರಿಚ್ಛೇದಕ್ಕೆ ವಿರುದ್ಧವಾಗಿದೆ. ಜತೆಗೆ, ಕೇಂದ್ರಾಡಳಿತ ಪ್ರದೇಶವಾದ ದಾದ್ರಾ –ನಗರ ಹವೇಲಿ ಮತ್ತು ಡಾಮನ್ –ಡಿಯುವಿನ ಪ್ರತಿನಿಧಿಗಳು ಮತ್ತು ಆಡಳಿತಾಧಿಕಾರಿಗಳನ್ನು ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನಿಸಿರಲಿಲ್ಲ' ಎಂದು ಅಶೋಕ್ ಪಾಂಡೆ ಎಂಬವರು ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ದಾಖಲಿಸಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ, 'ರಾಜ್ಯಪಾಲರಿಂದ ಪ್ರಮಾಣ ವಚನ ಬೋಧನೆಯಾಗಿದೆ. ಪ್ರಮಾಣ ವಚನ ಸ್ವೀಕಾರದ ನಂತರ ನ್ಯಾಯಮೂರ್ತಿ ಕರ್ತವ್ಯ ನಿರತರಾಗಿದ್ದಾರೆ. ಇಂಥ ಆಕ್ಷೇಪಣೆಗಳನ್ನು ಎತ್ತಲು ಅವಕಾಶವಿಲ್ಲ. ಇದು ಕೇವಲ ಪ್ರಚಾರ ತಂತ್ರವಷ್ಟೇ' ಎಂದು ಹೇಳಿತು.

'ಇಂಥ ಹುಡುಗಾಟಿಕೆಯ ಪಿಐಎಲ್‌ಗಳು ನ್ಯಾಯಾಲಯದ ಸಮಯ ಹಾಳು ಮಾಡುತ್ತವೆ. ಆ ಮೂಲಕ ನ್ಯಾಯಾಲಯವು ಗಂಭೀರವಲ್ಲದ ವಿಷಯಗಳ ಕಡೆಗೆ ಗಮನ ಹರಿಸುವಂತೆ ಮಾಡುತ್ತವೆ. ಹೀಗಾಗಿ ಇಂಥ ಅರ್ಜಿಗಳಿಗೆ ದಂಡ ವಿಧಿಸುವ ಸಮಯ ಬಂದಿದೆ. ಪಿಐಎಲ್ ವಜಾಗೊಳಿಸುತ್ತಿರುವ ಈ ನ್ಯಾಯಪೀಠ ಅರ್ಜಿದಾರನಿಗೆ ₹5 ಲಕ್ಷ ದಂಡ ವಿಧಿಸುತ್ತಿದೆ. ನಾಲ್ಕು ವಾರಗಳಲ್ಲಿ ಈ ಹಣವನ್ನು ನ್ಯಾಯಾಲಯದ ರಿಜಿಸ್ಟರಿಯಲ್ಲಿ ಠೇವಣಿ ಮಾಡಬೇಕು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೂ ಒಳಗೊಂಡಿದ್ದ ಪೀಠ ಸೂಚಿಸಿತು.

'ಸೂಚಿಸಲಾದ ಸಮಯದೊಳಗೆ ಹಣ ಠೇವಣಿ ಇಡದೇ ಹೋದರೆ, ಲಖನೌದ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾಧಿಕಾರಿ ಮೂಲಕ ಭೂ ಕಂದಾಯದ ಬಾಕಿಯ ರೂಪದಲ್ಲಿ ಹಣ ಸಂಗ್ರಹಿಸಲಾಗುವುದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹900 (880)
ಸೂರ್ಯಕಾಂತಿ (ರಿಫೈನ್ಡ್)	₹890 (875)
ಪಾಮೋಲಿನ್	₹823 (820)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಪ.ಕಿ)	₹235-435
ದ್ವಿತಳಿ (ಪ.ಕಿ)	₹290-608

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹146.00
ಆರ್‌ಎಸ್‌ಎಸ್-5	₹140.00
ಗುಡ್ ಲಾಟ್	₹129

(ಪ್ರ.ಕೆ.ಜಿಗೆ)

ಕುಬೇರ: 50ನೇ ಸ್ಥಾನಕ್ಕೆ ಜೋಯ್ ಆಲುಕ್ಕಾಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಅವರು ಫೋರ್ಬ್ಸ್ ನಿಯತಕಾಲಿಕ ಈಚೆಗೆ ಬಿಡುಗಡೆ ಮಾಡಿದ 2023ರ ಭಾರತದ 100 ಸಿರಿವಂತರ ಪಟ್ಟಿಯಲ್ಲಿ 50ನೇ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಸಮೂಹವು ತಿಳಿಸಿದೆ.

ಈ ಪಟ್ಟಿಯಲ್ಲಿ ಸ್ಥಾನ ಪಡೆದ ದೇಶದ ಏಕೈಕ ಚಿನ್ನಾಭರಣ ಉದ್ಯಮಿ ಎನ್ನುವ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. 2022ರಲ್ಲಿ 69ನೇ ಸ್ಥಾನದಲ್ಲಿ ಇದ್ದರು ಎಂದಿದೆ.

ಸಂಘಟಿತವಾದ ರಿಟೇಲ್ ಕಾರ್ಯಾಚರಣೆ ಮತ್ತು ದೊಡ್ಡ ಗಾತ್ರದ ಮಳಿಗೆಗಳ ಮೂಲಕ ಭಾರತದ ಚಿನ್ನಾಭರಣ ವಲಯವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಅವರು ಮಾಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

14-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	12900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	845 (840)
ಪಾಮ್ ವಾರದ ಡೆಲಿವರಿ	821 (818)
ಸೂರ್ಯಕಾಂತಿ ಎಣ್ಣೆ ಕಚ್ಚಾ	815 (805)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

59,305 (58,150)

ಬೆಳ್ಳಿ ಕೆ.ಜಿ 71,150 (69,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರತಿ ಟನ್‌ಗೆ ₹99,600 ಎಂಇಪಿ ಇರಲಿದೆ: ಕೇಂದ್ರ

‘ಬಾಸ್ಮತಿ ಅಕ್ಕಿ ರಫ್ತು ದರ ಬದಲಿಲ್ಲ’

ನವದೆಹಲಿ (ರಾಯಿಟರ್ಸ್): ಬಾಸ್ಮತಿ ಅಕ್ಕಿಗೆ ನಿಗದಿ ಮಾಡಿರುವ ಕನಿಷ್ಠ ರಫ್ತು ದರ (ಎಂಇಪಿ) ಬದಲಾವಣೆ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಪ್ರೀಮಿಯಂ ಬಾಸ್ಮತಿ ಅಕ್ಕಿ ಬದಲಾಗಿ ಬಾಸ್ಮತಿ ಅಲ್ಲದ ಅಕ್ಕಿಯನ್ನು ಅಕ್ರಮವಾಗಿ ರಫ್ತು ಮಾಡುವ ಸಾಧ್ಯತೆಯನ್ನು ತಡೆಯಲು ಪ್ರತಿ ಟನ್‌ಗೆ 1,200 ಡಾಲರ್ (₹99,600) ರಫ್ತು ದರವನ್ನು ನಿಗದಿಪಡಿಸಿ ಆಗಸ್ಟ್‌ನಲ್ಲಿ ಸರ್ಕಾರ ಆದೇಶಿಸಿತ್ತು. ಇದರಿಂದಾಗಿ ವಿದೇಶಿ ಮಾರಾಟದಲ್ಲಿ ಭಾರಿ ಇಳಿಕೆ ಕಂಡುಬಂದಿದೆ ಎಂದು ಮಿಲ್‌ಗಳು ಮತ್ತು ವ್ಯಾಪಾರಿಗಳು ದೂರಿದ್ದಾರೆ. ಹೀಗಾಗಿ ಸರ್ಕಾರವು ಪ್ರತಿ ಟನ್‌ಗೆ 850 ಡಾಲರ್‌ಗೆ (₹70,550) ಇಳಿಕೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಈ ಹಿಂದೆ ಹೇಳಿದ್ದವು. ಆದರೆ, ಸದ್ಯಕ್ಕೆ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡದಿರಲು ನಿರ್ಧಾರ ಮಾಡಿರುವುದಾಗಿ ಸರ್ಕಾರ ಶನಿವಾರ ತಿಳಿಸಿದೆ.

ಕುಚ್ಚಲಕ್ಕಿ ರಫ್ತು ಸುಂಕ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕುಚ್ಚಲಕ್ಕಿ ರಫ್ತು ಮೇಲೆ ವಿಧಿಸಿರುವ ಶೇ 20ರಷ್ಟು ಸುಂಕವು 2024ರ ಮಾರ್ಚ್ 31ರವರೆಗೂ ಜಾರಿಯಲ್ಲಿ ಇರಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ದೇಶದಲ್ಲಿ ಪೂರೈಕೆ ವ್ಯವಸ್ಥೆ ಸುಧಾರಿಸಲು ಮತ್ತು ಬೆಲೆ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮೊದಲಿಗೆ ಆಗಸ್ಟ್ 25ರಿಂದ ಅಕ್ಟೋಬರ್ 16ರವರೆಗೆ ರಫ್ತು ಸುಂಕ ವಿಧಿಸಿತ್ತು. ಇದೀಗ ಮುಂದಿನ ವರ್ಷದ ಮಾರ್ಚ್ ಅಂತ್ಯದವರೆಗೂ ವಿಸ್ತರಣೆ ಮಾಡಿರುವುದಾಗಿ ಹಣಕಾಸು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಕ್ಕಿ ಉತ್ಪಾದನೆ

13.55 ಕೋಟಿ ಟನ್ — 2022-23ರ ಬೆಳೆ ವರ್ಷಕ್ಕೆ ಅಂದಾಜು

12.94 ಕೋಟಿ ಟನ್ — 2021-22ರ ಬೆಳೆ ವರ್ಷ

ಭಾರತವು 2022-23ರಲ್ಲಿ ₹39,360 ಕೋಟಿ ಮೌಲ್ಯದ ಬಾಸ್ಮತಿ ಅಕ್ಕಿ ರಫ್ತು ಮಾಡಿದೆ. 2022-23ರಲ್ಲಿ ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತು ಮೌಲ್ಯವು ₹54,366 ಕೋಟಿ ಆಗಿತ್ತು. ಕೃಷಿ ಸಚಿವಾಲಯದ ಮಾಹಿತಿ ಪ್ರಕಾರ, ಅಕ್ಕಿ ಉತ್ಪಾದನೆಯು 2021-22ರ ಬೆಳೆ ವರ್ಷದಲ್ಲಿ 12.94 ಕೋಟಿ ಟನ್‌ನಷ್ಟು ಇತ್ತು. ಇದು 2022-23ರ ಬೆಳೆ ವರ್ಷಕ್ಕೆ 13.55 ಕೋಟಿ ಟನ್‌ಗೆ ಏರಿಕೆ ಆಗಿರುವ ಅಂದಾಜು ಮಾಡಲಾಗಿದೆ.

‘ಅದಾನಿ ವಿರುದ್ಧ ತನಿಖೆ: ಕಣ್ಣೊರೆಸುವ ತಂತ್ರ’

ನವದೆಹಲಿ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್‌ಗೆ ಸೇರಿದ ಮುಂಬೈನ ಎರಡು ವಿಮಾನ ನಿಲ್ದಾಣಗಳಿಗೆ ಸಂಬಂಧಿಸಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ನಡೆಸಿರುವ ತನಿಖೆಯನ್ನು ಕಣ್ಣೊರೆಸುವ ತಂತ್ರ ಎಂದು ಟೀಕಿಸಿರುವ ಕಾಂಗ್ರೆಸ್, ಈ ವಿಚಾರವಾಗಿ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆ ನಡೆಸಬೇಕೆಂದು ಶನಿವಾರ ಆಗ್ರಹಿಸಿದೆ.

ಮುಂಬೈನ ಎರಡು ವಿಮಾನ ನಿಲ್ದಾಣಗಳ ಕುರಿತು ಕಾರ್ಪೊರೇಟ್ ಸಚಿವಾಲಯವು ತನಿಖೆ ನಡೆಸುತ್ತಿದೆ ಎಂದು ಅದಾನಿ ಸಮೂಹವು ಹೇಳಿರುವ ಪತ್ರಿಕಾ ವರದಿಯನ್ನು ಉಲ್ಲೇಖಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಪ್ರಧಾನಿ ನರೇಂದ್ರ ಮೋದಿ ಅವರ ನೆಚ್ಚಿನ ಉದ್ಯಮ ಸಮೂಹದ ವಿರುದ್ಧ ತೋರಿಕೆಗಾಗಿ ತನಿಖೆ ನಡೆಸಲಾಗುತ್ತಿದೆ’ ಎಂದು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ಹೇಳಿದ್ದಾರೆ.

‘ನೀತಿ ಆಯೋಗ ಮತ್ತು ಆರ್ಥಿಕ ವ್ಯವಹಾರಗಳ ಇಲಾಖೆಯ ಆಕ್ಷೇಪಣೆಯ ಹೊರತಾಗಿಯೂ ಆರರಲ್ಲಿ ಆರೂ ವಿಮಾನ ನಿಲ್ದಾಣಗಳನ್ನು ಅದಾನಿ ಸಮೂಹಕ್ಕೆ ಹೇಗೆ ನೀಡಲಾಯಿತು ಎಂಬುದರ ಬಗ್ಗೆ ಸರ್ಕಾರ ಯಾವಾಗ ತನಿಖೆ ನಡೆಸಲಿದೆ’ ಎಂದು ಅವರು ಪ್ರಶ್ನಿಸಿದ್ದಾರೆ.

ಅದಾನಿ ಸಮೂಹವು ಷೇರುಮೌಲ್ಯಗಳನ್ನು ಅಕ್ರಮವಾಗಿ ಏರಿಳಿತ ಮಾಡುತ್ತಿದೆ ಎಂದು ಅಮೆರಿಕದ ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆಯು ತನ್ನ ವರದಿಯಲ್ಲಿ ಉಲ್ಲೇಖಿಸಿದ ಬಳಿಕ, ಈ ಸಮೂಹದ ಹಣಕಾಸಿನ ವ್ಯವಹಾರಗಳ ಬಗ್ಗೆ ಕಾಂಗ್ರೆಸ್ ಪ್ರಶ್ನೆ ಎತ್ತಿತ್ತು.

ಹಿಂಡನ್‌ಬರ್ಗ್ ವರದಿಯಲ್ಲಿ ಉಲ್ಲೇಖಿಸಿರುವ ವಿಚಾರಗಳನ್ನು ಅಲ್ಲಗಳೆದಿದ್ದ ಅದಾನಿ ಸಮೂಹವು, ಯಾವುದೇ ಅಕ್ರಮ ನಡೆಸಿಲ್ಲ ಎಂದು ಹೇಳಿತ್ತು.

ಇಡುಕ್ಕಿ: ಸಂಬಾರ ಪದಾರ್ಥಗಳ ಪಾರ್ಕ್ ಉದ್ಘಾಟನೆ

ಇಡುಕ್ಕಿ(ಪಿಟಿಐ): ಇಲ್ಲಿನ ತೊಡುಪುಳದಲ್ಲಿ ನಿರ್ಮಿಸಿರುವ ಸಂಬಾರ ಪದಾರ್ಥಗಳ ಪಾರ್ಕ್ ಅನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶನಿವಾರ ಉದ್ಘಾಟಿಸಿದರು.

ಸಂಬಾರ ಪದಾರ್ಥಗಳ ಸಂಸ್ಕರಣೆಗೆ ಮತ್ತು ಅವುಗಳ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡಲಾಗುವುದು ಎಂದು ಅವರು ಹೇಳಿದರು.

ತೊಡುಪುಳದ ಮುಟ್ಟಂ ಗ್ರಾಮದಲ್ಲಿರುವ 15.29 ಎಕರೆ ವ್ಯಾಪ್ತಿಯ ಸಂಬಾರ ಪದಾರ್ಥಗಳ ಪಾರ್ಕ್‌ನ ಮೊದಲ ಹಂತದ ಕಾಮಗಾರಿಗಳನ್ನು ಕೇರಳ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಪೂರ್ಣಗೊಳಿಸಿದೆ ಎಂದು ಪಿಣರಾಯಿ ವಿಜಯನ್ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಹೇಳಿದ್ದಾರೆ.


ಎರಡನೇ ಹಂತದ ಕಾಮಗಾರಿಯು ಆರಂಭಗೊಂಡಿದೆ ಎಂದೂ ತಿಳಿಸಿದ್ದಾರೆ.

ಹಣಕಾಸು, ವಿದ್ಯುತ್, ಐ.ಟಿ. ವಲಯಗಳಿಂದ ಬಂಡವಾಳ ಹಿಂತೆಗೆತ

ವಿದೇಶಿ ಹೂಡಿಕೆಗೆ ಹಲವು ಅಡ್ಡಿ

● ವಿಶ್ವನಾಥ ಎಸ್.





ಬೆಂಗಳೂರು: ಇಸ್ರೇಲ್-ಹಮಾಸ್ ಸಮರವು ತೀವ್ರಗೊಂಡಲ್ಲಿ ಭಾರತದ ಮಾರುಕಟ್ಟೆಯ ಮೇಲೆ ಅದು ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಅಮೆರಿಕದಲ್ಲಿ ಹಣದುಬ್ಬರ ಏರಿಕೆ ಕಂಡಿರುವುದು, ಡಾಲರ್ ಮೌಲ್ಯ ವೃದ್ಧಿ... ಹೀಗೆ ಹಲವು ಕಾರಣಗಳು ಭಾರತದಲ್ಲಿ ವಿದೇಶಿ ಬಂಡವಾಳ ಒಳಹರಿವಿಗೆ (ಎಫ್‌ಪಿಐ) ಅಡ್ಡಿಯಾಗುತ್ತಿವೆ.

ಜಾಗತಿಕ ಸವಾಲುಗಳ ನಡುವೆಯೂ ಭಾರತದ ಷೇರುಪೇಟೆಗಳು ಚೇತರಿಕೆ ಕಂಡುಕೊಳ್ಳುವ ಸಾಮರ್ಥ್ಯ ಹೊಂದಿವೆ. ಹೀಗಿದ್ದರೂ ಇಸ್ರೇಲ್-ಹಮಾಸ್ ಸಂಘರ್ಷವು ಇನ್ನಷ್ಟು ತೀವ್ರಗೊಂಡು ಬೇರೆ ಭಾಗಗಳಿಗೂ ವ್ಯಾಪಿಸಿದರೆ ಷೇರುಪೇಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಲಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಇಸ್ರೇಲ್-ಹಮಾಸ್ ಸಂಘರ್ಷ ತೀವ್ರಗೊಂಡರೆ ಜಾಗತಿಕವಾಗಿ ಕಚ್ಚಾ ತೈಲ ದರ ಏರಿಕೆ ಕಾಣಲಿದೆ. ಭಾರತವು ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವುದರಿಂದ ಆಮದು ವೆಚ್ಚ ಹೆಚ್ಚಾಗಲಿದೆ. ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಬಂಡವಾಳ ಇನ್ನೂ ಅಧಿಕ ಪ್ರಮಾಣದಲ್ಲಿ ಷೇರುಗಳನ್ನು ಮಾರಾಟ ಮಾಡಲು ಮುಂದಾಗಬಹುದು. ಸದ್ಯದ ಮಟ್ಟಿಗೆ ಅನಿಶ್ಚಿತ ವಾತಾವರಣವೇ ಹೆಚ್ಚಿದೆ ಎಂದು ಅವರು ಹೇಳಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಅಕ್ಟೋಬರ್ 13ರವರೆಗೆ ನಡೆದಿರುವ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ₹9,784 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಭಾರತದ ಐ.ಟಿ. ಕಂಪನಿಗಳು ವರಮಾನ ಮುನ್ನೋಟವನ್ನು ಇಳಿಕೆ ಮಾಡಿರುವುದು ಸಹ ಕಂಪನಿಗಳ ಷೇರು ಮೌಲ್ಯ ಇಳಿಕೆ ಕಾಣುವಂತೆ ಮಾಡುತ್ತಿದೆ.

ಅಮೆರಿಕದ ಹಣದುಬ್ಬರ ಪ್ರಮಾಣವು ಮಾರುಕಟ್ಟೆ ನಿರೀಕ್ಷೆಗಿಂತಲೂ ಹೆಚ್ಚಿಗೆ ಇದೆ. ಹೀಗಾಗಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಇನ್ನಷ್ಟು ಏರಿಕೆ ಮಾಡುವ ಸಂಭವ ಇದೆ. ಇನ್ನು, ಡಾಲರ್ ಮೌಲ್ಯ ಏರಿಕೆ ಕಾಣುತ್ತಿರುವುದು ಮತ್ತು ಅಮೆರಿಕದ 10 ವರ್ಷಗಳ ಬಾಂಡ್‌ಗಳಿಕೆ ಪ್ರಮಾಣ ಹೆಚ್ಚಾಗುತ್ತಿರುವುದು ಸಹ ಭಾರತದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಕಡಿಮೆ ಆಗುವಂತೆ ಮಾಡುತ್ತಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಭಾರತಕ್ಕೆ ಕಚ್ಚಾ ತೈಲ, ರಸಗೊಬ್ಬರ ಆಮದು ಪ್ರಮಾಣ ಏರಿಕೆ

ರಷ್ಯಾದಿಂದ ಆಮದು ಶೇ 67ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತವು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ರಷ್ಯಾದಿಂದ ₹2.49 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹1.51 ಲಕ್ಷ ಕೋಟಿ ಮೌಲ್ಯದ ಆಮದು ವಹಿವಾಟು ನಡೆದಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 67ರಷ್ಟು ಏರಿಕೆ ಕಂಡುಬಂದಿದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ. ಈ ಮೂಲಕ ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಭಾರತಕ್ಕೆ ಅತಿ ಹೆಚ್ಚು ಆಮದು ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ ದೇಶವು ಎರಡನೇ ಸ್ಥಾನ ಪಡೆದುಕೊಂಡಿದೆ.

ಕಚ್ಚಾ ತೈಲ ಮತ್ತು ರಸಗೊಬ್ಬರ ಆಮದು ಪ್ರಮಾಣ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಸಚಿವಾಲಯ ಹೇಳಿದೆ. ಸಚಿವಾಲಯವು ನೀಡಿರುವ ಅಂಕಿ-ಅಂಶಗಳ ಪ್ರಕಾರ, ಚೀನಾದಿಂದ ಭಾರತಕ್ಕೆ ಆಮದಾಗುತ್ತಿರುವ ಸರಕುಗಳ ಮೌಲ್ಯವು ₹4.35 ಲಕ್ಷ ಕೋಟಿಯಿಂದ ₹4.18 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.



ಅಮೆರಿಕದಿಂದ ಆಮದು ಆಗಿರುವ ಸರಕುಗಳ ಮೌಲ್ಯವು ₹2.14 ಲಕ್ಷ ಕೋಟಿಯಿಂದ ₹1.77 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಯುಎಇನಿಂದ ಆಮದು ₹2.30 ಲಕ್ಷ ಕೋಟಿಯಿಂದ ₹1.71 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಇದೇ ರೀತಿ, ಸೌದಿ ಅರೇಬಿಯಾ, ಇರಾಕ್, ಇಂಡೊನೇಷ್ಯಾ, ಸಿಂಗಪುರ ಮತ್ತು ಕೊರಿಯಾ ದೇಶಗಳಿಂದಲೂ ಆಮದು ಕಡಿಮೆ ಆಗಿದೆ.

ಮುಖ್ಯಾಂಶಗಳು

- ಭಾರತಕ್ಕೆ ಆಮದು ಮಾಡುವ ದೇಶಗಳಲ್ಲಿ ರಷ್ಯಾಗೆ ಎರಡನೇ ಸ್ಥಾನ
- ಬ್ರಿಟನ್, ಆಸ್ಟ್ರೇಲಿಯಾ, ನೆದರ್ಲೆಂಡ್ಸ್‌ಗೆ ಭಾರತದಿಂದ ರಫ್ತು ಹೆಚ್ಚಳ

ಭಾರತವು ಮುಖ್ಯವಾಗಿ 10 ದೇಶಗಳೊಂದಿಗೆ ರಫ್ತು ವಹಿವಾಟು ನಡೆಸುತ್ತಿದೆ. ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಅಮೆರಿಕ, ಯುಎಇ, ಸಿಂಗಪುರ, ಜರ್ಮನಿ, ಸೌದಿ ಅರೇಬಿಯಾ ಮತ್ತು ಬಾಂಗ್ಲಾದೇಶಕ್ಕೆ ರಫ್ತು ಇಳಿಕೆ ಕಂಡಿದೆ. ಆದರೆ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ನೆದರ್ಲೆಂಡ್ಸ್ ಜೊತೆಗಿನ ರಫ್ತು ವಹಿವಾಟು ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

ಪಾಸ್‌ಪೋರ್ಟ್ ಹಗರಣ 50 ಕಡೆಗಳಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ಪಾಸ್‌ಪೋರ್ಟ್ ಹಗರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂನ 50 ಕಡೆಗಳಲ್ಲಿ ಸಿಬಿಐ ಶೋಧ ಕಾರ್ಯ ನಡೆಸಿದ್ದು, 16 ಮಂದಿ ಸರ್ಕಾರಿ ಅಧಿಕಾರಿಗಳು ಸೇರಿದಂತೆ 24 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದೆ.

ಒಬ್ಬ ಅಧಿಕಾರಿಯನ್ನು ಹಾಗೂ ಮಧ್ಯವರ್ತಿಯನ್ನು ಸಿಕ್ಕಿಂನ ಗ್ಯಾಂಗ್ಟಾಕ್‌ನಿಂದ ಸಿಬಿಐ ವಶಕ್ಕೆ ಪಡೆದಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಲಂಚ ಪಡೆದು, ನಕಲಿ ದಾಖಲೆಗಳನ್ನು ಬಳಸಿ ಅನರ್ಹ ವ್ಯಕ್ತಿಗಳಿಗೆ ಪಾಸ್‌ಪೋರ್ಟ್ ನೀಡಿರುವ ಆರೋಪದಲ್ಲಿ ಇವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ಹೇಳಿವೆ.

ಡಿ-ಮಾರ್ಟ್ ಲಾಭ ಶೇ 9ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಡಿ-ಮಾರ್ಟ್ ಮಳಿಗೆಗಳನ್ನು ನಿಯಂತ್ರಿಸುತ್ತಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 9.09ರಷ್ಟು ಇಳಿಕೆ ಕಂಡಿದ್ದು ₹623 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹685 ಕೋಟಿಯಷ್ಟು ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಸರಕು ಮತ್ತು ಬಟ್ಟೆ ವಹಿವಾಟು ಇಳಿಕೆ ಕಂಡಿರುವುದೇ ಲಾಭ ಕಡಿಮೆ ಆಗಲು ಕಾರಣ ಎಂದು ಹೇಳಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಾರ್ಯಾಚರಣಾ ವರಮಾನವು ₹10,638 ಕೋಟಿಯಿಂದ ₹12,624 ಕೋಟಿಗೆ ಏರಿಕೆಯಾಗಿದೆ. ಪ್ರಸಕ್ತ ಹಣಕಾಸು ವರ್ಷದ ಆರು ತಿಂಗಳಿನಲ್ಲಿ ಕಾರ್ಯಾಚರಣಾ ವರಮಾನ ₹24,489 ಕೋಟಿಗೆ ಮತ್ತು ಲಾಭ ₹1,282 ಕೋಟಿಯಷ್ಟು ಆಗಿದೆ ಎಂದು ತಿಳಿಸಿದೆ.

ಸಿಂಚಲ್‌ಗೆ ಹರ್ಡಲ್ಸ್ ಚಿನ್ನ

ಅಥ್ಲೆಟಿಕ್ಸ್: 200 ಮೀ. ಓಟ– ಕುಜೂರ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಚಲ್ ಕಾವೇರಮ್ಮ ಅವರು ಇಲ್ಲಿ ನಡೆಯುತ್ತಿರುವ 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದುಕೊಂಡರು.

ರೈಲ್ವೇಸ್ ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಸಿಂಚಲ್, ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸ್ಪರ್ಧೆಯನ್ನು 57.88 ಸೆ.ಗಳಲ್ಲಿ ಪೂರೈಸಿದರು.

ಪುರುಷರ 200 ಮೀ. ಓಟದಲ್ಲಿ ಒಡಿಶಾದ ಅನಿಮೇಶ್ ಕುಜೂರ್ ಅವರು 20.74 ಸೆ.ಗಳಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಅಮ್ಲಾನ್ ಬೊರ್ಗೊಹೈನ್ (20.75 ಸೆ.) ಅವರು 2021 ರಲ್ಲಿ ಸ್ಥಾಪಿಸಿದ್ದ ದಾಖಲೆ ಮುರಿದರು. ಮಹಿಳೆಯರ ವಿಭಾಗದ ಇದೇ ಸ್ಪರ್ಧೆಯನ್ನು ಪಂಜಾಬ್‌ನ ಕಮಲ್‌ಜೀತ್ ಕೌರ್ ಗೆದ್ದುಕೊಂಡರು.

ರೈಲ್ವೇಸ್ ತಂಡವನ್ನು ಪ್ರತಿನಿಧಿಸಿದ ಕರ್ನಾಟಕದ ಅಭಿನಯಾ ಶೆಟ್ಟಿ ಅವರು 1.76 ಮೀ. ಸಾಧನೆಯೊಂದಿಗೆ ಮಹಿಳೆಯರ ಹೈಜಂಪ್‌ನಲ್ಲಿ ಕಂಚು ತಮ್ಮದಾಗಿಸಿಕೊಂಡರು.

ಫಲಿತಾಂಶ: ಪುರುಷರ ವಿಭಾಗ: 200 ಮೀ. ಓಟ: ಅನಿಮೇಶ್ ಕುಜೂರ್ (ಒಡಿಶಾ; ಕಾಲ: 20.74 ಸೆ.)-1, ಅಕ್ಷಯ್ (ಸರ್ವಿಸಸ್)-2, ಶಶಿಕಾಂತ್ ಅಂಗಡಿ (ರೈಲ್ವೇಸ್)-3

400 ಮೀ. ಹರ್ಡಲ್ಸ್: ನಿಖಿಲ್ ಭಾರದ್ವಾಜ್ (ಪಂಜಾಬ್; ಕಾಲ: 50.45 ಸೆ.)-1, ವಿಜಯ್ ಮಲಿಕ್ (ಸರ್ವಿಸಸ್)-2, ರೋಹನ್ ಕಾಂಬ್ಳೆ (ಒಎನ್‌ಜಿಸಿ)-3

800 ಮೀ. ಓಟ: ಸತ್ಯದೇವ್ (ಹರಿಯಾಣ; ಕಾಲ: 1 ನಿ. 51.89 ಸೆ.)-1, ಅನುಕುಮಾರ್ (ಉತ್ತರಾಖಂಡ)-2, ಸೋಮನಾಥ್ ಚೌಹಾಣ್ (ರೈಲ್ವೇಸ್)-3



ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ಸಿಂಚಲ್ ಕಾವೇರಮ್ಮ– ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಮುಖ್ಯಾಂಶಗಳು

- 57.88 ಸೆ.ಗಳಲ್ಲಿ ಸ್ಪರ್ಧೆ ಪೂರೈಸಿದ ಸಿಂಚಲ್
- ಅಭಿನಯಾ ಶೆಟ್ಟಿಗೆ ಹೈಜಂಪ್ ಕಂಚು

3,000 ಮೀ. ಸ್ಟೀಪಲ್ ಚೇಸ್: ಮೊಹಮ್ಮದ್ ಹಸನ್ (ಸರ್ವಿಸಸ್; ಕಾಲ: 8 ನಿ. 38.70 ಸೆ.)-1, ಪ್ರಿನ್ಸ್ ರಾಜ್ ಮಿಶ್ರಾ (ರೈಲ್ವೇಸ್)-2, ಅಂಕಿತ್ ರಾಜೇಶ್ (ಸರ್ವಿಸಸ್)-3

ಟ್ರಿಪಲ್ ಜಂಪ್: ಅರುಣ್ ಎ.ಬಿ (ಸರ್ವಿಸಸ್; ದೂರ: 16.46 ಮೀ.)-1, ಕಾರ್ತಿಕ್ ಯು. (ಸರ್ವಿಸಸ್)-2, ಮೊಹಮ್ಮದ್ ಎಸ್.ಎನ್. (ತಮಿಳುನಾಡು)-3

ಮಹಿಳೆಯರ ವಿಭಾಗ: 200 ಮೀ. ಓಟ: ಕಮಲ್‌ಜೀತ್ ಕೌರ್ (ಪಂಜಾಬ್; ಕಾಲ: 23.66 ಸೆ.)-1, ಶ್ರಬನಿ ನಂದಾ (ಒಡಿಶಾ)-2, ಗಿರಿಧರಣಿ ರವಿಕುಮಾರ್ (ತಮಿಳುನಾಡು)-3

400 ಮೀ. ಹರ್ಡಲ್ಸ್: ಸಿಂಚಲ್ (ರೈಲ್ವೇಸ್; ಕಾಲ: 57.88 ಸೆ.)-1, ವೀರ್‌ಪಾಲ್ ಕೌರ್ (ಪಂಜಾಬ್)-2, ನಾನಿ (ರೈಲ್ವೇಸ್)-3

800 ಮೀ. ಓಟ: ಯಮುನಾ (ಮಹಾರಾಷ್ಟ್ರ; ಕಾಲ: 2 ನಿ. 1.95 ಸೆ.)-1, ಚಂದಾ (ರೈಲ್ವೇಸ್)-2, ಆಶಾಕಿರಣ್ ಬಾರ್ಲ (ಜಾರ್ಖಂಡ್)-3

ಹೆಪ್ಟಥ್ಲಾನ್: ಸೋನು ಕುಮಾರಿ (ರೈಲ್ವೇಸ್; 4,933 ಪಾಯಿಂಟ್ಸ್)-1, ತನು (ರೈಲ್ವೇಸ್)-2, ಪೂಜಾ (ಹರಿಯಾಣ)-3

ಜಾವೆಲಿನ್ ಥ್ರೋ: ಜ್ಯೋತಿ (ಹರಿಯಾಣ; ದೂರ: 53.59 ಸೆ.)-1, ಕರಿಷ್ಮಾ ಸನಿಲ್ (ರೈಲ್ವೇಸ್)-2, ಪ್ರಿಯಾಂಕಾ (ಹರಿಯಾಣ)-3

ಹೈಜಂಪ್: ಪೂಜಾ (ಹರಿಯಾಣ; ಎತ್ತರ: 1.81 ಮೀ.)-1, ಏಂಜೆಲ್ ದೇವಸ್ಯ (ರೈಲ್ವೇಸ್)-1, ಅಭಿನಯಾ ಶೆಟ್ಟಿ (ರೈಲ್ವೇಸ್)-3; 3,000 ಮೀ. ಸ್ಟೀಪಲ್‌ಚೇಸ್: ಕೋಮಲ್ ಜಗದಾಳೆ (ರೈಲ್ವೇಸ್; ಕಾಲ: 10 ನಿ. 32.14 ಸೆ.)-1, ಭಾಗ್ಯಶ್ರೀ ನವಲೆ (ಒಎನ್‌ಜಿಸಿ)-2, ಪ್ರೀನು ಯಾದವ್ (ರೈಲ್ವೇಸ್)-3

ದಸರಾ ಸಿ.ಎಂ. ಕಪ್ ಪ್ರತಿಭಾನ್ವೇಷಣಾ ಕ್ರೀಡಾಕೂಟ: ಪೃಥ್ವಿ, ಮೇಘಾ ಶ್ರೇಷ್ಠ ಅಥ್ಲೀಟ್ಸ್

ಬೆಂಗಳೂರು ನಗರ ವಿಭಾಗಕ್ಕೆ ಸಮಗ್ರ ಪ್ರಶಸ್ತಿ

● ಆರ್.ಜಿತೇಂದ್ರ

ಮೈಸೂರು: ಬೆಂಗಳೂರು ನಗರ ವಿಭಾಗವು ಶನಿವಾರ ಇಲ್ಲಿ ಮುಕ್ತಾಯಗೊಂಡ ದಸರಾ ಸಿ.ಎಂ. ಕಪ್ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್‌ಷಿಪ್ ತನ್ನದಾಗಿಸಿಕೊಂಡಿತು.

ಬೆಂಗಳೂರು ನಗರದ ಕ್ರೀಡಾಪಟುಗಳು ಒಟ್ಟು 81 ಚಿನ್ನ, 74 ಬೆಳ್ಳಿ ಹಾಗೂ 50 ಕಂಚು ಸೇರಿದಂತೆ ಒಟ್ಟು 205 ಪದಕಗಳನ್ನು ಗೆದ್ದು ಪ್ರಾಬಲ್ಯ ಮೆರೆದರು. ಬೆಳಗಾವಿ ವಿಭಾಗವು 57 ಚಿನ್ನ, 56 ಬೆಳ್ಳಿ, 51 ಕಂಚು ಸೇರಿ 164 ಪದಕಗಳೊಂದಿಗೆ ರನ್ನರ್ ಅಪ್ ಆಯಿತು. ಆತಿಥೇಯ ಮೈಸೂರು ವಿಭಾಗವು 45 ಚಿನ್ನ, 52 ಬೆಳ್ಳಿ ಹಾಗೂ 53 ಕಂಚಿನೊಂದಿಗೆ 150 ಪದಕ ಪಡೆದು ಮೂರನೇ ಸ್ಥಾನಕ್ಕೆ ಸರಿಯಿತು.

ಅಥ್ಲೆಟಿಕ್ಸ್- ಮೈಸೂರು ಮುಂದು: ಮೈಸೂರು ವಿಭಾಗದ ಅಥ್ಲೀಟ್‌ಗಳು ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ತೋರಿದರು. ಒಟ್ಟಾರೆ 11 ಚಿನ್ನ, 13 ಬೆಳ್ಳಿ ಹಾಗೂ 3 ಕಂಚಿನ ಪದಕದೊಂದಿಗೆ ಈ ವಿಭಾಗದಲ್ಲಿ ಅಗ್ರ ಸ್ಥಾನ ಗಳಿಸಿದರು. ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ ವಿಭಾಗದ ಪೃಥ್ವಿ ಸೇರೆಗಾರ್ 948 ಅಂಕಗಳೊಂದಿಗೆ ಹಾಗೂ ಮಹಿಳೆಯರ ವಿಭಾಗದಲ್ಲಿ ಬೆಳಗಾವಿಯ ಮೇಘಾ ಮುನವಳ್ಳಿ 930 ಅಂಕಗಳೊಂದಿಗೆ ಉತ್ತಮ ಅಥ್ಲೀಟ್ಸ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಸೈಕ್ಲಿಂಗ್ ಸ್ಪರ್ಧೆಯ ಮಹಿಳಾ ಮತ್ತು ಪುರುಷರ ವಿಭಾಗ ಎರಡರಲ್ಲೂ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ಸೈಕ್ಲಿಸ್ಟ್‌ಗಳು ಪಾರಮ್ಯ ಮೆರೆದರು.

ಮೂರನೇ ದಿನದ ಫಲಿತಾಂಶ: ಪುರುಷರು: ಸೈಕ್ಲಿಂಗ್: 80 ಕಿ.ಮೀ. ಮಾಸ್ ಸ್ಟಾರ್ಟ್ ರೇಸ್: ಬೀರಪ್ಪ ನವಲಿ (ವಿಜಯಪುರ)-1, ಸಂತೋಷ್ ಪೂಜಾರಿ (ವಿಜಯಪುರ)-2, ಮಲ್ಲೇಶ್ ಬಡಿಗೇರ (ಬಾಗಲಕೋಟೆ)-3. ಕಾಲ: 1 ಗಂಟೆ, 18ನಿ, 20 ಸೆ; ಜಿಮ್ನಾಸ್ಟಿಕ್ಸ್ ವಿಭಾಗ: ಏರೋಬಿಕ್ಸ್: ಮನೋಜ್ ದಾಸ್ (ಬೆಂ. ನಗರ)-1, ಓಜಸ್ವಿ ಕೌಶಿಕ್ (ಬೆಂ. ನಗರ)-2, ಹರ್ಷಿತ್ ಕುಮಾರ್ (ಮೈಸೂರು)-3; ಟ್ರಾಂಪೊಲಿನ್: ಉದಯ್ ನಾಯ್ಡು (ಬೆಂ.ನಗರ)-1, ಬಿ.ಎಲ್. ತ್ರಿಷೂಲ್ ಗೌಡ (ಬೆಂ.ನಗರ)-2, ಜೆ. ಚಿರಂತ್ (ಬೆಂ.ಗ್ರಾಮೀಣ)-3.

ಟೇಬಲ್ ಟೆನಿಸ್: ಸಿಂಗಲ್ಸ್: ಶ್ರೀನಿವಾಸ ಕಾರ್ತಿಕ್-1, ಯು.ಎನ್. ರಾಮಕುಮಾರ್-2; ಡಬಲ್ಸ್: ಬಿ.ಆರ್. ಗೌರವ್, ಆರ್ಣವ್ ನವೀನ್-1, ಯು.ಎನ್. ರಾಮ್‌ಕುಮಾರ್, ಎಸ್. ವಿಕ್ರಮಾದಿತ್ಯ-2; ಗುಂಪು ವಿಭಾಗ: ಮೈಸೂರು-1, ಬೆಂಗಳೂರು ನಗರ-2.

ಗುಂಪು ವಿಭಾಗದ ಸ್ಪರ್ಧೆಗಳು:



ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯ ವಿಜೇತ ಮೈಸೂರು ವನಿತೆಯರ ತಂಡ. ನಿಂತವರು (ಎಡದಿಂದ); ಬಬಿತಾ, ಹರ್ಷಿತಾ, ಹರಿಣಿ, ಬಿಂದುಶ್ರೀ, ಪ್ರಜ್ವಿನಿ ಶೆಟ್ಟಿ, ತಾಸ್ವಿ ಶೆಟ್ಟಿ, ಸಿ. ರವಿಪ್ರಕಾಶ್ (ಕೋಚ್). ಕುಳಿತವರು: ಹಂಸಾ, ದಿವ್ಯಾ, ಹೊನ್ನುಶ್ರೀ

ಬಾಲ್ ಬ್ಯಾಡ್ಮಿಂಟನ್: ಮೈಸೂರು-1, ಬೆಂಗಳೂರು ನಗರ-2, ಬೆಂ.ಗ್ರಾಮೀಣ-3; ಫುಟ್‌ಬಾಲ್: ಕಲಬುರಗಿ-1, ಬೆಂ.ನಗರ-2, ಬೆಳಗಾವಿ-3; ಹ್ಯಾಂಡ್‌ಬಾಲ್: ಬೆಂ.ನಗರ-1, ಮೈಸೂರು-2, ಬೆಂ.ಗ್ರಾಮೀಣ-3; ಹಾಕಿ: ಬೆಂ.ನಗರ-1, ಮೈಸೂರು-2, ಬೆಂ.ಗ್ರಾಮೀಣ-3; ಕಬಡ್ಡಿ: ಮೈಸೂರು-1, ಬೆಳಗಾವಿ-2, ಬೆಂ. ಗ್ರಾಮೀಣ-3; ಕೊಕ್ಕೊ: ಬೆಂ. ನಗರ-1, ಬೆಂ. ಗ್ರಾಮೀಣ-2, ಮೈಸೂರು-3; ನೆಟ್‌ಬಾಲ್: ಬೆಂ.ಗ್ರಾಮೀಣ-1, ಬೆಂ. ನಗರ-2, ಬೆಳಗಾವಿ-3; ಥ್ರೋಬಾಲ್: ಬೆಂ.ನಗರ-1, ಮೈಸೂರು-2, ಬೆಂ. ಗ್ರಾಮೀಣ-3; ವಾಲಿಬಾಲ್: ಬೆಳಗಾವಿ-1, ಮೈಸೂರು-2, ಬೆಂ.ನಗರ-3.

ಮಹಿಳೆಯರು: ಸೈಕ್ಲಿಂಗ್: 50 ಕಿ.ಮೀ ರೇಸ್: ದಾನವ್ವ ಗುರವ (ಬಾಗಲಕೋಟೆ)-1, ರೇಣುಕಾ ಕಾಖಂಡಕಿ (ಬಾಗಲಕೋಟೆ)-2, ಪುಷ್ಪಾ ಲಮಾಣಿ-3; ಜಿಮ್ನಾಸ್ಟಿಕ್ಸ್: ಏರೋಬಿಕ್ಸ್: ಎಸ್. ದಿಯಾ (ಬೆಂ. ನಗರ)-1, ಉನ್ನತಿ (ಬೆಂ.ನಗರ)-2, ಯುಕ್ತಿ (ಬೆಂ.ಗ್ರಾ)-3; ಟ್ರಾಂಪೊಲಿನ್: ಎಚ್.ಎಂ. ಶಿಲ್ಪಶ್ರೀ (ಬೆಂ. ಗ್ರಾ) -1, ಎಂ.ಪಿ. ಸನ್ನಿಧಿ (ಬೆಂ.ನಗರ)-2, ಕುಶಾ ಅಶೋಕ್ (ಬೆಂ.ನಗರ); ಟೇಬಲ್ ಟೆನಿಸ್ ಸಿಂಗಲ್ಸ್; ಹಿಮಾಂಶಿ ಚೌಧರಿ-1, ಆಯುಷಿ ಗೋಡ್ಸೆ-2. ಡಬಲ್ಸ್: ತನಿಷ್ಕ ಕಾಲಭೈರವ, ಆಯುಷಿ ಗೋಡ್ಸೆ-1, ಪ್ರೇಕ್ಷಾ ನಹಾಲ ಫಾತಿಮಾ-2.

ಗುಂಪು ವಿಭಾಗದ ಸ್ಪರ್ಧೆಗಳು: ಬಾಲ್ ಬ್ಯಾಡ್ಮಿಂಟನ್: ಮೈಸೂರು-1, ಬೆಂ. ಗ್ರಾಮೀಣ-2, ಬೆಂ. ನಗರ-3; ಬ್ಯಾಸ್ಕೆಟ್‌ಬಾಲ್: ಮೈಸೂರು-1, ಬೆಂ. ನಗರ-2, ಬೆಳಗಾವಿ-3; ಹ್ಯಾಂಡ್‌ಬಾಲ್: ಮೈಸೂರು-1, ಬೆಂ.ನಗರ-2, ಬೆಂ.ಗ್ರಾಮೀಣ-3; ಹಾಕಿ: ಮೈಸೂರು-1, ಬೆಂ.ನಗರ-2, ಕಲಬುರಗಿ-3; ಕಬಡ್ಡಿ: ಬೆಂ.ಗ್ರಾಮೀಣ-1, ಬೆಳಗಾವಿ-2, ಮೈಸೂರು-3; ಕೊಕ್ಕೊ: ಮೈಸೂರು-1, ಬೆಂ.ನಗರ-2, ಬೆಳಗಾವಿ-3; ನೆಟ್‌ಬಾಲ್: ಬೆಂ.ನಗರ-1, ಬೆಂ.ಗ್ರಾಮೀಣ-2, ಮೈಸೂರು-3; ಥ್ರೋಬಾಲ್: ಮೈಸೂರು-1, ಬೆಂ. ನಗರ-2, ಬೆಂ.ಗ್ರಾಮೀಣ-3; ವಾಲಿಬಾಲ್: ಮೈಸೂರು-1, ಬೆಳಗಾವಿ-2, ಬೆಂ.ನಗರ-3;

ದಸರಾ ಕುಸ್ತಿ ಇಂದಿನಿಂದ

ಮೈಸೂರು: ದಸರಾ ಮಹೋತ್ಸವ ಅಂಗವಾಗಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯು ಇಲ್ಲಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಅ.15ರಿಂದ 21ರವರಗೆ ನಡೆಯಲಿದೆ.

ಪುರುಷರಿಗಾಗಿ ರಾಜ್ಯ ಮಟ್ಟದ ದಸರಾ ಕಿಶೋರ (57ರಿಂದ 65 ಕೆ.ಜಿ), ದಸರಾ ಕೇಸರಿ (74ರಿಂದ 86 ಕೆ.ಜಿ), ದಸರಾ ಕಂಠೀರವ (86 ಕೆ.ಜಿ. ಮೇಲ್ಪಟ್ಟು) ಸ್ಪರ್ಧೆಗಳು ನಡೆಯಲಿವೆ. ಮೈಸೂರು ವಿಭಾಗ ಮಟ್ಟದಲ್ಲಿ ದಸರಾ ಕುಮಾರ್ ಹೆಸರಿನಲ್ಲಿ ಸ್ಪರ್ಧೆ ಆಯೋಜಿಸಿದ್ದು, 74 ಕೆಜಿ ಮೇಲ್ಪಟ್ಟವರು ಪಾಲ್ಗೊಳ್ಳಲಿದ್ದಾರೆ.

ಮಹಿಳೆಯರಿಗಾಗಿ ದಸರಾ ಕಿಶೋರಿ ಸ್ಪರ್ಧೆ ಇದ್ದು, 57ರಿಂದ 62 ಕೆ.ಜಿ. ಒಳಗಿನವರು ಸೆಣಸಲಿದ್ದಾರೆ. ವಿಜೇತರಿಗೆ ನಗದು ಬಹುಮಾನದ ಜೊತೆಗೆ ಬೆಳ್ಳಿ ಗದೆಯು ಉಡುಗೊರೆಯಾಗಿ ದೊರೆಯಲಿದೆ.

ದಸರಾ ಕುಸ್ತಿಯ ಪ್ರಮುಖ ಆಕರ್ಷಣೆಯಾದ ನಾಡ ಕುಸ್ತಿಯೂ ಇದೇ ಸಂದರ್ಭದಲ್ಲಿ ನಡೆಯಲಿದ್ದು, 210ಕ್ಕೂ ಹೆಚ್ಚು ಜೋಡಿಗಳು ಪಾಲ್ಗೊಳ್ಳುತ್ತಿವೆ. ನಿತ್ಯ 30 ಜೋಡಿಗಳು ಸೆಣಸಲಿವೆ. ವಿಜೇತರಿಗೆ ಸಾಹುಕಾರ್ ಚೆನ್ನಯ್ಯ ಕಪ್, ಮೈಸೂರು ಮಹಾರಾಜ ಒಡೆಯರ್ ಕಪ್ ಹಾಗೂ ಮೈಸೂರು ಮೇಯರ್ ಕಪ್ ಹೆಸರಿನಲ್ಲಿ ಪ್ರಶಸ್ತಿ ದೊರೆಯಲಿದೆ.

ಬ್ಯಾಡ್ಮಿಂಟನ್: ಸಿಂಧು ಸವಾಲು ಅಂತ್ಯ

ವಾಂತಾ (ಫಿನ್ಲೆಂಡ್), (ಪಿಟಿಐ): ಭಾರತದ ಪಿ.ವಿ.ಸಿಂಧು ಅವರು ಆರ್ಕಟಿಕ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು.

ಎಂಟನೇ ಶ್ರೇಯಾಂಕ ಹೊಂದಿದ್ದ ಸಿಂಧು ಶನಿವಾರ ನಡೆದ ಪಂದ್ಯದಲ್ಲಿ 12-21, 21-11, 7-21 ರಿಂದ ಚೀನಾದ ವಾಂಗ್ ಝಿ ಯಿ ಎದುರು ಪರಾಭವಗೊಂಡರು. ಐದನೇ ಶ್ರೇಯಾಂಕದ ವಾಂಗ್ 1 ಗಂಟೆ 3 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಹಾಕಿ: ಭಾರತ ಜೂನಿಯರ್ ತಂಡಗಳಿಗೆ ಗೆಲುವು

ನವದೆಹಲಿ (ಪಿಟಿಐ): ಭಾರತದ ಜೂನಿಯರ್ ಪುರುಷರ ಮತ್ತು ಮಹಿಳೆಯರ ಹಾಕಿ ತಂಡಗಳು ನೆದರ್ಲೆಂಡ್ಸ್ ಪ್ರವಾಸವನ್ನು ಗೆಲುವಿನೊಂದಿಗೆ ಆರಂಭಿಸಿವೆ.

ಮಹಿಳೆಯರ ತಂಡದವರು 3-2 ಗೋಲುಗಳಿಂದ ಸೀನಿಯರ್ ಇಡಿಇ ತಂಡವನ್ನು ಮಣಿಸಿದರು. ರವೀನಾ, ಕರುಣಾ ಮಿಂಜ್ ಮತ್ತು ಭವ್ಯಾ ಅವರು ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಪುರುಷರ ತಂಡ, ನೆದರ್ಲೆಂಡ್ಸ್ ಜೂನಿಯರ್ ತಂಡದ ವಿರುದ್ಧ 8-0 ಗೋಲುಗಳಿಂದ ಜಯ ಸಾಧಿಸಿತು.

ಅಜೀತ್ ಯಾದವ್ ಹ್ಯಾಟ್ರಿಕ್ ಗೋಲು ಗಳಿಸಿದರೆ ಗಮನ ಸೆಳೆದರೆ, ರೋಹಿತ್ ಸಿಂಗ್ ಎರಡು ಗೋಲುಗಳನ್ನು ತಂದಿತ್ತರು. ಇತರ ಗೋಲುಗಳನ್ನು ಆಶು ಮೌರ್ಯ, ಶ್ರೀಜನ್ ಯಾದವ್ ಮತ್ತು ರಾಹುಲ್ ರಾಜ್‌ಭರ್ ಗಳಿಸಿದರು.

ಚೆಸ್: ಪ್ರಸಿದ್ಧಿ, ಶಿವಾಂತ್ ಚಾಂಪಿಯನ್ಸ್

ಮೈಸೂರು: ಆತಿಥೇಯ ಮೈಸೂರು ನಗರದ ಪ್ರಸಿದ್ಧಿ ಭಟ್ ಹಾಗೂ ಎಂ. ಶಿವಾಂತ್ ಅವರು ದಸರಾ ಸಿ.ಎಂ.ಕಪ್ ರಾಜ್ಯ ಮಟ್ಟದ ಚೆಸ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಹಿಳೆಯರ ವಿಭಾಗದಲ್ಲಿ ಪ್ರಸಿದ್ಧಿ 5 ಸುತ್ತುಗಳಲ್ಲಿ ಅಜೇಯ ಸಾಧನೆ ತೋರಿ 4.5 ಅಂಕ ಕಲೆ ಹಾಕುವ ಮೂಲಕ ಬಂಗಾರದ ಪದಕಕ್ಕೆ ಕೊರಳೊಡ್ಡಿದರು. ಕೊಡಗಿನ ಬಿ.ಎನ್. ಗಂಗಮ್ಮ 4 ಅಂಕಗಳೊಂದಿಗೆ ಬೆಳ್ಳಿ ಹಾಗೂ ಮೈಸೂರಿನ ಶರಧಿ ಶಾಸ್ತ್ರಿ 4 ಅಂಕಗಳೊಂದಿಗೆ ಕಂಚಿನ ಪದಕ ಪಡೆದರು.

ಪುರುಷರ ವಿಭಾಗದ ಅಗ್ರ ಮೂರು ಪ್ರಶಸ್ತಿಗಳೂ ಮೈಸೂರಿಗರ ಪಾಲಾದವು. ಐದೂ ಸುತ್ತುಗಳಲ್ಲಿಯೂ ಪಾರಮ್ಯ ಮೆರೆದ ಎಂ. ಶಿವಾಂತ್ 5 ಅಂಕಗಳೊಂದಿಗೆ ಬಂಗಾರದ ಪದಕ ತಮ್ಮದಾಗಿಸಿಕೊಂಡರು. ಅವರಿಗೆ ಪೈಪೋಟಿ ನೀಡಿದ ನಿವಾನ್ ರಾಘವೇಂದ್ರ 4.5 ಅಂಕಗಳೊಂದಿಗೆ ಬೆಳ್ಳಿ ಹಾಗೂ ಎಂ.ಪಿ. ಅಜಿತ್ (4.5) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಕ್ರೀಡಾ ಇಲಾಖೆ ಹಾಗೂ ರಾಜ್ಯ ಚೆಸ್ ಸಂಸ್ಥೆ ಸಹಯೋಗದಲ್ಲಿ ನಡೆದ ಟೂರ್ನಿಯಲ್ಲಿ ಮೈಸೂರು, ಬೆಳಗಾವಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ ಹಾಗೂ ಕಲಬುರ್ಗಿ ವಿಭಾಗಗಳ ಚೆಸ್‌ಪಟುಗಳು ಪಾಲ್ಗೊಂಡರು.



ಚೆಸ್ ಟೂರ್ನಿ ವಿಜೇತರಾದ (ಎಡದಿಂದ ಬಲಕ್ಕೆ) ಶರಧಿ ಶಾಸ್ತ್ರಿ, ಬಿ.ಎನ್. ಗಂಗಮ್ಮ, ಪ್ರಸಿದ್ಧಿ ಭಟ್, ಎಂ. ಶಿವಾಂತ್, ನಿವಾನ್ ರಾಘವೇಂದ್ರ ಹಾಗೂ ಎಂ.ಪಿ. ಅಜಿತ್

ಅಂತರರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿ

ಅರ್ಹತಾ ಸುತ್ತಿನ ಪಂದ್ಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದಲ್ಲಿ ಜಿಲ್ಲಾ ಟೆನಿಸ್ ಸಂಸ್ಥೆ ವತಿಯಿಂದ ಅಂತರರಾಷ್ಟ್ರೀಯ ಮಟ್ಟದ ಟೆನಿಸ್ (ಐಟಿಎಫ್) ಟೂರ್ನಿ ಅಕ್ಟೋಬರ್ 15 ರಿಂದ 22ರವರೆಗೆ ನಡೆಯಲಿದೆ. ಮೊದಲ ಎರಡು ದಿನ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ.

‘ಭಾರತದ 18 ಆಟಗಾರರು ಸೇರಿ 27 ಆಟಗಾರರು ಅರ್ಹತಾ ಸುತ್ತಿನಲ್ಲಿ ಭಾಗವಹಿಸುವರು. ಧಾರವಾಡದ ಇಬ್ಬರು ಆಟಗಾರರಿಗೂ ಅವಕಾಶ ಕಲ್ಪಿಸಲಾಗಿದೆ’ ಎಂದು ಧಾರವಾಡ ಜಿಲ್ಲಾ ಲಾನ್ ಟೆನಿಸ್ ಸಂಸ್ಥೆ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಅಕ್ಟೋಬರ್ 17ರಂದು ಬೆಳಿಗ್ಗೆ 9ಕ್ಕೆ ಟೂರ್ನಿ ಉದ್ಘಾಟನಾ ಸಮಾರಂಭ ನಡೆಯಲಿದೆ. 20 ದೇಶಗಳ 44 ಆಟಗಾರರು ಮತ್ತು ದೇಶದ ವಿವಿಧೆಡೆಯಿಂದ 12 ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ’ ಎಂದರು. ಒಟ್ಟು ₹20.75 ಲಕ್ಷ ಬಹುಮಾನ ಮೊತ್ತವನ್ನು ಟೂರ್ನಿಯ ಹೊಂದಿದೆ.

‘ಡಬಲ್ಸ್ ವಿಭಾಗದಲ್ಲಿ ಫೈನಲ್ ಪಂದ್ಯ ಅಕ್ಟೋಬರ್ 21ರ ಮಧ್ಯಾಹ್ನ 3ಕ್ಕೆ ಹಾಗೂ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪಂದ್ಯ ಅಕ್ಟೋಬರ್ 22ರ ಬೆಳಿಗ್ಗೆ 11ಕ್ಕೆ ನಡೆಯಲಿದೆ. ಐದು ಕೋರ್ಟ್‌ಗಳಲ್ಲಿ ಪಂದ್ಯಗಳು ನಡೆಯಲಿವೆ’ ಎಂದರು.



ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಾಕ್ ಎದುರು ಭಾರತ ಅಜೇಯ ಸಾಧನೆ • ಬೌಲರ್‌ಗಳ ಪಾರಮ್ಯ • ರೋಹಿತ್ ಶರ್ಮಾ, ಶ್ರೇಯಸ್ ಅಯ್ಯರ್ ಅರ್ಧಶತಕ

ಭಾರತ ಜಯದ ಓಟ; ನಡೆಯದ ಪಾಕ್ ಆಟ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ಎತ್ತ ಕಣ್ಣು ಹಾಯಿಸಿದರೂ ನೀಲಿವರ್ಣದ ವಿಜೃಂಭಣೆ ಕಣ್ಣಿಗೆ ಹಬ್ಬವನ್ನುಂಟು ಮಾಡಿತ್ತು.

ಈ ಅಂಗಳದಲ್ಲಿ ನೀಲಿ ಪೋಷಾಕು ತೊಟ್ಟು ಬಂದಿದ್ದ ಒಂದು ಲಕ್ಷಕ್ಕೂ ಅಧಿಕ ಪ್ರೇಕ್ಷಕರು ಮತ್ತು ಟೆಲಿವಿಷನ್ ಪರದೆಗಳ ಮುಂದೆ ಕುಳಿತಿದ್ದ ಕೋಟ್ಯಂತರ ಅಭಿಮಾನಿಗಳನ್ನು ಭಾರತ ಕ್ರಿಕೆಟ್ ತಂಡ ನಿರಾಸೆಗೊಳಿಸಲಿಲ್ಲ. ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿ ತನ್ನ ಬದ್ಧ ಎದುರಾಳಿ ಪಾಕಿಸ್ತಾನ ಎದುರು ಅಜೇಯ ಓಟವನ್ನು ಮುಂದುವರಿಸಿತು. ವಿಶ್ವಕಪ್ ಇತಿಹಾಸದಲ್ಲಿಯೇ ಸತತ ಎಂಟನೇ ಬಾರಿ (8–0) ಗೆಲುವಿನ ಸಂಭ್ರಮ ಆಚರಿಸಿತು.

ತಲಾ ಎರಡು ವಿಕೆಟ್ ಗಳಿಸಿದ ಭಾರತದ ಐವರು ಬೌಲರ್‌ಗಳು ಮತ್ತು ಅಬ್ಬರದ ಅರ್ಧಶತಕ ಬಾರಿಸಿದ ನಾಯಕ ರೋಹಿತ್ ಶರ್ಮಾ ಅವರ ಆಟದಿಂದ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಏಕಪಕ್ಷೀಯವಾಗಿದ್ದ ಈ ಪಂದ್ಯದಲ್ಲಿ ಭಾರತ ಜಯಿಸಿದಾಗ ಇನ್ನೂ 117 ಎಸೆತಗಳು ಬಾಕಿ ಇದ್ದವು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಸ್‌ಪ್ರೀತ್ ಬೂಮ್ರಾ, ಕುಲದೀಪ್ ಯಾದವ್, ರವೀಂದ್ರ ಜಡೇಜ, ಹಾರ್ದಿಕ್ ಪಾಂಡ್ಯ ಮತ್ತು ಮೊಹಮ್ಮದ್ ಸಿರಾಜ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ಪಾಕ್ ತಂಡವು 42.5 ಓವರ್‌ಗಳಲ್ಲಿ 191 ರನ್ ಗಳಿಸಿ ಎಲ್ಲವಿಕೆಟ್ ಕಳೆದುಕೊಂಡಿತು.

ಪಾಕ್ ತಂಡದ ಅಬ್ದುಲ್ಲಾ ಶಫೀಕ್ ಮತ್ತು ಇಮಾಮ್ ಉಲ್ ಹಕ್ ಉತ್ತಮ ಆರಂಭ ನೀಡಿದರು. ಲಯಕ್ಕೆ ಮರಳಿದ ನಾಯಕ ಬಾಬರ್ ಆಜಂ (50; 58ಎ) ಅರ್ಧಶತಕ ಹೊಡೆದರು. ರಿಜ್ವಾನ್ ಜೊತೆಗೆ ಬಾಬರ್ ಅವರು ಮೂರನೇ ವಿಕೆಟ್‌ಗೆ 82 ರನ್ ಸೇರಿಸಿದರು. ಆದರೆ, ಜೊತೆಯಾಟಗಳು ದೀರ್ಘವಾಗಿ ಬೆಳೆಯದಂತೆ ಭಾರತದ ಬೌಲರ್‌ಗಳು ಕಡಿವಾಣ ಹಾಕಿದರು.

ಎಡಗೈ ಸ್ಪಿನ್ನರ್‌ಗಳ ಚಾಣಾಕ್ಷ ದಾಳಿ ಮತ್ತು ಬೂಮ್ರಾ ಅವರ ಶಿಸ್ತುಬದ್ಧ ಎಸೆತಗಳ ಮುಂದೆ ಬ್ಯಾಟರ್‌ಗಳು ಆಡಲು ತಡವರಿಸಿದರು. ಇದರಿಂದಾಗಿ ಸಾಧಾರಣ ಮೊತ್ತಕ್ಕೆ ಪಾಕ್ ಕುಸಿಯಿತು. ಪಂದ್ಯ ಏಕಪಕ್ಷೀಯವಾಯಿತು.

ರೋಹಿತ್ ಅಬ್ಬರ: ಟೂರ್ನಿಯ ಮೊದಲ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದ ರೋಹಿತ್ ಎರಡನೇ ಪಂದ್ಯದಲ್ಲಿ ಅಫ್ಗಾನಿಸ್ತಾನ ವಿರುದ್ಧ ಶತಕ ಬಾರಿಸಿದ್ದರು. ಇಲ್ಲಿಯೂ ತಮ್ಮ ಅಬ್ಬರದ ಆಟವನ್ನು ಮುಂದುವರಿಸಿದರು.

63 ಎಸೆತಗಳಲ್ಲಿ 86 ರನ್ ಗಳಿಸಿದರು. ಅರ್ಧ ಡಜನ್ ಸಿಕ್ಸರ್ ಮತ್ತು ಅಷ್ಟೇ ಸಂಖ್ಯೆಯ ಬೌಂಡರಿಗಳನ್ನು ಗಳಿಸಿದರು. ಮತ್ತೊಂದು ಶತಕ ದಾಖಲಿಸುವ ಭರವಸೆ ಮೂಡಿಸಿದ್ದರು. ಆದರೆ 22ನೇ ಓವರ್‌ನಲ್ಲಿ ಆಫ್ರಿದಿ ಎಸೆತವನ್ನು ಆಡುವ ಭರದಲ್ಲಿ ಇಫ್ತಿಕಾರ್ ಅಹಮದ್‌ಗೆ ಸುಲಭವಾದ ಕ್ಯಾಚ್ ಕೊಟ್ಟರು.

ಇದಕ್ಕೂ ಮುನ್ನ ರೋಹಿತ್ ಎರಡನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಕೊಹ್ಲಿ ಜೊತೆಗೆ 56 ರನ್ ಸೇರಿಸಿದರು. ಏಕದಿನ ಕ್ರಿಕೆಟ್‌ನಲ್ಲಿ ಮುನ್ನೂರು ಸಿಕ್ಸರ್‌ಗಳ ಗಡಿಯನ್ನು ದಾಟಿದರು.

ಹತ್ತು ಓವರ್‌ಗಳು ಮುಗಿಯುವ ಮುನ್ನವೇ ಶುಭಮನ್ ಗಿಲ್ ಹಾಗೂ ವಿರಾಟ್ ಕೊಹ್ಲಿ ಪೆವಿಲಿಯನ್ ಸೇರಿದ್ದರು. ಈ ಹಂತದಲ್ಲಿ ದಿಟ್ಟವಾಗಿ ನಿಂತ ರೋಹಿತ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ ಶ್ರೇಯಸ್ ಅಯ್ಯರ್ (ಔಟಾಗದೆ 53; 62ಎ) ಅವರೊಂದಿಗೆ 77 ರನ್ ಸೇರಿಸಿದರು. ರೋಹಿತ್ ಔಟಾದಾಗ ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ ಅಜೇಯ 19 ರನ್ ಗಳಿಸಿದರು.

ಹ್ಯಾಟ್ರಿಕ್ ಜಯ: ಈ ಟೂರ್ನಿಯಲ್ಲಿ ಭಾರತಕ್ಕೆ ಇದು ಸತತ ಮೂರನೇ ಜಯವಾಗಿದೆ. ಎರಡು ಪಂದ್ಯ ಗೆದ್ದಿರುವ ಪಾಕಿಸ್ತಾನಕ್ಕೆ ಮೊದಲ ಸೋಲಾಗಿದೆ.

ಇದರೊಂದಿಗೆ ಭಾರತ ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದೆ.



ರೋಹಿತ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಏಕದಿನ ಕ್ರಿಕೆಟ್‌ನಲ್ಲಿ ಸಿಕ್ಸರ್ ತ್ರಿಶತಕ

ಸಿಕ್ಸರ್	ಆಟಗಾರ	ದೇಶ
351	ಶಾಹೀದ್ ಆಫ್ರಿದಿ	ಪಾಕಿಸ್ತಾನ
331	ಕ್ರಿಸ್ ಗೇಲ್	ವೆಸ್ಟ್ ಇಂಡೀಸ್
303	ರೋಹಿತ್ ಶರ್ಮಾ	ಭಾರತ

ಐವರು ಬೌಲರ್‌ಗಳು ತಲಾ 2 ವಿಕೆಟ್ ಸಾಧನೆ (ವಿಶ್ವಕಪ್ ಇನಿಂಗ್ಸ್)

ಪಂದ್ಯ	ಸ್ಥಳ	ವರ್ಷ
ಭಾರತ–ಪಾಕಿಸ್ತಾನ	ಮೊಹಾಲಿ	2011
ನ್ಯೂಜಿಲೆಂಡ್–ಶ್ರೀಲಂಕಾ	ಕ್ರೈಸ್ಟ್‌ಚರ್ಚ್	2015
ಭಾರತ–ಪಾಕಿಸ್ತಾನ	ಅಹಮದಾಬಾದ್	2023

ಪಾಕ್ ಎದುರು ಪಂದ್ಯಶ್ರೇಷ್ಠರು (ವಿಶ್ವಕಪ್)

ಆಟಗಾರ	ವರ್ಷ
ಸಚಿನ್ ತೆಂಡೂಲ್ಕರ್	1992, 2003, 2011
ನವಜ್ಯೋತ್ ಸಿಂಗ್ ಸಿಧು	1996
ವೆಂಕಟೇಶ್ ಪ್ರಸಾದ್	1999
ವಿರಾಟ್ ಕೊಹ್ಲಿ	2015
ರೋಹಿತ್ ಶರ್ಮಾ	2019
ಜಸ್‌ಪ್ರೀತ್ ಬೂಮ್ರಾ	2023

ತಪ್ಪು ಜೆರ್ಸಿ ಧರಿಸಿದ ಕೊಹ್ಲಿ!

ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಶನಿವಾರ ಪಂದ್ಯದ ಸಂದರ್ಭದಲ್ಲಿ ಪ್ರಮಾದವಶಾತ್ ತಪ್ಪು ಪೋಷಾಕು ಧರಿಸಿದರು. ತಮ್ಮ ಅರಿವಿಗೆ ಬಂದಾಕ್ಷಣ ಬದಲಿಸಿಕೊಂಡರು.

ಈ ವಿಶ್ವಕಪ್ ಪಂದ್ಯಗಳಲ್ಲಿ ಭಾರತದ ಆಟಗಾರರು ಧರಿಸುತ್ತಿರುವ ಜೆರ್ಸಿಯ ಭುಜದ ಭಾಗದಲ್ಲಿ ತ್ರಿವರ್ಣ ಧ್ವಜದ ಬಣ್ಣಗಳನ್ನು ವಿನ್ಯಾಸ ಮಾಡಲಾಗಿದೆ. ಆದರೆ, ಕೊಹ್ಲಿ ಅವರು ಈ ಜೆರ್ಸಿ ಬದಲಿಗೆ ಬಿಳಿ ಬಣ್ಣದ ಪಟ್ಟಿಗಳಿರುವ ಜೆರ್ಸಿ ಧರಿಸಿದ್ದರು.

ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಭಾರತ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಏಳನೇ ಓವರ್‌ನವರೆಗೂ ವಿರಾಟ್ ತಾವು ತಪ್ಪು ಜೆರ್ಸಿ ಹಾಕಿಕೊಂಡಿರುವುದನ್ನು ಗಮನಿಸಿಕೊಂಡಿರಲಿಲ್ಲ. ಕೂಡಲೇ ಪೆವಿಲಿಯನ್‌ಗೆ ತೆರಳಿದ ಅವರು ಜೆರ್ಸಿ ಬದಲಿಸಿ ಮರಳಿದರು.

ಸ್ಕೋರ್ ಕಾರ್ಡ್

ಪಾಕಿಸ್ತಾನ 191 (42.5 ಓವರ್‌ಗಳಲ್ಲಿ)

ಶಫೀಕ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 20 (24ಎ, 4X3)
ಇಮಾಮ್ ಸಿ ರಾಹುಲ್ ಬಿ ಹಾರ್ದಿಕ್ 36 (38ಎ, 4X6)
ಬಾಬರ್ ಬಿ ಸಿರಾಜ್ 50 (58ಎ, 4X7)
ರಿಜ್ವಾನ್ ಬಿ ಬೂಮ್ರಾ 49 (69ಎ, 4X7)
ಶಕೀಲ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 6 (10ಎ)
ಇಫ್ತಿಕಾರ್ ಬಿ ಕುಲದೀಪ್ 4 (4ಎ, 4X1)
ಶಾದಾಬ್ ಬಿ ಬೂಮ್ರಾ 2 (5ಎ)
ನವಾಜ್ ಸಿ ಬೂಮ್ರಾ ಬಿ ಹಾರ್ದಿಕ್ 4 (14ಎ)
ಹಸನ್ ಸಿ ಶುಭಮನ್ ಬಿ ಜಡೇಜ 12 (19ಎ, 4X2)
ಆಫ್ರಿದಿ ಔಟಾಗದೆ 2 (10ಎ)
ಹ್ಯಾರಿಸ್ ಎಲ್‌ಬಿಡಬ್ಲ್ಯು ಬಿ ಜಡೇಜ 2 (6ಎ)
ಇತರೆ: 4 (ಬೈ 1, ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1–41 (ಅಬ್ದುಲ್ಲಾ ಶಫೀಕ್; 7.6), 2–73 (ಇಮಾಮ್ ಉಲ್ ಹಕ್; 12.3), 3–155 (ಬಾಬರ್ ಆಜಂ; 29.4), 4–162 (ಸೌದ್ ಶಕೀಲ್; 32.2), 5–166 (ಇಫ್ತಿಕಾರ್ ಅಹಮದ್; 32.6), 6–168 (ಮೊಹಮ್ಮದ್ ರಿಜ್ವಾನ್; 33.6), 7–171 (ಶಾದಾಬ್ ಖಾನ್; 35.2), 8–187 (ಮೊಹಮ್ಮದ್ ನವಾಜ್; 39.6), 9–187 (ಹಸನ್ ಅಲಿ; 40.1), 10–191 (ಹ್ಯಾರಿಸ್ ರವೂಫ್; 42.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 7–1–19–2, ಮೊಹಮ್ಮದ್ ಸಿರಾಜ್ 8–0–50–2, ಹಾರ್ದಿಕ್ ಪಾಂಡ್ಯ 6–0–34–2, ಕುಲದೀಪ್ ಯಾದವ್ 10–0–35–2, ರವೀಂದ್ರ ಜಡೇಜ 9.5–0–38–2, ಶಾರ್ದೂಲ್ ಠಾಕೂರ್ 2–0–12–0.

ಭಾರತ 3ಕ್ಕೆ192 (30.3ಓವರ್‌ಗಳಲ್ಲಿ)

ರೋಹಿತ್ ಸಿ ಇಫ್ತಿಕಾರ್ ಬಿ ಆಫ್ರಿದಿ 86 (63ಎ, 4X6, 6X6)
ಶುಭಮನ್ ಸಿ ಶಾದಾಬ್ ಬಿ ಆಫ್ರಿದಿ 16 (11ಎ, 4X4)
ವಿರಾಟ್ ಸಿ ನವಾಜ್ ಬಿ ಹಸನ್ 16 (18ಎ, 4X3)
ಶ್ರೇಯಸ್ ಔಟಾಗದೆ 53 (62ಎ, 4X3, 6X2)
ಕೆ.ಎಲ್. ರಾಹುಲ್ ಔಟಾಗದೆ 19 (29ಎ, 4X2)
ಇತರೆ: 2 (ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1–23 (ಶುಭಮನ್ ಗಿಲ್; 2.5), 2–79 (ವಿರಾಟ್ ಕೊಹ್ಲಿ; 9.5), 3–156 (ರೋಹಿತ್ ಶರ್ಮಾ; 21.4)
ಬೌಲಿಂಗ್: ಶಾಹೀನ್ ಆಫ್ರಿದಿ 6–0–36–2, ಹಸನ್ ಅಲಿ 6–0–34–1, ಮೊಹಮ್ಮದ್ ನವಾಜ್ 8.3–0–47–0, ಹ್ಯಾರಿಸ್ ರವೂಫ್ 6–0–43–0, ಶಾದಾಬ್ ಖಾನ್ 4–0–31–0.
ಪಂದ್ಯಶ್ರೇಷ್ಠ: ಜಸ್‌ಪ್ರೀತ್ ಬೂಮ್ರಾ

ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ



ತಲಾ ಎರಡು ವಿಕೆಟ್ ಪಡೆದ (ಎಡದಿಂದ) ಜಸ್‌ಪ್ರೀತ್ ಬೂಮ್ರಾ, ರವೀಂದ್ರ ಜಡೇಜ, ಹಾರ್ದಿಕ್ ಪಾಂಡ್ಯ, ಕುಲದೀಪ್ ಯಾದವ್ ಮತ್ತು ಸಿರಾಜ್

8
ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗಳಲ್ಲಿ ಭಾರತವು ಪಾಕ್ ವಿರುದ್ಧ ಗೆದ್ದ ಪಂದ್ಯಗಳು. ಪಾಕಿಸ್ತಾನವು ಇದುವರೆಗೆ ಒಂದೂ ಪಂದ್ಯ ಗೆದ್ದಿಲ್ಲ.

1.20 ಲಕ್ಷ
ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನೋಡಲು ಸೇರಿದ್ದ ಪ್ರೇಕ್ಷಕರ ಸಂಖ್ಯೆ



ಪಂದ್ಯ ವೀಕ್ಷಿಸಿದ ಅಭಿಮಾನಿಗಳ ಸಂಭ್ರಮ –ಪಿಟಿಐ ಚಿತ್ರ

ಗಿಲ್‌ಗೆ ಅವಕಾಶ;ಇಶಾನ್‌ಗೆ ವಿಶ್ರಾಂತಿ

ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯಕ್ಕೂ ಮುನ್ನ ಡೆಂಗಿ ಜ್ವರದಿಂದ ಬಳಲಿದ್ದ ಭಾರತದ ಬ್ಯಾಟರ್ ಶುಭಮನ್ ಗಿಲ್ ಶನಿವಾರ ಕಣಕ್ಕೆ ಮರಳಿದರು. ಚೆನ್ನೈನಲ್ಲಿ ಕೆಲವು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಗಿಲ್ ಮೊದಲ ಎರಡೂ ಪಂದ್ಯಗಳಲ್ಲಿ ಆಡಿರಲಿಲ್ಲ. ಅವರ ರಕ್ತದ ಪ್ಲೇಟ್‌ಲೆಟ್‌ಗಳ ಸಂಖ್ಯೆಯು 70 ಸಾವಿರಕ್ಕಿಳಿದಿತ್ತು.

ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಗಿಲ್ ಆಡಿದರು. ಅದರಿಂದಾಗಿ ಇಶಾನ್ ಕಿಶನ್ ಅವರಿಗೆ ವಿಶ್ರಾಂತಿ ನೀಡಲಾಯಿತು. ರೋಹಿತ್ ಶರ್ಮಾ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಗಿಲ್, 18 ಎಸೆತಗಳಲ್ಲಿ 16 ರನ್ ಗಳಿಸಿದರು. ಫೀಲ್ಡಿಂಗ್ ಮಾಡುವಾಗಲೂ ಒಂದು ಕ್ಯಾಚ್ ಪಡೆದರು. ಲವಲವಿಕೆಯಿಂದ ಆಡಿ ಗಮನ ಸೆಳೆದರು.

ಕ್ರಿಕೆಟ್: ಅಚ್ಚರಿ ಫಲಿತಾಂಶ ನೀಡುವತ್ತ ಅಫ್ಗಾನಿಸ್ತಾನ ಚಿತ್ತ

ಇಂಗ್ಲೆಂಡ್‌ಗೆ ಜಯದ ಮೇಲೆ ಕಣ್ಣು

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಭಾನುವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದೆ.

ಜೋಸ್ ಬಟ್ಲರ್ ನಾಯಕತ್ವದ ಇಂಗ್ಲೆಂಡ್ ತಂಡವು ಈ ಟೂರ್ನಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಆಘಾತ ಅನುಭವಿಸಿತ್ತು. ಆದರೆ ತನ್ನ ಎರಡನೇ ಪಂದ್ಯದಲ್ಲಿ ಪುಟಿದೆದ್ದ ಬಟ್ಲರ್ ಬಳಗವು ಬಾಂಗ್ಲಾದೇಶ ಎದುರು 137 ರನ್‌ಗಳ ಜಯ ಸಾಧಿಸಿತ್ತು.

ಇದರಿಂದಾಗಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ತಂಡವು ಅಫ್ಗಾನಿಸ್ತಾನದ ಎದುರು ಸುಲಭ ಗೆಲುವಿನ ನಿರೀಕ್ಷೆಯಲ್ಲಿದೆ. ಅಲ್ಲದೇ ತನ್ನ ನೆಟ್ ರನ್‌ರೇಟ್ ಕೂಡ ಉತ್ತಮಪಡಿಸಿಕೊಳ್ಳುವತ್ತಲೂ ಚಿತ್ತ ನೆಟ್ಟಿದೆ.

ನಾಯಕ ಬಟ್ಲರ್, ರೂಟ್, ಡೇವಿಡ್ ಮಲಾನ್, ಜಾನಿ ಬೆಸ್ಟೊ ಅವರು ರನ್‌ಗಳ ಬೆಟ್ಟವನ್ನೇ ನಿರ್ಮಿಸಬಲ್ಲ ಸಮರ್ಥರು. ಉತ್ತಮ ಲಯದಲ್ಲಿಯೂ ಇದ್ದಾರೆ.

ಆದರೆ ಅನುಭವಿ ಬೌಲರ್‌ಗಳಾದ ಮಾರ್ಕ್ ವುಡ್, ಕ್ರಿಸ್ ವೋಕ್ಸ್, ಸ್ಯಾಮ್ ಕರನ್, ಮೋಯಿನ್ ಅಲಿ ಮತ್ತು ಆದಿಲ್ ರಶೀದ್ ಅವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಬೌಲಿಂಗ್ ಮಾಡಿದರೆ ಅಫ್ಗನ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಬಹುದು.

ಅಫ್ಗಾನಿಸ್ತಾನ ತಂಡವು ಕಳೆದ ಎರಡೂ ಪಂದ್ಯಗಳಲ್ಲಿ ಸೋತಿದೆ. ತಂಡದ ಎಲ್ಲ ವಿಭಾಗಗಳಲ್ಲಿಯೂ ಸುಧಾರಣೆಯ ಅಗತ್ಯವಿದೆ. ತಂಡದ ಆರಂಭಿಕ ಬ್ಯಾಟರ್‌ಗಳಾದ ರೆಹಮಾನುಲ್ಲಾ ಗುರ್ಬಾಜ್ ಮತ್ತು ಇಬ್ರಾಹಿರ್ ಜದ್ರಾನ್ ಅವರು ಉತ್ತಮ ಆರಂಭ ನೀಡುವಲ್ಲಿ ವಿಫಲರಾಗಿದ್ದಾರೆ. ನಾಯಕ ಹಷ್ಮತ್ ಉಲ್ಲಾ ಮತ್ತು ಬ್ಯಾಟರ್ ಅಜ್ಮತ್‌ವುಲ್ಲಾ ಅವರು ಮಾತ್ರ ಕಷ್ಟದ ಸಂದರ್ಭದಲ್ಲಿಯೂ ಅರ್ಧಶತಕ ಹೊಡೆದು ಭರವಸೆ ಮೂಡಿಸಿದ್ದರು.

ಬಿಗಿ ದಾಳಿ ನಡೆಸುವಲ್ಲಿ ಬೌಲರ್‌ಗಳು ಎಡವುತ್ತಿದ್ದಾರೆ. ಎದುರಾಳಿ ತಂಡದ ಜೊತೆಯಾಟಗಳನ್ನು ಮುರಿಯುವಲ್ಲಿ ಬೌಲರ್‌ಗಳು ಯಶಸ್ಸು ಸಾಧಿಸಿಲ್ಲ. ಫೀಲ್ಡಿಂಗ್‌ನಲ್ಲಿಯೂ ಚುರುಕುತನ ತೋರಿದರೆ ಇಂಗ್ಲೆಂಡ್‌ಗೆ ಕಠಿಣ ಸ್ಪರ್ಧೆಯೊಡ್ಡಬಹುದು.

ಇದೇ ಅಂಗಳದಲ್ಲಿ ಅಫ್ಗನ್ ತಂಡವು ಈಚೆಗೆ ಭಾರತದ ವಿರುದ್ಧ ಸೋತಿತ್ತು.



ವಿಕೆಟ್‌ಕೀಪಿಂಗ್ ಅಭ್ಯಾಸನಿರತ ಜೋಸ್ ಬಟ್ಲರ್ –ಪಿಟಿಐ ಚಿತ್ರ

ತಂಡಗಳು

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ/ವಿಕೆಟ್‌ಕೀಪರ್), ಜೋ ರೂಟ್, ಜಾನಿ ಬೆಸ್ಟೊ (ವಿಕೆಟ್‌ಕೀಪರ್), ಹ್ಯಾರಿ ಬ್ರೂಕ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ, ಕ್ರಿಸ್ ವೋಕ್ಸ್, ಸ್ಯಾಮ್ ಕರನ್, ಡೇವಿಡ್ ವಿಲಿ, ಆದಿಲ್ ರಶೀದ್, ಮಾರ್ಕ್ ವುಡ್, ರೀಸ್ ಟಾಪ್ಲಿ, ಗಸ್ ಅಟ್ಕಿನ್ಸನ್.

ಅಫ್ಗಾನಿಸ್ತಾನ: ಹಷ್ಮತ್‌ಉಲ್ಲಾ ಶಾಹೀದಿ (ನಾಯಕ), ರೆಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್, ರಿಯಾಜ್ ಹಸನ್, ರೆಹಮತ್ ಷಾ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ನಬಿ, ಇಕ್ರಮ್ ಅಲಿಖಿಲ್, ಅಜ್ಮತುಲ್ಲಾ ಒಮರ್‌ಝೈ, ರಶೀದ್ ಖಾನ್, ಮುಜೀಬ್ ಉರ್ ರೆಯಮಾನ್, ನೂರ್ ಅಹಮದ್, ಫಜಲ್‌ಹಕ್ ಫಾರೂಕಿ, ಅಬ್ದುಲ್ ರೆಹಮಾನ್, ನವೀನ್ ಉಲ್ ಹಕ್.

ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	3	3	0	0	6	1.821
ನ್ಯೂಜಿಲೆಂಡ್	3	3	0	0	6	1.604
ದಕ್ಷಿಣ ಆಫ್ರಿಕಾ	2	2	0	0	4	2.360
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	2	1	1	0	2	0.553
ಬಾಂಗ್ಲಾದೇಶ	3	1	2	0	2	-0.699
ಶ್ರೀಲಂಕಾ	2	0	2	0	0	-1.161
ನೆದರ್ಲೆಂಡ್ಸ್	2	0	2	0	0	-1.438
ಆಸ್ಟ್ರೇಲಿಯಾ	2	0	2	0	0	-1.846
ಅಫ್ಗಾನಿಸ್ತಾನ	2	0	2	0	0	-1.907

ಟಿಕೆಟ್ ವಂಚನೆ: ಬಂಧನ

ಅಹಮದಾಬಾದ್: ಗುಜರಾತ್ ಕ್ರಿಕೆಟ್ ಸಂಸ್ಥೆಯ ಪ್ರತಿನಿಧಿಯಂತೆ ನಟಿಸಿದ ವ್ಯಕ್ತಿಯೊಬ್ಬ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದ 41 ಟಿಕೆಟ್‌ಗಳನ್ನು ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದಾನೆ. ಈ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯು ಒಟ್ಟು ₹ 2.68 ಲಕ್ಷ ಪಡೆದು ವಂಚಿಸಿದ್ದಾನೆ.

ಮೆಸ್ರಿ ಕಂಡೋರಿಯಾ ಅವರು ನೀಡಿರುವ ದೂರಿನನ್ವಯ ಪೊಲೀಸರು ತನಿಖೆ ನಡೆಸಿದ್ದಾರೆ.

'ಸೆ.22 ಮತ್ತು 23ರಂದು ಜಯ್ ಶಾ ಎಂಬುವವರ ಹೆಸರಿನ ಫೇಸ್‌ಬುಕ್ ಪುಟದಲ್ಲಿ ತಾನು ಜಿಸಿಎ ಏಜೆಂಟ್ ಎಂದು ಆರೋಪಿ ಉಲ್ಲೇಖಿಸಿದ್ದ. ಇದರಲ್ಲಿದ್ದ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿದೆ. ತಮಗೆ ಹಾಗೂ ಸ್ನೇಹಿತರಿಗೆ ಸೇರಿ 41 ಟಿಕೆಟ್ ಕೊಡಿಸಲು ಬೇಡಿಕೆ ಇಟ್ಟೆ. ಕೊಡಿಸುವುದಾಗಿ ಹೇಳಿ ಹಣ ಕಳಿಸಲು ಹೇಳಿದ್ದರು. ₹ 2.69 ಲಕ್ಷ ಕಳಿಸಿದೆವು. ಆದರೆ, ಯಾವುದೇ ಟಿಕೆಟ್ ನಮಗೆ ಸಿಗಲಿಲ್ಲ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವಿಶ್ವಕಪ್‌ನಿಂದ ಹೊರಬಿದ್ದ ಶನಕ

ಲಖನೌ (ಎಎಫ್‌ಪಿ): ಶ್ರೀಲಂಕಾ ನಾಯಕ ದಸುನ್ ಶನಕ ಅವರು ಗಾಯಾಳಾಗಿ ವಿಶ್ವಕಪ್‌ನಿಂದ ಹೊರಬಿದ್ದಿದ್ದಾರೆ. ಚಮಿಕಾ ಕರುಣಾರತ್ನೆ ಅವರು ಬದಲಿಯಾಗಿ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ.

ಮೂರು ದಿನಗಳ ಹಿಂದೆ ಪಾಕಿಸ್ತಾನ ವಿರುದ್ಧದ ಪಂದ್ಯದ ವೇಳೆ ಅವರು ಬಲ ತೊಡೆಯ ಸ್ನಾಯು ನೋವಿಗೆ ಒಳಗಾಗಿದ್ದರು. 'ಅವರಿಗೆ ಮೂರು ವಾರಗಳ ವಿಶ್ರಾಂತಿ ಬೇಕಾಗಲಿದೆ' ಎಂದು ಹೇಳಿಕೆಯಲ್ಲಿ ಐಸಿಸಿ ತಿಳಿಸಿದೆ.

ಕರುಣಾರತ್ನೆ 23 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಆಡಿದ ಎರಡೂ ಪಂದ್ಯಗಳನ್ನು ಸೋತಿರುವ ಶ್ರೀಲಂಕಾ ಮುಂದಿನ ಪಂದ್ಯವನ್ನು, ಸಮಾನದುಃಖಿ ಆಸ್ಟ್ರೇಲಿಯಾ ವಿರುದ್ಧ ಲಖನೌದಲ್ಲಿ ಆಡಲಿದೆ.

ಕಿವೀಸ್ ನಾಯಕನ ಎಡಗೈ ಹೆಬ್ಬೆರಳ ಮೂಳೆಗೆ ಪೆಟ್ಟು

ಮೂರು ಪಂದ್ಯಗಳಿಗೆ ವಿಲಿಯಮ್ಸನ್ ಅಲಭ್ಯ

ಚೆನ್ನೈ (ಪಿಟಿಐ): ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರು ಭಾರತದ ವಿರುದ್ಧ ಪಂದ್ಯವೂ ಸೇರಿದಂತೆ ವಿಶ್ವಕಪ್‌ನಲ್ಲಿ ತಮ್ಮ ತಂಡದ ಮುಂದಿನ ಮೂರು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ಬಾಂಗ್ಲಾದೇಶ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ರನ್ ಓಡುವ ವೇಳೆ, ಫೀಲ್ಡರ್ ಥ್ರೊ ಮಾಡಿದ್ದ ಚೆಂಡು ಬಡಿದು ಅವರ ಎಡಗೈ ಹೆಬ್ಬೆರಳಿಗೆ ಗಾಯವಾಗಿತ್ತು.

ಐಪಿಎಲ್ ವೇಳೆ ಬಲ ಮೊಣಕಾಲಿಗೆ ನೋವು ಅನುಭವಿಸಿ ಆರು ತಿಂಗಳ ನಂತರ ಕ್ರಿಕೆಟ್‌ಗೆ ಮರಳಿದ್ದ ವಿಲಿಯಮ್ಸನ್, ಪುನರಾಗಮನ ಪಂದ್ಯದಲ್ಲೇ 78 ರನ್ ಗಳಿಸಿದ್ದಾಗ ಆಕಸ್ಮಿಕವಾಗಿ ಈ ಘಟನೆ ನಡೆದಿತ್ತು.

ಅಫ್ಗಾನಿಸ್ತಾನ ವಿರುದ್ಧ ಇದೇ 18ರಂದು, ಭಾರತ ವಿರುದ್ಧ ಧರ್ಮಶಾಲಾದಲ್ಲಿ ಅ. 22ರಂದು ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಪುಣೆಯಲ್ಲಿ ಅ. 28ರಂದು ನಡೆಯುವ ಪಂದ್ಯಗಳನ್ನು ವಿಲಿಯಮ್ಸನ್ ಕಳೆದುಕೊಳ್ಳಲಿದ್ದಾರೆ.

'ಚೆನ್ನೈ ಪಂದ್ಯದ ವೇಳೆ ರನ್ನಿಗೆ ಓಡುವಾಗ ಫೀಲ್ಡರ್ ಎಸೆದ ಥ್ರೊದಿಂದ ಅವರ ಕೈಗೆ ಆದ ಗಾಯದ ಎಕ್ಸ್‌ರೇ ವೇಳೆ ಅವರ ಎಡಗೈ ಹೆಬ್ಬೆರಳ ಮೂಳೆಗೆ ಪೆಟ್ಟಾಗಿರುವುದು ಖಚಿತವಾಗಿದೆ' ಎಂದು ನ್ಯೂಜಿಲೆಂಡ್ ಕ್ರಿಕೆಟ್ ಹೇಳಿಕೆಯಲ್ಲಿ ತಿಳಿಸಿದೆ. ವಿಲಿಯಮ್ಸನ್ ಆರೈಕೆ ಆರಂಭವಾಗಿದೆ.

ಟಾಮ್ ಬ್ಲಂಡೆಲ್ ಅವರು ಬದಲಿಯಾಗಿ ಭಾರತಕ್ಕೆ ಪ್ರಯಾಣಿಸಲಿದ್ದಾರೆ. ಆದರೆ ಅವರು ಅಧಿಕೃತವಾಗಿ ತಂಡದ ಭಾಗವಾಗಿಲ್ಲ.

ವಿಲಿಯಮ್ಸನ್ ವಿಶ್ವಕಪ್‌ನಲ್ಲಿ ಕೊನೆಯ ಕೆಲವು ಲೀಗ್ ಪಂದ್ಯಗಳಿಗೆ ಲಭ್ಯರಾಗಬಹುದೆಂಬ ವಿಶ್ವಾಸವನ್ನು ತಂಡದ ಕೋಚ್ ಗ್ಯಾರಿ ಸ್ಟೀಡ್ ವ್ಯಕ್ತಪಡಿಸಿದ್ದಾರೆ.



ಕೇನ್ ವಿಲಿಯಮ್ಸನ್

ಡಿಸ್ನಿ ಹಾಟ್‌ಸ್ಟಾರ್: 3.5 ಕೋಟಿ ಮಂದಿ ವೀಕ್ಷಣೆ

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ನಡುವಣ ವಿಶ್ವಕಪ್ ಪಂದ್ಯದ ವೀಕ್ಷಣೆಯು ಡಿಜಿಟಲ್ ವೇದಿಕೆಯಲ್ಲಿ ಹೊಸ ದಾಖಲೆ ಬರೆದಿದೆ ಎಂದು ಡಿಸ್ನಿ ಹಾಟ್‌ಸ್ಟಾರ್ ತಿಳಿಸಿದೆ.

ಒಟಿಟಿ ವೇದಿಕೆಯಲ್ಲಿ ಒಂದು ಹಂತದಲ್ಲಿ ಪಂದ್ಯವನ್ನು 3.5 ಕೋಟಿ ಮಂದಿ ವೀಕ್ಷಿಸಿದ್ದಾರೆ. ಚೆನ್ನೈ ಸೂಪರ್ ಕಿಂಗ್ ಮತ್ತು ಗುಜರಾತ್ ಟೈಟನ್ಸ್ ನಡುವಣ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯವನ್ನು 3.2 ಕೋಟಿ ಮಂದಿ ವೀಕ್ಷಿಸಿದ್ದು ಇದುವರೆಗಿನ ದಾಖಲೆಯಾಗಿತ್ತು ಎಂದು ಸಂಸ್ಥೆ ಹೇಳಿದೆ.

ಕರ್ನಾಟಕದ ಪ್ರಕಾಶ್ ರನ್ನರ್ ಅಪ್

ನವದೆಹಲಿ (ಪಿಟಿಐ): ಅಗ್ರ ಶ್ರೇಯಾಂಕದ ಆಟಗಾರ ಹೃತಿಕ್ ಕಟಕಮ್ (ತೆಲಂಗಾಣ) ಅವರು 28ನೇ ಫೆನೆಸ್ತಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನ 14 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಶನಿವಾರ ಕರ್ನಾಟಕದ ಪ್ರಕಾಶ್ ಸರನ್ ಅವರನ್ನು 6–4, 6–3 ರಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು.

16 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ವಿಭಾಗದ ಅನಿರೀಕ್ಷಿತ ಫಲಿತಾಂಶದಲ್ಲಿ, 16ನೇ ಶ್ರೇಯಾಂಕದ ಶಂಕರ್ ಹೀಸ್ನಮ್ 6–1, 6–2 ರಿಂದ ಏಳನೇ ಶ್ರೇಯಾಂಕದ ವಿ.ತಿರುಮುರುಗನ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ರಿಶಿತಾ ಬಸಿರೆಡ್ಡಿ 6–4, 6–3 ರಿಂದ ದೆಹಲಿಯ ಐಶಿ ಬಿಷ್ಟ್ ಅವರನ್ನು ಸೋಲಿಸಿದರು.

ಮಹಾರಾಷ್ಟ್ರದ ಪ್ರಿಶಾ ಶಿಂದೆ 6–1, 6–2 ರಿಂದ ಆರನೇ ಶ್ರೇಯಾಂಕದ ಆನಂದಿತಾ ಉಪಾಧ್ಯಾಯ ಅವರನ್ನು ಸೋಲಿಸಿದರು.


2036ರ ಒಲಿಂಪಿಕ್ಸ್‌ಗೆ ಬಿಡ್: ಮೋದಿ

ಮುಂಬೈ: ಭಾರತವು 2036ರ ಬೇಸಿಗೆ ಒಲಿಂಪಿಕ್ಸ್ ಆತಿಥ್ಯಕ್ಕೆ ಬಿಡ್ ಸಲ್ಲಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಖಚಿತಪಡಿಸಿದರು.

ಇಲ್ಲಿನ ಜಿಯೊ ವರ್ಲ್ಡ್ ಸೆಂಟರ್‌ನಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ 141ನೇ ಅಧಿವೇಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತ ಒಲಿಂಪಿಕ್ಸ್‌ನ ಆತಿಥ್ಯ ವಹಿಸಲು ಕಾತರದಿಂದ ಇದೆ. 2036ರ ಒಲಿಂಪಿಕ್ಸ್ ಯಶಸ್ವಿಯಾಗಿ ಸಂಘಟಿಸಲು ಸಿದ್ಧತೆಯಲ್ಲಿ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳುತ್ತದೆ. ಇದು 140 ಕೋಟಿ ಭಾರತೀಯರ ಕನಸು' ಎಂದು ಪ್ರಧಾನಿ ಹೇಳಿದರು. ವಿಶ್ವಕಪ್‌ನಲ್ಲಿ ಭಾರತ, ಪಾಕ್ ವಿರುದ್ಧ ಗೆದ್ದ ವಿಷಯವನ್ನೂ ಅವರು ಸಭೆಗೆ ಕರತಾಡನದ ಮಧ್ಯೆ ತಿಳಿಸಿದರು. ಭಾರತವು 2029ರ ಯುವ ಒಲಿಂಪಿಕ್ಸ್ ಆತಿಥ್ಯ ವಹಿಸಲು ಕೂಡ ಕಾತರದಿಂದ ಕಾಯುತ್ತಿದೆ ಎಂದು ಮೋದಿ ಹೇಳಿದರು.

'2028ರ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಗೆ ಐಒಸಿ ಕಾರ್ಯಕಾರಿ ಮಂಡಳಿ ಶಿಫಾರಸು ಮಾಡಿದೆ. ನಾವು ಈ ನಿಟ್ಟಿನಲ್ಲಿ ಸಕಾರಾತ್ಮಕ ಸುದ್ದಿ ಕೇಳುವೆವು ಎಂಬ ವಿಶ್ವಾಸವಿದೆ' ಎಂದರು. ಟರ್ಕಿ, ಇಂಡೋನೇಷ್ಯಾ, ಮೆಕ್ಸಿಕೊ, ಪೋಲೆಂಡ್ ಕೂಡ 2036ರ ಒಲಿಂಪಿಕ್ಸ್‌ಗೆ ಬಿಡ್ ಸಲ್ಲಿಸಿವೆ.



ಯಾವಾಗಲೂ 100% ಅಸಲಿ ಉತ್ಪನ್ನಗಳು • ಅತ್ಯಂತ ಕಡಿಮೆ ಬೆಲೆ • ಇತ್ತೀಚಿನ ಮಾಡೆಲ್‌ಗಳು • ಅತ್ಯುತ್ತಮ ಬ್ರ್ಯಾಂಡ್ • ಅತ್ಯುತ್ತಮ ಸರ್ವೀಸ್ • ಅತ್ಯುತ್ತಮ ಎಕ್ಸ್ಚೇಂಜ್ ವಾರಂಟಿ • ನೈಜ ಕೊಡುಗೆ • ನೈಜ ಬಹುಮಾನ
THE KING OF SALE IS BACK
Shop In-store
Mobile App
www.paiinternational.in
ಗೆಲ್ಲಿರಿ 10 HYUNDAI AURA CARS
ಗೆಲ್ಲಿರಿ 8 ಕೋಟಿ ಮೌಲ್ಯದ ವರೆಗಿನ ಆಕರ್ಷಕ ಬಹುಮಾನಗಳು
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 10 HYUNDAI GRAND i10 NIOS CARS
ಗೆಲ್ಲಿರಿ 30 ಲಕ್ಷ ವರೆಗಿನ ಉಚಿತ ಶಾಪಿಂಗ್
ಪೈ ಇಂಟರ್‌ನ್ಯಾಶನಲ್
ಪೈ ಫರ್ನಿಚರ್
ಪೈ ಮೊಬೈಲ್ಸ್
HDFC BANK FESTIVE TREATS Up to 10% INSTANT DISCOUNT* On CC EMI & DC EMI. Min Trxn : ₹17,500. Max Discount ₹2,000.
IDFC FIRST Bank CREDIT CARDS YES BANK Bank of Baroda one card Up to 10% INSTANT DISCOUNT* Minimum Transaction : ₹10,000. *T&C Apply
BAJAJ FINSERV Up to ₹12,500 CASH BACK* Min Trxn : ₹15,000 On Paper Finance.
IDFC FIRST Bank Up to ₹15,000 CASH BACK* Min Trxn : ₹25,000 On Paper Finance.
kotak Up to ₹10,001 Instant Discount* Min Trxn : ₹20,001 On Paper Finance.
ICICI Bank Up to ₹5,000 CASH BACK* Min Trxn : ₹30,000 On Paper Finance.
320 CARS 330 BIKES TILL DATE GENUINELY DISTRIBUTED!
152.39 CRORE PAI LOYALTY POINTS
₹24.14 CRORE worth FREE SHOPPING
₹7.32 CRORE worth FREE GOLD
₹4.15 CRORE worth CASH PRIZES
₹10ಲಕ್ಷ ನಗದು ಬಹುಮಾನ ವಿಜೇತರು (MFS 2022)
Shobha Magesh Purchased Product Refrigerator
Syed Ayaz Purchased Product Microwave Oven
Bokka Naveen Purchased Product Mobile
₹50,000 ಮೌಲ್ಯದ ಉಚಿತ ಶಾಪಿಂಗ್ ವಿಜೇತರು ತ್ರೀ ಸೀಸನ್ ಸೇಲ್ (TSS - 2023)
₹1ಲಕ್ಷ ನಗದು ಬಹುಮಾನ ವಿಜೇತರು (MFS 2022)
iPhone
13, 128GB Effective Price ₹28,990*
14, 128GB Effective Price ₹36,990*
15, 128GB Effective Price ₹47,990*
*Inclusive of Exchange bonus + Instant cash back + Old device value.
SAMSUNG Galaxy A Series
A34 (8, 128GB) Own @ ₹25,999
A54 (8, 128GB) Own @ ₹33,499
Up to ₹5,000 Benefit*
vivo V29 Series 5G
Up to 10% Cash Back + FREE Calling Smart Watch
oppo Reno 10 Series 5G
Up to 10% Cash Back + FREE Calling Smart Watch
25% OFF on boAt TWS
mi Redmi Note 12 5G Series
Low Cost EMI + Attractive Cash Back Offer
Calling Smart Watch
Special Price ₹1,249
218cm(86) 4K UHD Smart LED SANSUI EMI Starts @ ₹15,000
189cm(75) 4K Ultra HD Smart LED SONY EMI Starts @ ₹4,995
164cm(65) 4K Smart WebOS LG EMI Starts @ ₹3,999
139cm(55) 4K Smart QLED SAMSUNG EMI Starts @ ₹2,990
109cm(43) Smart Google With Far-Field Haier EMI Starts @ ₹1,994
LG 635 Ltr. Frost Free. Smart Inverter. Smart Wifi Door Cooling+ Side By Side Refrigerator. EMI Starts @ ₹4,999
SAMSUNG 301 Ltr. Digital Inverter. Convertible 5in1. Twin Cooling Plus. Double Door Refrigerator. EMI Starts @ ₹1,990
8 Kg BOSCH 5 Star. Anti Wrinkle. Fully Automatic. Touch Control Front Loading Washing Machine. EMI Starts @ ₹3,166
7 Kg Whirlpool FREE Trolley Bag 5 Star. Fresh Care +. LED + Touch Display. 6th Sense. Front Loading Washing Machine. EMI Starts @ ₹2,950
10 Kg IFB 5 Star. Aqua Conserve. Steam Wash. Inbuilt Heater. Top Loading Washing Machine. EMI Starts @ ₹1,222
LG 14 Place Settings. Inverter Direct Drive. TrueSteam. QuadWash. Dual Zone Dishwasher EMI Starts @ ₹2,845
SAMSUNG 28 Ltr Convection Microwave Oven EMI Starts @ ₹990
FREE Laptop Bag Gaming hp • R5-5600H • 8GB Ram • 512GB SSD • 4GB Graphics • Windows 11 • MS Office H&S EMI Starts @ ₹164/Day Upto ₹4,000 Cashback*
Additional 1 Year Warranty & 3 Years Antivirus worth ₹8,499 @ ₹1,499.
FREE Laptop Bag Gaming DELL • 12th Gen Core i5 • 16GB Ram • 512GB SSD • 4GB Graphics • Windows 11 • MS Office H&S EMI Starts @ ₹210/Day Upto ₹5,000 Cashback*
1 Year Warranty worth ₹3,749 @ ₹1,999.
FREE Laptop Bag Lenovo • R7-5700U • 16GB Ram • 512GB SSD • Windows 11 • MS Office H&S EMI Starts @ ₹140/Day
Additional 2 Years Warranty + 2 Years Premium Care + 2 Years Accidental Damage Protection worth ₹19,990 @ ₹2,999
FREE Laptop Bag ASUS • 11th Gen Core i5 • 16GB Ram • 512GB SSD • 4GB Graphics • Windows 11 • MS Office H&S EMI Starts @ ₹149/Day
2 years extended Warranty @ ₹999.
MacBook • M1 Chip • 8GB Ram • 256GB SSD EMI Starts @ ₹116/Day Upto ₹5,000 Cashback*
upto 24 Months No Cost EMI
Water Purifier Attractive Gifts On Selected Models Range starts from ₹8,990
39% OFF Butterfly Magnum 4 Jar Mixer + 5 Ltr Cooker + Kettle MRP ₹12,349 Special Price ₹7,490
Sofa Set 3+2+1 EMI Starts @ ₹3,779
Solid Wood Queen Size Bed EMI Starts @ ₹2,990
4 Seater Dining Set EMI Starts @ ₹3,990
iPhone vivo SAMSUNG oppo mi realme MacBook hp DELL Lenovo ASUS LG SONY Panasonic HENRY TCL Haier BOSCH IFB
Godrej Whirlpool PHILIPS AO Smith BAJAJ KENT EUREKA FORBES FABER pureit HAVELLS Prestige Preethi Pigeon KAFF V-GUARD boAt FIREBOLTT noise base
PRODUCT & SERVICE RELATED ENQUIRIES +91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S, FURNITURE
24 HOURS DELIVERY CHALLENGE* GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR


HONDA
Activate
your celebrations
Smart KEY
Smart SAFE
Smart UNLOCK
Smart START
Smart FIND
With H-Smart Technology
ACTIVA 125
It's Smartiva
Scooter andre ACTIVA
BOOK ONLINE NOW!
SUPER 6 OFFERS*
Low ROI @ 6.99%
No Cost EMI
Cashback Upto ₹5000
Down Payment ₹0
100 Pe 100
No Hypothecation
1. Connect earphones
2. Scan QR code
3. Enjoy the video
For dealer details, WhatsApp or missed call on 7230032200 or scan the QR Code
ACTIVA 30 MILLION# HAPPY CUSTOMERS
CLICK BOOK RELAX

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 15 ಅಕ್ಟೋಬರ್ 2023







ಬಹುರೂಪಿ ದಸರಾ

ಮೈಸೂರು ದಸರಾ ಆಗೀಗ ಸರಳತೆಗೆ ಹೊರಳಬೇಕಾದ ಅನಿವಾರ್ಯಕ್ಕೆ ಒಳಗಾಗಿರುವುದು ನಿಜ. ಈ ವರ್ಷ ಇನ್ನೂರಕ್ಕೂ ಹೆಚ್ಚು ತಾಲ್ಲೂಕುಗಳು ಬರಪೀಡಿತವಾಗಿವೆ. ಮೇಲುನೋಟಕ್ಕೆ ಸರಳ ದಸರಾ ಎಂದು ಮೊದಲು ಹೇಳಲಾಗಿತ್ತಾದರೂ ವಾಸ್ತವ ಸ್ಥಿತಿ ಬೇರೆಯೇ ಇದೆ.



ಕಳೆದ ವರ್ಷದ ಜಂಬೂಸವಾರಿಯ ದೃಶ್ಯ. ಜನಸಾಗರದ ನಡುವೆ ಸಾಗಿದ್ದ ಮೆರವಣಿಗೆ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.



ಕೆ.ನರಸಿಂಹಮೂರ್ತಿ

'ಬರಗಾಲ ಬಂದಿರುವುದರಿಂದ, ಈ ಬಾರಿ ಸರಳವೂ ಅಲ್ಲದ, ಅದ್ದೂರಿಯೂ ಅಲ್ಲದ, ಸಾಂಪ್ರದಾಯಿಕ ದಸರೆಯನ್ನು ಆಚರಿಸಲಾಗುವುದು' ಎಂದು ಸರ್ಕಾರ ಹೇಳಿದಾಗ, 'ಅದು ಹೇಗಿರಬಹುದು' ಎಂಬ ಪ್ರಶ್ನೆ ಬಹುತೇಕರಲ್ಲಿ ಮೂಡಿದ್ದು ಸಹಜ.

ಏಕೆಂದರೆ, 'ಅರಮನೆ ಒಳಗಿನ ಸರಳ, ಸಾಂಪ್ರದಾಯಿಕ ದಸರೆ' ಮತ್ತು ಅದರಾಚೆಗೆ ಹೊಳೆಯುವ 'ಅದ್ದೂರಿ ದಸರೆ'ಯನ್ನು ಜನ ನೋಡಿದ್ದಾರೆ. ಆದರೆ, ಈ ಎರಡೂ ಅಲ್ಲದ, 'ಸಾಂಪ್ರದಾಯಿಕ ದಸರೆ' ಹೇಗಿರುತ್ತದೆ ಎಂಬುದಕ್ಕೆ, ಉದ್ಘಾಟನೆಯ ಹೊತ್ತಿನಲ್ಲೂ ಸ್ಪಷ್ಟ ಚಿತ್ರವಂತೂ ಇಲ್ಲ.

'ಸರ್ಕಾರವೇ ಉತ್ಸವದ ಹೊಣೆಗಾರಿಕೆಯನ್ನು ಹೊರಲಾರಂಭಿಸಿದ 1970ರ ದಶಕಕ್ಕೂ ಮುಂಚೆ ಇದ್ದದ್ದು ಸಾಂಪ್ರದಾಯಿಕ ದಸರೆ' ಎಂಬುದು ಹಿರಿಯರ ಮಾತು. ಇದು ಕೂಡ ಚರ್ಚಾರ್ಹ ವಿಷಯ.

ಈ ಬಾರಿಯ ಉತ್ಸವದ ರೂಪರೇಷೆಗಳನ್ನು ಗಮನಿಸಿದ ಯಾರಿಗೇ ಆದರೂ 'ಇದು ಸರಳವಂತೂ ಅಲ್ಲ' ಎಂಬುದು ಸ್ಪಷ್ಟವಾಗಿದೆ. ಆದರೆ 'ಅದ್ದೂರಿ ಅಲ್ಲ' ಎಂದು ಹೇಳಲು ಯಾರಿಗೂ ಬಾಯಿ ಇಲ್ಲ. ಸ್ವತಃ ಸರ್ಕಾರಕ್ಕೂ. ಏಕೆಂದರೆ ಬರಗಾಲ ಘೋಷಣೆಗೂ ಮುನ್ನ ಉತ್ಸವದ ಅಂದಾಜು ವೆಚ್ಚ ₹ 30 ಕೋಟಿ ಇತ್ತು. ಈಗ ಅದಕ್ಕಿಂತ ಹೆಚ್ಚು ಖರ್ಚಾಗುವ ಸಾಧ್ಯತೆಯೇ ಹೆಚ್ಚಿದೆ.

''ಸರಳ', 'ಅದ್ದೂರಿ' ಎಂಬುದನ್ನು ಉತ್ಸವಕ್ಕೆ ಖರ್ಚು ಮಾಡುವ ಹಣದಲ್ಲಿ ಅಳೆಯಬಾರದು. ಅದರಿಂದ ಎಷ್ಟು ಮಂದಿಗೆ ಪ್ರಯೋಜನವಾಗುತ್ತದೆ ಎಂಬುದೇ ಮುಖ್ಯ' ಎಂಬ ಮೈಸೂರು ಜಿಲ್ಲಾಡಳಿತದ ವಾದವನ್ನು ಆಲಿಸುತ್ತಾ ನೋಡಿದರೆ, ರಾಜ್ಯದ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಗಾಲದ ಬವಣೆಯಲ್ಲಿ ಬೇಯುತ್ತಿರುವಾಗ, ವಿದ್ಯುತ್ ಪೂರೈಕೆ ಇಲ್ಲದೆ ಕೃಷಿಕರು ಪರದಾಡುತ್ತಿರುವಾಗ, ಮೈಸೂರು ನಗರದ ನೂರಾರು ಕಿ.ಮೀ. ರಸ್ತೆ, ವೃತ್ತಗಳು ವಿದ್ಯುತ್ ದೀಪಾಲಂಕಾರದಲ್ಲಿ ಝಗಮಗಿಸುತ್ತಿರುವುದು ಕಾಣುತ್ತದೆ.

ವಿಜಯನಗರ ಅರಸರ ಪತನದ ನಂತರ, ರಾಜ ಒಡೆಯರಿಂದ 1610ರಲ್ಲಿ ಆರಂಭವಾಗಿ ಹಲವು ಏಳುಬೀಳುಗಳ ನಡುವೆ, ಶತಮಾನಗಳನ್ನು ದಾಟಿ, ರಾಜಪ್ರಭುತ್ವ, ಪ್ರಜಾಪ್ರಭುತ್ವದ ಮೂಲಕವೇ ಜನರ ನಡುವೆ ಉಳಿದಿರುವ ದಸರೆಗೆ ಎಂಥ ಕಾಲವೂ ಅಡ್ಡಿಪಡಿಸಲಾರದು ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ.

ಈಗ ಉತ್ಸವದ ಕೇಂದ್ರವಾಗಿರುವ ಅಂಬಾವಿಲಾಸ ಅರಮನೆಯಲ್ಲಿ ದಸರಾ ಉತ್ಸವ ಶುರುವಾಗಿದ್ದು 1910ರಲ್ಲಿ. ಅಂದರೆ ಈ ಅರಮನೆಯಲ್ಲಿ ಈ ವರ್ಷ ನಡೆಯಲಿರುವುದು 113ನೇ ಉತ್ಸವ. ಈ ಅರಮನೆ ನಿರ್ಮಾಣ ಹಂತದಲ್ಲಿದ್ದಾಗ, ಉತ್ಸವ ಜಗನ್ಮೋಹನ ಅರಮನೆಯಲ್ಲಿ ನಡೆದಿತ್ತು. ದಸರೆ ಕವಿಗೋಷ್ಠಿಗೇ ಹೆಸರಾಗಿದ್ದ ಈ ಅರಮನೆಯು ಈಗ ಶಿಥಿಲಗೊಂಡಿದೆ. ಶಿಥಿಲವಾಗಿರುವುದನ್ನು ಬಿಟ್ಟು, ಹೊಸ ರಚನೆಗಳತ್ತ ಸಾಗಿರುವ ದಸರೆ ಸದಾಕಾಲ ಬಹುರೂಪಿ.

ಅರಸೊತ್ತಿಗೆಯ ಅತಂತ್ರ ಸಂದರ್ಭಗಳನ್ನು ಹೊರತುಪಡಿಸಿದರೆ, ದಸರೆ ಎಂಬ ಉತ್ಸವದ ಸಂಭ್ರಮಕ್ಕೆ ಮೈಸೂರಿನಲ್ಲಿ ಬರವಿಲ್ಲ. ಈ ಕಾರಣಕ್ಕೇ, 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಕವಿಸಾಲನ್ನು ಕೊಂಚ ಬದಲಿಸುವುದಾದರೆ, 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ಹೇಗಾದರೂ ನೀ ದಸರೆ ಆಚರಿಸುತ್ತಿರು' ಎಂದು ಹೇಳಬಹುದು. ಇಷ್ಟಕ್ಕೂ ಮೈಸೂರಿನ ಅರ್ಥ ವ್ಯವಸ್ಥೆ ಕೂಡ ಈ ಉತ್ಸವವನ್ನು ದೊಡ್ಡ ಮಟ್ಟದಲ್ಲಿ ಅವಲಂಬಿಸಿರುವುದೂ ದಿಟ.

ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ 1969ರವರೆಗೂ ದಸರಾ ನಡೆದಿತ್ತು. 1970ರಲ್ಲಿ ರಾಜಪ್ರಭುತ್ವವನ್ನು ಕೊನೆಗಾಣಿಸಿ ಹೊರಟ ಆದೇಶದ ನಂತರ, 'ಸರ್ಕಾರವೇ ದಸರಾ ಉತ್ಸವವನ್ನು ಆಚರಿಸಬೇಕು' ಎಂಬ ಹಕ್ಕೊತ್ತಾಯ ಮೂಡಿತ್ತು. ಆದರೆ, ಆ ವರ್ಷ ದಸರಾ ನಡೆಯಲಿಲ್ಲ. 1971ರಲ್ಲಿ ಮಹಾರಾಜರ ಬದಲು 'ಭಾರತಮಾತೆ'ಯ ಮೆರವಣಿಗೆ ನಡೆದಿತ್ತು. ನಾಡಹಬ್ಬ ಸಮಿತಿಯು ಮಹಾರಾಜ ಮತ್ತು ಚಾಮುಂಡೇಶ್ವರಿ ಭಾವಚಿತ್ರದ ಮೆರವಣಿಗೆಯನ್ನೂ ನಡೆಸಿತ್ತು. ಇದು ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಪರವಾಗಿದ್ದವರ ನಡುವಿನ ಸಂಘರ್ಷದಂತೆಯೂ ಕಾಣುತ್ತದೆ. ಹೀಗಿದ್ದೂ 1972ರಲ್ಲಿ ಬರಗಾಲದ ಕಾರಣಕ್ಕೇ ಮೆರವಣಿಗೆ ನಡೆಯಲಿಲ್ಲ ಎಂಬುದನ್ನು ಗಮನಿಸಬೇಕು. 1973ರಲ್ಲೂ ಬರಗಾಲವಿತ್ತು, 1974ರಲ್ಲಿ ಜಯಚಾಮರಾಜ ಒಡೆಯರ್ ನಿಧನರಾದರು. ಈ ಎರಡೂ ವರ್ಷ ಸರಳ ಮೆರವಣಿಗೆಯಷ್ಟೇ ನಡೆದಿತ್ತು.

1975ರಿಂದ ಸರ್ಕಾರವೇ ಉತ್ಸವವನ್ನು ಆಚರಿಸಲು ಆರಂಭಿಸಿದ ಬಳಿಕ ಇಲ್ಲಿವರೆಗೆ ಉತ್ಸವವು ಕೆಲವೊಮ್ಮೆ ಸರಳವಾಗಿಯೂ, ಹಲವು ಬಾರಿ ಅದ್ದೂರಿಯಾಗಿಯೂ, ಪ್ರತಿ ಬಾರಿ ಸಂಪ್ರದಾಯವನ್ನು ಬಿಡದೆಯೂ ನಡೆಯುತ್ತಲೇ ಬಂದಿದೆ. ಇನ್ನೆರಡು ವರ್ಷ ಕಳೆದರೆ, ಈ ಚರಿತ್ರೆಗೆ ಐದು ದಶಕವಾಗುತ್ತದೆ.

ಈ ಅವಧಿಯಲ್ಲಿ ಕೆಲವು ಸಲ ಬರಗಾಲಗಳೂ ಬಂದು ಉತ್ಸವವನ್ನು ಸರಳಗೊಳಿಸಿವೆ. 2000ದಲ್ಲಿ ರಾಜ್‌ಕುಮಾರ್ ಅಪಹರಣ ಘಟನೆಯು ಆ ವರ್ಷದ ಉತ್ಸವದ ಮೇಲೆ ಪರಿಣಾಮ ಬೀರಿತ್ತು. 2001ರಲ್ಲಿ ಗುಜರಾತ್ ಭೂಕಂಪ, 2002ರಲ್ಲಿ ಮತ್ತೆ ಬಂದ ಬರಗಾಲದಿಂದ ಉತ್ಸವ ಸರಳವಾಗಿತ್ತು. ಅದಾಗಿ ಸರಿಯಾಗಿ ಒಂದು ದಶಕದ ಬಳಿಕವೂ ಎರಡು ವರ್ಷ (2011-2012) ಸತತ ಬರಗಾಲ ಬಾಧಿಸಿತ್ತು. 2015, 2016ರಲ್ಲೂ ಅದೇ ಪರಿಸ್ಥಿತಿ. ಜೊತೆಗೆ ರೈತರ ಆತ್ಮಹತ್ಯೆಗಳೂ ಹೆಚ್ಚಾಗಿದ್ದ ಕಾಲಘಟ್ಟ ಅದು.

ಕೋವಿಡ್ ಸಾಂಕ್ರಾಮಿಕ: 2017ರ ಬಳಿಕ ದಸರಾ ಮತ್ತದೇ ಅದ್ದೂರಿತನಕ್ಕೆ ವಾಪಸಾದರೂ, 2020ರ ಕೋವಿಡ್ ಸಾಂಕ್ರಾಮಿಕವು ಅರಮನೆ ಆವರಣಕ್ಕಷ್ಟೇ ಉತ್ಸವ ಸೀಮಿತಗೊಳ್ಳಲು ಕಾರಣವಾಗಿತ್ತು. ಅಂದರೆ ಅದು ಸರಳ, ಸಾಂಪ್ರದಾಯಿಕ ದಸರಾ. ಹೆಚ್ಚಿನ ಜನರಿಗೆ ಪ್ರವೇಶವಿರಲಿಲ್ಲ. ಅಧಿಕಾರಿಗಳು ಮತ್ತು ರಾಜಮನೆತನಕ್ಕಷ್ಟೇ ಸೀಮಿತವಾಗಿತ್ತು.

ಈ ವರ್ಷದ ಬರಗಾಲದ ಸಂದರ್ಭದಲ್ಲೂ, ಸರ್ಕಾರವು ಖಾಸಗಿ ಪ್ರಾಯೋಜಕತ್ವಕ್ಕಾಗಿ ಎದುರು ನೋಡುತ್ತಿದೆಯಾದರೂ ಆಶಾದಾಯಕ ಸನ್ನಿವೇಶಗಳಿಲ್ಲ. ಈ ಪ್ರಾಯೋಜಕತ್ವದ ಪ್ರಯತ್ನ ಶುರುವಾಗಿ ಸರಿಯಾಗಿ ಎರಡು ದಶಕಗಳೇ ಆಗಿವೆ. ಈ ಬರಗಾಲದಲ್ಲಿ ಪ್ರಾಯೋಜಕರನ್ನು ಹುಡುಕಿ ಉತ್ಸವವನ್ನು ಅದ್ದೂರಿಯಾಗಿ ಮಾಡಬೇಕಾದ ಅನಿವಾರ್ಯವಾದರೂ ಏನು ಎಂಬ ಪ್ರಶ್ನೆಯೂ ಕೆಲವರಲ್ಲಿ ಇದೆ.

ಉತ್ಸವ ಸರಳ, ಸಾಂಪ್ರದಾಯಿಕ ಸ್ವರೂಪವನ್ನು ಬಿಟ್ಟುಕೊಟ್ಟ ಬಳಿಕವೇ ಪ್ರಾಯೋಜಕತ್ವದ ಪ್ರಯತ್ನಗಳು ಶುರುವಾದವು ಎಂದು ಹೇಳಬೇಕು. ರಾಷ್ಟ್ರೀಯ ಸಂಗೀತ, ನೃತ್ಯ ತಾರೆಗಳ ಸಂಗಮವಾದ 'ಯುವ ದಸರಾ'ಗೂ ಈಗ ಎರಡು ದಶಕಗಳ ಸಂಭ್ರಮ. ಅದರ ಟಿಸಿಲಾದ, ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ರೂಪಿಸಿದ 'ಯುವ ಸಂಭ್ರಮ' ಶುರುವಾಗಿ ದಶಕ ದಾಟಿದೆ.

ಉತ್ಸವ ರೂಪರೂಪಗಳನ್ನು ದಾಟುತ್ತಲೇ ಇದೆ. 2007ರಲ್ಲಿ 'ರೈತ ದಸರಾ', 2008ರಲ್ಲಿ 'ಗ್ರಾಮೀಣ ದಸರಾ', 'ಮಹಿಳಾ ದಸರಾ', 'ಮಕ್ಕಳ ದಸರಾ', 'ಯೋಗ ದಸರಾ', 'ಜನಪದೋತ್ಸವ' ಬಂದವು. ಬಸ್‌ನಲ್ಲಿ ಕುಳಿತು ನಗರ-ಪ್ರವಾಸಿ ಸ್ಥಳಗಳನ್ನು ವೀಕ್ಷಿಸುವ 'ದಸರಾ ದರ್ಶನ'ವೂ ಆರಂಭವಾಯಿತು. ಆಹಾರ ಮಳಿಗೆದಾರರ ಸಂಕಟಕ್ಕೆ ಕಾರಣವಾಗಿರುವ 'ಆಹಾರ ಮೇಳ'ವೂ ಮುಂದಿನ ವರ್ಷ ಎರಡು ದಶಕ ಪೂರೈಸುತ್ತದೆ. ಉತ್ಸವವನ್ನು ಸರ್ಕಾರ 'ನಾಡಹಬ್ಬ' ಎಂದು ಘೋಷಿಸಿ ಒಂದೂವರೆ ದಶಕವಾಗಿದೆ.

ಇವೆಲ್ಲವೂ ದಸರಾ ಉತ್ಸವದ ರಾಜಕೇಂದ್ರಿತ, ಸಾಂಪ್ರದಾಯಿಕ ನೆಲೆಯನ್ನು ವಿಸ್ತರಿಸಿ ಕ್ರಮೇಣ ಜನಕೇಂದ್ರಿತ ನೆಲೆಗೆ ಕರೆತಂದವು ಎಂಬುದನ್ನು ಮರೆಯುವಂತಿಲ್ಲ. ಇವೆಲ್ಲವೂ ಜನರ ದಸರೆಯ ಭಾಗವೇ. 2007ರವರೆಗೂ ಒಂದು ದಿನವಷ್ಟೇ ನಡೆಯುತ್ತಿದ್ದ ಕವಿಗೋಷ್ಠಿ ಈಗ ಚಿಗುರು, ಚುಟುಕು, ಪ್ರಧಾನ, ಬಹುಭಾಷಾ ಕವಿಗೋಷ್ಠಿಯಾಗಿ ಹರಡಿಕೊಂಡಿದೆ. 19 ವರ್ಷದ ಹಿಂದೆ ನಡೆದ 'ಏರ್ ಶೋ' ಆಗೊಮ್ಮೆ, ಈಗೊಮ್ಮೆ ಇಣುಕು ಹಾಕಿ, ಈಗ ಮತ್ತೆ ಬಂದಿದೆ.

ಉತ್ಸವದ ಪ್ರಮುಖ ಆಕರ್ಷಣೆಯನ್ನು ಹೆಚ್ಚಿಸುವ ಗಜಪಡೆಯ 'ಗಜಪಯಣ' ಕಾರ್ಯಕ್ರಮಕ್ಕೂ ಎರಡು ದಶಕ. ಆರಂಭದ ವರ್ಷಗಳಲ್ಲಿ ಹುಣಸೂರಿನ ವೀರನ ಹೊಸಳ್ಳಿ ಅರಣ್ಯ ಪ್ರದೇಶದಿಂದ ಮೈಸೂರಿನವರೆಗೂ ಆನೆಗಳನ್ನು ನಡೆಸಿಕೊಂಡೇ ಕರೆತರಲಾಗಿತ್ತು. ನಂತರ ಅವುಗಳನ್ನು ಲಾರಿಗಳಲ್ಲಿ ಕರೆತರಲಾಗುತ್ತಿದೆ. ಉತ್ಸವಕ್ಕೆಂದು ಬರುವ ಆನೆಗಳಿಗೆ ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ 'ಗಾರ್ಡ್ ಆಫ್ ಆನರ್' (ಗೌರವ ವಂದನೆ) ನೀಡುವುದು ಈ ಉತ್ಸವದ ಅನನ್ಯ ಭಾಗ.

ಪೂಜೆ, ಸಂಗೀತ, ನೃತ್ಯ, ನಾಟಕ, ಕುಸ್ತಿ, ಕ್ರೀಡೆ, ಸಾಹಸ, ವಸ್ತುಪ್ರದರ್ಶನವಿಲ್ಲದೆ ದಸರಾ ಇಲ್ಲ. 1880ರಲ್ಲಿ ಚಾಮರಾಜ ಒಡೆಯರ್ ದಸರಾ ವಸ್ತುಪ್ರದರ್ಶನವನ್ನು ಮೊದಲ ಬಾರಿಗೆ ಉದ್ಘಾಟಿಸಿದ್ದರು. ಅದಾದ ನೂರು ವರ್ಷಗಳ ಬಳಿಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರವನ್ನು ರಚಿಸಲಾಯಿತು. ನಂತರ ಅದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ಸೇರಿತು.

ಸರ್ಕಾರ ನೇತೃತ್ವ ವಹಿಸಿಕೊಂಡ ಮೊದಲ ದಸರೆಯಲ್ಲಿ ಸ್ಥಳೀಯ ಅಧಿಕಾರಿಗಳ ಸಮಿತಿ ರಚನೆಯಾಗಿತ್ತು.

3ನೇ ಪುಟಕ್ಕೆ...

ಆ ವೃದ್ಧರ ಆರೈಕೆಗೆ ಈ ಕೈಗಳು...

ಗಣಪತಿ ಹೆಗಡೆ

'ಇಬ್ಬರು ಗಂಡುಮಕ್ಕಳಲ್ಲಿ ಒಬ್ಬ ಊರಲ್ಲೇ ದಿನಗೂಲಿಗೆ ಇದ್ದಾನೆ. ಇನ್ನೊಬ್ಬ ಮಗ ಸಾವಿರಾರು ಕಿಲೋಮೀಟರ್ ದೂರದ ಇಸ್ರೇಲ್‌ನಲ್ಲಿ ವೃದ್ಧರೊಬ್ಬರ ಆರೈಕೆ ಮಾಡುತ್ತಾನೆ. ಕುಟುಂಬದ ಜವಾಬ್ದಾರಿ ಎಲ್ಲವೂ ಆತನದ್ದೇ. ಅಲ್ಲಿ 78 ವರ್ಷದ ವೃದ್ಧನಿಗೆ ಆತ ಸಕಾಲಕ್ಕೆ ಔಷಧ, ಊಟ ನೀಡಿದರೆ ಮಾತ್ರ ನಮಗೆ ಇಲ್ಲಿ ಸರಿಯಾದ ಸಮಯಕ್ಕೆ ಹಣ ಬರುತ್ತದೆ. ಆಗ ನಾವು ಔಷಧ ಕೊಳ್ಳಲು ಮತ್ತು ಮನೆಗೆ ಅಗತ್ಯ ವಸ್ತುಗಳಿಗಾಗಿ ಖರ್ಚು ಮಾಡಲು ಸಾಧ್ಯವಾಗುತ್ತದೆ'-ಹೀಗೆ ಹೇಳುತ್ತಲೇ, ಪ್ರತಿ ಮಾತಿನ ನಡುವೆ ಆಗಾಗ್ಗೆ ಕೆಮ್ಮುತ್ತ, ಕೊಂಚ ಸುಧಾರಿಸಿಕೊಳ್ಳುತ್ತ ಕುಟುಂಬದ ಪರಿಸ್ಥಿತಿಯನ್ನು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಸಮೀಪದ ಗ್ರಾಮವೊಂದರ ವೃದ್ಧರು ಬಿಚ್ಚಿಡತೊಡಗಿದರು.

'ನನಗೂ ವಯಸ್ಸು 75 ದಾಟಿದೆ. ಇಬ್ಬರು ಹೆಣ್ಣುಮಕ್ಕಳ ಮದುವೆಗೆ ಲಕ್ಷಾಂತರ ರೂಪಾಯಿ ಸಾಲ ಮಾಡಿದೆವು. ಒಬ್ಬ ಮಗ ನರ್ಸಿಂಗ್ ಶಿಕ್ಷಣ ಪಡೆದ. ಆತನೇ ಉದ್ಯೋಗಕ್ಕೆಂದು ಮೂರು ವರ್ಷಗಳ ಹಿಂದೆ ಇಸ್ರೇಲ್‌ಗೆ ತೆರಳಿದ್ದು. 'ತಿಂಗಳಿಗೆ ಲಕ್ಷಕ್ಕೂ ಹೆಚ್ಚು ಸಂಬಳ ಸಿಗುತ್ತೆ' ಎನ್ನುವ ಆತನಿಂದ ತಿಂಗಳ ಖರ್ಚಿಗೆ ಹಣ ಬರುತ್ತೆ. ಅದರಿಂದಲೇ ಮದುವೆಯ ಸಾಲ ತೀರಿಸುತ್ತಿದ್ದೇವೆ' ಎನ್ನುವಾಗ ಮುಖದಲ್ಲಿ ಕೊಂಚ ಸಮಾಧಾನದ ಭಾವ ಕಂಡಿತು.

'ಅಲ್ಲಿ ನನ್ನ ಮಗ ವೃದ್ಧ ವ್ಯಕ್ತಿಯನ್ನು ಪ್ರತಿ ಕ್ಷಣವೂ ಕಾಳಜಿಯಿಂದ ನೋಡಿಕೊಳ್ಳುತ್ತಾನೆ. ಯಾವುದೇ ಸಂಕೋಚವಿಲ್ಲದೆ ಎಲ್ಲಾ ರೀತಿಯ ಸೇವೆ ಮಾಡುತ್ತಾನೆ. ಆದರೆ, ನನಗಿಲ್ಲಿ ಜ್ವರ ಬಂದರೆ ಪಕ್ಕದ ಮನೆಯವರ ನೆರವು ಪಡೆಯಬೇಕು. ಆರು ಕಿ.ಮೀ. ದೂರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಟೊರಿಕ್ಷಾದಲ್ಲಿ ಹೋಗಬೇಕು' ಎಂದು ಹೇಳುವಷ್ಟರಲ್ಲಿ ಕಣ್ಣಂಚಿನಲ್ಲಿ ನೀರಿತ್ತು. ಅದುಮಿಟ್ಟುಕೊಂಡರೂ ಸಂಕಟ ಉಮ್ಮಳಿಸಿ ಬರುತ್ತಿತ್ತು.

ನರ್ಸಿಂಗ್ ಓದಿದವರಿಗೆ ಭಾರತದಲ್ಲಿ ದೊಡ್ಡ ಮೊತ್ತದ ಸಂಬಳ ಸಿಗದು ಎಂಬ ಕಾರಣಕ್ಕೆ ಕುಟುಂಬದಿಂದ ದೂರವಾಗಿ ಕಿರಣ್ ವಿದೇಶಕ್ಕೆ ತೆರಳಿದರು. ಅವರಿಗೆ ಅದು ಅನಿವಾರ್ಯವೂ ಆಗಿತ್ತು. ಈಗ ಇಸ್ರೇಲ್‌ನಲ್ಲಿ ಯುದ್ಧದ ವಾತಾವರಣವಿದೆ ಎಂದು ಗೊತ್ತಾಗಿ ಕುಟುಂಬದವರಲ್ಲಿ ಆತಂಕ ಮಡುಗಟ್ಟಿದೆ. ಪ್ರತಿದಿನ ಅವರಿಗೆ ಫೋನಾಯಿಸಿ ಯೋಗಕ್ಷೇಮ ವಿಚಾರಿಸುತ್ತಾರೆ. ಆದರೆ, ಕಿರಣ್ ಮಾತ್ರ ನಿರಾಳವಾಗಿ ಹೇಳುವುದು ಇಷ್ಟೇ: 'ಇಲ್ಲಿ ಯುದ್ಧದ ಭಯ ಇಲ್ಲ. ದಾಳಿ, ಪ್ರತಿ ದಾಳಿ ಎಲ್ಲವೂ ಇಲ್ಲಿ ತುಂಬಾ ಕಾಮನ್. ನೀವು ಯಾವುದಕ್ಕೂ ಆತಂಕಗೊಳ್ಳಬೇಡಿ.'

ಇದು ಒಂದು ಕುಟುಂಬದ ಕಥೆ-ವ್ಯಥೆಯಲ್ಲ. ಉದ್ಯೋಗಕ್ಕಾಗಿ ಇಸ್ರೇಲ್‌ನಲ್ಲಿ ವಾಸಿಸುತ್ತಿರುವ ಸಾವಿರಾರು ಭಾರತೀಯರ ವಾಸ್ತವವೂ, ಅಸಹಾಯಕವೂ ಆದ ಸ್ಥಿತಿ.

ಭಾರತದಲ್ಲಿ ಯುವಕರು ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿರುವುದರಿಂದ ಗ್ರಾಮಗಳು ಬಿಕೋ ಎನ್ನುತ್ತಿವೆ. ಇಳಿ ವಯಸ್ಸಿನ ತಂದೆ-ತಾಯಂದಿರು ಮನೆಗಳಲ್ಲಿ ತಮ್ಮಷ್ಟಕ್ಕೆ ತಾವು ವಾಸವಿದ್ದಾರೆ. ಮಹಾನಗರಗಳಲ್ಲಿ ವೃದ್ಧಾಶ್ರಮಗಳು ಇವೆ. ಕೆಲವು ಕಡೆ ಹೈಟೆಕ್ ಸೌಲಭ್ಯಗಳಿವೆ. ಎಷ್ಟೋ ಗ್ರಾಮಗಳನ್ನು ನೋಡಿದರೆ ಸಹಜವಾಗಿಯೇ ಯಾವುದೇ ಸೌಕರ್ಯವಿಲ್ಲದ ವೃದ್ಧಾಶ್ರಮಗಳಾಗಿ ಮಾರ್ಪಡುತ್ತಿರುವುದು ಎದ್ದುಕಾಣುತ್ತದೆ.

ಇಸ್ರೇಲಿಗಳಿಂದ ಕಲಿಯುವುದು ಸಾಕಷ್ಟಿದೆ

'ಇಸ್ರೇಲ್ ದೇಶದಲ್ಲಿ ಪ್ರತಿ ಶನಿವಾರ ಶಬ್ಬತ್ ಆಚರಿಸಲಾಗುತ್ತದೆ. ಯೆಹೂದಿ ಸಮುದಾಯದ ಪಾಲಿಗೆ ಇದು ಪವಿತ್ರ ದಿನ. ಅಂದು ಇಡೀ ಇಸ್ರೇಲ್‌ಗೆ ರಜೆ. ನಮಗೂ ರಜೆ ನೀಡುತ್ತಾರೆ. ಆದರೆ ಈ ದಿನವೂ ನಾವು ವೃದ್ಧರನ್ನು ಆರೈಕೆ ಮಾಡಿದರೆ ಎರಡು ಪಟ್ಟು ವೇತನ ಸಿಗುತ್ತದೆ. ಶಬ್ಬತ್ ವೇಳೆ ಯೆಹೂದಿಗಳು ಪವಿತ್ರಗ್ರಂಥದ ಪಠಣದಲ್ಲಿ ತೊಡಗುತ್ತಾರೆ. ಪ್ರತಿ ಇಸ್ರೇಲಿ ಪ್ರಜೆಯ ಮನೆಯಲ್ಲಿ ಪುಸ್ತಕಗಳ ಭಂಡಾರವೇ ಇದೆ. ಬಿಡುವಿನ ವೇಳೆಯಲ್ಲಿ ಟಿವಿ, ಮೊಬೈಲ್ ಬದಲು ಅವರು ಪುಸ್ತಕ ಓದಲು ಇಷ್ಟಪಡುತ್ತಾರೆ. ಸಮಯ ಪರಿಪಾಲನೆಗೆ ಅವರು ನೀಡುವಷ್ಟು ಮಹತ್ವವನ್ನು ಬೇರೊಬ್ಬರು ನೀಡಲಿಕ್ಕಿಲ್ಲ' ಎಂದು 14 ವರ್ಷದಿಂದ ಇಸ್ರೇಲ್‌ನಲ್ಲಿರುವ ದೀಪಕ್ ಪಿಂಟೋ ಇನ್ನೊಂದು ಸಂಗತಿಯ ಮೇಲೆ ಬೆಳಕು ಚೆಲ್ಲಿದರು.

'18 ವರ್ಷ ತುಂಬಿದ ಬಳಿಕ ಇಲ್ಲಿನ ಪ್ರಜೆ ಸೈನ್ಯ ಸೇರುವುದು ಕಡ್ಡಾಯ. ಯುವತಿಯರಿಗೆ ಕನಿಷ್ಠ ಮೂರು, ಯುವಕರಿಗೆ ಕನಿಷ್ಠ ಐದು ವರ್ಷ ಸೈನ್ಯದಲ್ಲಿ ಕೆಲಸ ಮಾಡಬೇಕೆಂಬ ನಿಯಮವಿದೆ. ಸೈನ್ಯದಲ್ಲಿ ಕೆಲಸ ಮಾಡುತ್ತಲೇ ಶಿಕ್ಷಣ ಪಡೆಯುತ್ತಾರೆ' ಎಂದು ಮಾಹಿತಿ ಹಂಚಿಕೊಂಡರು.



'ಇಸ್ರೇಲ್ ದೇಶದಲ್ಲಿ ಭಾರತಕ್ಕಿಂತ ವಿಭಿನ್ನ ವ್ಯವಸ್ಥೆ ಇದೆ. ಅಲ್ಲಿನ ಕೌಟುಂಬಿಕ ವ್ಯವಸ್ಥೆಯೇ ವಿಚಿತ್ರ. ಅಲ್ಲಿ ವಯಸ್ಸಿಗೆ ಬಂದ ನಂತರ ಮಕ್ಕಳು ಪಾಲಕರಿಂದ ದೂರ ಉಳಿಯುತ್ತಾರೆ. 60 ವರ್ಷ ದಾಟಿದ ಅಶಕ್ತರನ್ನು ಕಾಳಜಿಯಿಂದ ನೋಡಿಕೊಳ್ಳುವ ಹೊಣೆಯನ್ನು ಅಲ್ಲಿನ ಸರ್ಕಾರ ವಹಿಸಿಕೊಳ್ಳುತ್ತದೆ. ಇದರಿಂದ ನಮಗೂ ಕೆಲಸ ಸಿಗುತ್ತಿದೆ'-ಇಸ್ರೇಲ್ ರಾಜಧಾನಿ ಟೆಲ್ ಅವೀವ್ ನಗರದಲ್ಲಿ ನೆಲೆಸಿರುವ ಕುಮಟಾದ ವಿಲ್ಫ್ರೆಡ್ ಅಲ್ಮೆಡಾ ಅಲ್ಲಿನ ವಸ್ತುಸ್ಥಿತಿಯ ಮೇಲೆ ಬೆಳಕು ಚೆಲ್ಲಿದ್ದು ಹೀಗೆ.

ಅವರು ಮಾತನ್ನು ಮುಂದುವರಿಸಿ ಹೇಳಿದ್ದಿಷ್ಟು: ''ಭಾರತೀಯರಿಗೆ ಇಸ್ರೇಲ್‌ನಲ್ಲಿ 'ಕೇರ್ ಟೇಕರ್' ಉದ್ಯೋಗ ಸಿಗುವುದು ಸುಲಭ. ಆದರೆ, ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕು. ಒಮ್ಮೆ ಕೆಲಸ ಪಡೆದು, ಇಸ್ರೇಲ್ ನೆಲದಲ್ಲಿ ಬಂದಿಳಿದರೆ ತಿಂಗಳಿಗೆ ಲಕ್ಷಕ್ಕೂ ಹೆಚ್ಚು ಮೊತ್ತದ ಸಂಬಳ ಪಡೆಯುವುದು ನಿಶ್ಚಿತ. ಆರಂಭದ ಕೆಲವು ದಿನ ಇಲ್ಲಿನ ವ್ಯವಸ್ಥೆ, ಭಾಷೆ, ಜನಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟ. ಒಮ್ಮೆ ಹೊಂದಿಕೊಂಡುಬಿಟ್ಟರೆ ಇಲ್ಲಿನ ಜೀವನ ಸುಲಭ.''

'ಕೇರ್ ಟೇಕರ್ ಹುದ್ದೆಗೆ ಆಯ್ಕೆಯಾಗುವವರಿಗೆ ಈ ಹಿಂದೆಲ್ಲ ಕಠಿಣ ನಿಯಮಗಳು ಇರಲಿಲ್ಲ. ನಿರ್ದಿಷ್ಟ ಶೈಕ್ಷಣಿಕ ಮಾನದಂಡವೂ ಇರಲಿಲ್ಲ. ಇದೇ ಕಾರಣಕ್ಕೆ ದಶಕಗಳ ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಇಲ್ಲಿಗೆ ವಲಸೆ ಬಂದರು. ಆದರೆ ಈಗ ಕೇರ್ ಟೇಕರ್ ಹುದ್ದೆಗೆ ನರ್ಸಿಂಗ್ ಶಿಕ್ಷಣ ಕಡ್ಡಾಯಗೊಳಿಸಲಾಗಿದೆ. ಅಲ್ಲದೆ ಉದ್ಯೋಗ ಒದಗಿಸಿಕೊಡುವ ಖಾಸಗಿ ಏಜೆನ್ಸಿಗಳ ಹಣದ ಬೇಡಿಕೆಯೂ ಹೆಚ್ಚಾಗಿದೆ. ಇದೇ ಕಾರಣಕ್ಕೆ ಇಸ್ರೇಲ್‌ಗೆ ಬರುವುದು ದುಬಾರಿಯಾಗಿದೆ' ಎಂದು ಇಸ್ರೇಲ್‌ನ ನೇತನ್ಯಾ ಎಂಬ ನಗರದಲ್ಲಿ ವಾಸ ಇರುವ ಕಾರವಾರದ ರೇಮಿ ಇನ್ನೊಂದು ಮಾಹಿತಿಯನ್ನು ಕೊಟ್ಟರು.

3ನೇ ಪುಟಕ್ಕೆ...

ಇಸ್ರೇಲ್‌ನ ಸರ್ಕಾರಿ ವೃದ್ಧಾಶ್ರಮಗಳಲ್ಲಿ ಬೇರೆ ಯಾರಿದ್ದೋ ತಂದೆ–ತಾಯಿಯರ ಆರೈಕೆ ಮಾಡುವ ಕನ್ನಡಿಗರಿಗೆ ಅಲ್ಲಿಯೇ ಇರಬೇಕೆಂಬ ಬಯಕೆ. ಅಲ್ಲಿ ಕೈತುಂಬಾ ಸಿಗುವ ಸಂಬಳ ಕರ್ನಾಟಕದಲ್ಲಿ ಇರುವ ತಮ್ಮ ತಂದೆ–ತಾಯಿಯರ ಕಣ್ಣೀರು ಒರೆಸುತ್ತಿದೆ. ನಿಜ ಆರೈಕೆ ಅಲ್ಲಿಯವರಿಗೆ, ಸಂಬಳದ ಕಕ್ಕುಲತೆ ಇಲ್ಲಿನವರಿಗೆ. ಇದು ಪರಿಸ್ಥಿತಿಯ ವ್ಯಂಗ್ಯ

ಡಿ.ಜೆ. ಮಹಾಶಬ್ದದ ಮಡುವು

ಸಾರ್ವಜನಿಕ ಉತ್ಸವಗಳಲ್ಲಿ ಡಿ.ಜೆ. ಸದ್ದು ಹಳ್ಳಿ ಹಳ್ಳಿಗಳನ್ನೂ ವ್ಯಾಪಿಸಿಕೊಂಡಿದೆ. ಎಷ್ಟೋ ಜನರಿಗೆ ಕರ್ಣಕಠೋರವಾಗುತ್ತಿರುವ ಡಿ.ಜೆ. ಶಬ್ದ ಅವೈಜ್ಞಾನಿಕವಾಗಿ ಸ್ಪೀಕರ್‌ಗಳನ್ನು ಬಳಸುತ್ತಿರುವುದರ ಪರಿಣಾಮವಂತೂ ಹೌದು.



ಚಿತ್ರದುರ್ಗದ ಹಿಂದೂ ಮಹಾಗಣಪತಿ ಶೋಭಾಯಾತ್ರೆಯಲ್ಲಿ ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದ ಯುವಸಮೂಹ ಚಿತ್ರ-ವಿ.ಚಂದ್ರಪ್ಪ

ಸುಮಾ ಬಿ.

ಆ ಪುಟ್ಟ ಗ್ರಾಮದಲ್ಲಿ ಹೊಳೆಗೆ ಗೌರಿ ಬಿಡುವ ಸಂಭ್ರಮವಿತ್ತು. ಒಂಬತ್ತು ದಿನಗಳ ಆರಾಧನೆ ಬಳಿಕ ನೀರಿನಲ್ಲಿ ಗೌರಿಯನ್ನು ವಿಸರ್ಜಿಸುವ ಸಂಪ್ರದಾಯ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಇದಕ್ಕೂ ಮುನ್ನ ಊರ ತುಂಬಾ ಮೆರವಣಿಗೆ. ಗೋಧೂಳಿ ಸಮಯದಲ್ಲಿ ಈ ಸಂಭ್ರಮಕ್ಕೆ ಚಾಲನೆ ದೊರೆತರೆ, ಮಧ್ಯರಾತ್ರಿವರೆಗೂ ಆಚರಣೆಗಳು ಮುಗಿಯುವುದಿಲ್ಲ. ಆದರೆ, ಈ ಬಾರಿ ಕತ್ತಲಾದರೂ ದೇವಸ್ಥಾನದಿಂದ ಮೆರವಣಿಗೆ ಹೊರಡಲಿಲ್ಲ. ಕಾರಣವಿಷ್ಟೆ: ಡಿ.ಜೆ.ಗೆ ಬೇಕಾಗಿದ್ದ ಜನರೇಟರ್ ಬಂದಿರಲಿಲ್ಲ. ದೂರದ ನಗರ ಪ್ರದೇಶದಿಂದ ಜನರೇಟರ್ ತರಿಸುವವರೆಗೂ ಟ್ರ್ಯಾಕ್ಟರ್ ಮೇಲೆ ಕುಳಿತು ಎರಡು ತಾಸು ಕಾಯುವ ಸ್ಥಿತಿ 'ಗೌರಿ'ಗೂ ಒದಗಿತ್ತು.

ಸರಿಯಾಗಿ ಬಸ್ ವ್ಯವಸ್ಥೆಯನ್ನೇ ಕಾಣದ ಆ ಗ್ರಾಮದಲ್ಲೀಗ ಗೌರಿ ಬಿಡಲು ಡಿ.ಜೆ. ಸದ್ದು ಬೇಕೇಬೇಕು. ಡಿ.ಜೆ. ನಮ್ಮ ನಾಡಿನ ಬಹುತೇಕ ಕಡೆಗೆ ವ್ಯಾಪಿಸಿರುವ ರೀತಿಯನ್ನು ಅರಿಯಲು ಇಂದೊಂದು ಉದಾಹರಣೆಯಷ್ಟೆ. 'ಡಿ.ಜೆ... ಡಿ.ಜೆ...' ಎನ್ನುವ ಕೂಗು ಹಳ್ಳಿ ಹಳ್ಳಿಗಳಲ್ಲೂ ಅನುರಣಿಸುತ್ತಿದೆ. ಯಾವುದೇ ಧಾರ್ಮಿಕ ಕಾರ್ಯಕ್ರಮಗಳಿರಲಿ, ಉತ್ಸವಗಳಿರಲಿ, ಜಾತ್ರೆ, ಔತಣಕೂಟವಿರಲಿ ಡಿ.ಜೆ.ಯ ಸದ್ದನ್ನು ಯುವಮನ ಬಯಸುತ್ತಿದೆ. ಎಲ್ಲ ಧರ್ಮಗಳ ಉತ್ಸವಗಳಲ್ಲೂ ಡಿ.ಜೆಯದ್ದೇ 'ಸದ್ದು'. ಡಿ.ಜೆ. ಇದ್ದರೇನೆ ಅದಕ್ಕೊಂದು ಮೆರುಗು ಎನ್ನುವಷ್ಟರಮಟ್ಟಿಗೆ ಉತ್ಸವಗಳು ಮಗ್ಗಲು ಹೊರಳಿಸಿವೆ.

ಈಗಂತೂ ಎಲ್ಲೆಡೆ ಗಣೇಶೋತ್ಸವದ ಗುಂಗು. ವಿಸರ್ಜನೆ ಸಮಯದಲ್ಲಿ ನಡೆಯುವ ಮೆರವಣಿಗೆಗೆ ಕಿವಿಗಡಚಿಕ್ಕುವ ಅಬ್ಬರದ ಸಂಗೀತ ಇಲ್ಲದಿದ್ದರೆ ಗಣೇಶೋತ್ಸವ ಸಂಪನ್ನಗೊಳ್ಳದು. ಅಬ್ಬರದ ಸಂಗೀತದ ಲಯಕ್ಕೆ ಯುವಕರ ಭಲೇ ಕುಣಿತ ಮಾಮೂಲಿ ಎಂಬಂತಾಗಿದೆ. ಭಕ್ತಿ ಪ್ರಧಾನ ಹಾಡುಗಳ ಸ್ಥಾನದಲ್ಲಿ ಸಿನಿಮಾ ಗೀತೆಗಳ ಅನುರಣನ ಕೇಳತೊಡಗಿ ದಶಕಗಳೇ ಉರುಳಿವೆ. ಆದರೀಗ ಗಣೇಶೋತ್ಸವಕ್ಕೆಂದೇ ಸೃಷ್ಟಿಯಾದ ಹಾಡುಗಳಿಗೂ ಡಿ.ಜೆ. ಮಿಕ್ಸ್ ಮಾಡಿ ಲಯವನ್ನು ಕೊಟ್ಟುಕೊಳ್ಳುವ ಹೊಸತನ. ಈ ರೀತಿಯ ಡಿ.ಜೆ. ಬಳಕೆ ಬರೀ ಗಣೇಶೋತ್ಸವದಲ್ಲಷ್ಟೇ ಅಲ್ಲ, ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಆಚರಣೆಗಳ ಭಾಗವೂ ಆಗಿಹೋಗಿದೆ. ಇಷ್ಟಕ್ಕೂ ಡಿ.ಜೆ. ಬಳಸಲು ಉತ್ಸವಗಳು ಒಂದು ನೆಪವಷ್ಟೇ.

ಡಿ.ಜೆ. ಅಂದರೆ ಡಿಸ್ಕ್ ಜಾಕಿ ಎನ್ನುವುದರ ಸಂಕ್ಷಿಪ್ತ ರೂಪ. ಹಾಡುಗಳನ್ನು ಆಯ್ದು, ಸಂದರ್ಭಕ್ಕೆ ಅನುಗುಣವಾಗಿ ದೊಡ್ಡ ಧ್ವನಿಯಲ್ಲಿ ಕೇಳುವಂತೆ ಮಾಡುವ ವ್ಯಕ್ತಿಗೆ ಡಿ.ಜೆ. ಎನ್ನುತ್ತಿದ್ದರು. ಆದರೆ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಸ್ಪೀಕರ್‌ಗಳನ್ನು ಇಟ್ಟು, ಹಾಡುಗಳನ್ನು ಹಾಕುವುದನ್ನೇ ಡಿ.ಜೆ. ಎಂದು ಕರೆಯುವುದು ರೂಢಿಯಾಗಿದೆ. ಕಿವಿಗಡಚಿಕ್ಕುವ ಸ್ಪೀಕರ್‌ಗಳ ಬಳಕೆಯನ್ನೇ ಡಿ.ಜೆ. ಎಂದು ಹಳ್ಳಿ ಹಳ್ಳಿಗಳಲ್ಲೂ ಕರೆಯುತ್ತಾರೆ.

'ಸಾಮಾನ್ಯವಾಗಿ ಹಳ್ಳಿಗಳಲ್ಲಿ ಬಳಸುವ ಡಿ.ಜೆ.ಯಲ್ಲಿ 10ರಿಂದ 12 ಸೌಂಡ್ ಬಾಕ್ಸ್‌ಗಳನ್ನು ಹಾಕಲಾಗುತ್ತದೆ. ನಾಲ್ಕು ಟಬ್, ನಾಲ್ಕು ಬೇಸ್ ಹಾಗೂ ನಾಲ್ಕು ಟಾಪ್ ಬಾಕ್ಸ್‌ಗಳನ್ನು ಬಳಸಲಾಗುತ್ತದೆ. ನಗರಪ್ರದೇಶಗಳ ದೊಡ್ಡದೊಡ್ಡ ಉತ್ಸವಗಳಲ್ಲಿ ಬಳಸುವ ಸ್ಪೀಕರ್‌ಗಳ ಸಂಖ್ಯೆ ಇದಕ್ಕಿಂತ ಮೂರು ಪಟ್ಟು ಹೆಚ್ಚು. ಒಂದೊಂದು ಸ್ಪೀಕರ್‌ನಲ್ಲೇ ನಾಲ್ಕು ಬಾಕ್ಸ್‌ಗಳನ್ನು ಅಳವಡಿಸಲಾಗಿರುತ್ತದೆ' ಎಂದು 'ಡಿ.ಜೆ ಸ್ಪೀಕರ್'ಗಳನ್ನು ಒದಗಿಸುವ ಚಳ್ಳಕೆರೆಯ ನರಸಿಂಹ ನೀಡುವ ವಿವರಣೆ ಕಣ್ಣರಳಿಸುವಂತೆ ಮಾಡುತ್ತದೆ.

ದಶಕದಿಂದೀಚೆಗೆ 'ಡಿ.ಜೆ ಸಂಸ್ಕೃತಿ' ಶುರುವಾದರೂ ಅದರ ಈಗಿನ ಚಾಚು ಅಚ್ಚರಿಗೊಳಿಸುವಂಥದ್ದು. ಮಹಾರಾಷ್ಟ್ರ, ಗೋವಾ ರಾಜ್ಯಗಳಲ್ಲಿ ನಡೆಯುತ್ತಿದ್ದ ಇಂತಹ ಸಂಗೀತೋನ್ಮಾದ ನಮ್ಮ ನಾಡಿನಲ್ಲೂ ಆವರಿಸಿದೆ. ಈ ಅಬ್ಬರದ ಡಿ.ಜೆ ಸದ್ದು ಮಕ್ಕಳು, ವೃದ್ಧರು, ಹರೆಯದವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದಕ್ಕೂ ಸಾಕಷ್ಟು ಉದಾಹರಣೆಗಳು ಸಿಗುತ್ತಿವೆ. ಶ್ರವಣ ಸಮಸ್ಯೆ, ರಕ್ತದೊತ್ತಡ, ಹೃದಯದ ತೊಂದರೆ, ಆತಂಕ, ಉದ್ವೇಗ, ಮಾನಸಿಕ ಖಿನ್ನತೆ ಮೊದಲೇ ಹೆಚ್ಚಾಗಿರುವ ಕಾಲಘಟ್ಟವಿದು. ಇಂತಹ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೆ ಡಿ.ಜೆ. ಸದ್ದು ಇನ್ನಷ್ಟು ಕಿರಿಕಿರಿ ಉಂಟುಮಾಡುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ದಾವಣಗೆರೆ ಜಿಲ್ಲೆಯ ಜಗಳೂರಿನಲ್ಲಿ ಸೆ. 27ರಂದು ನಡೆದ ಗಣೇಶೋತ್ಸವದಲ್ಲಿ ಡಿ.ಜೆ ಸದ್ದಿಗೆ ಹೆಜ್ಜೆ ಹಾಕುತ್ತಿದ್ದ ಎಂಜಿನಿಯರ್ ನಾಗರಾಜ್ ಪತ್ತಾರ್ (30) ಸ್ಥಳದಲ್ಲೇ ಕುಸಿದುಬಿದ್ದರು. ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಹೃದಯಸ್ತಂಭನದಿಂದ ಮೃತಪಟ್ಟರು. ಇಂಥದ್ದೇ ಘಟನೆ ಅ.9ರಂದು ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲೂ ನಡೆದಿದೆ. ಮೆರವಣಿಗೆ ವೇಳೆ ಯುವಕ ಸುದೀಪ್ ಸಜ್ಜನ್ (23) ಹಠಾತ್ ಕುಸಿದು ಸಾವನ್ನಪ್ಪಿದರು. ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲೂ ಗಣೇಶ ವಿಸರ್ಜನೆ ವೇಳೆ ಇಂತಹ ಘಟನೆಗಳು ನಡೆದಿರುವುದು ಮಾಧ್ಯಮಗಳಲ್ಲಿ ವರದಿಯಾಗಿವೆ.

2ನೇ ಪುಟಕ್ಕೆ...

ವೃತ್ತಿ, ಪ್ರವೃತ್ತಿಗೆ ನ್ಯಾಯ ಒದಗಿಸಿದ ಸಮರ್ಥ


ಎಚ್.ಎಸ್. ವೆಂಕಟೇಶಮೂರ್ತಿ

ಇತ್ತೀಚೆಗೆ ನಮ್ಮನ್ನಗಲಿದ ಗುಂಬಳ್ಳಿ ನರಸಿಂಹಮೂರ್ತಿ ರಂಗನಾಥ ರಾವ್ (1942-2023) ಪತ್ರಿಕೋದ್ಯಮ ಮತ್ತು ಸಾಹಿತ್ಯ ರಂಗದ ಹಿರಿಯ ಸಾಧಕರಾಗಿ ನಮಗೆಲ್ಲ ಬಹು ಪ್ರಿಯರಾದವರು. ಪತ್ರಿಕೋದ್ಯಮ ಜೀವನ ವೃತ್ತಿಯಾದವರು ಸಾಹಿತ್ಯರಂಗದಲ್ಲಿ ಮಹತ್ವದ ಸಾಧನೆ ಮಾಡುವುದು ಕಷ್ಟಸಾಧ್ಯ ಎಂಬ ಅಪವ್ಯಾಖ್ಯೆಯನ್ನು ಸುಳ್ಳಾಗಿಸಿದವರಲ್ಲಿ ಜಿ.ಎನ್.ಆರ್ ಮುಖ್ಯರು. ನಮ್ಮಂಥ ಅನೇಕ ಲೇಖಕರನ್ನು ಬೆಳೆಸಿದ ಜಿ.ಎನ್.ಆರ್ ಅವರದ್ದು ಜಾತ್ಯತೀತವಾದ ವ್ಯಕ್ತಿತ್ವ. ಜೀವನಮುಖತ್ವ ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣವೆನ್ನಬಹುದು. ಸ್ವಭಾವತಃ ಗಂಭೀರ ವ್ಯಕ್ತಿ. ಮಾತು ಕಮ್ಮಿ. ಆದರೆ ಅವರದ್ದು ಕ್ರಿಯಾಶೀಲ ವ್ಯಕ್ತಿತ್ವ. ತಾತ್ವಿಕವಾಗಿ ನಿಜವಾದ ಗಾಂಧಿವಾದಿ. ಬಡತನವನ್ನು ಒಂದು ಮೌಲ್ಯವಾಗಿ ಪರಿಗಣಿಸಿದವರು. ಹಳೆಯ ಪೀಳಿಗೆಯ ಕಡೆಂಗೋಡ್ಲು, ಆನಂದಕಂದ, ವೀರಕೇಸರಿ, ಡಿವಿಜಿಯವರಂತೆ ಪತ್ರಿಕೋದ್ಯಮ ಮತ್ತು ಸಾಹಿತ್ಯ ಸಾಧನೆಯಲ್ಲಿ ಸಮತೂಕದ ಮೌಲಿಕ ಬರಹಗಳನ್ನು ರಚಿಸಿ ವೃತ್ತಿ ಮತ್ತು ಪ್ರವೃತ್ತಿಗೆ ಸಮಾಸಮ ನ್ಯಾಯ ದೊರಕಿಸುವ ಮೂಲಕ ಹಳೆಯ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿದವರು.

ನುಡಿ ನಮನ

ಆರಂಭದ ಹಂತದಲ್ಲಿ 'ತಾಯಿನಾಡು', 'ಸಂಯುಕ್ತ ಕರ್ನಾಟಕ' ಪತ್ರಿಕೆಗಳಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ ಜಿ.ಎನ್.ಆರ್ ಅನಂತರ 'ಪ್ರಜಾವಾಣಿ' ಪತ್ರಿಕಾಗುಂಪಿನಲ್ಲಿ ಮೂವತ್ತು ವರ್ಷಗಳಷ್ಟು ದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾದವರು. ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿ ತಮ್ಮ ವೃತ್ತಿ ಜೀವನದ ಶಿಖರವನ್ನು ತಲಪಿದ ಜಿ.ಎನ್.ಆರ್, ಪತ್ರಿಕೋದ್ಯಮದ ಒತ್ತಡದಲ್ಲೂ ಸಾಹಿತ್ಯ ನಿರ್ಮಿತಿಯ ಹೊಣೆಗಾರಿಕೆಗೆ ಯಾವತ್ತೂ ವಿಮುಖರಾದವರಲ್ಲ. ಪತ್ರಿಕೋದ್ಯಮಕ್ಕೆ ನೂರಕ್ಕೆ ನೂರು ಕೊಟ್ಟುಕೊಂಡು, ಪತ್ರಿಕೋದ್ಯಮಕ್ಕೆ ಪೂರಕವಾಗುವಂಥ ಸಾಹಿತ್ಯವನ್ನು ನಿರಂತರವಾಗಿ ರಚಿಸಿದವರು. 2006ರಲ್ಲಿ ಪ್ರಕಟವಾದ ಅವರ ಪತ್ರಿಕೋದ್ಯಮ ಕುರಿತ ಸಮಗ್ರ ಸಂಪುಟ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಒಂದು ಆಕರ ಗ್ರಂಥವೆಂದೇ ಪರಿಗಣಿತವಾಗಿದೆ. ನಿವೃತ್ತಿಯ ನಂತರ ಭಾರತೀಯ ವಿದ್ಯಾಭವನದಲ್ಲಿ ಮತ್ತು ಸರ್ಕಾರಿ ಕಲಾ ಕಾಲೇಜಿನಲ್ಲಿ ಪತ್ರಿಕೋದ್ಯಮವನ್ನು ಅವರು ಬೋಧಿಸಿದರೆಂಬುದನ್ನು ನಾವಿಲ್ಲಿ ಸ್ಮರಿಸಲೇಬೇಕಾಗಿದೆ.

ಇನ್ನು ವಿಮರ್ಶಕರಾಗಿ, ಅನುವಾದಕರಾಗಿ ಸಾಹಿತ್ಯ ರಂಗಕ್ಕೆ ಜಿ.ಎನ್.ಆರ್ ಕೊಟ್ಟಂಥ ಕೊಡುಗೆಯನ್ನು ನಾವು ಮರೆಯುವಂತೆಯೇ ಇಲ್ಲ. ಅವರು ಕಾವ್ಯ, ಕಥೆ, ನಾಟಕ, ಪ್ರಬಂಧ,



ಪತ್ರಿಕೋದ್ಯಮ ಮತ್ತು ಸಾಹಿತ್ಯ ರಂಗದ ಹಿರಿಯ ಸಾಧಕ ಗುಂಬಳ್ಳಿ ನರಸಿಂಹಮೂರ್ತಿ ರಂಗನಾಥ ರಾವ್ ಇತ್ತೀಚೆಗಷ್ಟೇ ನಮ್ಮನ್ನಗಲಿದ್ದಾರೆ. 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕರಾಗಿದ್ದ, ಮೂರು ದಶಕಗಳಿಗಿಂತ ಹೆಚ್ಚು ಕಾಲ ಪ್ರತಿಕೋದ್ಯಮದಲ್ಲಿ ಸಕ್ರಿಯರಾಗಿದ್ದ ಅವರಿಗೊಂದು ಅಕ್ಷರ ನಮನ...

ಮಕ್ಕಳ ಸಾಹಿತ್ಯದ ರಚನೆಯನ್ನು ಮಾಡಿರುವರಾದರೂ ವಿಮರ್ಶೆ ಮತ್ತುಅನುವಾದರಂಗದಲ್ಲಿಅವರಕೊಡುಗೆಅನನ್ಯವೆನ್ನಬಹುದು. 'ಹೊಸ ತಿರುವು', 'ಮಾಸ್ತಿಯವರ ನಾಟಕಗಳು', 'ಒಳನೋಟ', 'ಅನ್ಯೋನ್ಯ', 'ಗುಣದೋಷ' ಅವರ ಮುಖ್ಯ ವಿಮರ್ಶಾ ಕೃತಿಗಳು. 'ಸಮುಚ್ಚಯ' ಅವರ ಆಯ್ದ ವಿಮರ್ಶಾಸಂಪುಟ. ಸಾಹಿತ್ಯವನ್ನು ಅರ್ಥೈಸುವುದು, ಓದುಗರಿಗೆ ತಲುಪಿಸುವುದು ಹಾಗೂ ಸೃಜನಶೀಲ ವಾತಾವರಣವನ್ನು ನಿರ್ಮಾಣ ಮಾಡುವುದು ಜಿ.ಎನ್.ಆರ್ ಅವರ ಬರವಣಿಗೆಯ ಮುಖ್ಯ ಆಶಯ. ನವ್ಯದ ವಿಜೃಂಭಣೆಯ ಕಾಲದಲ್ಲಿ ಜಿ.ಎನ್.ಆರ್ ಸಾಹಿತ್ಯ ರಚನೆ ಪ್ರಾರಂಭಿಸಿದವರು. ಅವರ ಸಣ್ಣ ಕಥೆಗಳಲ್ಲಿ ನವ್ಯದ ಪ್ರಭಾವ ದಟ್ಟವಾಗಿಯೇ ಇದೆ. ವಿಶ್ಲೇಷಣೆಗೆ ನವ್ಯ ಕಾದಂಬರಿಗಳನ್ನೇ ವಿಶೇಷವಾಗಿ ಆರಿಸಿಕೊಂಡಿದ್ದರೂ ಮಾಸ್ತಿಯವರ ನಾಟಕಗಳನ್ನು ಕುರಿತು ಒಂದು ಗ್ರಂಥವನ್ನೇ ರಚಿಸಿರುವುದು ಅವರ ಮುಕ್ತ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ಜಿ.ಎನ್.ಆರ್ ಅವರ ವಿಮರ್ಶೆ ಅವರ ಮುಕ್ತ ಮನಸ್ಸನ್ನು ತೋರಿಸುವಂತಿದೆ. ಗಿರಿಯವರ 'ಗತಿ ಸ್ಥಿತಿ' ಬಗ್ಗೆ ಎಷ್ಟು ಉತ್ಸಾಹದಿಂದ ಅವರು ಬರೆಯುತ್ತಾರೋ ಅಷ್ಟೇ ಉತ್ಸಾಹದಿಂದ ಕುಂವಿ ಅವರ ಅರಮನೆಯ ಬಗ್ಗೆಯೂ ಬರೆಯುತ್ತಾರೆ. ಈ ಸಮತೋಲ ಅವರ ವಿಮರ್ಶಾವ್ಯಕ್ತಿತ್ವದ 'ಇನ್‌ಬಿಲ್ಟ್' ಅಂಶವಾಗಿದೆ.

ಜಿ.ಎನ್.ಆರ್ ಅವರ ಮಹೋನ್ನತ ಸಾಧನೆಯೆಂದರೆ ಅವರ ಅನುವಾದ ಸಾಹಿತ್ಯ. ಬೇರೆ ಬೇರೆ ದೇಶದ ಲೇಖಕರು, ಬೇರೆ ಬೇರೆ ಸಂಸ್ಕೃತಿಯ ಲೇಖಕರು, ಬೇರೆ ಬೇರೆ ಭಾಷಾವಲಯದ ಲೇಖಕರು-ಅವರ ಅಂತಃಕರಣವನ್ನು ಜಿ.ಎನ್.ಆರ್ ಅದೆಷ್ಟು ಸೂಕ್ಷ್ಮವಾಗಿ ಗ್ರಹಿಸುತ್ತಾರೆ ಎಂಬುದು ಆಶ್ಚರ್ಯ ಉಂಟುಮಾಡುತ್ತದೆ. 'ದಿ ಕಕೇಷಿಯನ್ ಚಾಕ್ ಸರ್ಕಲ್' (ಮೂಲ: ಬ್ರೆಕ್ಟ್), 'ಕಾಫ್ಕಾನ ಕಥೆಗಳು', 'ಅಂತಿಗೊನೆ' (ಮೂಲ: ಜೀನ್ ಅನ್ವಿ), 'ಓ ಹೆನ್ರಿಯ ಕಥೆಗಳು', 'ಮಹಾಪ್ರಸ್ಥಾನ' (ಟಾಲ್‌ಸ್ಟಾಯ್ ಕಥೆಗಳ ಅನುವಾದ), ಶೇಕ್ಸ್‌ಪಿಯರನ 'ರೋಮಿಯೋ ಜೂಲಿಯಟ್', ಜೆನ್ ಅನುವಾದ, ಖಲೀಲ್ ಗಿಬ್ರಾನ್ ಅನುವಾದ, ರಾಮಚಂದ್ರ ಗುಹಾ ಅವರ 'ಬಾಪು ನಂತರದ ಭಾರತ', ರಾಜ ಮೋಹನ ಗಾಂಧಿಯವರ 'ಮೋಹನ ದಾಸ ಒಂದು ಸತ್ಯ ಕಥೆ' (ಜಿ.ಎನ್.ಆರ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ ದೊರಕಿಸಿದ ಕೃತಿ), ಎಲ್.ಎಸ್. ಶೇಷಗಿರಿರಾಯರ 'ಇಂಗ್ಲಿಷ್ ಮಹಾಭಾರತ'ದ ಕನ್ನಡಾನುವಾದ ಒಂದೊಂದೂ ವಿಶೇಷ ಉಲ್ಲೇಖಕ್ಕೆ ಅರ್ಹವಾದ ಕೃತಿಗಳು.

ಡಾ ಯು.ಆರ್ ಅನಂತಮೂರ್ತಿ ಅವರು ಜಿ.ಎನ್.ಆರ್ ಅವರ ವಿಮರ್ಶೆ ಮತ್ತು ಅನುವಾದಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. 'ರಂಗನಾಥರಾಯರು ಅರೋಚಿಗಳೂ ಆಗದೆ, ಸತೃಣಾಭ್ಯ ವ್ಯವಹಾರಿಯೂ ಆಗದೆ, ಸದ್ದುಗದ್ದಲವಿಲ್ಲದೆ ವಿಮರ್ಶೆಯಲ್ಲಿ ಕನ್ನಡ ಗದ್ಯವನ್ನು ಬೆಳೆಸಿದ್ದಾರೆ. ಇವರು ಪಡೆದ ಗದ್ಯದ ಹದ ಮತ್ತು ಶಿಸ್ತು ಟಾಲ್‌ಸ್ಟಾಯ್ ಕಥೆಗಳ ಅನುವಾದದಲ್ಲಿ ಅವರಿಗೆ ಒದಗಿಬಂದಿದೆ'.

ಕುಟುಂಬ ಜೀವಿಯಾದ ಜಿ.ಎನ್.ಆರ್ ತಾವು ತುಂಬ ಹಚ್ಚಿಕೊಂಡಿದ್ದ ತಮ್ಮ ಪತ್ನಿ ಸರಳ ಅವರ ನಿಧನದ ನಂತರ ಅವರ ಹೆಸರಿನಲ್ಲಿ ಟ್ರಸ್ಟ್ ಒಂದನ್ನು ಪ್ರಾರಂಭಿಸಿ, ಸಮರ್ಥ ಮಹಿಳಾ ಲೇಖಕಿಯರನ್ನು ಗುರುತಿಸಿ ಪ್ರಶಸ್ತಿ ನೀಡುವ ಮಹತ್ತರಕಾರ್ಯವನ್ನು ನಿರ್ವಹಿಸಿದ್ದನ್ನು ನಾವು ಸ್ಮರಿಸಲೇಬೇಕು. ❖

ನಿರ್ಣಯವನರಿಯದ ಲೋಕ ದುಗುಡಗೊಂಡ ಪರಿ...

ಕೃಷ್ಣಮೂರ್ತಿ ಹನೂರು


ಜಯದೇವ ಅವರು ಸ್ಥಾಪಿಸಿದ ಅನಾಥ ಮಕ್ಕಳ ಮತ್ತು ಗ್ರಾಮೀಣ ಹಿನ್ನೆಲೆಯ ಶಾಲಾ ವಿದ್ಯಾರ್ಥಿಗಳ ದೀನಬಂಧು ಸಂಸ್ಥೆಯಲ್ಲಿ ಮಕ್ಕಳೊಂದಿಗೆ ಒಡನಾಡುವಲ್ಲಿ, 'ನನಗಾದ ಅನುಭವಗಳನ್ನು ಈ ನಾವೇಕೆ ಹೀಗೆ ಪುಸ್ತಕದಲ್ಲಿನ ವಸ್ತುವಾಗಿ ಬಳಸಿಕೊಂಡಿದ್ದೇನೆ' ಎಂದಿರುತ್ತಾರೆ. ಆದರೆ ಪುಸ್ತಕದ ಪುಟ ತಿರುವುತ್ತಾ ಹೋದಲ್ಲಿ ಮಕ್ಕಳಿಂದ ಹಿಡಿದು ಹಿರಿಯರವರೆಗೆ, ಜಗತ್ತಿನ ಅನುಭಾವಿಗಳ ಚಿಂತನಾ ಕ್ರಮಸಹಿತ ಜನ ಬದುಕಿನ ಕ್ರಮ ಯಾಕೆ ಹೀಗೆ, ಇದು ಪೂರ್ವ ನಿರ್ಧಾರಿತವೇ, ನಾವೇ ಒಗ್ಗಿಸಿಕೊಳ್ಳಬಹುದಾದುದೇ, ಹಾಗೆ ದಾರಿಯನ್ನು ಕಂಡುಕೊಳ್ಳುವುದಾದರೆ ಅದು ಯಾವುದು ಹೀಗೆಲ್ಲ ಚರ್ಚೆ ಸಾಗುವಲ್ಲಿ, 'ಹೌದು ನಾವೇಕೆ ಹೀಗೆ' ಎಂಬ ಪ್ರಶ್ನೆ ತೀವ್ರವಾಗಿಯೇ ಎದುರುಗೊಳ್ಳುವಂತಾಗುತ್ತದೆ. ಪುಸ್ತಕದ ವಿವರಗಳು ದೇಹದ ಅಗ್ರಭಾಗವೆನಿಸುವ ಮೆದುಳಿನ ರಚನೆಯಿಂದ ಆರಂಭವಾಗಿ ಅಲ್ಲಿಂದಲೇ ತೊಡಗುವ ಆಲೋಚನೆಗಳತ್ತ ಹರಿಯುತ್ತ, ಮನುಷ್ಯನ ಸರಳ ಬದುಕಿಗೆ ಸಂತೋಷಕ್ಕೆ ಹಲವು ದಾರಿಗಳಿದ್ದರೂ ಆಯ್ಕೆ ಮಾಡಿಕೊಳ್ಳುವ ಗತಿ ಮಾತ್ರ ಯಾಕೆ ಕಠಿಣವಾದುದು ಎಂಬ ಗಹನ ವಿಚಾರದೊಡನೆ ಸಾಗುತ್ತದೆ. ಇಲ್ಲಿ ಮಂಡಿತವಾಗಿರುವ ಬಹುಪಾಲು ವಿಷಯವೆಲ್ಲ ಮನೋವಿಜ್ಞಾನ ಸಂಗತಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡಿರುವುದನ್ನು ಗಮನಿಸಬೇಕು.

ಮೇಲೆ ಕಾಣಿಸಿದ ವಿಷಯಕ್ಕೆ ಪೂರಕವಾಗಿ ಮನೋವಿಜ್ಞಾನ ವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಅವರು, 'ಮನಸ್ಸು ಅದ್ಭುತ ವಿಸ್ಮಯ ಸರಿ. ಆದರೆ ಕ್ಷಣ ಚಿತ್ತವೇಕೆ ಕ್ಷಣ ಪಿತ್ತವೇಕೆ, ಒಮ್ಮೆ ದೇವರಂತೆಯೂ ಮತ್ತು ದೆವ್ವದಂತೆಯೂ, ಸತ್ಯ ಹೇಳುವ ಬಯಕೆಯಿದ್ದರೂ ಮನವು ಸುಳ್ಳನ್ನೇ ಯಾಕೆ ಬಿತ್ತರಿಸಲು ಇಷ್ಟಪಡುತ್ತದೆ, ಒಮ್ಮೆ ಪ್ರಾಣ ಕೊಡುವ ಪ್ರಿಯತಮ ಆ ಮುಂದೆ ಅವಳ ಪ್ರಾಣ ತೆಗೆಯುವುದೇಕೆ, ಮನುಷ್ಯ ನಿಜವಾಗಿಯೂ ಆನೆ ಹುಲಿಯನ್ನು ಎದುರಿಸುವ ಪರಾಕ್ರಮವನ್ನು ಹೊಂದಿರುವನೇ' ಎಂದಿರುತ್ತಾರೆ. ಇವೆಲ್ಲವೂ ಹುಲುಮಾನವನಿಗೆ ಬಿಡಿಸಲಾಗದ ಪ್ರಶ್ನೆಗಳಾಗಿದ್ದರೆ, ಅನುಭಾವಿಗಳು ಇದಕ್ಕೆ ಶತಮಾನ ಕಾಲ ಪರಿಹಾರ ಹುಡುಕುವ ಪ್ರಯತ್ನ ಮಾಡಿಕೊಂಡೇ ಬಂದಿರುತ್ತಾರೆ. ಜಯದೇವ ಅವರು ಕೃತಿಯ ಉದ್ದಕ್ಕೂ ಬೇರೆ ಬೇರೆ ಶೀರ್ಷಿಕೆಯಡಿ ಇದನ್ನೇ ಮನನೀಯ ಕ್ರಮದಲ್ಲಿ ಚರ್ಚಿಸಿರುತ್ತಾರೆ.

ಮನುಷ್ಯನೇ ಅರಿತು, ಅರಿಯದೆ ಮಾಡಿಕೊಂಡ ಅವಘಡಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡುವುದು? ಇದಕ್ಕೆ ಇನ್ನಿತರ ಜೀವರಾಶಿ ಅಥವಾ ಪ್ರಕೃತಿಯೇನೂ ಕಾರಣವಲ್ಲ ಎಂದುಕೊಳ್ಳುವಲ್ಲಿ ಅಲ್ಲಮ, 'ನಿರ್ಣಯವನರಿಯದ ಮನವೇ ದುಗುಡವನಾಹಾರಗೊಂಡೆಯಲ್ಲ, ಮಾಯಾಸೂತ್ರವಿದೇನೋ, ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ...' ಎಂಬಂತೆ ಸಾಧ್ಯವೇ ಆಗದ ನಿರ್ಧಾರ, ಕಣ್ಣಿದ್ದು ಕತ್ತಲಿನ ದಟ್ಟ ಅನುಭವ ಇದು ಯಾವ ದೈವದ ಪೂಜೆಯಿಂದ ಬಗೆಹರಿಯುವಂಥದ್ದು, ಉಳ್ಳವರು ನಿರ್ಮಿಸಿದ ದೇವಾಲಯದ ದೈವಗಳಿಂದ ಇದರ ಪರಿಹಾರವಿದೆಯೇ? ಬುದ್ಧನ ಪ್ರಕೃತಿ ತತ್ವದ ಶಾಂತಿ ಮತ್ತು ಸಮಾಧಾನ ಅಶೋಕನ ಅಂತರಂಗ ತಟ್ಟಿದಂತೆ ತದನಂತರದ ಶತಮಾನಗಳ ಜನಸಮೂಹದ ಮನವನ್ನು ಮುಟ್ಟಿತೆ? ಉತ್ತರ ಕಷ್ಟ. ಜಯದೇವ ಅವರು, ''ಆಗುವುದೇ ಮುಖ್ಯ ಅರಿವು, ಈ ಭೌತ ಪ್ರಪಂಚದ 'ಆಗ'ದ ಮನಸ್ಸುಗಳಲ್ಲಿ ಹರಿಯುವ ತೀವ್ರಭಾವದ ಕೆಂಪು ಕೆಸರಿನ ಪ್ರವಾಹದ ಮೂಲ ಯಾವುದು'' ಎನ್ನುತ್ತಾರೆ.

ಎಲ್ಲಕ್ಕಿಂತ ಮುಖ್ಯವಾಗಿ ಲೇಖಕರು ಮನಃಪರಿವರ್ತನೆಯ ಪರಿಕರವಾಗಿ ಕನ್ನಡದ ಮಧ್ಯಕಾಲೀನ ವಚನಕಾರರನ್ನು ಪ್ರಸ್ತಾಪಿಸುತ್ತಾರೆ. ರಾಜ್ಯವನ್ನು, ರಾಜನನ್ನು, ಅರಮನೆಯ ಪರಿಸರವನ್ನು ತಿರಸ್ಕರಿಸಿದ ಅಕ್ಕನನ್ನು ಉದಾಹರಣೆಗೆ ತೆಗೆದುಕೊಳ್ಳುತ್ತಾರೆ. ಹೆಣ್ಣು, ಗಂಡಿನ ನಡುವಣ ಭೇದವನ್ನು ಅಳಿಸುವ ನಿಟ್ಟಿನಲ್ಲಿ ಅದೇ ಪುರುಷರ ನಡುವೆ ದೀರ್ಘ ಪ್ರಯಾಣ ಕೈಗೊಂಡವಳು ಅಕ್ಕ. ಆಕೆಯ ಹುಟ್ಟು, ಬೆಳವಣಿಗೆ, ಪಡೆದ ಅರಿವು ಇದರೊಂದಿಗೆ ಊರು ಕೇರಿಗಳ ನೂರು ಅನುಭವಗಳ ಪ್ರಯಾಣ ಇವು ನಮಗೆ ಅರಿತು ಅರಿಯದ ಒಗಟಾಗಿ ನಿಗೂಢವೆನಿಸಿದೆ. ಶರಣರು, ಸಂತರುಗಳು, ಶ್ರೀಮಂತರು ನೀಡುವ ಭೀಕ್ಷೆ ತಮ್ಮ ಕರದ ಕಪ್ಪರಕ್ಕೆ ಒದಗಬಹುದು ಎಂದರೆ ಅಕ್ಕ ಅದೇ ಭಿಕ್ಷೆ ನೆಲಕ್ಕೆ ಬಿದ್ದು ಕುನ್ನಿ ಎತ್ತಿಕೊಂಡು ಹೋಗಲಿ ಎಂದಿದ್ದಾಳೆ. ಯಾವ ಜೀವನ ಕ್ರಮ ನಮ್ಮನ್ನು ತೀರ ಸಾಮಾನ್ಯರನ್ನಾಗಿಸಿ ಅದನ್ನೇ ಅಂತಃಶಕ್ತಿಯಾಗಿ ಪರಿವರ್ತಿಸುತ್ತದೋ ಅದೇ ನಿಜವಾದ ಅಧ್ಯಾತ್ಮ, ಆ ಕ್ರಮದಲ್ಲೇ ವಚನಗಳ ರೂಪ ಅಡಗಿದೆ. ಹಸಿವಿನ ಭಿಕ್ಷೆ, ಹಾಳು ದೇಗುಲದ ನಿದ್ದೆ, ತೃಷೆಗೆ ಒದಗುವ ಕೆರೆ ಹಳ್ಳದ ನೀರು ಎಂಬ ಸಾಮಾನ್ಯ ಸಂಗತಿಗಳ ಕೊನೆಯ ವಾಕ್ಯದಲ್ಲೇ ತಾನು ಚನ್ನಮಲ್ಲಿಕಾರ್ಜುನನ ಅಂತರಂಗದವಳು ಎಂದುಬಿಡುತ್ತಾಳೆ ಅಕ್ಕ. ಈ ಹೊತ್ತು ಅತಿಯಾದ ಆಧುನಿಕೀಕರಣದ ನಡುವೆ ಅಧ್ಯಾತ್ಮವು ತನ್ನಿಂದ ತಾನೇ ಶ್ರೀಮಂತಸ್ವರೂಪವನ್ನು ಪಡೆದಿದೆ.

ಮಕ್ಕಳಿಗೆ ಏನೂ ಗೊತ್ತಾಗುವುದಿಲ್ಲ ಅನ್ನುವುದಾದರೆ ಹಿರಿತನದ ಬೆಳವಣಿಗೆಯವರೆಗೆ ಬಂದದ್ದೇನು? ತಂದೆ-ತಾಯಿಗಳ ಪಾಲನೆಯೇ ಅದರೊಂದಿಗೆ ಮಕ್ಕಳ ಸುತ್ತಿನ ಪರಿಸರದ ಭಾವಪ್ರಪಂಚವೇ ಮುಂದೆ ಚಿಗುರೊಡೆಯುತ್ತದೆ ಎಂಬುದರ ನೆಲೆಯಲ್ಲಿಯೇ ಹಿರಿಯರ ಮನಃಸ್ಥಿತಿಯನ್ನೂ ಲೇಖಕರು ವಿವೇಚಿಸುತ್ತಾರೆ. ಇಚ್ಛಾಶಕ್ತಿಯ ವಿಷಯದಲ್ಲಿ ಮನುಷ್ಯ ಅಸಹಾಯಕನಾಗಿ ವಿಕೃತಿಯನ್ನೇ ಇಷ್ಟಪಡುವವನಾಗುತ್ತಾನೆ ಎಂಬ ಶೋಫೆನ್ ಹಾವರನ ಮಾತನ್ನು ಐನ್‌ಸ್ಟೀನ್ ಪುನರುಚ್ಚರಿಸುತ್ತಿದ್ದರಂತೆ! ಇದರಿಂದ ತಾನೇ ಸೃಷ್ಟಿಸಿಕೊಂಡ ವಿಕೃತಿಗೆ ತಾನೇ ಅಡಿಯಾಳಾಗದಂತೆ ಮನುಷ್ಯನನ್ನು, ಮನುಷ್ಯನ ಯಜಮಾನನ್ನಾಗಿ ಮಾಡಬೇಕಾಗಿರುವುದೇ ಯಾವೊತ್ತಿನ ದೊಡ್ಡ ಸವಾಲು! ಇದಕ್ಕೆ ಪೂರ್ವಜನ್ಮದ ಪಾಪ ಪುಣ್ಯಗಳಿಂದ ಹಿಡಿದು ಜನ್ಮವೆತ್ತಿದ ನಂತರವೂ ಕಾಡುತ್ತಲೇ ಬಂದಿರುವ ಮೂಢನಂಬಿಕೆಗಳಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಬೇಕಾಗಿರುವುದೇ ನಮ್ಮ ಎದುರಿನ ಕಷ್ಟವಾಗಿದೆ. ಇದು ಬಿಟ್ಟೂ ಬಿಡದೆ ಕಾಡುವ ಮಾಯೆ! ವಿಶ್ವಗುರು ವ್ಯಾಸ ಮಹರ್ಷಿಯ ಮಹಾಭಾರತ ಕಥನದ ಕೊನೆಯ ಶ್ಲೋಕ ತತ್ವ ಕೂಡ ಇದೇ. ಧರ್ಮ, ಅರ್ಥ, ಕಾಮ ಸರಿಯಾಗಿ ಉಪಭೋಗವಾಗದಿದ್ದರೆ ಭೂತ, ಪ್ರೇತಗಳ ಕುರುಕ್ಷೇತ್ರ ಎದ್ದು ನಿಲ್ಲುತ್ತದೆ. ಇದೇ ವೇಳೆ ಉಲ್ಲೇಖಿಸಬಹುದಾದ ಮಾತೆಂದರೆ, ಇತರರು ಏಳಿಗೆಯಾಗದ ಹಾಗೆ ಮೊದಲು ಕೇಡು ಬಗೆದುಬಿಟ್ಟರೆ ನಾವು ಕ್ಷೇಮವಾಗಿರಬಹುದು ಎಂದು ತಿಳಿದ ಅಮೆರಿಕದ ಅಧ್ಯಕ್ಷರೊಬ್ಬರು ಜನರ ಸುರಕ್ಷತೆಗಾಗಿ ವಿಷ ಅನಿಲವನ್ನು ತಯಾರಿಸಿ ದಾಸ್ತಾನಿಡುವುದು ಅನಿವಾರ್ಯ ಎಂದರಂತೆ.



ನಾವೇಕೆ ಹೀಗೆ?
ಲೇ: ಜಿ.ಎಸ್. ಜಯದೇವ
ಪ್ರ: ಪರಸ್ಪರ ಪ್ರಕಾಶನ, ಬೆಂಗಳೂರು
ಸಂ: 8884151513

ಪು: 246 ₹300

ಜಗತ್ತಿನ ಅನುಭಾವಿಗಳು, ತತ್ವವೇತ್ತರು, ಧರ್ಮ ಸಂಸ್ಥಾಪಕರು ಪ್ರತಿಪಾದಿಸಿದ್ದಕ್ಕೆಲ್ಲಾ ಯಾಕೆ ಮಿತಿಗಳು ಹುಟ್ಟಿಕೊಂಡಿತೆಂದರೆ ತದನಂತರ ಬಂದ ಅವರ ಅನುಯಾಯಿಗಳೇ ಅದಕ್ಕೆ ಕಾರಣ. ಅಗತ್ಯಕ್ಕೆ ತಕ್ಕಂತೆ ತೋರುಂಬ ಲಾಭಕ್ಕೆ ಧರ್ಮ ಸಂಗತಿಗಳನ್ನು ಬಳಸಿಕೊಂಡದ್ದೇ ಹೆಚ್ಚು. ಇಂಥದ್ದನ್ನೆಲ್ಲ ಜಯದೇವ ಅವರು ಒಂದೆಡೆ ತರುತ್ತ, ಚರ್ಚಿಸುತ್ತ ಜೀವನ ಎನ್ನುವುದು ಅಪೂರ್ವ ನಿಧಿ. ಅದು ಸಂತೋಷಕ್ಕಾಗಿ ಇದೆಯೇ ಹೊರತು ಸದಾ ಕಾಲವೂ ಯಾವುದನ್ನೋ ಯಾರನ್ನೋ ಹತ್ತಿಕ್ಕಲು ಅಲ್ಲ. ಅಹಂಕಾರದ ಮೂಲವೆಂದರೆ ಒಂದರ ವಿರುದ್ಧ ಮತ್ತೊಂದು ಎಂಬಂತಾಗಿ ಜೀವ ಬೇರೆ, ಹಳ್ಳಿ ಬೇರೆ, ದೇಶದ ಭಾಗ ಬೇರೆ, ದೇಶ ದೇಶ ಬೇರೆ ಅಂದರೆ ಅದು ಒಂದು ಇನ್ನೊಂದನ್ನು ಹಣಿಯುವ ಕುತಂತ್ರ ಸೂತ್ರವೇ ಆಗುತ್ತದೆ ಎನ್ನುವ ಲೇಖಕರ ಮಾತು ಚರಿತ್ರೆಯ ವಿಧ್ವಂಸಕತೆ ಮತ್ತು ಯುದ್ಧ ಸಂಕಷ್ಟಗಳಿಗೆ ಅನ್ವಯವಾಗುತ್ತದೆ. ಆಧುನಿಕತೆ, ಹಲವು ಬಗೆಯ ಶಿಕ್ಷಣ, ಯಂತ್ರವಿಜ್ಞಾನ ಎಂದುಕೊಳ್ಳುವ ಈ ಹೊತ್ತಿನಲ್ಲಿಯೂ ಮನುಷ್ಯ ಸಮೂಹಕ್ಕೆ ಹೇಳದೆ ಒದಗಿಬರುವ ಅಪಾಯಗಳು ಎದುರಾಗುತ್ತಿವೆ. ಜಯದೇವ ಅವರ ಲೋಕಾನುಭವ, ಅನುಭಾವಿಗಳ ಮತ್ತು ಮಕ್ಕಳ ಹಿನ್ನೆಲೆಯ ಈ ವಿದ್ವತ್‌ಕೃತಿಯನ್ನು ಕುರಿತು ಮತ್ತೊಬ್ಬ ಮನೋವಿಜ್ಞಾನ ವಿಷಯ ತಜ್ಞ ಪ್ರಾಧ್ಯಾಪಕ ಡಾ.ಎಂ.ಎಸ್. ತಿಮ್ಮಪ್ಪ ಅವರು, 'ಉತ್ತಮ ಉನ್ನತ ಬದುಕಿಗೆ ಹಂಬಲಿಸುವವರು ಮತ್ತು ಭಾವದೊಳಗಿನ ಬಂಧನಗಳ ಬಿಡುಗಡೆಯ ದೃಷ್ಟಿಯಿಂದ ಇದು ಓದಲೇಬೇಕಾದ ಕೃತಿ' ಎಂದಿದ್ದಾರೆ. ❖

ವಿಮರ್ಶೆ

ಡಿ.ಜೆ. ಮಹಾಶಬ್ದದ ಮಡುವು...

1ನೇ ಪುಟದಿಂದ...

ರಾಯಚೂರಿನಲ್ಲಿ 19 ದಿನಗಳ ಹಸುಗೂಸು ಮಲಗಿದಲ್ಲೇ ಮೃತಪಟ್ಟಿತ್ತು. ಆ ಸಮಯದಲ್ಲಿ ಮನೆಯ ಸಮೀಪ 'ಗಣೇಶೋತ್ಸವದ ಡಿಜೆ' ಮೆರವಣಿಗೆ ಹಾದುಹೋಗಿತ್ತು. ಗ್ರಾಮಸ್ಥರು, ಪೋಷಕರು ಮಗುವಿನ ಸಾವಿಗೆ ಡಿ.ಜೆ ಸದ್ದೇ ಕಾರಣ ಎಂದು ಆರೋಪಿಸಿದರು. ಡಿ.ಜೆ ಸದ್ದಿನಿಂದಲೇ ಮಗು ಮೃತಪಟ್ಟಿದೆ ಎನ್ನುವುದು ವೈದ್ಯಕೀಯವಾಗಿ ದೃಢಪಟ್ಟಿಲ್ಲವಾದರೂ ಇಂತಹ ಘಟನೆಗಳು ಡಿ.ಜೆ ಸಂಸ್ಕೃತಿಗೆ ಸಾರ್ವಜನಿಕರಿಂದ ಪ್ರತಿರೋಧ ವ್ಯಾಪಕವಾಗಲು ಕಾರಣವಾಗುತ್ತಿವೆ. 'ಡಿ.ಜೆ. ಸಂಗೀತ ಆಲಿಸಿ ಕಿವಿ ಸಮಸ್ಯೆಯಿಂದ ಆಸ್ಪತ್ರೆಗೆ ಎಡತಾಕುವವರ ಸಂಖ್ಯೆ ಹೆಚ್ಚುತ್ತಿದೆ. ತಲೆ ಸುತ್ತು, ನಿದ್ರಾಹೀನತೆ, ಕಿವಿಯಲ್ಲಿ ಯವಾಗಲೂ ಗುಂಯ್ ಎನ್ನುವ ಶಬ್ದ ಕೇಳುವಂತಾಗುವುದು ಅನೇಕರನ್ನು ಬಾಧಿಸುತ್ತಿವೆ. ಕೆಲವರಿಗೆ ತಕ್ಷಣಕ್ಕೆ ಅದು ಅರಿವಿಗೆ ಬರುತ್ತದೆ. ಇನ್ನು ಕೆಲವರಿಗೆ ಬಹಳ ದಿನಗಳ ಬಳಿಕ ಅರಿವಿಗೆ ಬರುತ್ತದೆ' ಎನ್ನುತ್ತಾರೆ ದಾವಣಗೆರೆಯ ಡಾ.ವೀರೇಶ್ ಎ.ಆರ್.

ದಾವಣಗೆರೆಯ ಗ್ರಾಮವೊಂದರಲ್ಲಿ ನಡೆದ ಉತ್ಸವದಲ್ಲಿ ಡಿ.ಜೆ, ಸ್ಪೀಕರ್‌ಗಳನ್ನು ಹೊತ್ತ ಟ್ರ್ಯಾಕ್ಟರ್ ಚಲಾಯಿಸಿದ ಚಾಲಕ ಕಿವಿ ಕೇಳದಂತಾಗಿ ವೈದ್ಯರ ಬಳಿಗೆ ಬಂದರು. ಅತಿಯಾದ ಶಬ್ದ ನಿರಂತರವಾಗಿ ಚಾಲಕನ ಕಿವಿಯ ಮೇಲೆ ಬಿದ್ದಿದ್ದರಿಂದ ಒಂದು ಕಿವಿಯ ತಮಟೆಗೆ ಹಾನಿಯಾಗಿತ್ತು. 70 ಡೆಸಿಬಲ್ ಒಳಗಿನ ಶಬ್ದ ಕಿವಿಗೆ ಸಹನೀಯ. 88 ಡೆಸಿಬಲ್‌ವರೆಗಿನ ಶಬ್ದವನ್ನು ನಾಲ್ಕು ಗಂಟೆಗಳಷ್ಟು ಮಾತ್ರ ಕೇಳಿಸಿಕೊಳ್ಳಲು ಸಾಧ್ಯ. 91 ಡೆಸಿಬಲ್ ಶಬ್ದವನ್ನು ಎರಡು ಗಂಟೆ, 97 ಡೆಸಿಬಲ್‌ವರೆಗಿನ ಶಬ್ದವನ್ನು ಅರ್ಧ ಗಂಟೆ, 100 ಡೆಸಿಬಲ್‌ವರೆಗಿನ ಶಬ್ದವನ್ನು 15 ನಿಮಿಷ ಕೇಳಿಸಿಕೊಳ್ಳಬಹುದು. ಅದಕ್ಕಿಂತಲೂ ಹೆಚ್ಚು ಡೆಸಿಬಲ್ ಶಬ್ದ ಕಿವಿ ಮೇಲೆ ಬಿದ್ದರೆ ಅದು ಶ್ರವಣ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದು ಶಬ್ದ ಹೊಮ್ಮುವ ಸ್ಥಳದಿಂದ ಎಷ್ಟು ಅಂತರದಲ್ಲಿ ಇದ್ದೇವೆ ಎನ್ನುವುದನ್ನೂ ಅವಲಂಬಿಸಿರುತ್ತದೆ. ಡಿ.ಜೆ. ಸ್ಪೀಕರ್‌ಗಳು 120ರಿಂದ 130 ಡೆಸಿಬಲ್‌ವರೆಗೆ ಶಬ್ದವನ್ನು ನಿರಂತರವಾಗಿ ಹೊರಹೊಮ್ಮಿಸುತ್ತವೆ.

'ಶಬ್ದಮಾಲಿನ್ಯವನ್ನು ಎರಡು ಬಗೆಯಲ್ಲಿ ಗುರುತಿಸುತ್ತೇವೆ. ಆಕ್ಯುಪೇಶನ್ ಹಾಗೂ ರಿಕ್ರಿಯೇಷನ್. ಒಂದು, ಕೆಲಸದ ಸ್ಥಳದಲ್ಲಿ ಆಗುವಂತಹ ಶಬ್ದ. ಮತ್ತೊಂದು, ಮನರಂಜನೆಗಾಗಿ ಬಳಸುವ ಶಬ್ದ. ಈಗೀಗ ರಿಕ್ರಿಯೇಷನ್‌ನಿಂದಾದ ಕಿವಿ ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಕಾಲೇಜ್ ಫೆಸ್ಟ್, ಉತ್ಸವಗಳಲ್ಲಿನ ಅಬ್ಬರದ ಸಂಗೀತದಿಂದ ಶ್ರವಣ ಸಮಸ್ಯೆಗೆ ಒಳಗಾಗುತ್ತಿದ್ದಾರೆ' ಎಂದು ವಿವರಿಸಿದರು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (AIISH) ಶ್ರವಣ ಶಾಸ್ತ್ರಜ್ಞ ಪ್ರೊ.ಅಜಿತ್‌ಕುಮಾರ್.

ಎರಡನೇ ಮಹಾಯುದ್ಧದ ಬಳಿಕ ಅಮೆರಿಕದಲ್ಲಿ 'ಡಿಸ್ಕ್ ಜಾಕಿ' ಅನೇಕ ರೇಡಿಯೊ ಕೇಂದ್ರಗಳ ಪ್ರಮುಖ ಆದಾಯದ ಮೂಲವಾಗಿತ್ತು. ಇಲ್ಲಿ ಸಾಮಾನ್ಯವಾಗಿ ಡಿಸ್ಕ್ ಜಾಕಿ ರೆಕಾರ್ಡ್ ಮಾಡಲಾದ ಸಂಗೀತವನ್ನು ಹಾಕಿ, ಹಾಡಿನ ನಡುವೆ ಮಾತನಾಡುತ್ತಾ ಜನರನ್ನು ರಂಜಿಸುತ್ತಾನೆ. ಕಾಲಾನಂತರ ಅದು ಸಂಗೀತವನ್ನು ಆಸ್ವಾದಿಸುವ ಮಾಧ್ಯಮವಾಗಿ ಪರಿವರ್ತಿತವಾಯಿತು. ಆದರೆ ಉತ್ಸವಗಳಲ್ಲಿ ಬಳಸುವ ಡಿ.ಜೆ. ಈ ಮಾದರಿಯದ್ದಾಗಿರುವುದಿಲ್ಲ. ❖

'ಶಬ್ದಮಾಲಿನ್ಯದಿಂದ ಸಾವು ಸಂಭವಿಸದು'

'ಹೃದಯ ಸಂಬಂಧಿ ಸಮಸ್ಯೆ ಮೊದಲೇ ಇದ್ದವರಿಗೆ ಅತಿಯಾದ ಶಬ್ದದಿಂದ ಎದೆಬಡಿತ ಇನ್ನಷ್ಟು ಏರಿಕೆಯಾಗುತ್ತದೆ. ನೃತ್ಯ ಮಾಡುತ್ತಿರುವಾಗ ಎದೆಬಡಿತ ಒಮ್ಮೆಲೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಎದೆಬಡಿತ ಏಕಾಏಕಿ 250–300ರವರೆಗೂ ತಲುಪಬಹುದು. ಇದಕ್ಕೆ ವೈದ್ಯಕೀಯ ಪರಿಭಾಷೆಯಲ್ಲಿ 'ವಿಟಿ' (ವೆಂಟ್ರಿಕ್ಯುಲರ್ ಟಕ್ಯಾರ್ಡಿಯ) ಎಂದು ಕರೆಯುವರು. ಹೀಗಾದಾಗ ಹೃದಯ ಬಡಿತ ಒಮ್ಮೆಲೆ ನಿಂತುಹೋಗುವ ಸಾಧ್ಯತೆಯೇ ಹೆಚ್ಚು. ಶಬ್ದದಿಂದಲೇ ಸಾವು ಸಂಭವಿಸುವುದಿಲ್ಲ' ಎನ್ನುತ್ತಾರೆ ದಾವಣಗೆರೆಯ ಹೃದ್ರೋಗ ತಜ್ಞ ಮಾಲತೇಶ್ ಕೆ.ಎಂ.

ಮೊದಲ ಓದು

ಆಹಾರ, ಆರೋಗ್ಯದ ಮಾಹಿತಿಯ ಕೃತಿ

ಮೈಸೂರಿನ ಶಿವಯೋಗ್ ದೇಸೀ ಗೋಶಾಲೆಯ ಪಿ.ಪಿ. ತಮ್ಮಯ್ಯ ಅವರ ಸಹಜ ಕೃಷಿ ಕೆಲಸಗಳು, ಆಹಾರ, ಆರೋಗ್ಯದ ಕುರಿತ ದೃಷ್ಟಿಕೋನವನ್ನು ವಿವರಿಸುವ ಯತ್ನವು 'ನಮ್ಮ ಆರೋಗ್ಯ,ಆಹಾರ, ಜವಾಬ್ದಾರಿ' ಕೃತಿಯಲ್ಲಿ ಕಾಣುತ್ತದೆ. ಕೃತಿಯಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಆರೋಗ್ಯದ ಕುರಿತಾಗಿ ಮಾರ್ಗದರ್ಶಿ ಲೇಖನಗಳಿವೆ. 'ಉತ್ತಮ ಆರೋಗ್ಯಕ್ಕಾಗಿ ಅನುಸರಿಸಬೇಕಾದ ಸರಳ ಸೂತ್ರಗಳು' ಲೇಖನದಲ್ಲಿ ನಾವು ಆರೋಗ್ಯವಂತರಾಗಿರಲು ಅಗತ್ಯ ಸಾಕಷ್ಟು ಸರಳ, ಸುಲಭ ಸಲಹೆಗಳಿವೆ. ಪಾಲಿಶ್ ಮಾಡಿದ ಆಹಾರಗಳು, ಬಣ್ಣಗಳಿಂದ ನಮ್ಮನ್ನು ಸೆಳೆಯುವ ಆಹಾರಗಳು ಹೇಗೆ ಆರೋಗ್ಯವನ್ನು ಕೊಲ್ಲುತ್ತಿವೆ ಎಂಬ ವಿವರ ಸಿಗುತ್ತದೆ.

ಪ್ರಕೃತಿ ಚಿಕಿತ್ಸೆಯ ಮಾಹಿತಿಯನ್ನು ನೀಡುವ ಲೇಖನವೂ ಇದೆ. ಸಾಮಾನ್ಯವಾಗಿ ಕಂಡುಬರುವ ಹಲವು ಕಾಯಿಲೆಗಳು ಹಾಗೂ ಅವುಗಳ ನಿವಾರಣೆ ಕ್ರಮಗಳು ಆರೋಗ್ಯದ ಕೈಪಿಡಿಯಂತಿದೆ. ಆಹಾರ ಪದ್ಧತಿ ನಮ್ಮ ಆರೋಗ್ಯದ ಮೇಲೆ ಎಷ್ಟು ಪರಿಣಾಮ ಬೀರಬಲ್ಲದು ಎಂಬುದನ್ನು ಇಲ್ಲಿ ಹೇಳಲಾಗಿದೆ. ಕೃತಿಯ ಎರಡನೇ ಅಧ್ಯಾಯ 'ನಮ್ಮ ಆಹಾರ'ಕ್ಕೆ ಮೀಸಲಾಗಿದೆ. ನಾವು ದಿನನಿತ್ಯ ಸೇವಿಸಬೇಕಾದ ಆಹಾರದಲ್ಲಿನ ಬದಲಾವಣೆಗಳನ್ನು ವಿವರಿಸಲಾಗಿದೆ. ಯಾವ್ಯಾವ ಆಹಾರದಿಂದ ದೇಹಕ್ಕೆ ಎಷ್ಟು ಪ್ರಯೋಜನವಿದೆ, ಯಾವ ಕಾಯಿಲೆಯವರು ಯಾವ ರೀತಿಯ ಆಹಾರ ಸ್ವೀಕರಿಸಬೇಕೆಂಬ ಸಮಗ್ರ ಮಾಹಿತಿ ಈ ಅಧ್ಯಾಯದಲ್ಲಿ ಸಿಗುತ್ತದೆ.

ಮೂರನೇ ಅಧ್ಯಾಯಲ್ಲಿ ಉಪವಾಸದ ಕುರಿತ ವಿವರವಿದೆ. ಉಪವಾಸದ ಕ್ರಮಗಳು, ಅದರ ಪ್ರಯೋಜಗಳನ್ನು ತಿಳಿಸಲಾಗಿದೆ. ನಾಲ್ಕನೆ ಅಧ್ಯಾಯದಲ್ಲಿ ಧ್ಯಾನ ಮತ್ತು ಅದನ್ನು ಕೈಗೊಳ್ಳುವ ಮುನ್ನ ಅನುಸರಿಸಬೇಕಾದ ಕ್ರಮಗಳಿವೆ. ಐದನೇ ಅಧ್ಯಾಯದಲ್ಲಿ ಸ್ವಸ್ಥ ಸಮಾಜದ ನಾಗರಿಕರಾಗಿ ನಮ್ಮ ಜವಾಬ್ದಾರಿಗಳನ್ನು ವಿವರಿಸಲಾಗಿದೆ. ಹೊಸದಾಗಿ ನೈಸರ್ಗಿಕ ಕೃಷಿ ಮಾಡುವರಿಗೆ ಮಾರ್ಗದರ್ಶಿ ಸ್ವರೂಪದ ಲೇಖನವಿದೆ. ಬೆಳೆಯನ್ನು ಹೇಗೆ ವಿಷಯುಕ್ತವಾಗಿಸಲಾಗುತ್ತಿದೆ ಎಂಬ ಮಾಹಿತಿಯುತ ಲೇಖನ ಇಲ್ಲಿ ಕಾಣುತ್ತದೆ. ಕೃತಿಯ ಕೊನೆಯ ಅಧ್ಯಾಯದಲ್ಲಿ ರಾಸಾಯನಿಕ ವಸ್ತುಗಳಿಗೆ ನಾವೆಷ್ಟು ಒಗ್ಗಿಕೊಂಡಿದ್ದೇವೆ ಎಂಬುದನ್ನು ವಿವರಿಸುವ ಬರಹಗಳು ಕಾಣಿಸುತ್ತವೆ. ಇಡೀ ಕೃತಿ ಪಿ.ಪಿ.ತಮ್ಮಯ್ಯ ಅವರ ದೃಷ್ಟಿಕೋನವಾಗಿದ್ದು, ಇಲ್ಲಿನ ಯಾವುದೇ ಅಂಶಗಳಿಗೆ ವೈಜ್ಞಾನಿಕ ವಿವರಣೆ ಇಲ್ಲ. ಒಂದು ರೀತಿಯ ನಂಬಿಕೆ ಮೇಲೆ ಬಳಸುವ ನಾಟಿ ಪದ್ಧತಿಯಂತೆ. ಇದರಲ್ಲಿ ನಂಬಿಕೆಯಿಟ್ಟು, ಆರೋಗ್ಯ ಮತ್ತು ಪರಿಸರ ಕಾಳಜಿ ಹೊಂದಿರುವವರಿಗೆ ಕೈಪಿಡಿಯಂತಹ ಕೃತಿ. ❖



ನಮ್ಮ ಆರೋಗ್ಯ, ಆಹಾರ, ಜವಾಬ್ದಾರಿ
ನಿರೂಪಣೆ: ಕೆ.ಸಿ.ವೆಂಕಟೇಶ
ಪ್ರ: ಶಿವಯೋಗ್ ದೇಸೀ ಗೋಶಾಲೆ
ಸಂ:8494946910


ಪು: 244 ₹250

ಹಲವು ಭಾವಗಳ ಗುಲಾಬಿ ಪಕಳೆಗಳು

ಪತ್ರಕರ್ತ, ಕತೆಗಾರ ಕಂ.ಕ.ಮೂರ್ತಿಯವರು ತಮ್ಮ ಹೊಸ ಕಥಾ ಸಂಕಲನ 'ಒಂದು ಗುಲಾಬಿಯ ಕತೆ'ಯಲ್ಲಿ ವ್ಯಕ್ತಿಯ ಆತ್ಮವಿಕಸನ, ವೈರುಧ್ಯ, ಅಧಃಪತನದ ಅಂಶಗಳನ್ನು ಒರೆಗೆಹಚ್ಚುವ ಪ್ರಯತ್ನ ನಡೆಸಿದ್ದಾರೆ. ಇದರಲ್ಲಿ ಒಟ್ಟು 11 ಕತೆಗಳಿವೆ. ಪತ್ರಕರ್ತರಾಗಿ ಕಂಡ ಎಷ್ಟೋ ವಿದ್ಯಮಾನಗಳು, ಘಟನೆಗಳು ಮತ್ತು ಅನುಭವಗಳು ಕಥಾರೂಪ ತಾಳಿವೆ. ಮಲೆನಾಡಿನ ಪ್ರದೇಶದ 1980ರ ದಶಕದ ಗಾಢ ಛಾಯೆ ಇದರಲ್ಲಿದೆ.

'ಗುಲಾಬಿಯ ಕತೆ' ಸರಳವಾಗಿ ಕಂಡರೂ ಪ್ರೀತಿಯ ರಮ್ಯತೆ ಹೃದಯಕ್ಕೆ ತಟ್ಟುವಂತಿದೆ. ಇದರಲ್ಲಿ ಪ್ರೀತಿಗಾಗಿ ಯಾವ ಸಾಹಸಕ್ಕೂ ಕೈಹಾಕುವ ಯುವಕನಿದ್ದಾನೆ. ಆತ ಪ್ರಿಯತಮೆಗಾಗಿ ಗುಲಾಬಿ ಹೂವಿನ ಕಳ್ಳತನ ಆರಂಭಿಸುತ್ತಾನೆ. ಕತೆಯ ದ್ವಿತೀಯಾರ್ಧ ಸೊಗಸಾದ ಭಿನ್ನ ತಿರುವನ್ನೇ ಪಡೆದುಕೊಳ್ಳುತ್ತದೆ. 80ರ ದಶಕದಲ್ಲಂತೂ ಒಂದೇ ಒಂದು ಕೆಂಪು ಗುಲಾಬಿ ಪ್ರೀತಿಸುವವರ ಪಾಲಿಗೆ ಅಮೂಲ್ಯ ಪುಷ್ಪವೇ ಆಗಿತ್ತು. ಹೀಗಾಗಿಯೇ ಇರಬೇಕು 'ಗುಲಾಬಿ' ಹೆಸರುಗಳಲ್ಲೇ ಒಂದಷ್ಟು ಕನ್ನಡ ಚಿತ್ರಗಳು, ಹಾಡುಗಳು ಹಿಟ್ ಆಗಿದ್ದವು. ಇಂದಿನ ತಲೆಮಾರಿಗೆ ಗುಲಾಬಿಯ ಮಹತ್ವ ಅಷ್ಟಾಗಿ ಗೊತ್ತಾಗದು. ಈಗ ಪ್ರೀತಿಗಾಗಿ ಹಾದಿ ಬೀದಿಯಲ್ಲೂ ಗುಲಾಬಿಗಳು ಸಿಗುತ್ತವೆ. ಕಾಲಘಟ್ಟಗಳು ಬದಲಾದಂತೆ ಪ್ರೀತಿಯ ರೀತಿ- ರಿವಾಜುಗಳೂ ಬದಲಾಗುತ್ತವೆ. ಆದರೆ, ಅದರ 'ಭಾವ' ಬದಲಾಗದು ಎಂಬುದು ಕತೆಯಲ್ಲಿ ಸೂಚ್ಯವಾಗಿದೆ.

'ಮುಖವಾಡ ಮನುಷ್ಯರು' ನಮ್ಮ ನಡುವಿನ ಖ್ಯಾತನಾಮರ ಮುಖವಾಡವನ್ನು ಕಳಚುತ್ತದೆ. ನಿರೂಪಣಾಕಾರ ಇಲ್ಲಿ ಚಿಟ್ಟೆಯ ರೂಪದಲ್ಲಿ ಪ್ರವೇಶಿಸಿ ಖ್ಯಾತರ ಮುಂದೆ ಮಾನವನಾಗಿ ರೂಪಾಂತರ ಹೊಂದಿ, ಇರಿಸುಮುರಿಸಾಗುವಂತಹ ಪ್ರಶ್ನೆಗಳನ್ನು ಎತ್ತುತ್ತಾರೆ. ಕಾವಿಗಳು, ಖ್ಯಾತರು, ಪ್ರಖ್ಯಾತರ ಆಂತರ್ಯ ಅನಾವರಣಗೊಳಿಸುವ ಪರಿ ವಿಶಿಷ್ಟ. 'ಸದಾ ಮುಖವಾಡದಲಿ ಬದುಕಿದ ಮನುಷ್ಯನನ್ನು ಕನ್ನಡಿಯೂ ನಂಬಲಿಲ್ಲ' ಎಂಬ ಮಾತುಗಳೊಂದಿಗೆ ಆ ಕತೆಗೆ ತೆರೆ ಬೀಳುತ್ತದೆ. ಇದೇ ರೀತಿ 'ಗಾಳಿಗೆ ಬೆರೆತ ವಿಷ', 'ನೀಲಿ ಬಣ್ಣದ ಶೂ', 'ದೇವರು ಬರೆದ ಚಿತ್ರ' ಕತೆಗಳು ಕುತೂಹಲಕಾರಿಯಾಗಿವೆ. ❖



ಒಂದು ಗುಲಾಬಿಯ ಕಥೆ
ಲೇ: ಕಂ.ಕ ಮೂರ್ತಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್
ಸಂ:9945939436

ಪು: 112 ₹150

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದಾನರುಚಿ

ದಾನರುಚಿ (ನಾ). 1. ದಾನ ಕೊಡುವುದರಲ್ಲಿ ಇರುವ ಆಸಕ್ತಿ. 2. ದಾನ ಕೊಡಲು ಆಸಕ್ತಿಯುಳ್ಳ ವ್ಯಕ್ತಿ; ದಾನ ಮಾಡುವ ಅಪೇಕ್ಷೆಯುಳ್ಳ ವ್ಯಕ್ತಿ; ಉದಾರಿ.

ಪಂಚವಟಿಯಲ್ಲಿ ಪರ್ಣಕುಟಿಯ ಮುಂದೆ ಸೀತಾರಾಮರು ಕುಳಿತಿದ್ದಾಗ, ಮುಗಿಲತೇರಿನಿಂದ ಮಂಜುಮಯ ಸ್ತ್ರೀ ಮೂರ್ತಿ ಮೂಡಿಬರುತ್ತದೆ. ಅದನ್ನು ಕುತೂಹಲದಿಂದ ನೋಡುತ್ತಾರೆ. ವಿನಯ ವಯ್ಯಾರದಿಂದ ಬಂದ ಆ ಸ್ತ್ರೀ ರಾಮನಿಗೆ 'ಕೋಸಲೇಶ್ವರ, ನಿನಗೆ ಸ್ವಾಗತ. ನಮ್ಮ ದಕ್ಷಿಣಾವನಿಗೆ ನೀನು ಅತಿಥಿ. ನಾನು ಲಂಕೇಶ್ವರನ ಸಹೋದರಿ ಚಂದ್ರನಖಿ' ಎಂದು ಪರಿಚಯಿಸಿಕೊಳ್ಳುತ್ತಾಳೆ. ಪರಸ್ಪರ ಪರಿಚಯಾತ್ಮಕ ಮಾತುಕತೆಯಲ್ಲಿ ರಾಮಚಂದ್ರನು 'ವ್ರತದ ಮುಡಿಗೆ ಮೈತ್ರಿ ಪರಿಮಳದ ಹೂ. ಅದಕ್ಕಾಗಿ ನಾನು ಹಗೆತನವನ್ನು ಅಳಿಸುತ್ತ, ಅಕ್ಕರೆಯನ್ನು ವರ್ಧಿಸಲು ದೊರೆ ಗದ್ದುಗೆಯನ್ನು ತೊರೆದು ಇಲ್ಲಿಗೆ ಬಂದಿರುವೆ' ಎಂದು ತನ್ನ ಸಹಜ ನೇಹಭಾವವನ್ನು ವ್ಯಕ್ತಪಡಿಸುವನು.

ಅದಕ್ಕೆ ಉತ್ತರಿಸುವ ಚಂದ್ರನಖಿಯ ನುಡಿಯಲ್ಲಿ ರಾಮನನ್ನು 'ದಾನರುಚಿ' ಎಂದು ಕರೆದು ತನಗೆ ಪತಿಯಾಗುವಂತೆ ಒತ್ತಾಯಿಸುವಳು. ಕುವೆಂಪು ಅವರು ರಾಮನ ದಾನದ ಬಗೆಗಿನ ಆಸಕ್ತಿ, ಉದಾರ ಗುಣವನ್ನು 'ದಾನರುಚಿ' ಎಂಬ ಪದ ಸೃಷ್ಟಿಸಿ ಅವನ ವ್ಯಕ್ತಿತ್ವದ ವಿಶೇಷ ಲಕ್ಷಣವನ್ನು ತಿಳಿಸಿದ್ದಾರೆ.

'ನಿನ್ನವೋಲಾನುಮದನರಸಿ ಬಂದಿಹೆನಿಂದು
ನಿನ್ನೆಡೆಗೆ, ಕೇಳ್, ಸರಸಿ. ನೀಂ ಕರುಣಿ, ಧರ್ಮಮತಿ,
ದಾನರುಚಿ. ನಾಥನಿಲ್ಲದ ತರುಣಿಯಾಂ. ನನ್ನ ಬಾಳ್
ಬರಿಯ ಪಾಳ್...'

ಭಾರತೀಯ ಕಾವ್ಯಗಳಲ್ಲಿ 'ಮಹೋಪಮೆ' ಇದೆ

ಪ್ರತಿಕ್ರಿಯೆ

ಜಿ. ಕೃಷ್ಣಪ್ಪನವರ 'ಕುವೆಂಪು ಅವರ ಪದಸೃಷ್ಟಿ' ಅಂಕಣವು ಕುವೆಂಪು ಅವರ ಪ್ರತಿಭೆಯನ್ನು ಮತ್ತು ಅವರು ಕನ್ನಡ ಭಾಷೆಗೆ ನೀಡಿರುವ ಕೊಡುಗೆಗಳನ್ನು ಓದುಗರಿಗೆ ನಿಬ್ಬೆರಗಾಗುವಂತೆ ಪರಿಚಯಿಸುತ್ತಿದೆ. ಆದರೆ ಕಳೆದ ವಾರದ 'ಪದಸೃಷ್ಟಿ' ಅಂಕಣದಲ್ಲಿ ಅವರು 'ಮಹೋಪಮೆ' ಎಂಬ ಪದವನ್ನು ಪರಿಚಯಿಸಿದ್ದರು. 'ಅಂತಹ ಮಹೋಪಮೆಯ ಪ್ರಯೋಗ ನಮ್ಮ ಭಾರತೀಯ ಕಾವ್ಯಗಳಲ್ಲಿ ಇಲ್ಲ' ಎಂದಿದ್ದರು. ಪಾಶ್ಚಾತ್ಯ ಕಾವ್ಯ ಮೀಮಾಂಸೆಯ 'ಎಪಿಕ್ ಸಿಮಿಲಿ'ಯನ್ನೇ ಕುವೆಂಪು 'ಮಹೋಪಮೆ' ಎಂದು ಕರೆದಿದ್ದಾರೆ. ಮಹೋಪಮೆಯ ಬಗ್ಗೆ ಸ್ವತಃ ಕುವೆಂಪು ಅವರೇ 'ತಪೋನಂದನ' ಕೃತಿಯಲ್ಲಿ ವಿಸ್ತೃತವಾದ ಒಂದು ಲೇಖನವನ್ನು ಬರೆದಿದ್ದಾರೆ.

ಭಾರತೀಯ ಸಂದರ್ಭದಲ್ಲಿ 'ಮಹೋಪಮೆ' ಎಂಬುದು ಹೊಸ ಪದವಲ್ಲ. ನಮ್ಮ ಕಾವ್ಯಗಳಲ್ಲಿ ಆ ಪದ ಈಗಾಗಲೇ ಬಳಕೆಯಲ್ಲಿದೆ. ವಿಷ್ಣುಪುರಾಣದಲ್ಲಿ 'ಮಹೋಪಮಾ' ಎಂಬ ನದಿಯ ವಿವರ ಬರುತ್ತದೆ (ಸೆಲು ಸುವಾಮಾ ವೇದಾಶ್ವಾ ಹರಿಶ್ರವಾ ಮಹೋಪಮಾ–2.3). 'ಅವಲೋಕಿತೇಶ್ವರ ಸ್ತೋತ್ರ'ವೆಂಬ ಬೌದ್ಧ ಗ್ರಂಥದಲ್ಲೂ 'ಮಹೋಪಮಾ' ಎಂಬ ಪದ ಸಿಗುತ್ತದೆ (ಮಹಾವಿಶ್ವಾ ಮಹಾಲೋಕಾ ಮಹಾಕಾಯಾ ಮಹೋಪಮಾ–4).

ಬೌದ್ಧಗ್ರಂಥದಲ್ಲಿ ಆ ಪದ ಬೋಧಿಸತ್ವನ ನೂರು ಹೆಸರುಗಳಲ್ಲಿ ಒಂದು ಹೆಸರಾಗಿದೆ. ಆದರೆ ಕುವೆಂಪು ಅದನ್ನು ಒಂದು ಅಲಂಕಾರದ ಅರ್ಥದಲ್ಲಿ ಬಳಸಿದ್ದಾರೆ. ಹಾಗಾಗಿ ಅದನ್ನು ಹೊಸಪದ ಎಂದಲ್ಲದಿದ್ದರೂ ಕಾವ್ಯಮೀಮಾಂಸೆಯ ಒಂದು ಹೊಸ ಪರಿಭಾಷೆ ಎಂದು ಪರಿಗಣಿಸಬಹುದು ಎಂದು ವಾದಿಸಲು ಅವಕಾಶವಾಗುವುದಿಲ್ಲ. ಏಕೆಂದರೆ ಕುವೆಂಪು ಅವರಿಗಿಂತಲೂ ಬಹಳ ಹಿಂದೆಯೇ ಖ್ಯಾತ ಬಂಗಾಳೀ ಕವಿ ಮೈಕಲ್ ಮಧುಸೂದನ ದತ್ತ ಅವರು ತಮ್ಮ 'ಮೇಘನಾಥ ವಧೆ' ಎಂಬ ಕಾವ್ಯದಲ್ಲಿ ಮಹೋಪಮೆಯನ್ನು (ಅಥವಾ ಕುವೆಂಪು ಬಳಸುವ 'ಹೋಮರೋಪಮೆ'ಯನ್ನು) ಪ್ರಯೋಗಿಸಿದ್ದರು (ಹುಡುಕಿಕೊಂಡು ಹೋದರೆ ಭಾರತೀಯ ನವೋದಯ ಸಾಹಿತ್ಯದಲ್ಲಿ ಇಂತಹ ಇನ್ನೂ ಹಲವು ನಿದರ್ಶನಗಳು ಸಿಗಬಹುದು). ಹೋಮರ್ ಮತ್ತು ಮಿಲ್ಟನ್ ಬಳಸಿರುವ 'ಎಪಿಕ್ ಸಿಮಿಲಿ'ಗಳು ಮೈಕಲ್ ಮಧುಸೂದನ ದತ್ತರ ಮೇಘನಾದ ವಧೆಯಲ್ಲೂ ಕಾಣಸಿಗುತ್ತವೆ ಎಂದು ಅವರ ಕಿರಿಯ ಸಮಕಾಲೀನರಾದ ರವೀಂದ್ರನಾಥ ಟ್ಯಾಗೋರ್ ಮತ್ತು ಬಂಕಿಮಚಂದ್ರ ಚಟರ್ಜಿಯವರು ಗುರುತಿಸಿದ್ದರು. ಹೊಸಗನ್ನಡದ ಮಟ್ಟಿಗಂತೂ ಮಹೋಪಮೆ ಕುವೆಂಪು ಅವರ ಪ್ರತಿಭಾ ಸೃಷ್ಟಿಯಾಗಿದೆ ಎಂಬುದು ನಿರ್ವಿವಾದ. ಹಾಗಾಗಿ ಮಹೋಪಮೆ ಎಂಬ ಪದವನ್ನು ಹೊಸ ಪದವೆಂದು ಅಥವಾ ಹೊಸ ಪರಿಕಲ್ಪನೆಯೆಂದು ಪರಿಗಣಿಸಲು ಸಾಧ್ಯವೇ ಎಂಬ ಕುರಿತು ಪರ್ಯಾಲೋಚಿಸಬೇಕಿದೆ.

–ಟಿ.ಎನ್. ವಾಸುದೇವಮೂರ್ತಿ

ಮನ ಕದಡಿದ 'ನಕ್ಷತ್ರದ ಧೂಳು'

ರಮೇಶ ಗಬ್ಬೂರ್

ಗಂಗಾವತಿಯ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ 'ನಕ್ಷತ್ರದ ಧೂಳು' ನಾಟಕ ಪ್ರದರ್ಶಿತವಾಯಿತು. ಹೈದರಾಬಾದಿನ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾಗಿದ್ದ ರೋಹಿತ್ ವೇಮುಲ ಅವರ ಜೀವನದ ನಿಜ ಘಟನೆ ಆಧರಿಸಿದ ನಾಟಕ ಇದು. ಒಂದೇ ಒಂದು ಪಾತ್ರ ರಂಗವನ್ನು ಆವಾಹಿಸಿಕೊಂಡು ಒಂದು ಗಂಟೆಗೂ ಹೆಚ್ಚು ಅವಧಿಯ ಪ್ರದರ್ಶನ ನೀಡುವ ಸವಾಲಿತ್ತು. ಹರ್ಷಕುಮಾರ ಕುಗ್ವೆ ಬರೆದ, ಪ್ರವೀಣ್ ರೆಡ್ಡಿ ಗುಂಜಳ್ಳಿ ನಿರ್ದೇಶಿಸಿದ ಈ ನಾಟಕದಲ್ಲಿ ರಾಯಚೂರಿನ 'ರಂಗಕನಸು' ತಂಡದ ಲಕ್ಷ್ಮಣ ಮಂಡಲಗೇರ ಅವರ ಅಭಿನಯವಿತ್ತು.

ಆತ್ಮಕಥಾ ಮಾದರಿಯ ನಾಟಕವನ್ನು ನೋಡುತ್ತಿದ್ದಾಗ ತಂತಾನೆ ಕಣ್ಣಿನಿಂದ ಜಾರಿ ಕೆನ್ನೆಗೆ ಹನಿಗಳು ಇಳಿದವು. ರೋಹಿತ್ ವೇಮುಲ ಅವರ ಬದುಕಿನ ಸಂಕಟವೇ ನಮ್ಮ ಸಂಕಟವೂ ಆಗಿ, ನಮಗರಿಯದೆ ಹೊಡೆವ ಚಪ್ಪಾಳೆಗಳು ಹೊಸ ಲೋಕಕ್ಕೆ ಕರೆದುಕೊಂಡು ಹೋದವು.

ರಾಯಚೂರಿನ 'ರಂಗಕನಸು' ತಂಡ ಸಮುದಾಯದ ಮತ್ತು ಸಾಕ್ಷರತಾ ಆಂದೋಲನದ ಬೀದಿ ನಾಟಕಗಳಿಂದ ಪ್ರಭಾವ ಬೀರಿದಂಥದ್ದು. ಹವ್ಯಾಸಿ ಮತ್ತು ಜನಪದ ಗ್ರಾಮೀಣ ರಂಗಭೂಮಿಯನ್ನು ಕಟ್ಟಿ ಮುನ್ನಡೆಸಿದ ನೆಲ ರಾಯಚೂರು. ಇಲ್ಲಿ 'ನಕ್ಷತ್ರ ಧೂಳು' ಸಹಜವಾಗಿಯೇ ಗಮನಸೆಳೆಯಿತು.

ಹಾಸ್ಟೆಲ್ ವಿದ್ಯಾರ್ಥಿಯಾದ ರೋಹಿತ್ ವೇಮುಲ ತಮ್ಮ ಚಿಂತನೆಯ ಮೂಲಕ ಈ ಲೋಕದ ಸಂಕಟಗಳನ್ನು ಅನಾವರಣ ಮಾಡುತ್ತಾ, ನಮ್ಮ ಮುಂದಿರುವ ಜವಾಬ್ದಾರಿ ಏನೆಂದು ತಿಳಿಸುವ ಕ್ರಮವು ನಾಟಕದಲ್ಲಿತ್ತು. ನೋಡುಗರಿಗೆ ತಮ್ಮ ಬದುಕುಗಳನ್ನೂ ಪ್ರಶ್ನಿಸಿಕೊಳ್ಳುವಂತೆ ಮಾಡುವ ತಂತ್ರವಿದು. ವರ್ತಮಾನದ ಸಂದರ್ಭದಲ್ಲಿ ಜಾತೀಯತೆಯನ್ನು ಮೀರಲಾಗದ ಈ ಸಮಾಜವು ದಲಿತ ವಿದ್ಯಾರ್ಥಿಗಳನ್ನು ಸಂಶೋಧನೆಯಿಂದ, ಓದಿನಿಂದ ದೂರ ಇಡಲು ಮಾಡಿದ ಹುನ್ನಾರವನ್ನು ನಾಟಕ ಸೂಕ್ಷ್ಮವಾಗಿ ಅನಾವರಣಗೊಳಿಸಿದೆ. ಮಾರ್ಕ್ಸ್, ಅಂಬೇಡ್ಕರ್, ಫುಲೆ, ಪೆರಿಯಾರ್ ಅವರ ಆದರ್ಶಗಳನ್ನು ಇಟ್ಟುಕೊಂಡ ಒಬ್ಬ ವಿದ್ಯಾರ್ಥಿಯ ಕಷ್ಟದ ಕಥೆಯನ್ನು ಬಿಚ್ಚಿಟ್ಟಿದೆ.

ಸಮಾಜೋ-ರಾಜಕೀಯದಿಂದ ಸ್ವಾರ್ಥಪರವಾದ ಬೇರೆ ಬೇರೆ ಸಂಘಟನೆಗಳು ವಿದ್ಯಾರ್ಥಿ ಸಂಘಟನೆಗಳನ್ನು ಒಡೆಯುತ್ತಲೇ ಕೆಲವರನ್ನು ಬೀದಿಯಲ್ಲಿ ತಂದು ನಿಲ್ಲಿಸುತ್ತವೆ. ರೋಹಿತ್ ವೇಮುಲ ಮತ್ತವರ ಗೆಳೆಯರು ಹಾಸ್ಟೆಲಿನಿಂದ ಹೊರದಬ್ಬಿಸಿಕೊಳ್ಳುವ ದೃಶ್ಯ ಇದನ್ನೇ ಅರುಹುವುದು. ಕೌದಿಯಿಂದ ಹೊಲಿದ ವೆಲಿವಾಡ ಟೆಂಟಿನಲ್ಲಿ ಕುಳಿತು ಪ್ರತಿಭಟಿಸುವ ಮೂಲಕ ಅಂಬೇಡ್ಕರ್‌ವಾದದ ಆಶಯಗಳನ್ನು ಮತ್ತೆ ಮುನ್ನಲೆಗೆ ತರುತ್ತಾರೆ. ಬಾಲ್ಯದಲ್ಲಿ ಜಾತಿಯ ಕಾರಣಕ್ಕಾಗಿ ಹೊರ ದಬ್ಬಿಸಿಕೊಂಡವರು ತಂದೆಯಿಂದ ದೂರವಾಗಿ, ಅಮ್ಮ ಅನುಭವಿಸಿದ ಅಸ್ಪೃಶ್ಯತೆಯ ವಾಸನೆ ವಿಶ್ವವಿದ್ಯಾಲಯಕ್ಕೂ ತಲುಪಿ,ರೋಹಿತ್ ಅಲ್ಲಿಂದ ಹೊರಹಾಕುವಂತೆ ಮಾಡುತ್ತದೆ. ಕೇಂದ್ರ ಮಂತ್ರಿಗಳ ರಾಜಕೀಯ, ವಿಶ್ವವಿದ್ಯಾಲಯದ ಕುಲಪತಿಗಳ ಜಾತಿ ಲೆಕ್ಕಾಚಾರಗಳು ಆತನನ್ನು ಬಸವಳಿಯುವಂತೆ ಮಾಡುತ್ತವೆ. ಬಾರದ ಸ್ಕಾಲರ್‌ಶಿಪ್ ಮತ್ತು ಕಿರುಕುಳಗಳಿಂದ ನೊಂದು ಈ ವ್ಯವಸ್ಥೆಯಿಂದ ಬೇಸತ್ತು ತಮ್ಮ ಹೋರಾಟಕ್ಕೆ ಅಂತಿಮ ಶರಾ ಬರೆಯುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ರೋಹಿತ್ ಅಗಲಿದ ನಂತರ ಅಂಬೇಡ್ಕರ್‌ವಾದದ ಆಶಯವನ್ನು ದಲಿತ ಮತ್ತು ಶೋಷಿತ ಲೋಕಕ್ಕೆ ಮತ್ತಷ್ಟು ಹತ್ತಿರವಾಗುವಂತೆ ಬಹುದೊಡ್ಡ ಹೋರಾಟ ರೂಪುಗೊಳ್ಳುತ್ತದೆ. ಲಕ್ಷ್ಮಣ ಮಂಡಲಗೇರಾ ಅವರ ಅಭಿನಯ ನೋಡುಗರನ್ನು ತನ್ಮಯರಾಗಿಸಿ, ಅರಿವಿನ ದೀಪವನ್ನು ಹಚ್ಚುವಂತಿದೆ. ಗೋಡೆಯ ಚಿತ್ರಗಳು, ಟೇಬಲ್ಲಿನ ಮೇಲಿಟ್ಟ ಪುಸ್ತಕಗಳು, ಆ ಬೆಳಕಿನ ಚಿತ್ತಾರಗಳು, ಅಭಿನಯ ಎಲ್ಲವೂ ಒಂದಕ್ಕೊಂದು ಪೂರಕ. ಇನ್ಸಾಫ್ ಹೊಸಪೇಟೆ ಸಂಗೀತ ಸಂಯೋಜನೆ ಗಮನಾರ್ಹ. ಹಾಡುಗಳು, ಜಂಬೆಯಿಂದ ಹೊಮ್ಮಿಸುವ ಶಬ್ದಗಳು ಕಾಡುತ್ತವೆ. ಭೈರವ ಕಲಬುರ್ಗಿ ಅವರ ಬೆಳಕಿನ ವಿನ್ಯಾಸವೂ ಔಚಿತ್ಯಪೂರ್ಣ. ❖



'ನಕ್ಷತ್ರದ ಧೂಳು' ಏಕವ್ಯಕ್ತಿ ನಾಟಕದ ದೃಶ್ಯ

ಗಾಂಧಿ ಸಿನಿಮಾಗಳ ಅಪರೂಪದ ಮ್ಯೂಸಿಯಂ

> ಭಾರತೀಯ ಚಿತ್ರರಂಗಕ್ಕೆ ನೂರು ವರ್ಷ ಸಂದಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಭಾರತದ ಪ್ರಮುಖ ಚಲನಚಿತ್ರ ತಯಾರಿಕಾ ಚಟುವಟಿಕೆಯ ತಾಣ ಮುಂಬೈನಲ್ಲಿ ಮ್ಯೂಸಿಯಂ ರೂಪಿಸಿದೆ. ಅಲ್ಲಿ ಗಾಂಧಿ ಹಾಗೂ ಚಲನಚಿತ್ರ ಸಂಗತಿ ಕುರಿತಂತೆ ಪ್ರತ್ಯೇಕ ವಿಭಾಗವೇ ಇದೆ.

ಎನ್. ಜಗನ್ನಾಥ ಪ್ರಕಾಶ್

ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ-ಪ್ರಪಂಚ ಕಂಡ ಪ್ರಖ್ಯಾತ ಸಮಾಜ ಪರಿವರ್ತಕರು. ಸತ್ಯಾಗ್ರಹ, ಉಪವಾಸ ಅಸಹಯೋಗ, ಅಹಿಂಸೆ ಎಂಬ ಅಸ್ತ್ರಗಳನ್ನು ಜಗತ್ತಿಗೆ ಕೊಟ್ಟ ಗಾಂಧೀಜಿ ಜನಮಾನಸದಲ್ಲಿ ಸೇರಿಹೋದವರು. ಮಾತು-ಬರವಣಿಗೆಯಿಂದ ಜನತೆಯೊಡನೆ ಸಂಭಾಷಿಸುತ್ತಿದ್ದ ಬಾಪು ಅವರಿಗೆ ಆಗಷ್ಟೇ ಆವಿಷ್ಕಾರಗೊಂಡಿದ್ದ ಕಲೆ-ವಿಜ್ಞಾನ ಒಳಗೊಂಡ ಸಂವಹನ ಮಾಧ್ಯಮ ಚಲನಚಿತ್ರದ ಬಗೆಗೆ ಒಲವಿರಲಿಲ್ಲ.

ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಕಣಕ್ಕೆ ಇಳಿಯುವ ಮೊದಲೇ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಅಸ್ತ್ರಗಳನ್ನು ಉಪಯೋಗಿಸಿ ಯಶಕಂಡು ಮಹಾತ್ಮ ಎನ್ನಿಸಿಕೊಂಡಿದ್ದ ಗಾಂಧೀಜಿ ಪ್ರಭಾವಶಾಲಿ ಸಂವಹನ ಮಾಧ್ಯಮ ಸಿನಿಮಾದಿಂದ ದೂರವಿದ್ದರೂ ಸಿನಿಮಾ ಅವರನ್ನು ಹಿಂಬಾಲಿಸುತ್ತಲೇ ಇತ್ತು. ಈಗಲೂ ಹಿಂಬಾಲಿಸುತ್ತಿದೆ.

ತಮ್ಮ ಜೀವಿತಾವಧಿಯಲ್ಲಿ ಒಂದೆರಡು ಸಿನಿಮಾ, ಅದೂ ಕೆಲವು ರೀಲುಗಳನ್ನು ಮಾತ್ರ ಮಹಾತ್ಮ ಗಾಂಧಿ ನೋಡಿದ್ದರು. ಆದರೆ, ಅವರ ಬಗ್ಗೆ, ಅವರ ಹೋರಾಟ-ಆದರ್ಶದ ಕುರಿತು ಬಂದಿರುವ ಚಲನಚಿತ್ರಗಳು ಅಸಂಖ್ಯ. ಜಗತ್ತಿನ ಅನೇಕ ಭಾಷೆಗಳ ಚಿತ್ರಗಳಲ್ಲಿ ಗಾಂಧಿ ಮೂಡಿಬಂದಿರುವುದು ವಿಶೇಷ. ಚಲನಚಿತ್ರಗಳನ್ನು ವಿರೋಧಿಸುತ್ತಿದ್ದ ಗಾಂಧಿ ಅವರ ಕುರಿತು ಹಲವು ಹತ್ತು ಚಿತ್ರಗಳು ತಯಾರಾಗಿರುವುದು ಆಸಕ್ತಿಕರ ವಿಷಯ.

ಜಗತ್ತಿನುದ್ದಕ್ಕೂ ಅನೇಕ ಬಗೆಯ ಪ್ರಭಾವಗಳನ್ನು ಬೀರಿರುವ ಬಾಪು, ಚಿತ್ರಜಗತ್ತಿನ ಮೇಲೂ ತಮ್ಮ ಪ್ರಭಾವ ಬೀರಿದ್ದಾರೆ.

ಪ್ರಪಂಚದಲ್ಲಿ ಅತಿ ಹೆಚ್ಚು ಚಲನಚಿತ್ರಗಳನ್ನು ತಯಾರಿಸುವ ರಾಷ್ಟ್ರವೆಂದು ಹೆಸರು ಮೂಡಿರುವ ಭಾರತೀಯ ಚಿತ್ರರಂಗಕ್ಕೆ ನೂರು ವರ್ಷ ಸಂದಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಭಾರತದ ಪ್ರಮುಖ ಚಲನಚಿತ್ರ ತಯಾರಿಕಾ ಚಟುವಟಿಕೆಯ ತಾಣ ಮುಂಬೈನಲ್ಲಿ ರೂಪಿಸಿರುವ ಮ್ಯೂಸಿಯಂನಲ್ಲಿ ಗಾಂಧಿ ಹಾಗೂ ಚಲನಚಿತ್ರ ಸಂಗತಿ ಕುರಿತಂತೆ ಪ್ರತ್ಯೇಕ ವಿಭಾಗವೇ ಇದೆ. ಇಲ್ಲಿ ಗಾಂಧೀಜಿ ತಿರುಗಿಸುತ್ತಿದ್ದ ರಾಟೆಯೂ ಇದೆ. ಬಾಪು ಅವರನ್ನು ಕುರಿತು ತಯಾರಾದ ಚಲನಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಪ್ರೊಜೆಕ್ಟರ್ ಪ್ರತಿಕೃತಿಯೂ ಇದೆ.

ಮಹಾತ್ಮ ಗಾಂಧಿ ಅವರನ್ನು ಕುರಿತಂತೆ ಮೊಟ್ಟಮೊದಲ ಸಾಕ್ಷ್ಯಚಿತ್ರವನ್ನು ನಿರ್ಮಿಸಿದವರು ಮದ್ರಾಸ್‌ನ ಪತ್ರಕರ್ತ ಎ.ಕೆ. ಚೆಟ್ಟಿಯಾರ್. ಗಾಂಧಿ ಭೇಟಿ ನೀಡಿದ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಸ್ಥಳಗಳಿಗೆ ಹೋಗಿ ಚಿತ್ರಿಕೆಗಳನ್ನು, ಮಾಹಿತಿಯನ್ನು ಏಕಾಂಗಿಯಾಗಿ ಸಂಗ್ರಹಿಸಿ ಅಪಾರ ಹಣ ವ್ಯಯಿಸಿದ್ದ ಚೆಟ್ಟಿಯಾರ್ ಅವರ 'ಮಹಾತ್ಮ ಗಾಂಧಿ' ಸಾಕ್ಷ್ಯಚಿತ್ರ ಭಾರತ ಸ್ವಾತಂತ್ರ್ಯ ಪಡೆಯುವ ಮುನ್ನ, ಬಾಪೂ ಬದುಕಿರುವಾಗಲೇ ಬಿಡುಗಡೆಯಾಯಿತು.

ನಿಖರವಾದ ಮಾಹಿತಿ, ಉತ್ತಮ ಚಿತ್ರಕಥೆ, ಒಳ್ಳೆಯ ಸಂಗೀತ, ಗೀತೆಗಳು, ಛಾಯಾಗ್ರಹಣ ಇದ್ದ ಎ.ಕೆ. ಚೆಟ್ಟಿಯಾರ್ ಅವರ 'ಮಹಾತ್ಮ ಗಾಂಧಿ' ಸಾರ್ವಜನಿಕವಾಗಿ ಬಿಡುಗಡೆಯಾದರೂ (1940ರ ಆಗಸ್ಟ್ 23) ಅದರ ಪ್ರತಿ ಈಗ ಅಲಭ್ಯ. ಸಾಕ್ಷ್ಯಚಿತ್ರದ ಒಂದೆರಡು ತುಣುಕುಗಳಷ್ಟೆ ಇವೆ. ಇದರ ನಿರ್ಮಾಣಕ್ಕಾಗಿ ಪಟ್ಟ ಪಡಿಪಾಟಲಿನ ಬಗ್ಗೆ ಚೆಟ್ಟಿಯಾರ್ ಅವರೇ ಧಾರಾವಾಹಿಯಾಗಿ ಬರೆದಿದ್ದು, ಆ ಮಾಹಿತಿಯಿಂದ ಮಾತ್ರ ಈ ಸಾಕ್ಷ್ಯಚಿತ್ರ ಜೀವಂತವಾಗಿದೆ. ಅಟೆನ್‌ಬರೊ ಅವರ 'ಗಾಂಧಿ' ಸಿನಿಮಾ ಬಿಡುಗಡೆಯಾಗುವವರೆಗೂ ಅನೇಕ ಭಾರತೀಯ ಭಾಷೆಗಳು ಹಾಗೂ ಆಂಗ್ಲ ಭಾಷೆಯಲ್ಲೂ ಸಿದ್ಧವಾಗಿ ಪ್ರದರ್ಶನಗೊಂಡ ಸಾಕ್ಷ್ಯಚಿತ್ರ ಇದಾಗಿತ್ತು.

ಭಜನೆ, ಗೀತಗಾಯನ ಇಷ್ಟಪಡುತ್ತಿದ್ದ ಬಾಪೂಜಿ ಕತ್ತಲಿನಲ್ಲಿ ಪರದೆ ಮೇಲೆ ಮೂಡುತ್ತಿದ್ದ ಸಿನಿಮಾವನ್ನು ಇಷ್ಟಪಟ್ಟಿರಲಿಲ್ಲ. ಇದನ್ನು 'ಹರಿಜನ್' ಪತ್ರಿಕೆಯಲ್ಲಿ ಕಾರಣಗಳ ಸಹಿತ ಬರೆದಿದ್ದರು.

ವಿಜಯ ಭಟ್ ಅವರ ಹಿಂದಿ ಚಿತ್ರ 'ರಾಮರಾಜ್ಯ'ದ ಕೆಲ ರೀಲುಗಳನ್ನು ಗಾಂಧಿ ನೋಡಿದ್ದರು. ಅವುಗಳ ಪೋಸ್ಟರ್‌ಗಳು, ವಿಶ್ವವಿಖ್ಯಾತ ನಟ ಚಾರ್ಲಿ ಚಾಪ್ಲಿನ್ ಅವರೊಡನೆ ಆಗಿದ್ದ ಭೇಟಿ, ನಂತರ ಚಾಪ್ಲಿನ್ ತಯಾರಿಸಿದ ಮಾಡರ್ನ್ ಟೈಸ್ ಛಾಯಾಚಿತ್ರಗಳು, ಬಾಪೂಜಿ ಅವರ ತತ್ವಾದರ್ಶಗಳನ್ನು ಒಳಗೊಂಡ ಚಲನಚಿತ್ರಗಳ ಮಾಹಿತಿ, ಉತ್ತಮ ಛಾಯಾಚಿತ್ರಗಳು, ಸಿನಿಮಾ ಕುರಿತು ಬಾಪೂಜಿ ಬರೆದ ಬರಹಗಳಿರುವ ನಿಯತಕಾಲಿಕೆಗಳು- ಎಲ್ಲವೂ ಇಲ್ಲಿ ನೋಡಲು ಸಿಗುತ್ತವೆ.

ಗಾಂಧಿ ಹಾಗೂ ಚಲನಚಿತ್ರದ ನಡುವಿನ ಸಂಬಂಧವನ್ನು ವಿವರವಾಗಿ ತಿಳಿಹೇಳುವ ಈ ಪ್ರದರ್ಶನಾಂಗಣ ಮಕ್ಕಳಿಗೆ ಅಚ್ಚುಮೆಚ್ಚು. ❖



ಗಾಂಧಿ ಸಿನಿಮಾ ಮಾಹಿತಿಯ ಭಂಡಾರ ಚಿತ್ರಗಳು: ಎಸ್. ವಿಶ್ವೇಶ್ವರಪ್ಪ



ಚಾರ್ಲಿ ಚಾಪ್ಲಿನ್ ಅವರನ್ನು ಮಹಾತ್ಮ ಗಾಂಧಿ ಭೇಟಿಯಾಗಿದ್ದ ಸಂದರ್ಭದ ಫೋಟೊ

ಆ ವೃದ್ಧರ ಆರೈಕೆಗೆ...

1ನೇ ಪುಟದಿಂದ...

ಅಲ್ಲಿಯೇ ಇರುವ ಪರಶುರಾಮ ಮಂಗೇಶ್ವರ್ ಹೇಳುವ ಪ್ರಕಾರ, ಆರೈಕೆ ಬಯಸಿರುವ ವೃದ್ಧರ ಮನೆಯಲ್ಲೇ ಕೇರ್ ಟೇಕರ್‌ಗಳು ಇರಬೇಕು. ನಗರ ಪ್ರದೇಶದಲ್ಲಾದರೆ ಪ್ರತ್ಯೇಕ ಬಾಡಿಗೆ ಮನೆ ಪಡೆಯಬೇಕು. ಗ್ರಾಮಗಳಲ್ಲಿ ವೃದ್ಧರ ಮನೆಯಲ್ಲೇ ಒಂದು ಕೊಠಡಿ ಕೊಡುತ್ತಾರೆ. ಇಡೀ ದಿನ ಅವರ ಕಾಳಜಿಯ ಹೊರತಾಗಿ ಬೇರೆ ಯಾವುದೇ ಕೆಲಸ ಇರುವುದಿಲ್ಲ. ಹಿಬ್ರೂ ಭಾಷೆ ಕಲಿತು, ಇಸ್ರೇಲ್ ಆಹಾರ ಪದ್ಧತಿಗೆ ಹೊಂದಿಕೊಳ್ಳುವುದು ಮಾತ್ರ ದೊಡ್ಡ ಸವಾಲು.

ಆಸಕ್ತಿಕರ ಸಂಗತಿಯೆಂದರೆ, ಇಸ್ರೇಲಿಗರಲ್ಲಿ ದರ್ಪ, ದಬ್ಬಾಳಿಕೆ, ಅಹಂಕಾರದ ಮನೋಭಾವವಿಲ್ಲ. ಕೇರ್ ಟೇಕರ್‌ಗಳು ನಾಲ್ಕು ವರ್ಷ ಮೂರು ತಿಂಗಳವರೆಗೆ ಇಸ್ರೇಲ್‌ನಲ್ಲಿ ನೆಲೆ ನಿಲ್ಲಬೇಕು ಎಂಬ ನಿಯಮ ಪಾಲಿಸುವುದು ಕಡ್ಡಾಯವಿದೆ. ಚೆನ್ನಾಗಿ ಆರೈಕೆ ಮಾಡಿದರೆ ವೃದ್ಧರು ಸರ್ಕಾರವನ್ನು ಕೇಳಿಕೊಂಡು, ಆಯಾ ಕೇರ್‌ಟೇಕರ್‌ಗಳ ಕೆಲಸದ ಅವಧಿಯನ್ನು ವಿಸ್ತರಿಸುತ್ತಾರೆ. ಭಾರತೀಯ ಜೀವನಶೈಲಿ, ಪದ್ಧತಿಗಳ ಆಚರಣೆಗೂ ಇಲ್ಲಿ ಅವಕಾಶವಿದೆ. ಭಾರತೀಯ ಸ್ನೇಹಿತರೆಲ್ಲ ಸೇರಿ ಆಗಾಗ್ಗೆ ಸ್ನೇಹಕೂಟ ಆಯೋಜಿಸುತ್ತಾರೆ.

ದೇಶ, ಧರ್ಮಕ್ಕೆ ಆದ್ಯತೆ!

ಇಸ್ರೇಲ್‌ನ ಕಾರ್ಮಿಕ ಕಾಯ್ದೆಗಳು ಕಟ್ಟುನಿಟ್ಟು. ಭಾರತ, ನೇಪಾಳ, ಫಿಲಿಪ್ಪೀನ್ಸ್ ದೇಶದವರನ್ನು ಮಾತ್ರ ಕೇರ್ ಟೇಕರ್ ಹುದ್ದೆಗೆ ಪರಿಗಣಿಸಲಾಗುತ್ತದೆ. ಅದರಲ್ಲೂ ಹಿಂದೂ, ಕ್ರೈಸ್ತ, ಬೌದ್ಧ ಧರ್ಮೀಯರಿಗೆ ಆದ್ಯತೆ. ಮುಸ್ಲಿಂ ಸಮುದಾಯದವರಿಗೆ ಈ ಉದ್ಯೋಗ ಕೊಡಲು ಇಸ್ರೇಲ್‌ನಲ್ಲಿ ವಿರೋಧವಿದೆ. ಜಪಾನ್, ತೈವಾನ್ ಸೇರಿ ಕೆಲ ಆಯ್ದ ದೇಶಗಳ ಜನರಿಗೆ ತಾಂತ್ರಿಕ ಹುದ್ದೆಗಳು ಸಿಗುತ್ತವೆ.

ಇಸ್ರೇಲ್ ತನ್ನ ದೇಶದ ಪ್ರಜೆಗಳಿಗೆ ಅಲ್ಲದೇ ಕೆಲಸ ಮಾಡುವ ವಿದೇಶಿ ಪ್ರಜೆಗಳ ಸುರಕ್ಷತೆಗೂ ವಿಶೇಷ ಆದ್ಯತೆ ಕೊಡುತ್ತದೆ. ಈ ನೆಲದಲ್ಲಿ ಕಟ್ಟಲಾಗುವ ಪ್ರತಿ ಕಟ್ಟಡದಲ್ಲಿ ಬಾಂಬ್, ಕ್ಷಿಪಣಿ ದಾಳಿ ತಡೆಯುವ ಭದ್ರತಾ ಕೊಠಡಿ (ಬಂಕರ್) ನಿರ್ಮಿಸುವುದು ಕಡ್ಡಾಯ. ಬಹುಮಹಡಿ ಕಟ್ಟಡಗಳಲ್ಲಾದರೆ ನೆಲಮಾಳಿಗೆಯಲ್ಲಿ, ಹಳ್ಳಿಗಳಲ್ಲಿರುವ ವಿಲ್ಲಾ ಮಾದರಿಯ ಮನೆಗಳಲ್ಲಿ ಆದರೆ ಮನೆ ಪಕ್ಕದಲ್ಲಿ ಪ್ರತ್ಯೇಕ ಕೊಠಡಿ ನಿರ್ಮಿಸಬೇಕು. ಲೋಹಗಳಿಂದ ತಯಾರಾದ ಕೊಠಡಿಯ ಮೇಲೆ ಬಾಂಬ್ ಬಿದ್ದರೂ ಛಿದ್ರಗೊಳ್ಳದು. ದಾಳಿಯ ಸನ್ನಿವೇಶಗಳು ಎದುರಾದರೆ ಈ ಕೊಠಡಿಯಲ್ಲಿ ರಕ್ಷಣೆ ಪಡೆಯುವಂತೆ ಅಲ್ಲಿನ ಸರ್ಕಾರ ಸೂಚನೆ ನೀಡುತ್ತದೆ.

'ಗಡಿ ಭಾಗದಲ್ಲಿ ಮಾತ್ರ ಯುದ್ಧದ ಸನ್ನಿವೇಶವಿದೆ. ಇಸ್ರೇಲ್‌ನ ಒಳಭಾಗದ ನಗರ, ಹಳ್ಳಿಗಳು ಸುರಕ್ಷಿತವಾಗಿವೆ. ಆದರೂ ಎಲ್ಲೆಡೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಕ್ಷಿಪಣಿಗಳು ಎರಗಿಬಂದರೆ ತಕ್ಷಣ ಸೈರನ್ ಮೊಳಗುತ್ತದೆ. ಆಗ ಪ್ರತಿಯೊಬ್ಬರೂ ಆಯಾ ಕಟ್ಟಡದ ಬಂಕರ್‌ಗಳಿಗೆ ಹೋಗಿ ಕೂರಬೇಕು. ಸೂಚನೆ ಪಾಲಿಸದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎನ್ನುವ ಕುಮಟಾದ ದೀಪಕ್ ಪಿಂಟೋ ಸ್ವಲ್ಪ ಆತಂಕದ ದನಿಯನ್ನು ದಾಟಿಸಿದರು. ❖



ಇಸ್ರೇಲ್‌ನಲ್ಲಿ ನೆಲೆಸಿರುವ ಉತ್ತರ ಕನ್ನಡ ಜಿಲ್ಲೆಯ ಮೂಲದವರಾದ 'ಕರಾವಳಿ ಬಾಯ್ಸ್' ವಾಟ್ಸ್ ಆ್ಯಪ್ ಗುಂಪಿನ ಸದಸ್ಯರು ಒಂದೆಡೆ ಸೇರಿದ್ದ ಸಂದರ್ಭದ ಚಿತ್ರ

ಮರಳುವ ಆತಂಕ...ತುಟಿ ಬಿಚ್ಚದ ಇಸ್ರೇಲಿ ಕನ್ನಡಿಗರು

ಇಸ್ರೇಲ್‌ನಲ್ಲಿ ಯುದ್ಧದ ಸನ್ನಿವೇಶ ಇರುವುದರಿಂದ ಸಹಜವಾಗಿ ಯಾವುದೇ ಕ್ಷಣದಲ್ಲಿ ದಾಳಿ ತೀವ್ರಗೊಳ್ಳಬಹುದು ಎಂದು ದೂರದ ಭಾರತದಲ್ಲಿರುವ ಅನೇಕರು ಆತಂಕಗೊಳ್ಳುತ್ತಿದ್ದಾರೆ. ಆದರೆ ಇಸ್ರೇಲ್‌ನಲ್ಲಿ ಹಲವು ವರ್ಷಗಳಿಂದ ಇರುವ ತಮಗೆ ದಾಳಿಯ ವಿಚಾರ ಭಯ ಹುಟ್ಟಿಸದು. ಬಂಡುಕೋರರ ದಾಳಿಗಿಂತ ಏಕಾಏಕಿ ಭಾರತಕ್ಕೆ ಮರಳಿ ಕರೆಯಿಸಿಕೊಂಡರೆ ಗತಿ ಏನು ಎಂದು ಮಂಗಳೂರಿನ ಯುವತಿಯೊಬ್ಬರು ಆತಂಕಭರಿತ ದನಿಯಲ್ಲಿ ಹೇಳಿಕೊಂಡರು.

'ಕೇರ್ ಟೇಕರ್ ಉದ್ಯೋಗ ಪಡೆಯಲು ₹30-35 ಲಕ್ಷ ಖರ್ಚು ಮಾಡಿದ್ದೇವೆ. ನಮ್ಮ ಕುಟುಂಬದವರು ಸಾಲ ಮಾಡಿ ನಮಗೆ ಇಲ್ಲಿಗೆ ಕಳುಹಿಸಿದ್ದಾರೆ. ಕುಟುಂಬದ ನಿರ್ವಹಣೆಗೆ ಹಣ ನೀಡುವ ಜತೆಗೆ ಸಾಲದ ಕಂತನ್ನೂ ಭರಿಸಬೇಕು. ಯುದ್ಧದ ಭೀತಿ ಹುಟ್ಟಿಸಿ ಉದ್ಯೋಗ ಕಸಿದರೆ ಹೊಟ್ಟೆ ಪಾಡಿಗೆ ಏನು ಮಾಡಬೇಕು?' ಎಂದು ದುಗುಡ ತೋಡಿಕೊಂಡರು.

ಆರಂಭದಲ್ಲಿ ಇಸ್ರೇಲ್ ದೇಶದಲ್ಲಿನ ಸ್ಥಿಗತಿ ವಿವರಿಸುತ್ತಿದ್ದ, ವಾಟ್ಸ್ ಆ್ಯಪ್ ಮೂಲಕ ಸಂಪರ್ಕದಲ್ಲಿದ್ದ ಇಸ್ರೇಲ್‌ನ ವಿವಿಧ ಭಾಗಗಳಲ್ಲಿ ನೆಲೆ ನಿಂತ ಹತ್ತಾರು ಕನ್ನಡಿಗರು ಈಗೀಗ ಮಾಧ್ಯಮಗಳ ಜತೆ ಮಾತನಾಡುವುದನ್ನೂ ನಿಲ್ಲಿಸಿದ್ದಾರೆ. ಒಂದು ವೇಳೆ ಪತ್ರಿಕೆ ಸೇರಿ ಮಾಧ್ಯಮದವರ ಜೊತೆ ಮಾತನಾಡಿದರೆ, ಭಾರತದವರು ತಮ್ಮ ವಿಳಾಸವನ್ನು ಪಡೆದು ಸಂಪರ್ಕಿಸಿ ವಾಪಸ್ ಕರೆಸಿಕೊಂಡಾರು ಎಂಬ ಭಯವಿದೆ.

'ನಾವಿಲ್ಲಿ ಚೆನ್ನಾಗಿದ್ದೇವೆ. ಸುರಕ್ಷಿತವಾಗಿ ಇರುತ್ತೇವೆ ಎಂಬ ನಂಬಿಕೆ ಇದೆ. ಇಸ್ರೇಲ್‌ನ ಕಠಿಣ ಸಮಯದಲ್ಲಿ ನಾವು ಅವರೊಂದಿಗೆ ಇರಲಿದ್ದೇವೆ. ನಮ್ಮ ಕುಟುಂಬಗಳು ಆತಂಕಗೊಳ್ಳುವಂತೆ ಯಾವುದೇ ವರದಿ ಮಾಡದಿರಿ' ಎಂದು ಅಲ್ಲಿನ ಬಹುತೇಕ ಕನ್ನಡಿಗರು ವಾಟ್ಸ್ ಆ್ಯಪ್‌ನಲ್ಲಿ ಕೈಮುಗಿಯುವ ಎಮೋಜಿ ಕಳಿಸಿ ಸುಮ್ಮನಾಗಿದ್ದಾರೆ.

ಬಹುರೂಪಿ ದಸರಾ



ದಸರಾಗೆ ಅಲಂಕೃತ ಮೈಸೂರಿನ ಕೆ.ಆರ್.ಸರ್ಕಲ್

1ನೇ ಪುಟದಿಂದ...

ಈಗ ಮುಖ್ಯಮಂತ್ರಿ ಅಧ್ಯಕ್ಷತೆಯ ಉನ್ನತಮಟ್ಟದ ಸಮಿತಿಯದ್ದೇ ನೇತೃತ್ವ. ಆದರೆ, ಇನ್ನೊಂದು ಪ್ರಾಧಿಕಾರದ ಕನಸು ಹಲವು ವರ್ಷಗಳಿಂದ ಹಾಗೇ ಉಳಿದಿದೆ; ಅದು ದಸರಾ ಪ್ರಾಧಿಕಾರ. ಜೊತೆಗಿನ್ನೊಂದು ಬೇಡಿಕೆಯೂ ಉಂಟು; ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ.

ಮೈಸೂರು ಒಡೆಯರ ಮನೆದೇವತೆಯಾದ ಚಾಮುಂಡಿಗೆ ಪೂಜೆ ಸಲ್ಲಿಸುವ ಮೂಲಕವೇ ಉತ್ಸವದ ಸಂಭ್ರಮ ಗರಿಗೆದರುತ್ತದೆ. ವಿವಿಧ ಕ್ಷೇತ್ರಗಳ ಗಣ್ಯರನ್ನು ಆಹ್ವಾನಿಸಿ ಉದ್ಘಾಟಿಸುವ ಸಂಪ್ರದಾಯ ಮುಂದುವರಿದಿದೆ. ಗಜಪಯಣದ ಮುನ್ನುಡಿ ಹಾಗೂ ಚಾಮುಂಡಿಗೆ ಪೂಜೆಯಿಂದ ಶುರುವಾಗುವ ನವರಾತ್ರಿ ಉತ್ಸವ ಎಲ್ಲ ದಿಕ್ಕುಗಳಲ್ಲೂ ಮೈಸೂರನ್ನು ಹಗಲಿರುಳೂ ಝುಗಮಗಿಸುವಂತೆ ಮಾಡುತ್ತದೆ. ಭೂತಕಾಲ-ವರ್ತಮಾನ ಮತ್ತು ಭವಿಷ್ಯತ್ ಕಾಲ ಒಂದರೊಳಗೊಂದು ಸೇರಿಕೊಳ್ಳುತ್ತವೆ. ಕಷ್ಟವಿರಲಿ, ಸುಖವಿರಲಿ, ದಸರಾ ಉತ್ಸವವಿರಲಿ ಎಂಬ ಭಾವದಲ್ಲಿ...

ಇಂಥ ದಸರೆಯು ಸರಳವೋ, ಅದ್ದೂರಿಯೋ, ಸಾಂಪ್ರದಾಯಿಕವೋ ಎಂಬ ಪ್ರಶ್ನೆಯೇ ಅಪ್ರಸ್ತುತ ಎನ್ನಿಸುವಂತೆ ಮೈಸೂರು ಕಾಣುತ್ತಿದೆ.

ಹೀಗೆನ್ನುವಾಗ ಮಹಿಷನ ಭಕ್ತರನ್ನು ಮರೆಯುವಂತಿಲ್ಲ. ಏಕೆಂದರೆ ಈಗ, ಪರ-ವಿರೋಧಗಳ ನಡುವೆ, ಒಂದೆಡೆ 'ಚಾಮುಂಡಿ ದಸರೆ' ನಡೆದರೆ, ಮತ್ತೊಂದೆಡೆ 'ಮಹಿಷ ದಸರೆ'ಯೂ ನಡೆಯುತ್ತದೆ. ❖

ಮುನ್ನೋಟ 15-10-2023 ರಿಂದ -21-10-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಹಿಡಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವಿರಿ. ಗುರುಹಿರಿಯರ ಮನವನ್ನು ಗೆಲ್ಲುವ ಪ್ರಯತ್ನ ಮಾಡುವಿರಿ. ಭಾಷಣಕಾರರಿಗೆ ಉತ್ತಮ ವೇದಿಕೆಗಳು ದೊರೆಯುವ ಸಾಧ್ಯತೆ ಇದೆ. ಸ್ಥಿರಾಸ್ತಿ ಮಾಡಲು ಹೆಚ್ಚು ಶ್ರಮವಹಿಸಬೇಕು. ಫ್ಯಾಶನ್ ಡಿಸೈನ್ ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರಕುತ್ತದೆ. ಅವಿವಾಹಿತರಿಗೆ ವಿವಾಹವಾಗುವ ಸಂದರ್ಭಗಳಿವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಕೇಶಾಲಂಕಾರದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆಸ್ತಿ ಕೊಳ್ಳುವುದಕ್ಕಾಗಿ ಸಂಗಾತಿಯು ಕೂಡಿಟ್ಟ ಹಣವನ್ನು ಕೊಡುವರು. ಲೆಕ್ಕಪರಿಶೋಧಕರಿಗೆ ಹೆಚ್ಚಿನ ಕೆಲಸ ದೊರೆತು ಆದಾಯವು ಹೆಚ್ಚುತ್ತದೆ. ನಿಮ್ಮ ಮಕ್ಕಳ ಬಗ್ಗೆ ಸಂತೋಷದ ಮಾತುಗಳನ್ನು ಬಂಧುಗಳಿಂದ ಕೇಳಿಬರುತ್ತದೆ. ಆಯುರ್ವೇದ ಅಥವಾ ನಾಟಿ ಔಷಧಿಗಳಿಂದ ಹಳೆಯ ಕಾಯಿಲೆಗಳು ಗುಣವಾಗುತ್ತವೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ವಾರದ ಆರಂಭ ವ್ಯಾವಹಾರಿಕವಾಗಿ ಪ್ರಾರಂಭವಾಗುತ್ತದೆ. ನಿರೀಕ್ಷಿತ ಮೂಲಗಳಿಂದ ಧನ ಆದಾಯವು ಬರುವುದು ನಿಧಾನವಾಗಬಹುದು. ಜಾಣ್ಮೆಯಿಂದ ಮಾತನಾಡಿ ಸಹೋದ್ಯೋಗಿಗಳಿಂದ ಕೆಲಸ ಮಾಡಿಸಿಕೊಳ್ಳುವಿರಿ. ಕೃಷಿಗಾಗಿ ಹೆಚ್ಚು ಹಣ ಹೂಡಿಕೆ ಮಾಡುವಿರಿ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸಂಗೀತಗಾರರಿಗೆ ನಿರೀಕ್ಷಿತ ಆದಾಯವಿಲ್ಲ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ವಿದೇಶದಲ್ಲಿ ದುಡಿಯುತ್ತಿರುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ಹಿರಿಯರ ಆಸ್ತಿಯಲ್ಲಿ ನಿಮಗೆ ಪಾಲು ಬರುವ ಸಾಧ್ಯತೆಯಿದೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಹಣದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಹಿರಿಯರ ಕೃಷಿಯ ಭೂಮಿಯನ್ನು ಕೊಂಡುಕೊಳ್ಳಬಹುದು. ಕೃಷಿಯಿಂದ ಸ್ವಲ್ಪಮಟ್ಟಿನ ಆದಾಯವಿರುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ವ್ಯಾಪಾರ ವ್ಯವಹಾರಗಳಲ್ಲಿ ಖಂಡಿತ ಲಾಭವಿರುತ್ತದೆ. ಅದಿರು ಮಾರಾಟಗಾರರಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಬಹುದು. ಸರ್ಕಾರಿ ಕಚೇರಿಯ ವ್ಯವಹಾರಗಳಲ್ಲಿ ನಿಧಾನಗತಿಯನ್ನು ಕಾಣಬಹುದು. ಸಮಯಕ್ಕೆ ತಕ್ಕಂತೆ ವರ್ತಿಸಿ ನಿಮ್ಮ ಕೆಲಸ ಆಗುವಂತೆ ನೋಡಿಕೊಳ್ಳುವಿರಿ. ಸಾಹಸ ಕಲಾವಿದರಗಳಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಅತಿಯಾದ ಆತ್ಮಭಿಮಾನ ನಿಮ್ಮಲ್ಲಿ ಇರುತ್ತದೆ. ಈ ಅಭಿಮಾನದಿಂದ ಆಡುವ ಮಾತುಗಳು ನಿಮಗೆ ತಿರುಗುಬಾಣವಾಗುವ ಸಾಧ್ಯತೆಗಳಿವೆ. ನಿಮ್ಮ ನಡವಳಿಕೆ ಸಾಕಷ್ಟು ವ್ಯಾವಹಾರಿಕವಾಗಿರುತ್ತದೆ. ಸಂಗಾತಿಯ ಜೊತೆ ಸ್ವಲ್ಪಮಟ್ಟಿನ ಮುಸುಕಿನ ಗುದ್ದಾಟಗಳಿರುತ್ತವೆ. ವಿದ್ಯಾರ್ಥಿಗಳು ಹೆಚ್ಚು ಶ್ರಮ ಹಾಕಿ ಓದಲೇಬೇಕಾದ ಪರಿಸ್ಥಿತಿ ಇದೆ. ಆಮದು ಮತ್ತು ರಫ್ತು ಮಾಡುವವರಿಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಇತರರ ಮೇಲೆ ಅತಿಯಾದ ಕೋಪ ಒಳ್ಳೆಯದಲ್ಲ. ಈ ಕೋಪ ಕೆಲವು ಆಪ್ತರನ್ನು ನಿಮ್ಮಿಂದ ದೂರ ಮಾಡುತ್ತದೆ. ಕೃಷಿಯಿಂದ ಆದಾಯ ಬರುತ್ತದೆ. ಹೈನುಗಾರಿಕೆ ಮಾಡುವವರಿಗೂ ಸಹ ಸ್ವಲ್ಪಮಟ್ಟಿನ ಆದಾಯವಿರುತ್ತದೆ. ಸಂಗಾತಿಯು ನಿಮ್ಮ ಕೆಲಸ ಕಾರ್ಯಗಳನ್ನು ಟೀಕೆ ಮಾಡಬಹುದು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚು ಬೆಲೆ ಬರುತ್ತದೆ. ಸಂಗಾತಿಯ ಆರೋಗ್ಯಕ್ಕಾಗಿ ಸ್ವಲ್ಪ ಹಣ ಮೀಸಲು ಇಡಬೇಕಾದೀತು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಅನಾಸಕ್ತಿಯಿಂದ ಕೆಲಸ ಕಾರ್ಯಗಳಲ್ಲಿ ನಿಧಾನಗತಿ ಆವರಿಸಬಹುದು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ಹೆಚ್ಚಿನ ಅನುಕೂಲತೆಯಿದೆ. ರಾಜಕೀಯ ಮುಖಂಡರೆಂದು ಜನರಿಗೆ ಹೇಳಿಕೊಂಡು ಓಡಾಡುತ್ತಿರುವ ಕೆಲವರ ಬಣ್ಣ ಬಯಲಾಗುತ್ತದೆ. ಲೇವಾದೇವಿ ವ್ಯವಹಾರಗಳು ಖಂಡಿತ ಬೇಡ. ಕೀಲು ನೋವು ಇರುವವರು ವೈದ್ಯಕೀಯ ತಪಾಸಣೆ ಮಾಡಿಸುವುದು ಮುಖ್ಯ.


ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಆತ್ಮವಿಶ್ವಾಸದಿಂದ ಮಾಡಿದ ಕೆಲಸಗಳಲ್ಲಿ ಜಯವಿರುತ್ತದೆ. ನಿಮ್ಮ ಹಿತ ಶತ್ರುಗಳನ್ನು ನಿಗ್ರಹಿಸಲು ನೀವು ಬಳಸುವ ತಂತ್ರ ಬಹಳ ಪರಿಣಾಮಕಾರಿಯಾಗಿರುತ್ತದೆ. ಕೃಷಿ ಉಪಕರಣಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ. ಬಹಳ ದಿನಗಳಿಂದ ಅನಾರೋಗ್ಯಗೊಂಡಿದ್ದವರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಕೆಲಸ ಮಾಡುವಾಗ ಬಹಳ ಶ್ರದ್ಧೆಯನ್ನು ತೋರುವಿರಿ. ಇದು ನಿಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದು ಒಳಿತಾಗುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಯಾವುದೇ ಆಸ್ತಿ ಕೊಳ್ಳುವಾಗ ಅದರ ದಾಖಲೆಯ ಪರಿಶೀಲನೆಯು ಸರಿಯಾಗಿ ನಡೆಯಲಿ. ವಾಹನಗಳನ್ನು ದುರಸ್ತಿ ಮಾಡುವವರಿಗೆ ಬಿಡುವಿಲ್ಲದ ಕೆಲಸ ದೊರೆತು ಆದಾಯ ಹೆಚ್ಚುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಹಳ್ಳಿಯ ಜೀವನವನ್ನು ನಡೆಸುವ ಆಸಕ್ತಿ ಹೆಚ್ಚಾಗುತ್ತದೆ. ಕೃಷಿಯ ಬಗ್ಗೆ ಹೆಚ್ಚು ಒಲವು ಮೂಡುತ್ತದೆ. ಖರ್ಚು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಹೊಸ ವಾಹನ ಮಾರಾಟಗಾರರ ವ್ಯವಹಾರಗಳು ವೃದ್ಧಿಸಿ ಆದಾಯ ಹೆಚ್ಚಾಗುತ್ತದೆ. ಸಂಗಾತಿಗೆ ತವರು ಮನೆಯಿಂದ ಅಮೂಲ್ಯ ಉಡುಗೊರೆ ಬರುವ ಸಂದರ್ಭವಿದೆ. ಯುವಕರ ಪ್ರೀತಿ ಪ್ರೇಮಗಳು ಸುಖಾಂತವಾಗುವುದಿಲ್ಲ. ಮಕ್ಕಳ ವಿಷಯದಲ್ಲಿ ಶುಭ ವಾರ್ತೆಗಳನ್ನು ಕೇಳುವಿರಿ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಎಲ್ಲರ ಮೇಲೆ ನಿಮ್ಮ ಪ್ರಭಾವವನ್ನು ಬೀರಲು ಯತ್ನಿಸುವಿರಿ. ಶೀತಬಾಧೆಗಳು ಹೆಚ್ಚು ಕಾಡಬಹುದು. ಹಣದ ಒಳಹರಿವು ಮಧ್ಯಮಗತಿಯಲ್ಲಿದ್ದು ಖರ್ಚು ಕಡಿಮೆ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ವಿದ್ಯಾರ್ಥಿಗಳು ತಮ್ಮ ಫಲಿತಾಂಶಕ್ಕಾಗಿ ಹಾಕುವ ಶ್ರಮದಿಂದ ಹೆಚ್ಚು ಉಪಯೋಗವಾಗುತ್ತದೆ. ಪ್ರಸೂತಿ ತಜ್ಞರಿಗೆ ಹೆಚ್ಚು ಕೆಲಸ ದೊರೆತು ಆದಾಯ ಹೆಚ್ಚುತ್ತದೆ.

ಪದಬಂಧ 2811



ಮೇಲಿನಿಂದ ಕೆಳಕ್ಕೆ

1. ಪತಿಯ ಪ್ರಿಯ ಪತ್ನಿ 2
2. ಇವ ಸಾಮಾನ್ಯ ಕ್ರೂರಿಯಲ್ಲ, ಒಂದಿಷ್ಟೂ ಕರುಣೆಯಿಲ್ಲದ ನಿರ್ದಯಿ 5
3. ಶ್ರೇಷ್ಠತೆಗೆ ತಮಿಳು ಒಕ್ಕಣೆ 2
4. ಆಗ ತಾನೆ ಆದ ಆಶ್ರಯದ ಗೂಡು 3
6. ಇಂದ್ರ ಪದವಿ ಬಯಸಿದ ಅಲ್ಪಪ್ರಾಣದ ದೊರೆ 6
7. ಪುಟ ತಿರುಗಿಸಿದರೆ ಗೋಕುಲ ನಿರ್ಗಮನದ ಕವಿ ಸಿಗಬಹುದು 3
8. ಪರಸ್ಪರ ಸೇರುವಿಕೆ 3
10. ಇದು ಸರ್ವೇಸಾಮಾನ್ಯರ ಸ್ವಭಾವವಲ್ಲ ಬಹಳ ವಿಶಿಷ್ಟವಾದದ್ದು 5
12. ತಲೆತಗ್ಗಿಸಿಕೊಂಡು ಹೋಗುವ ಪ್ರಾಣಿಯ ಯುದ್ಧ 5
14. ವರ ಅಳಿಯುವ ರಾಗವೇ ಇದು? 3
15. ಐಸ್ಕ್ರೀಮ್‌ನಲ್ಲಿ ಸೇರುವ ಪರಿಮಳ ವಕಾರ ಪ್ರಿಯನ ಬಾಯಲ್ಲಿ ಹೀಗೆ 3
16. ಹಿಡಿತದ ಒತ್ತಡ ಹೆಚ್ಚಾದಾಗ ಆಗುವ ಅನುಭವ 3
17. ಅಧೀನತೆಯ ದಾಸ್ಯ ಮನಸ್ಥಿತಿ 5
18. ಬಿಸಿಲಿನಲ್ಲಿ ಹುಟ್ಟಿದ ತಾವರೆ 3
19. ಓಬವ್ವಳನ್ನು ನೆನೆಪಿಸುವ ಕುಟ್ಟುವ ಸಾಧನ 3
21. ಮತ್ತೆ ಉಕ್ಕಿಬಂದ ಕರುಣೆ 3
24. ದಿವಾಕರನನ್ನು ಮೊಟಕಾಗಿ ಹೀಗೆ ಕೂಗಬಹುದು 2
25. ನರಸಿಂಹ ಇದನ್ನು ಒಡೆದು ಬಂದ 2

ಎಡದಿಂದ ಬಲಕ್ಕೆ

1. ಏರುಪೇರಿಲ್ಲದ ಒಂದೇ ರೀತಿಯ ಆಂತರ್ಯದ ಗತಿ 7
4. ರತಿ ಬೆಳಗುವ ನೀರಾಜನ 3
5. ರೋಗದ ಜೊತೆ ಅಂಟಿಕೊಂಡದ್ದು 3
7. ಗ್ರಂಥಗಳೇ ಇವನ ಪ್ರಿಯತಮೆ 5
9. ಸೂರ್ಯನ ಬೆಳಕಿನ ತೇಜಸ್ಸು 4
11. ಸೀತಾತನಯರಾದ ಅವಳಿ ಸೋದರರು 4
13. ಇದೀಗ ತಾನೆ ಹೊಸದಾಗಿ ಹೊರಬಂದ ಕವಿ ಸೃಷ್ಟಿ 5
16. ಸ್ನೇಹಕ್ಕೆ ಪ್ರತೀಕವಾದ ಶ್ವೇತ ರೋಜಾ 5
19. ಹಸಿತನವನ್ನು ಕಳೆದುಕೊಂಡ ಕೆಂಪು ಧಾನ್ಯ 4
20. ಜೊತೆ ಜೊತೆಯಾಗಿ ಬೆರೆಯುವಿಕೆ 4
22. ಜೀವನದ ಕಷ್ಟಗಳಲ್ಲಿ ಸಿಲುಕಿರುವ ಮನುಷ್ಯ 5
23. ಕನ್ನಡದ ನಾಯಕ ಮನೆತನದ ರಾಣಿಯ ನಾಡು 3
25. ಮುಳ್ಳಿನಂತೆ ಬರುವ ಅಪಾಯ 3
26. ಭೂಮಿಯೇ ಭಗವಂತನ ಸಂಸಾರವೆಂಬ ಉಪನಿಷದ್ವಾಣಿ 7

ಪದಬಂಧ ಉತ್ತರ -2810

ಮೇಲಿಂದ ಕೆಳಕ್ಕೆ

1.ಗಟ್ಟಿಮನಸ್ಸು 2.ಜನಮಾನಸ 3.ದನಗೊರಸು 4.ತಿಪ್ಪರಲಾಗ 6.ನವರಂಗ 10.ವಿರಹ 11.ನವಮ 12.ಕುಂಚವಿನ್ಯಾಸ 13.ಸಹಪ್ರಯಾಣ 14.ಗತಜೀವ 15.ನದೀಕಲಹ 16.ಗಾಂಧಿಜಯಂತಿ

ಎಡದಿಂದ ಬಲಕ್ಕೆ

1.ಗಣರಾಜ 3.ದಶಾರತಿ 5.ನವನವೀನ 7.ನವದಾನ 8.ರವಿಕಲಾ 9.ಸವಿಗನಸು 13.ಸಹಗಮನ 17. ಚಕ್ರವ್ಯೂಹ 18.ದೀರ್ಘಾವಧಿ 19.ಯಾದವಕುಲ 20.ಸಮರ್ಪಣ 21.ಹಸ್ತಪ್ರತಿ

ಗುಡವಿ- ಪಕ್ಷಿಗಳ ಪ್ರಸೂತಿಗೃಹ

ಚಿತ್ರ-ಲೇಖನ: ಎಸ್. ಶಿಶುಪಾಲ

ಕೆರೆ-ಸರೋವರಗಳು ಜೀವಜಲದ ಆಕರಗಳು. ಹಚ್ಚ ಹಸುರಿನ ಮಲೆನಾಡ ಕಾಡು. ಸುತ್ತಲೂ ಕೃಷಿ ಭೂಮಿ. ಇದೆಲ್ಲವನ್ನೂ ಒಳಗೊಂಡಿರುವುದೇ ಗುಡವಿ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಗುಡವಿ ಒಂದು ಸಣ್ಣ ಗ್ರಾಮ. ಕೃಷಿಯೇ ಇಲ್ಲಿನ ಜನರ ಬದುಕಿನಾಸರೆ. ಈ ಗ್ರಾಮದಲ್ಲಿರುವ ವಿಶಿಷ್ಟ ಕೆರೆಯೊಂದು ಸಹಸ್ರಾರು ಖಗ ಸಂತತಿಗಳ ತವರೂರು. ಅಂದಾಜು 180 ಎಕರೆ ಪ್ರದೇಶದಲ್ಲಿರುವ ಈ ಕೆರೆಗೆ ಮಲೆನಾಡಿನ ಮಳೆಯ ನೀರು ಆಧಾರ. ಒಳ್ಳೆಯ ಮಳೆಯಾದ ವರ್ಷದಲ್ಲಿ ಕೆರೆಯು ತುಂಬುತ್ತದೆ. 1986ರಲ್ಲಿ ಪಕ್ಷಿಧಾಮವೆಂದು ಗುರುತಿಸಿಕೊಂಡಿರುವ ಈ ಕೆರೆಯನ್ನು ಅರಣ್ಯ ಇಲಾಖೆ ಬಹಳ ಮುತುವರ್ಜಿಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿದೆ. ಮಳೆಗಾಲದಲ್ಲಿ ಇಲ್ಲಿಗೆ ಬರುವ ಪಕ್ಷಿ ಸಂಕುಲ ಅಸದಳ. ಕರ್ನಾಟಕದಲ್ಲಿ ಅತಿ ಹೆಚ್ಚು ಪಕ್ಷಿಗಳು ಸಂತಾನೋತ್ಪತ್ತಿಗಾಗಿ ಆಯ್ಕೆ ಮಾಡಿಕೊಂಡಿರುವ ಈ ಸ್ಥಳ ಪಕ್ಷಿ ಪ್ರಸೂತಿಗೃಹವಾಗಿದೆ.

ಪಕ್ಷಿಗಳು ಒಂದು ಪರಿಸರದ ಆರೋಗ್ಯ ನಿರ್ಧರಿಸುವ ಜೈವಿಕ ಸೂಚಕಗಳು. ಕೆರೆಯ ಮಧ್ಯ ಅರಣ್ಯ ಇಲಾಖೆ ಮಾಡಿರುವ ನಡುಗಡ್ಡೆಗಳು ಮತ್ತು ಅಲ್ಲಿರುವ ಮರಗಳು ಕೆಲವು ಪ್ರಭೇದದ ಹಕ್ಕಿಗಳಿಗೆ ಗೂಡು ಮಾಡಿ ಮರಿಗಳನ್ನು ಬೆಳೆಸಲು ಪ್ರಶಸ್ತ ಪರಿಸರವಾಗಿದೆ. ಈ ದಿಸೆಯಲ್ಲಿ ಅರಣ್ಯ ಇಲಾಖೆಯ ಕಾರ್ಯ ಶ್ಲಾಘನೀಯ. ಹಸಿರು ಆವರಣದ ಪ್ರಶಾಂತ ಸ್ಥಳವಿದು. ಗುಡವಿ ಪಕ್ಷಿಧಾಮ ಪಕ್ಷಿತಜ್ಞರಿಗೆ, ವೀಕ್ಷಕರಿಗೆ ಮತ್ತು ಅಧ್ಯಯನಶೀಲರಿಗೆ ಸ್ವರ್ಗದಂತೆ. ಜನಸಾಮಾನ್ಯರಿಗೂ ಮನೋಲ್ಲಾಸದ ತಾಣ.

ಮಲೆನಾಡ ಕಾಡಿನ ನಡುವೆ ಪ್ರಶಾಂತವಾಗಿ ಕುಳಿತಿದೆ ಈ ಕೆರೆ. ಸುತ್ತಲ ಕೃಷಿಭೂಮಿಯಲ್ಲಿ ಹುಳು, ಕಪ್ಪೆ, ಏಡಿ ಮುಂತಾದವುಗಳು ಹೇರಳವಾಗಿ ಲಭ್ಯ. ಕಾಡಿನ ಮರಗಳಲ್ಲಿರುವ ಹಣ್ಣು ಮತ್ತು ಕೀಟಗಳು, ಕೆರೆಯಲ್ಲಿನ ಮೀನುಗಳು ಮತ್ತು ಜಲಸಸ್ಯಗಳು ಈ ಪಕ್ಷಿಗಳಿಗೆ ಆಹಾರ. ನಗರದ ಗಡಿಬಿಡಿ-ಕಲ್ಮಶ ವಾತಾವರಣದಿಂದ ದೂರದಲ್ಲಿದ್ದು ಸುರಕ್ಷತೆ ದೃಷ್ಟಿಯಿಂದ ಹಕ್ಕಿಗಳಿಗೆ ಅನುಕೂಲ ಪ್ರದೇಶವಾಗಿದೆ. ಪಕ್ಷಿಧಾಮದ ಸೂಕ್ತ ಸ್ಥಳಗಳಲ್ಲಿ ಅರಣ್ಯ ಇಲಾಖೆಯವರು ಹಲವು ಸ್ತರಗಳ ವೀಕ್ಷಣಾ ಗೋಪುರಗಳನ್ನು ಮಾಡಿದ್ದಾರೆ.



ಆಹಾರದ ನಿರೀಕ್ಷೆಯಲ್ಲಿರುವ ಬಿಳಿ ಕೆಂಬರಲು ಮರಿಗಳು

ಪಕ್ಷಿವೈವಿಧ್ಯ: ಇಲ್ಲಿ 2009ರಲ್ಲಿ ನಡೆದ ಪಕ್ಷಿಗಣತಿಯ ಪ್ರಕಾರ 271ಕ್ಕೂ ಹೆಚ್ಚು ಹಕ್ಕಿ ಪ್ರಭೇದಗಳನ್ನು ಗುರುತಿಸಿದ್ದಾರೆ. ಆಗಾಗ್ಗೆ ಇಲ್ಲಿಗೆ ಬರುವ ಪಕ್ಷಿತಜ್ಞರು ಹಲವಾರು ಹಕ್ಕಿಗಳನ್ನು ಗುರುತಿಸಿದ್ದಾರೆ. ಆದರೆ ಇಷ್ಟೊಂದು ಪ್ರಭೇದದ ಹಕ್ಕಿಗಳು ಇಲ್ಲಿ ಈಗ ಕಾಣಿಸದಿದ್ದರೂ ಸಾವಿರಾರು ಸಂಖ್ಯೆಯಲ್ಲಿ ಗೂಡು ಕಟ್ಟಿ ಮರಿಮಾಡುವ ಕೆಲವು ಪ್ರಭೇದಗಳನ್ನು ಕಾಣಬಹುದು. ಕೆರೆಯ ಪ್ರವೇಶದ್ವಾರದಲ್ಲಿ ಇಲ್ಲಿ ಕಾಣಸಿಗುವ ಹಕ್ಕಿಗಳ ಚಿತ್ರ-ಮಾಹಿತಿಯ ಫಲಕಗಳನ್ನು ಹಾಕಲಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಸಂತಾನೋತ್ಪತ್ತಿ ಮಾಡುವ ಹಕ್ಕಿಗಳ ಇಂತಹ ತಾಣ ಕರ್ನಾಟಕದಲ್ಲಿ ಮತ್ತೆಲ್ಲೂ ಕಾಣಸಿಗದು. ಪ್ರಮುಖವಾಗಿ ಕಾಣಸಿಗುವ ಹಕ್ಕಿಗಳೆಂದರೆ ನೀರುಕಾಗೆಗಳು, ಹಾವಕ್ಕಿ, ಬೆಳ್ಳಕ್ಕಿಗಳು, ಕೊಳದ ಬಕ, ಇರುಳು ಬಕ, ಕೆಂಬರಲುಗಳು, ಬಾಯ್ಕಳಕ ಕೊಕ್ಕರೆ, ಚಮಚದ ಕೊಕ್ಕು, ಬಣ್ಣದ ಕೊಕ್ಕರೆ, ಗುಳುಮುಳುಕ, ನಾಮದ ಕೋಳಿ, ಸಿಳ್ಳೆಬಾತು, ವರಟೆ, ನವಿಲು, ಹುಂಡು ಕೋಳಿ, ಜಂಬು ಕೋಳಿ, ಬೆಳವ, ಕಳ್ಳಿಪೀರ, ಮಿಂಚುಳ್ಳಿ ಮುಂತಾದವುಗಳು.

ಪಕ್ಷಿ ಗೂಡುಗಳು: ಬಿಳಿ ಕೆಂಬರಲು, ನೀರುಕಾಗೆಗಳು, ಬೆಳ್ಳಕ್ಕಿಗಳು ಮತ್ತು ಇರುಳು ಬಕಗಳು ಮರಗಳ ಕೊಂಬೆಗಳ ಮೇಲೆ ಕಡ್ಡಿಗಳನ್ನಿಟ್ಟು ಅಟ್ಟಣಿಗೆಯಂತಹ ಗೂಡು ಕಟ್ಟುತ್ತವೆ. ಈ ರೀತಿ ವಿವಿಧ ಹಕ್ಕಿಗಳ ಗೂಡುಗಳ ತಾಣವನ್ನು ಹೆರೊನರಿ ಎನ್ನುವರು. ಗೂಡು ಕಟ್ಟುವ ಜಾಗಕ್ಕೆ ಪೈಪೋಟಿಯಂತು ಹೇಳತೀರದು. ಆಶ್ಚರ್ಯಕರವಾದ ವಿಷಯವೆಂದರೆ ಪ್ರತಿಯೊಂದು ಪ್ರಭೇದವು ಪ್ರತಿವರ್ಷ ತಾನು ಹಿಂದಿನ ವರ್ಷ ಗೂಡು ಕಟ್ಟಿದ್ದ ಮರಗಳನ್ನೇ ಆಯ್ದುಕೊಳ್ಳುತ್ತದೆ. ಗೂಡು ಮಾಡಲು ಜಾಗದ ಕೊರತೆಯಿಂದ ಹಕ್ಕಿಗಳು ಕೆಳಸ್ತರದ ಗಿಡಗಳಲ್ಲಿ ಗೂಡು ಮಾಡಿದರೆ ಭಾರಿ ಮಳೆಯಾದರೆ ನೀರು ಹೆಚ್ಚಾಗಿ ಗೂಡುಗಳು ನಾಶವಾಗುವುವು. ಅಕ್ಕ-ಪಕ್ಕದ ಕೃಷಿ ಭೂಮಿಯಿಂದ ಕೆರೆಗೆ ಹರಿಯುವ ಕೀಟನಾಶಕಯುಕ್ತ ನೀರು ಹಕ್ಕಿಗಳಿಗೆ ಹಾನಿಕಾರಕ.

ಪಕ್ಷಿ ಮರಿಗಳು: ಮೊದಲಿಗೆ ತಲೆ ಸರಿ ನಿಲ್ಲದ ಮರಿಗಳು ಅಜ್ಜ-ಅಜ್ಜಿಯರಂತೆ ಗಡಗಡ ತಲೆ ಅಲುಗಾಡಿಸುತ್ತಿರುತ್ತವೆ. ನಿಲ್ಲಲೂ ಆಗದೇ ಕೊಂಬೆಗಳ ಮೇಲೆ ನೃತ್ಯ ಮಾಡುವಂತಿರುತ್ತದೆ. ಮರಿಗಳಿಗೋ ವಿಪರೀತ ಹಸಿವು. ಆಹಾರಕ್ಕಾಗಿ ಮರಿಗಳು ಹೆತ್ತವರನ್ನು ಪೀಡಿಸುವುದು ಸಾಮಾನ್ಯ ದೃಶ್ಯ. ತಂದೆ-ತಾಯಿ ಆಹಾರವನ್ನು ಗಂಟಲಿನವರೆಗೆ ತುಂಬಿಕೊಂಡು ಬಂದು ಮರಿಗಳಿಗೆ ನೀಡುತ್ತವೆ. ಪೋಷಕರು ತಂದ ಆಹಾರಕ್ಕೋಸ್ಕರ ಮರಿಗಳಲ್ಲಿ ಸ್ಪರ್ಧೆಯನ್ನು ಕಾಣಬಹುದು. ಮರಿಗಳು ತಮ್ಮ ಕೊಕ್ಕನ್ನು ತಂದೆ/ತಾಯಿಯರ ಗಂಟಲಿನವರೆಗೆ ತೂರಿಸಿ ಆಹಾರ ಸೆಳೆಯುವುದನ್ನು ನೋಡುವುದೇ ಚೆಂದ. ಹಲವಾರು ಬಾರಿ ತನ್ನ ಸಹೋದರ-ಸಹೋದರಿಯರ ಬಾಯಿಂದ ಆಹಾರ ಕಸಿದುಕೊಳ್ಳಲೂ ಪ್ರಯತ್ನಪಡುತ್ತವೆ. ಇಲ್ಲಿ ಹುಟ್ಟಿ ಬೆಳೆದ ಮರಿಗಳು ಮುಂದೆ ಬೆಳೆದು ಇಲ್ಲಿಯೇ ತಮ್ಮ ಸಂತಾನಭಿವೃದ್ಧಿಗೆ ವಲಸೆ ಬರುತ್ತವೆ.

ಕಳೆದ ಐದು ವರ್ಷಗಳಿಂದ ಸತತವಾಗಿ ಭೇಟಿ ನೀಡುತ್ತಿದ್ದ ನನಗೆ ಇದೊಂದು ತೀರ್ಥಯಾತ್ರೆಯಂತಹ ಸ್ಥಳ. ಹಲವಾರು ಹಕ್ಕಿಗಳ ಜೀವನಕ್ರಮ ಅರಿಯಲು ಮತ್ತು ಪ್ರಕೃತಿಯ ಮಡಿಲಲ್ಲಿ ಲೀನವಾಗಲು ಸೂಕ್ತ ಸ್ಥಳ. ಕಳೆದ ವಾರ ಭೇಟಿ ನೀಡಿದಾಗ ದಿಗ್ಭ್ರಮೆಗೊಳ್ಳುವ ಸರದಿ ನನ್ನದು. ಕಳೆದ ನಾಲ್ಕು ವರ್ಷಗಳಲ್ಲಿ ಈ ತಿಂಗಳು ಸಿಗುತ್ತಿದ್ದ ಹಕ್ಕಿಗಳಲ್ಲಿ ಅಂದಾಜು ಶೇ.50ರಷ್ಟು ಮಾತ್ರ ಕಾಣಸಿಕ್ಕವು. ಕರ್ನಾಟಕದಾದ್ಯಂತ ಮುಂಗಾರು ಮಳೆ ಕೊರತೆ, ಜಲಕ್ಷಾಮದ ಸೂಚನೆಗಳು, ಬರಗಾಲದ ದಟ್ಟ ಛಾಯೆಯ ನಡುವೆ ಜನಸಾಮಾನ್ಯರ ಗತಿಯೇನು? ಎಂಬ ಕೂಗು ಸಹಜ. ಆದರೆ ಈ ವರ್ಷದ ಹವಾಮಾನ ಮುನ್ಸೂಚನೆ ಎಲ್ಲೋ ಇದ್ದ ಈ ಹಕ್ಕಿಗಳಿಗೆ ತಲುಪಿಸಿದವರ್ಯಾರು? ನೂರಾರು ಸಂಖ್ಯೆಯ ಗೂಡುಗಳಲ್ಲಿರಬೇಕಿದ್ದ ಚಮಚದ ಕೊಕ್ಕು ಮತ್ತು ಇರುಳು ಬಕ ಹಕ್ಕಿಗಳ ಸಂಸಾರಗಳೇ ಕಣ್ಣಿಗೆ ಬೀಳಲಿಲ್ಲ. ಜಾಗತಿಕ ತಾಪಮಾನದ ಪ್ರಾಯೋಗಿಕ ಪರಿಣಾಮ ಕಣ್ಣಿಗೆ ಬಿತ್ತು. ಜಾಗತಿಕ ತಾಪಮಾನ ಹೆಚ್ಚಳದಿಂದ ಅಕಾಲ ಮಳೆ, ಅತಿವೃಷ್ಟಿ, ಅನಾವೃಷ್ಟಿ, ಋತುಗಳ ಏರುಪೇರು ಮುಂತಾದವುಗಳು ಎಲ್ಲಾ ಜೀವಿಗಳಿಗೂ ಕಂಟಕ. ಹಕ್ಕಿಗಳೂ ಇದಕ್ಕೆ ಹೊರತಲ್ಲ. ಅವುಗಳ ಸಂತಾನೋತ್ಪತ್ತಿ ಕ್ಷಮತೆ ಮತ್ತು ಸಮಯದಲ್ಲಿ ವ್ಯತ್ಯಾಸವಾಗುತ್ತಿದೆ. ವಲಸೆ ಕ್ರಮ ಬದಲಾಗುತ್ತಿದೆ. ಇದೆಲ್ಲದರ ಫಲಿತಾಂಶ ಈ ವರ್ಷ ಗುಡವಿ ಪಕ್ಷಿಧಾಮದಲ್ಲಿ ಕಂಡುಬಂತು.

ವರ್ಷ-ವರ್ಷವೂ ವ್ಯವಸ್ಥಿತವಾಗಿ ಇಲ್ಲಿ ಪಕ್ಷಿಗಣತಿ ನಡೆಯಬೇಕು. ಸುತ್ತಲಿನ ರೈತರ ಮನವೊಲಿಸಿ ಕೃಷಿಭೂಮಿಯನ್ನು ಅರಣ್ಯ ಇಲಾಖೆ ಸುಪರ್ದಿಗೆ ತೆಗೆದುಕೊಂಡು ಪಕ್ಷಿ-ಕೇಂದ್ರಿತ ಚಟುವಟಿಕೆ ನಡೆಯಲು ಅನುವು ಮಾಡಿಕೊಡಬೇಕು. ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕು. ಈ ಪ್ರದೇಶ ಶಾಲಾ-ಕಾಲೇಜು ಮಕ್ಕಳ ಪರಿಸರ ಪಾಠಶಾಲೆಯಾಗಬೇಕು. ಪಕ್ಷಿಧಾಮ ತನ್ನ ಗತವೈಭವಕ್ಕೆ ಮರುಕಳಿಸಬೇಕೆಂಬ ಆಶಯದೊಂದಿಗೆ ಗುಡವಿ ಪಕ್ಷಿಗಳ ಅದ್ಭುತ ಲೋಕಕ್ಕೆ ಸ್ವಾಗತ.

ಲೇಖಕರು: ಪಕ್ಷಿವೀಕ್ಷಕರು



ತಾಯಿಯ ಗಂಟಲಿನಿಂದ ಆಹಾರವನ್ನು ಸೆಳೆಯುತ್ತಿರುವ ಕೆಂಬರಲು ಮರಿ



ಅಕ್ಕ-ಪಕ್ಕದ ಗೂಡಿನಲ್ಲಿರುವ ಹಾವಕ್ಕಿ ಮರಿಗಳು



ಗುಡವಿ ಪಕ್ಷಿಧಾಮದಲ್ಲಿ ಗೂಡು ಕಟ್ಟಿರುವ ಹಕ್ಕಿಗಳು

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ




ಆನೆಮರಿಯಾಟ!


• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ರೈತನಾದ ರಾಮಪ್ಪ ತನ್ನ ಹೊಲದಲ್ಲಿ ಬೆಳೆದ ಬಾಳೆಹಣ್ಣುಗಳನ್ನು ಸಂತೆಯಲ್ಲಿ ಮಾರಲು ಬುಟ್ಟಿಯಲ್ಲಿ ತುಂಬಿ ಹೊರಟಿದ್ದ. ಆತ ಹೊರಟಿದ್ದ ದಾರಿಯಲ್ಲಿ ಆನೆಗಳು ಸಂಚರಿಸುವ ಸ್ಥಳವಿತ್ತು. ಜನರಿಗೆ ಈ ಕುರಿತು ಎಚ್ಚರಿಕೆ ನೀಡಲು ಅಲ್ಲೊಂದು ದೊಡ್ಡ ಫಲಕ ಅಳವಡಿಸಲಾಗಿತ್ತು. ರಾಮಪ್ಪ ಬುಟ್ಟಿಯಲ್ಲಿ ಬಾಳೆಹಣ್ಣು ತರುತ್ತಿರುವುದನ್ನು ದೂರದಿಂದಲೇ ಫಲಕದೊಳಗಿದ್ದ ಆನೆ ಮರಿ ಗಮನಿಸಿತ್ತೇನೋ, ರಾಮಪ್ಪ ಆ ಫಲಕದ ಎದುರು ಸಾಗುತ್ತಿದ್ದಂತೇ ಮೆಲ್ಲನೆ ಬುಟ್ಟಿಯೊಳಗೆ ಸೊಂಡಿಲು ಹಾಕಿ ಬಾಳೆಗೊನೆಯನ್ನೇ ಎಳೆದುಕೊಂಡಿತು. ಇದನ್ನು ಗಮನಿಸಿದ ರಾಮಪ್ಪ ಗಾಬರಿಯಿಂದ ಅಲ್ಲಿಂದ ಓಡಿದ.







ಹಣ್ಣಿನ ಹೆಸರು ಹೇಳಿ

ಮುಂದೆ ಕೊಟ್ಟ ಸುಳಿವು ಆಧರಿಸಿ ಹಣ್ಣಿನ ಹೆಸರು ಹೇಳಿ

1. ಆರಂಭದಲ್ಲಿ ಶಿಲೆ ಎಂಬ ಅರ್ಥ ಬರುವ ಪದದಿಂದ ಪ್ರಾರಂಭವಾಗುವ ಒಂದು ಹಣ್ಣು = ______
2. ಆರಂಭದಲ್ಲಿ ವಂಚನೆ ಎಂಬ ಅರ್ಥ ಬರುವ ಪದದಿಂದ ಆರಂಭವಾಗುವ ಒಂದು ಹಣ್ಣು = ______
3. ಆರಂಭದಲ್ಲಿ ಆಕ್ರಮಣ ಎಂಬ ಅರ್ಥ ಬರುವ ಪದದಿಂದ ಆರಂಭವಾಗುವ ಒಂದು ಹಣ್ಣು = ______
4. ಆರಂಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ತಂದೆ ಎಂಬ ಅರ್ಥದಿಂದ ಪ್ರಾರಂಭವಾಗುವ ಒಂದು ಹಣ್ಣು = ______
5. ಆರಂಭದಲ್ಲಿ ಹೆದರು ಎಂಬ ಅರ್ಥ ಬರುವ ಪದದಿಂದ ಆರಂಭವಾಗುವ ಒಂದು ಹಣ್ಣು = ______

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒಂದು ಡಜನ್ 'ಅಭಿ' ಎಂಬ ಪದಗಳಿಗೆ ಅಕ್ಷರ ಪಟ್ಟಿಯಿಂದ ಎರಡೆರಡು ಅಕ್ಷರ ಆಯ್ದು ತುಂಬಿ ನಾಲ್ಕಕ್ಷರಗಳ 12 ಪದಗಳನ್ನು ರಚಿಸಿ.


ಅಕ್ಷರ ಪಟ್ಟಿ

ವ	ಯ	ಯ	ಚಿ	ನ	ಪ್ರಾ
ನ	ಮಾ	ರು	ನ	ಲಾ	ಮ
ನ್ಯು	ತ	ನ	ಜಾ	ಕ	ದ್ಧಿ
ತ್ರಿ	ಯಾ	ನೇ	ಷೆ	ಷೇ	ವೃ

1	ಅ	ಭಿ		
2	ಅ	ಭಿ		
3	ಅ	ಭಿ		
4	ಅ	ಭಿ		
5	ಅ	ಭಿ		
6	ಅ	ಭಿ		
7	ಅ	ಭಿ		
8	ಅ	ಭಿ		
9	ಅ	ಭಿ		
10	ಅ	ಭಿ		
11	ಅ	ಭಿ		
12	ಅ	ಭಿ		

ಗಣಿತದಲ್ಲಿ ಗರ್ದಿ ಗಮ್ಮತ್ತು

ಒಂದು ಊರಲ್ಲಿ ರಂಗಪ್ಪ ಎಂಬ ಒಬ್ಬ ವರ್ತಕನಿದ್ದ. ಅವನಲ್ಲಿ 1 ಕೆ.ಜಿ., 3 ಕೆ.ಜಿ. ಹಾಗೂ 9 ಕೆ.ಜಿ.ಗೆ ಸರಿಸಮನವಾದ ಕೇವಲ 3 ಕಾಡುಗಲ್ಲುಗಳಿದ್ದವು. ಅವನು ಅವುಗಳಿಂದಲೇ ಬೆಲ್ಲವನ್ನು 1ರಿಂದ 10 ಕೆ.ಜಿ.ವರೆಗೆ ತೂಗಿ ಕೊಡುತ್ತಿದ್ದ..ಹೇಗೆ ಅಂತೀರಾ. ಹೀಗೆ ನೋಡಿ.







ಎಡತಕ್ಕಡಿಯಲ್ಲಿ	ಬಲತಕ್ಕಡಿಯಲ್ಲಿ
1 ಕೆ.ಜಿ. ಕಲ್ಲು	1 ಕೆ.ಜಿ. ಬೆಲ್ಲ
3 ಕೆ.ಜಿ. ಕಲ್ಲು	1 ಕೆ.ಜಿ. ಕಲ್ಲು + 2 ಕೆ.ಜಿ. ಬೆಲ್ಲ = 2 ಕೆ.ಜಿ ಬೆಲ್ಲ
3 ಕೆ.ಜಿ. ಕಲ್ಲು	3 ಕೆ.ಜಿ. ಬೆಲ್ಲ
3 + 1 ಕೆ.ಜಿ. ಕಲ್ಲು	4 ಕೆ.ಜಿ. ಬೆಲ್ಲ
9 ಕೆ.ಜಿ. ಕಲ್ಲು	3 + 1 ಕೆ.ಜಿ. ಕಲ್ಲು + 5 ಕೆ.ಜಿ. ಬೆಲ್ಲ = 5 ಕೆ.ಜಿ. ಬೆಲ್ಲ



ಹೀಗೆ ನೀವು 10 ಕೆ.ಜಿ.ವರೆಗೆ ಬೆಲ್ಲ ಕೊಡಲು ಪ್ರಯತ್ನಿಸಿ...

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸುರಿ | ವಲ | ಕಣ

ಗಣಿ | ಕಲಿ | ಸಲಿ

ಅಕ್ಷರ ಪಟ್ಟಿ

ಕೇ | ನ | ತೆಂ | ಗೆ | ಸು | ಸ

ಅ | ಸು | ಕು | ಯ | ಜ | ತ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ : 1.ಮಸಾರಿಗೆ 2.ನಗಾರಿಗೆ 3.ಬಾನಾಡಿಗ 4.ಉಪಾಯಸ 5.ಅಂಬರಡು 6.ವಿಕಾರಣ

ಆಲ್ಫಾಬೆಟ್ ಗೇಮ್ : 1.Minute 2.Vacation 3.Drawing 4.Brand 5.Morning 6.Brown 7.Honey 8.Prime 9.Candle

ಸಿಕ್ಕ ಹಣವೆಷ್ಟು?: 301 ರೂಪಾಯಿ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನಿಖಿತ ಬಿ.ಎಂ, ಚಿತ್ರದುರ್ಗ



ಯಾಶಿಕಾ ಚಂದ್ರಶೇಖರ್ ಬೆಂಗಳೂರು



ಪ್ರಮೀತ್ ಆರ್.ಎಂ. ಭದ್ರಾವತಿ



ಅಕ್ಷರ ಎಂ.ಎಸ್. ಮೈಸೂರು



ಸುಚೇತ್ ಎ.ಬಿ ಹಾವೇರಿ



ಜ್ಯೋತಿ ಸಂಜೀವ ನಾಯಕ, ಹಾವೇರಿ

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 15, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

FOR SALE
TAPOVAN GREENS
EUROPEAN STYLE LUXURY VILLAMENT
AT MYSURU - SRIRAMPURA
Basement with 2 Independent Car Parks, Ground + 2 Floors
3 BHK 3600 SQFT
99805 29289

REAL ESTATE SELLING

Commercial Building

Basaveshwaranagar

BDA SEMI Commercial 31x46.5, Old Building for sale at Basaweshwarnagar, near Carmel School, Call 9844039482

Chickpet

IMMEDIATE BUILDING Sale, North Facing 15x70, Binny Mill Road, Cottonpet. 9448950350

Commercial Land

HBR Layout

PREMIUM BDA Commercial sites for sale HBR Layout 80 Feet Road (Near BDA Complex) Contact: 9844039482

Outer Ring Road

SALE: DC Converted 93,700sft land on six lane ring road, Nelamangala to Devenahalli Airport, 278feet frontage, suitable for Warehouse, International School, Housing. Asper Vastu. Kumar: 9886371998

Commerical

General

COMMERCIAL BUILDING SP Road, G+4, 530 Sqft land, corner clear title. Rent Yielding. 9844059981.

Flat

Basaveshwaranagar

"MAGADI MAIN Road 2BHK Flat Ready to occupy with occupancy certificate A-Katha. Call: 9845286505"

Benson Town

GOLDEN OPPORTUNITY 4 BHK 3175 Sft 3.57 Crores, 3 BHK 1500 Sft 1.75 Crores. 9880571727

Indiranagar

DIVYASREE 77 Place 3, 4BHK posh apartments for Sale. Also Golden Enclave 3BHK Pool facing for sale. 'Ahujaa Realtors'- 9844132090

Isro Layout

3/4 BHK New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

Kasturinagar

3 BHK Flat for Sale. Semi Furnished, 3rd Floor North Facing 100% vastu compliance. 9945071950.

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Sanjaynagar

SANJAYNAGAR 2BHK 8100000- 9700000. 3 BHK 11500000- 22500000. Sites 30x40- 40x60 22500000- 52800000. 9353748029

Mysore Road

AVAILABLE LEASE sale Rent 3 BHK Residential Flat at Mysore Road Bangalore City Call: 8105273951.

Vijayanagar

READY FLAT SALE 2 BHK 922 Sqft 40 Lakhs, Pipe Line Road Vijaynagar Bangalore: 9110432149

Farm House/ Land/ Resorts

Kanakapura Road

KANAKAPURA TOWN: Land for Sale 1 Acre & 2 Acres with Water, Electricity. Suitable for Farm House & Layout RaviKumar: 9945928994.

Out-Station

NILGIRIS 3.75 Acres Tea Estate for Sale / JV. Contact: 9087688877

House

Banashankari

BDA NORTH/EAST Corner Site Banashankari 6th Stage 2nd Block 850 sft New 1+3 BHK Triplex 1.80cr. Negotiable 8618421606

Nandini Layout

SALE BDA 37x40, South East Corner old House for sale at Railway Layout, Nandini Layout, Call 9844039482

Padmanabha Nagar

PROPERTY FOR Sale in Padmanabhanagar 1350 Sqft North Facing Good Location Contact: 8147734144

RMV

RMV-2ND STAGE 53x62 West-Facing BDA-Site With old House For Sale 27K Full Cheque Near M.S Ramaiah Hospital Call:9945636916

Industrial & Factory

Hosur Road

DC CONVERTED Industrial land, Chandapura, Anekal Taluk, facing Main Raod, Power Line. 30 Guntas. Brokers Excuse. 9895336791.

Jigani

INDUSTRIAL SITE for sale Jigini industrial area, Opp to Chuan Shun Electric company, 3205 Sq.ft. Triangular site. M: 9980909553

Narasapura

NARASAPURA INDUSTRIAL Area Sale KIADB Industrial Land Land Area 10890sqft Built Area 3000sqft Contact: 6361735415

Residential/ Commercial

Multiple Locations

BASVESHAWARNAGER 30×40, 30×50, 40×60 Residential, Sadashivanagar Commercial 200×120 Rajajinagar commercial 45×90,40×62, Immediate sale-8660075308.

Sadashiva Nagar

PRIME RESIDENTIAL VACANT PLOT 45X60 SOUTH-FACE ACROSS SADASHIVANAGAR SWIMMING POOL CONTACT OWNER 9844018823

Sites

Anjanapura

SITE FOR SALE 7TH BLOCK ANJANAPURA 30X40 N/F NEAR BDA COMPLEX, GOOD LOCATION GENIUNE BUYERS: 9880776950

Banashankari

"AVAILABLE AND Wanted Banashankari 6th Stage BDA sites 20x30, 30x40, 40x60, 50x80. Contact: 9845146725/ 9741466369"

BANASHANKARI 6TH Stage, 40x60, 60' Road. 20x30,30x40,North Near 100' Road .RV College :9916817739

Electronic City

SURYANAGAR PHASE-II, 30x40 site for Sale. West face.Sector-B, KHB Property. Price:3100/-sft, (Slightly Negotiable). Contact: 7676829026

"ELECTRONIC-CITY 30X40 DC.conversion Gated Community 38sites Sale-total 1.5acres with-Basic Amenities,Bank Loan Available,near VIBGYOR School, 1.75kms from Hosa Road, Metro Station. 9108283841/ 9448670671"

Jeevanbimanagar

2000 SQFT site between Old Airport Road and Jeevanbimanagar Bus Stand. Call 9910616226

Kengeri

"30X50 NORTH-FACING 'A'-khata Site for sale at Bandemutt, near Kengeri Satellite town. Contact: 9945191143"

Kanakapura Road

BDA SITE Sale 2400 sqft 2 min. drive from Vajrahalli Metro, 10 min to Jayanagar Shopping Complex, VajramuniNagar, Contact: Narasimhamurthy: 9449350101

K R Puram

22,000 SFT Plot Sale: Sai Serenity Layout with 3 BHK Guest House, K.R.Pura to Whitefield Road. Posh bungalows around. Residential Layout. Water Lake front. Vamshadhara Project Services- 9342247637.

Kempegowda Layout

KEMPEGOWDA LAYOUT, BDA 50×80 South facing 1st block K Sector Site No. 521 Commercial Property: 9731594565

Magadi Road

FOR SALE 20*60 West facing site total measurement 1435 sqft Magadi road, Agrahara Dasarahalli near Anjaneya temple, Bangalore- 560079. Contact: 7483361701

Nagarabhavi

"30X40 WEST-FACING House 6th Block, Nagarbhavi Opp. BDA Complex, Broker's strictly excuse. 9008725029/ 9880287347"

BDA SITE Sale Nagarabavi 12th Block, Near Nammura Thindi, West Facing 40ft Road, 30'x42' Owner: 9844009086/ 9343368313

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

R T Nagar

ANANDNAGAR 30X50 16000/sft. Ind hou 28000000. 50x60 16000/sft 60x60 14000/sft 3BHK 1560sft 172000000. 9353748029

Sahakarnagar

SAHAKARANAGAR 1620 sft Site North West Corner Top Location For Sale Contact: 9738111222 9341260828

Tumkur Road

TUMKUR ROAD, Sanjaykhan Hotel, RMC Yard (Satyanarayana Layout) Society 30x40 Corner A'Katha @3500/- Negotiable: 9980501366

Vishweshwariah Layout

VISHWESHWARAIAH 6TH BLOCK 40x60 NF NEAR KLE LAW COLLEGE GOOD LOCATION 80FT ROAD BACKSIDE: 9980860138

"30X40 BDA-SITE for sale Vishwashwaraih 6th Block attach, Sumuka Layout near KLE College, genuine buyers only Contact: 7892224597"

READY TO MOVE IN
₹ 39 Lacs*
2 BHK FLAT
FULLY FURNISHED including AC & WARDROBE
* All inclusive except Registration
Loan upto 90%
RENTAL POTENTIAL RS. 20,000 P.M FOR THIS APARTMENT
Chandapura, Near Narayana Hrudayalaya & Metro Station, on Hosur Main Road
NISARGA BUILDERS
Call for site visit 6366 864 500

AVAILABLE BDA SITE 30X40 Visveswaraiah Layout 2nd Block 7500/- Psft AND 6th Block 8500/- 9844603127

SMV 1ST Block 40X60 EF Site No. 2194, 60ft Road Owner Meeting Good Location: 9902956166

Vidyaranyapura

NTI SOCIETY Vidyaranyapura 30X40 North East Corner Excellent Location Clear Titles For Sale, 9738111222 9341260828

Mysore

GSS:SITES @ Mysore Fully Completed DTCP 'A' Khata,RERA, 90% Bank Loan, Immediate Regn. off Hunsur Road, 5Minutes: NH,Yelwala 10Minutes: Ring Road, Infosys, Vijayanagar, 15Minutes: Palace/ Railway Station. www.gssprojects.in 9845287802/ 8050001571.

RENTAL PROPERTIES

Accommodation Available

Flats

R.T.NAGAR, 2 BHK flat 1st floor, North, Vastu, 3 years Mortgage 23 Lakhs. 8884078726/ 8710883055

Industrial And Factory

GARMENT PREMISES. Rent/Sale. 15000 sqft near NICE Road Bridge, Gangaondanahalli Main Road, Dasanapura Hobli. Contact: 9448483407

Godown

LAND AVAILABLE FOR GODOWN/ WAREHOUSE CONVERTED LAND MEASURING 02 ACRES, SUITABLE FOR GODOWN/ WAREHOUSE SITUATED AT NARAYANA GHATTA VILLAGE, BETWEEN HUSKUR AND MUTTHANALLUR CIRCLE (5 KMS TO CHANDAPURA & SARJAPURA ROAD) CONTACT: +91-7676959289/ +91-9341978732.

House

HOUSE FOR Rent 2400 Sqft, 4 BHK, Duplex, on 2560 Sqft site, HRBR 3rd Block, BDA Layout. Contact: 9880202892

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

BALDWIN GIRLS' HIGH SCHOOL ,BENGALURU 560025

(A unit of Baldwin Methodist Educational Society)
ESTD : 1880 ISO 9001:2015 CERTIFIED
A DAY & BOARDING SCHOOL, AFFILIATED TO CISCE , NEW DELHI
LOYALTY & SERVICE

ADMISSION HELPLINE
+91 9148780138



REGISTRATION / ADMISSION NOTICE
FOR THE ACADEMIC SESSION 2024-25
Pre - Nursery to STD VIII



- BASKET BALL
- SWIMMING
- ATHLETICS
- BADMINTON
- DANCE
- MUSIC
- DRAMATICS
- FIELD TRIPS
- NCC
- YOGA
- ROBOTICS
- TAEKWONDO
- ART & CRAFT
- COMPUTERS
- SCIENCE LABS
- LANGUAGE LABS
- SECURITY + CCTV
- SMART CLASSROOMS
- TRANSPORTATION
- SUMMER CAMPS

Awarded India's Top 5 Girls' Day Cum Boarding school by Education Today

Best Institute JD / JW Award by 8 KAR NCC

100 percent results in the ICSE Std X EXAMINATION
Highest percentage in 2023 - 99.4%

WHY CHOOSE BALDWIN GIRLS' HIGH SCHOOL?

WORLD CLASS EDUCATION
EXCELLENT FACILITIES
EXPERIENCED FACULTY
HOLISTIC DEVELOPMENT

SCAN ME

www.baldwingirls.edu.in / enquiry@baldwingirls.edu.in

Sister Concern Schools : Baldwin Boys' High School , Hosur Road & Baldwin Co-Education Extension High School, Rajarajeshwari Nagar

REAL ESTATE BUYING

Agricultural Land

Yelahanka

BUYING CLEAN, compounded Agricultural or Converted land. Fast closure, full payment. 1-5,Acres.MVIT College road, Chapparakallu rd, Tharahunise Village area only. Call/WhatsApp 9972247220.

Commercial Land

Mysore Road

WANTED LAND Commercial Land 1 to 2 acres for outright purchase in Mysore . Contact 9108413903

Sites

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

JOB OPPORTUNITIES

Accounts & Finance

WANTED ACCOUNTANT Qualification B.Com Exp Minimum 10years With`TDS & GST`Salary Rs.45000/- Free-family accommodation If required Call:7338084555 9845053636:Mail glprojects7889 @gmail.com

Security & Detectives

A LEADING SECURITY AGENCY in Bangalore is looking for: (1) SALES CO-ORDINATOR: Experienced Female Graduate Candidates with Computer knowledge & good Communication skill Preferred. (2) FIELD OFFICER: Experienced in Security Field for Bommasandra, M.G. Road, Whitefield, Yelahanka & Horamavu Area. (3) NIGHT PATROLLING OFFICER: Experience in Security Field & willingness to work in Night Shift is preferred. (4) BUSINESS DEVELOPMENT EXECUTIVES: Graduates Fresher/ Minimum 2+ years Experienced in Security Industry. For the post Sl.No. 2, 3, 4:- 2 Wheelers is a must. Send your Resume to: info@networkda.in or Contact: 9900596738 for interview.

General

ಅಧಿಸೂಚನೆ | ವಿ&ವಿ ಅಸೋಸಿಯೇಟ್ಸ್ ಬೆಂಗಳೂರು

ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ನಗರ ಅಭಿಯಾನ ನಿರ್ವಹಣಾ ಘಟಕದಲ್ಲಿ ಬಾಹ್ಯ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ತಾತ್ಕಾಲಿಕ ಹೊರಗುತ್ತಿಗೆ ಆಧಾರದ ಮೇಲೆ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಈ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳು– ಅಭಿಯಾನ ವ್ಯವಸ್ಥಾಪಕರು –ಸಾಮಾಜಿಕ ಅಭಿವೃದ್ಧಿ ಮತ್ತು ಮೂಲಸೌಕರ್ಯ (1) ಅಭಿಯಾನ ವ್ಯವಸ್ಥಾಪಕರು–ಕೌಸಲ್ಯ ಮತ್ತು ಜೀವನೋಪಾಯ(1), ಅಭಿಯಾನ ವ್ಯವಸ್ಥಾಪಕರು–ಆರ್ಥಿಕ ಒಳಗೊಳ್ಳುವಿಕೆ ಮತ್ತು ಕಿರು ಉದ್ದಿಮೆ(1), ಅಭಿಯಾನ ವ್ಯವಸ್ಥಾಪಕರು ಎಂಐಎಸ್ & ಎಂಇ (1) ಮತ್ತು ಮಲ್ಟಿಟಾಸ್ಕಿಂಗ್ ಅಫಿಷಿಯಲ್ಸ್(1)

ಆಸಕ್ತ ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಕಚೇರಿಯ ಇ–ಮೇಲ್ ಐಡಿ: vandvassociates123@gmail.com ಗೆ ದಿನಾಂಕ: 21.10.2023ರ ಸಂಜೆ 5.30 ರೊಳಗಾಗಿ ಸಲ್ಲಿಸುವುದು. ವಿವರವಾದ ಅಧಿಸೂಚನೆ ಹಾಗೂ ಅರ್ಜಿ ನಮೂನೆಯನ್ನು https://vandvassociates.wordpress.com ವೆಬ್‌ಸೈಟ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಮೇ॥ ವಿಅಂಡ್‌ವಿ ಅಸೋಸಿಯೇಟ್ಸ್ , ಚಂದ್ರಲೇಔಟ್, ಬೆಂಗಳೂರು, ದೂರವಾಣಿ ಸಂಖ್ಯೆ: 080–23218970

"WANTED MARKETING Executive-3.Nos, Accounts Executive-1.No, Office Executive-1.No, Engineers-1.No with Coral Draw exp.with min 3-5yrs exp.and good communication.& computer skills.Salary Rs.30,000 to Rs.40,000 per month for-a manufacturing company located in Bommanahalli, near HSR Layout, Bangalore-68. Age limit:-within 40yrs. Send CV-to: uppbangalore@gmail. com/Contact: 9449817703"

REQUIRED EMPLOYEES salary:22000-25000 Telugu &English Must, no age limit. Office Bidar& Gulbarga. send your resume w/app 7702627516.

Part-Time Jobs

TOP MNC COMPANY Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

Wanted

WANTED
Contract Appointment for running **School Nelamangala East Extension** with Good Infrastructure **1st 10th State** Permission **1st 7th ICSE** pravisonal permission experienced reasonable investors *please contact*
9480259762/6360014573

REQUIRE EXPERIENCED Salesman and Sales Assistant for Reputed Saree Showroom in Bengaluru. Send your Resume by Whatsapp. Contact: 9448288533

Teachers/ Professors

IMPACT INSTITUTIONS
WANTED QUALITY
FACULTY IN CS
or allied branches with M.Tech & PhD or equivalent for academic leadership role and teaching as
ASSISTANT PROFESSORS AND PROFESSORS
IMP-23413
WALK IN INTERVIEW
Walk in with credentials for interview with top management on Monday, 16th October from 10 am to 1 pm.
VENUE: IMPACT Campus, Kodigehalli, Sahakaranagar, Bengaluru-560092
Call: 94487 48297
To schedule your interviews

MATH & PHYSICS High School Teachers needed for Chitrakoota CBSE School in Nagarbhavi, Kengeri Ring Road, Bangalore. With High Salary. Call: 7829647333.

REQUIRES (1) LADY VICE PRINCIPAL M.A./ M.Sc., B.Ed/ M.Ed. 5 years administrative experience. Age 35-50 years. (2) TEACHER for English & Social for High School (3) GRADUATES to teach All Subjects for Classes 1 to 4. Contact: Secretary, CAMLIN HIGH SCHOOL 6th 'C' Main, 4th Cross Hampinagar, (Near 7th Main Bus-Stop Hampinagar), Bangalore-560104. Call: 080-23301363

BEST OF the Best qualified- Science, Maths, Social Science, Hindi, English, PE teachers for reputed CBSE school. Further, 6 computer teachers (diploma/ graduates). All should be experienced. Attractive salary. 9535601743/ 9449835744. Walk-in interview: 19.10.2023. Attend only with originals.

AUTOMOTIVE

Four Wheelers Selling

Others

QUOTE REQUIRED for Accident Damaged KA-01 MR-3558 NISSAN MICRA-2018, without RC. Time 7 days-9844048926

Tata

TATA HARRIER XT-PLUS White Colour, Model-2022, KA Regd , Purchased for 25 Lakhs, Selling Price Rs.21 Lakhs (Negotiable) Call-8088044082, 8096600464.

MATRIMONIAL

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ **ವಧು–ವರರ** ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಸುಮ ಗೋಪಾಲಕೃಷ್ಣ
9886908152

EDUCATIONAL

Tuitions

NOW AT Your Door Step Best Home Tuitions By T.S.Shivashankar DSc PhD USA Maths and Physics Expert Living in Mahalaxmi Layout 9743095715 ANY Maths Physics Chemistry French Hindi English Civil Aeronautical Mechanical Electrical & Electronics Class 1st to 12th BSc, B.E, MSc (Maths) CBSE, ICSE, All Subjects At All and Different Levels Educated In USA, Brazil, Canada, England, France, Germany, Holland, Greece & Russia, Also Educated in Kendriya Vidyalaya I.I.T Kanpur Twice 1981, 12th Standard Pass-out from K.V.I.T.T. Kanpur Father DR. T.K.Srikantaiah Former Professor, Aeronautical Engg Dept I.I.T Kanpur Very Rare Case of People Coming From Industry to Academics in two Related Fields Civil and Aeronautical (Structures, Structural Engg Being Basically A Civil Engg Concept) 2 Years in Koyna Dam Construction MahaRshtra After B.E Civil from UVEC Bangalore 4 Years in Hal Bangalore After M.Tech Aeronautical I.I.Sc Bangalore then PhD Canada and Prof I.I.T.K The No Test Tuition the No Homework Tuition Big Push Given for Maths with instant Results Enough Seats Available Rescue Missions Also Done 40Plus Years of International Experience All Metro Areas of Bangalore & Peenya, Kengeri, Yelahanka, & Metro Routes From Mahalaxmi Layout.

PERSONAL

Change of Name

CHANGE OF NAME
I, **AVINASH HANNIKERI** S/o. Prakash Hannikeri Residing at Flat No. 008, B.M. Mystic Green Apartments, Next to Sobha Daffodil Apartments, Somasundarapalya, Bangalore-560102 Declare that in my minor Daughter's Birth certificate her Name wrongly Recorded as **SARAH** Instead of **SARAH HANNIKERI** (DOB: 25.08.2010) Henceforth, she will be known as **SARAH HANNIKERI** for her all future purpose. vide affidavit dated: 6.10.2023 sworn before Notary B.M. Chandrashekar, Bangalore.

I, ANURADHA VIJAYA KUMAR R/a #A507 5th Floor Block A, Valagrehalli, MBR Shangrila Apartment Kengeri, Bengaluru-560060 have changed Name to ANURADHA vide`affidavit 14.10.2023 before`Notary Hemalatha Bangalore

I, SAVITHA SETTYAPPA W/o.S.PRAVEEN R/o.old#250/1, New#11,Kishan Nilaya,1st cross behind Ganesha Temple, Annayyappa Colony, New Thippasandra, Bengaluru- 560075 have`changed my`Name to SAVITHA PRAVEEN vide`affidavit dated 13.10.2023 before`Notary Sreedharan Nair.P.N. Bangalore

Lost


DOCUMENT LOST
I, **RAVI H J,** R/at # 29, 8th Cross, 1st Main, MKS Layout 1st Stage, Doddakallasandara, Bangalore-62, have lost my Original **Sale deed Document No./ Identification No. BK-1(2584/19-20),** Located at Lakkenahalli, Dasanapura Hobli, while shifting residence. *Finders please Contact:*
9449493683

WEEKEND CORNER

ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ

ಗೃಹಶೋಭೆ

Last 1 Day



GRUHA SHOBHE
LIVING STYLE EXHIBITION
TIMING : 11 Am to 9 Pm

ಅಕ್ಟೋಬರ್ 6 ರಿಂದ 15 ರವರೆಗೆ
ಬಿ.ಬಿ.ಎಂ.ಪಿ ಗ್ರೌಂಡ್, ಎಂ.ಇ.ಐ ಲೇಔಟ್
ಬಾಗಲಗುಂಟೆ, ಬೆಂಗಳೂರು

ENTRY Rs. 20/- Children Below 5 Years Free Entry **PARKING FREE**

BUSINESS

Business to Business

Business

SALE: MILK Processing Plant at Hubballi with all machineries/ Licences, Customers in one Acre KIADB Land. Lease completed. Water/ Power always available. 15000 litres milk processing capaciy. Provision for Butter, Ghee, Buttermilk, Cheese, Paneer, Curd producing. Owners make it functional for you. Dr.SwamyNaidu Dairy Technologist, Vamshadhara Project Services: 9342247637

ANY CENTRAL Government work at New Delhi, Liaison work done with high level contacts. Vamshadhara Project Services- 9342247637.

Business Offers

Business For Sale

SALE/TAKEOVER. BANGALORE Ayurveda Medical college with Hospital and Hostel Facilities. Affiliations and Recognitions by central government with FCRA permission. Arun 9945699789.

General

WHEN YOUR family is not interested in your business, Why chasing money and getting stressed? For Sale/Takeover or to find partners to run your Business. Call Arun 9845077299.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

